● www.prajavani.net

/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾ ವಾಣಿ
ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿವಿಧ ಹುದ್ದೆಗಳ ನೇಮಕಾತಿಗಾಗಿ ನಡೆಯುವ ಸ್ಪರ್ಧಾತ್ಮಕ ಪರೀಕ್ಷೆಗಳ ಕುರಿತು ಒಂದಿಷ್ಟು ಪೂರಕ ಮಾಹಿತಿ ಮತ್ತು 'ಟಿಪ್ಸ್' ಇಲ್ಲಿದೆ.



ಆಳ-ಅಗಲ: ಏರುತ್ತಲೇ ಇದೆ ರೂಪಾಂತರ ತಳಿ ಓಮೈಕ್ರಾನ್

13ನೇ ದಿನಕ್ಕೆ ಕಾಲಿಟ್ಟ ವೈದ್ಯರ ಪ್ರತಿಭಟನೆ 6

ಈ ಬಾರಿ ಹೆಚ್ಚು ಸ್ಥಾನ ಗೆಲ್ಲುತ್ತೇವೆ: ಬಿಜೆಪಿ 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
57,806	17,213	₹49,350 (ಬೆಂಗಳೂರು)	₹63,300 (ಬೆಂಗಳೂರು)	74.71

ಪ್ರಿಯ ಓದುಗರೆ,

'ಪ್ರಜಾವಾಣಿ' ಹೊಸ ವರ್ಷಕ್ಕೆ ಆಕರ್ಷಕ ಕ್ಯಾಲೆಂಡರ್ ಅನ್ನು ಜ.1ರ ಸಂಚಿಕೆ ಜೊತೆಗೆ ಕೊಡಲಾಗುವುದು.


ನಿಮ್ಮ ಪ್ರತಿಯನ್ನು ಕಾಯ್ದಿರಿಸಿ

–ಸಂ

ಸಿಗಲಿದೆ ಆರ್ಥಿಕ ನಿರ್ವಹಣೆಯ ಸ್ವಾತಂತ್ರ್ಯ ● ಅಧಿವೇಶನಕ್ಕೆ ಮುನ್ನ ಕಾನೂನು ಜಾರಿ–ಸಿ.ಎಂ

'ಹಿಂದೂ ದೇವಾಲಯ ಸ್ವತಂತ್ರ'

ಪ್ರಜಾವಾಣಿ ವಾರ್ತೆ



ಬಸವರಾಜ ಬೊಮ್ಮಾಯಿ

ಹುಬ್ಬಳ್ಳಿ: ಹಿಂದೂ ದೇವಾಲಯಗಳ ಮೇಲಿನ ಸರ್ಕಾರದ ಹಿಡಿತವನ್ನು ಸಡಿಲಗೊಳಿಸಿ, ಕಾನೂನಿನ ಕಟ್ಟುಪಾಡುಗಳಿಂದ ಅವುಗಳನ್ನು ಮುಕ್ತಗೊಳಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರ ಮುಂದಾಗಿದೆ.

ನಗರದ ಡೆನಿಸನ್ಸ್ ಹೋಟೆಲ್‌ನಲ್ಲಿ ಬುಧವಾರ ನಡೆದ ಬಿಜೆಪಿ ರಾಜ್ಯ ಕಾರ್ಯಕಾರಿಣಿಯ ಸಮಾರೋಪದಲ್ಲಿ ಮಾತನಾಡಿದ ಬೊಮ್ಮಾಯಿ ಈ ಸುಳಿವು ನೀಡಿದ್ದಾರೆ.

'ಹಿಂದೂ ದೇವಾಲಯಗಳ ಮೇಲೆ ನಿಯಂತ್ರಣ ಸಾಧಿಸಲು ಇರುವ ಹಲವಾರು ಕಾನೂನಿನ ಕಟ್ಟುಪಾಡುಗಳಿದ್ದು, ಬಜೆಟ್ ಅಧಿವೇಶನಕ್ಕೂ ಮುನ್ನ ಅವುಗಳನ್ನು ತೆಗೆದುಹಾಕಿ, ಸ್ವತಂತ್ರ ನಿರ್ವಹಣೆಗೆ ಅವಕಾಶ ನೀಡುವ ಕಾನೂನು ಜಾರಿಗೊಳಿಸಲಾಗುವುದು' ಎಂದು ಬೊಮ್ಮಾಯಿ ಘೋಷಿಸಿ ದರು.

'ದೇವಾಲಯಗಳಲ್ಲಿ ಸಂಗ್ರಹವಾದ ಕಾಣಿಕೆ ಹಣವನ್ನು ಅವುಗಳ ಅಭಿವೃದ್ಧಿಗೆ ಬಳಸುವ ಅಧಿಕಾರ ಇಲ್ಲದಿರುವುದನ್ನು ಹಿರಿಯರು ನನ್ನ ಗಮನಕ್ಕೆ ತಂದಿದ್ದಾರೆ. ಅಧಿಕಾರಿಗಳಿಂದ ಅನುಮತಿ ಪಡೆಯಬೇಕಾಗುವ ವ್ಯವಸ್ಥೆಯಿಂದ ಅವುಗಳನ್ನು ಮುಕ್ತ ಮಾಡಲಾಗುವುದು' ಎಂದರು.

'ಬೇರೆ, ಬೇರೆ ಸಮುದಾಯದ ಪ್ರಾರ್ಥನಾ ಸ್ಥಳಗಳು ಸುರಕ್ಷಿತವಾಗಿವೆ. ಅಲ್ಲಿ ಎಲ್ಲ ರೀತಿಯ ಆಚರಣೆಗೆ ಸ್ವಾತಂತ್ರ್ಯವಿದೆ. ಅಂತಹ ಸ್ವಾತಂತ್ರ್ಯವನ್ನು ಹಿಂದೂ ದೇವಾಲಯಗಳಿಗೂ ನೀಡಲು ಸರ್ಕಾರ ಬದ್ಧವಾಗಿದೆ. ನಮ್ಮ ಸರ್ಕಾರ ಇಂತಹ ವಿಷಯದಲ್ಲಿ ವೈಚಾರಿಕ ಬದ್ಧತೆ ಹೊಂದಿದೆ' ಎಂದೂ ಅವರು ಹೇಳಿದರು.

5ನೇ ಪುಟ ನೋಡಿ

ಮತಾಂತರ ನಿಷೇಧ ಜಾರಿಗೆ ಕಾರ್ಯಪಡೆ

'ಮತಾಂತರ ನಿಷೇಧ ಕಾಯ್ದೆ ಅನುಷ್ಠಾನಕ್ಕೆ ವಿಶೇಷ ಕಾರ್ಯಪಡೆ ರಚಿಸ ಲಾಗುವುದು' ಎಂದು ಬಸವರಾಜ ಬೊಮ್ಮಾಯಿ ಹೇಳಿದರು.

'ಮತಾಂತರ ನಿಷೇಧ ಕಾಯ್ದೆ ರೂಪಿಸುವುದಷ್ಟೇ ಅಲ್ಲ, ಅದರ ಅನುಷ್ಠಾನಕ್ಕೂ ಬದ್ಧವಾಗಿದೆ. ಗೋಹತ್ಯೆ ನಿಷೇಧ ಕಾಯ್ದೆ ಜಾರಿಗೊಳಿಸಿದಾಗಲೂ ಇಂತಹದೇ ವಿರೋಧ ಬಂದಿತ್ತು. ಈಗ ಯಾವ ತೊಂದರೆಯಾಗಿದೆ? ಗೋರಕ್ಷಣೆಗೆ ಹೆಚ್ಚಿನ ಅನುದಾನ ನೀಡಲಾಗುವುದು' ಎಂದು ಅವರು ಹೇಳಿದರು.

ಬಜೆಟ್‌ಗೆ ಹೊಸ ಸ್ವರೂಪ: ಇಲ್ಲಿಯವರೆಗ ಬಜೆಟ್ ಅನ್ನು ಜನ ಸಾಮಾನ್ಯರಿಗೆ ತಲುಪಿಸಲು ಸಾಧ್ಯವಾಗಿರಲಿಲ್ಲ. ಆದ್ದರಿಂದ ಈ ಬಾರಿ ಬಜೆಟ್‌ಗೆ ಹೊಸ ರೂಪ ನೀಡಲಾಗುವುದು. ಬಜೆಟ್ ಬಹಳ ಭಿನ್ನವಾಗಿರಲಿದೆ ಎಂದು ಬೊಮ್ಮಾಯಿ ಹೇಳಿದರು.

ಅಂಜನಾದ್ರಿ ಬೆಟ್ಟದಲ್ಲಿ ರಾಮ ಮಂದಿರ

ಕೊಪ್ಪಳ ಜಿಲ್ಲೆಯ ಆನೆಗೊಂದಿಯ ಅಂಜನಾದ್ರಿ ಬೆಟ್ಟದಲ್ಲಿ ಶ್ರೀರಾಮ ಮಂದಿರ ನಿರ್ಮಾಣ ಮಾಡಲಾಗುವುದು ಎಂದು ಮುಖ್ಯಮಂತ್ರಿ ಬೊಮ್ಮಾಯಿ ಹೇಳಿದರು.

ಅಂಜನಾದ್ರಿ ಕ್ಷೇತ್ರವನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ಅಭಿವೃದ್ಧಿ ಪಡಿಸಲಾಗುವುದು. ಅಲ್ಲಿ ಕೈಗೆತ್ತಿಕೊಳ್ಳುವ ಅಭಿವೃದ್ಧಿ ಕಾರ್ಯಗಳಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಚಾಲನೆ ನೀಡಲಿದ್ದಾರೆ ಎಂದು ತಿಳಿಸಿದರು.

ಅಂಜನಾದ್ರಿ ಬೆಟ್ಟವು ಆಂಜನೇಯನ ಜನ್ಮಸ್ಥಳ ಎಂದು ಸಂಘ ಪರಿವಾರದ ಸಂಘಟನೆಗಳು ಇತ್ತೀಚಿನ ವರ್ಷಗಳಲ್ಲಿ ಪ್ರತಿಪಾದಿಸುತ್ತಾ ಬಂದಿವೆ.

'ಪಿಸುಮಾತಿನ ಆಂದೋಲನ ಮಣಿಸೋಣ'



ಸಿ.ಟಿ. ರವಿ

ಬೆಂಗಳೂರು: 'ನಕಾರಾತ್ಮಕ ಪಿಸುಮಾತಿನ ಆಂದೋಲನ' ನಡೆಸುತ್ತಿರುವವರನ್ನು ಮಣಿಸಲು ದೇಶದ ಹಿತ ಚಿಂತನೆ ನಡೆಸುವ ಮಾಧ್ಯಮಗಳ ನೆರವು ಪಡೆಯಬೇಕು ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಹೇಳಿದರು.

ಹುಬ್ಬಳ್ಳಿಯಲ್ಲಿ ನಡೆದ ಬಿಜೆಪಿ ರಾಜ್ಯ ಕಾರ್ಯಕಾರಿಣಿಯಲ್ಲಿ 'ಪ್ರಚಲಿತ ಭಾರತದಲ್ಲಿ ನಮಗಿರುವ ರಾಜಕೀಯ ಸವಾಲುಗಳು ಮತ್ತು ಅದಕ್ಕೆ ಪರಿಹಾರ' ಕುರಿತು ಬುಧವಾರ ಅವರು ಮಾತನಾಡಿದರು.

5ನೇ ಪುಟ ನೋಡಿ

ನಗರ ಸ್ಥಳೀಯ ಸಂಸ್ಥೆ: ಇಂದು ಮತ ಎಣಿಕೆ

ಬೆಂಗಳೂರು: ರಾಜ್ಯದ 5 ನಗರ ಸಭೆಗಳು ಸೇರಿ ಅವಧಿಪೂರ್ಣಗೊಂಡಿರುವ 58 ನಗರ ಸ್ಥಳೀಯ ಸಂಸ್ಥೆಗಳು ಮತ್ತು 59 ಗ್ರಾಮ ಪಂಚಾಯಿತಿಗಳಿಗೆ ಸೋಮವಾರ ನಡೆದ ಚುನಾವಣೆಯ ಮತಗಳ ಎಣಿಕೆ ಗುರುವಾರ ನಡೆಯಲಿದೆ.

ಮತಗಳ ಎಣಿಕೆ ಬೆಳಿಗ್ಗೆ 8ಕ್ಕೆ ಆಯಾ ನಗರ ಸ್ಥಳೀಯ ಸಂಸ್ಥೆಗಳ ಕೇಂದ್ರ ಸ್ಥಾನದಲ್ಲೇ ನಡೆಯಲಿದೆ.

ಚಿಕ್ಕಮಗಳೂರು, ತುಮಕೂರು ಜಿಲ್ಲೆಯ ಶಿರಾ, ಗದಗ-ಬೆಟಗೇರಿ, ಬೆಂಗಳೂರು ನಗರ ಜಿಲ್ಲೆಯ ಹೆಬ್ಬಗೋಡಿ, ಬಳ್ಳಾರಿ ಜಿಲ್ಲೆಯ ಹೊಸಪೇಟೆ ನಗರಸಭೆಗಳು, ವಿವಿಧ ಜಿಲ್ಲೆಗಳ 19 ಪುರಸಭೆಗಳು ಮತ್ತು 34 ಪಟ್ಟಣ ಪಂಚಾಯಿತಿಗಳಿಗೆ ಮತಎಣಿಕೆ ನಡೆಯುತ್ತಿದೆ. 1,185 ವಾರ್ಡ್‌ಗಳಲ್ಲಿ 4,961 ಅಭ್ಯರ್ಥಿಗಳು ಚುನಾವಣೆ ಎದುರಿಸಿದ್ದಾರೆ.

ಓಮೈಕ್ರಾನ್: ಮತ್ತೆ 5 ಪ್ರಕರಣ ಪತ್ತೆ

ಬೆಂಗಳೂರು: ರಾಜ್ಯದಲ್ಲಿ ಓಮೈಕ್ರಾನ್‌ನ 5 ಹೊಸ ಪ್ರಕರಣಗಳು ಬುಧವಾರ ಪತ್ತೆಯಾಗಿದ್ದು, ಒಟ್ಟು ಓಮೈಕ್ರಾನ್ ಪ್ರಕರಣಗಳ ಸಂಖ್ಯೆ 43ಕ್ಕೆ ಏರಿಕೆಯಾಗಿದೆ.

ಬೆಂಗಳೂರಿನಲ್ಲಿ 4 ಹಾಗೂ ದಾವಣಗೆರೆಯಲ್ಲಿ 1 ಪ್ರಕರಣ ಹೊಸದಾಗಿ ದೃಢಪಟ್ಟಿದೆ. ಕೋವಿಡ್ ಪ್ರಕರಣಗಳ ಸಂಖ್ಯೆ ಏರಿಕೆ ಕಂಡಿದ್ದು, ಒಂದೇ ದಿನ 566 ಸೋಂಕು ದೃಢಪಟ್ಟಿದೆ.

5

ನಾಳೆ ಜಿಎಸ್‌ಟಿ ಮಂಡಳಿ ಸಭೆ

ನವದೆಹಲಿ: ಜಿಎಸ್‌ಟಿ ಮಂಡಳಿಯು ಶುಕ್ರವಾರ ಸಭೆ ಸೇರಲಿದ್ದು, ಸದ್ಯ ಇರುವ ತೆರಿಗೆ ಹಂತವನ್ನು ಇನ್ನಷ್ಟು ಸರಳಗೊಳಿಸುವ ಹಾಗೂ ವಿನಾಯಿತಿ ಪಟ್ಟಿಯಲ್ಲಿರುವ ಕೆಲವು ಉತ್ಪನ್ನ ಮತ್ತು ಸೇವೆಗಳನ್ನು ತೆರಿಗೆ ವ್ಯಾಪ್ತಿಗೆ ತರುವ ಕುರಿತು ಚರ್ಚೆ ನಡೆಯು ಸಾಧ್ಯತೆ ಇದೆ. ಭೌತಿಕವಾಗಿ ಸಭೆ ನಡೆಯುವ ನಿರೀಕ್ಷೆ ಇದೆ.

ಎಚ್ಚರಿಕೆ ಬೆನ್ನಲ್ಲೇ ಎಚ್ಚೆತ್ತ ನಾಯಕರು 5

ಚಿನಕುರಳಿ

ಪ್ರಕಾಶ್ ಶೆಟ್ಟಿ



‘ಜಾನಪದಕ್ಕೆ ಅನುಕಂಪದ ಅಲೆ ಎದ್ದಿದೆ’

ಪ್ರಜಾವಾಣಿ ವಾರ್ತೆ



ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಕಲಾ ತಂಡದವರು ನಗಾರಿ ಬಾರಿಸಿದರು

ಬೆಂಗಳೂರು: ‘ಜಗತ್ತಿನಾದ್ಯಂತ ಇಂದು ಜಾನಪದಕ್ಕೆ ದೊಡ್ಡ ಅನುಕಂಪದ ಅಲೆ ಎದ್ದಿದೆ. ಶಿಷ್ಟರು ರೂಢಿಸಿಕೊಂಡರೆ ಜಾನಪದಕ್ಕೆ ಉತ್ತಮ ಬೆಂಬಲ ಸಿಗುತ್ತದೆ’ ಎಂದು ಸಂಗೀತ ನಿರ್ದೇಶಕ ಹಂಸಲೇಖ ಹೇಳಿದರು.

ಕರ್ನಾಟಕ ವಿದ್ಯಾರ್ಥಿ ಸಂಘಟನೆಯು ಕುವೆಂಪು ಜನ್ಮದಿನದ ಅಂಗವಾಗಿ ನಗರದಲ್ಲಿ ಬುಧವಾರ ಆಯೋಜಿಸಿದ್ದ ‘ನೆಲದ ಪದ’ ದೇಸಿ ಯುವಜನೋತ್ಸವದಲ್ಲಿ ಅವರು ಮಾತನಾಡಿದರು.

‘ಎಲ್ಲ ಕಲಾಪ್ರಕಾರಗಳು ಶ್ರುತಿ, ಶಿಸ್ತಿಗೆ ಒಳಪಟ್ಟರೆ ನಾವು ಹೆಚ್ಚು ಬೆಳವಣಿಗೆ ಹೊಂದುತ್ತೇವೆ. ಮನಸು, ಬಟ್ಟೆ ಮತ್ತು ಬಂಧಗಳನ್ನು ನೇಯೋಣ, ಹರಿಯುವುದು ಬೇಡ’ ಎಂದೂ ಹೇಳಿದರು.

ಗಾಯಕಿ ಎಂ.ಡಿ.ಪಲ್ಲವಿ, ‘ಸಮಾಜದಲ್ಲಿರುವ ಅಸಮಾನತೆ ತೊಲಗಿಸಲು ಶಿಕ್ಷಣ ಪ್ರಮುಖವಾದದ್ದು. ಸಮಾನತೆಯನ್ನು ಸಮಾಜದಲ್ಲಿ ತರುವತ್ತ ನಾವೆಲ್ಲರೂ ಹೆಜ್ಜೆ ಹಾಕಬೇಕು’ ಎಂದು ತಿಳಿಸಿದರು.

ಲೇಖಕಿ ವಿಜಯಮ್ಮ, ‘ನಮ್ಮ ಪ್ರತಿರೋಧ ವ್ಯಕ್ತಪಡಿಸಲು ಸಾಂಸ್ಕೃತಿಕ ಕಾರ್ಯಕ್ರಮಗಳೂ ಒಂದು ಕ್ರಮ. ಇಂದು ಮಾತನಾಡಿದರೆ ದೇಶದ್ರೋಹ ಎನ್ನುತ್ತಾರೆ. ಪ್ರತಿರೋಧದ ಧ್ವನಿ ಬೇರೆ ನೆಲೆಯಲ್ಲಿ ಮುಂದು ಹೋಗಲಿ’ ಎಂದರು.

ಚಿತ್ರ ನಿರ್ದೇಶಕ ಮಂಸೋರೆ, ‘ಸ್ವಾತಂತ್ರ್ಯ ಸಿಕ್ಕಿ ಹಲವು ದಶಕಗಳು ಕಳೆದರೂ ಜಾತಿ, ಧರ್ಮಗಳನ್ನು ಮುಂದುವರಿಸುತ್ತಿರುವುದು ದುರಂತ. ನಾವೆಲ್ಲ ಇದರಿಂದ ಹೊರಬರಬೇಕಿದೆ. ಇದು, ಸಾಮೂಹಿಕವಾಗಿ ಆಗದಿದ್ದರೂ, ಒಬ್ಬೊಬ್ಬರಾಗಿ ಹೊರಬರಬೇಕು’ ಎಂದು ಹೇಳಿದರು.

ರಸ್ತೆ ಅಭಿವೃದ್ಧಿ: ಬಿಬಿಎಂಪಿಯ ಪ್ರಸ್ತಾವಕ್ಕೆ ನಗರಾಭಿವೃದ್ಧಿ ಇಲಾಖೆ ಆಕ್ಷೇಪ

ಅನುದಾನ ಇಲ್ಲದಿದ್ದರೂ ಟೆಂಡರ್!

• ಮಂಜುನಾಥ ಹೆಬ್ಬಾರ್

ಮುಖ್ಯಾಂಶಗಳು

- ಬೈಯಪ್ಪನಹಳ್ಳಿ ರೈಲ್ವೆ ಟರ್ಮಿನಲ್‌ಗೆ ಸಂಪರ್ಕ ರಸ್ತೆ ಕಾಮಗಾರಿ
- ತಾಂತ್ರಿಕ ಮೌಲ್ಯಮಾಪನಕ್ಕೆ ಎರಡು ಸಂಸ್ಥೆಗಳ ಆಯ್ಕೆ
- ಅಧಿಕಾರಯುಕ್ತ ಸಮಿತಿಯೆದುರು ಪ್ರಸ್ತಾವ ಬಂದಾಗ ಆಕ್ಷೇಪ

ಪ್ರಜಾವಾಣಿ ವಿಶೇಷ

ಬೆಂಗಳೂರು: ಅನುದಾನ ಲಭ್ಯ ಇಲ್ಲದಿದ್ದರೂ ಯಾವುದಾದರೂ ಕಾಮಗಾರಿ ನಡೆಸಲು ಸಾಧ್ಯವೇ? ಬಿಬಿಎಂಪಿ ಮಟ್ಟಿಗೆ ಇದು ಕೂಡಾ ಸಾಧ್ಯ. ಬೈಯಪ್ಪನಹಳ್ಳಿ ಬಳಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಅನುದಾನ ಇದೆಯೋ ಇಲ್ಲವೋ ಎಂಬುದನ್ನು ನೋಡದೆಯೇ ಟೆಂಡರ್ ಪ್ರಕ್ರಿಯೆ ನಡೆಸಿರುವ ಬಿಬಿಎಂಪಿ, ಕೊನೆಯ ಹಂತದ ಪರಿಶೀಲನೆ ವೇಳೆ ಅಡಕತ್ತರಿಯಲ್ಲಿ ಸಿಲುಕಿಕೊಂಡಿದೆ.

‘ಮುಖ್ಯಮಂತ್ರಿಗಳ ನವ ನಗರೋತ್ಥಾನ ಯೋಜನೆ’ಯಡಿ ಬೈಯಪ್ಪನಹಳ್ಳಿಯ ಸರ್.ಎಂ.ವಿ. ಶ್ವೇಶ್ವರಯ್ಯ ರೈಲ್ವೆ ಟರ್ಮಿನಲ್‌ಗೆ ಬಾಣಸವಾಡಿ ಮುಖ್ಯ ರಸ್ತೆ ಹಾಗೂ ಹಳೆ ಮದ್ರಾಸ್ ರಸ್ತೆಯಿಂದ ₹15 ಕೋಟಿ ವೆಚ್ಚದಲ್ಲಿ ಸಂಪರ್ಕ ರಸ್ತೆ ಅಭಿವೃದ್ಧಿಪಡಿಸಲು ಪಾಲಿಕೆ ನಿರ್ಧರಿಸಿದೆ. ಈ ರಸ್ತೆ ನಿರ್ಮಾಣಕ್ಕಾಗಿ ಟೆಂಡರ್ ಪ್ರಕ್ರಿಯೆಯನ್ನೂ ಪೂರ್ಣಗೊಳಿಸಿದೆ. ಇದಕ್ಕೆ ಅನುಮೋದನೆ ನೀಡುವಂತೆ ನಗರಾಭಿವೃದ್ಧಿ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿದೆ. ‘₹15 ಕೋಟಿ ವೆಚ್ಚದ ಕಾಮಗಾರಿಗೆ ಯಾವುದೇ ಅನುದಾನ ಲಭ್ಯ ಇಲ್ಲ. ಹೆಚ್ಚುವರಿ ಅನುದಾನವನ್ನು ನಗರಾಭಿವೃದ್ಧಿ ಇಲಾಖೆ ಅಥವಾ ಸರ್ಕಾರದ ಮೂಲದಿಂದ ಪಡೆಯಬೇಕಿದೆ. ನವ ನಗರೋತ್ಥಾನದಲ್ಲಿ ಈ ಅನುದಾನ ಲಭ್ಯ ಇದೆ ಎಂಬುದು ತಪ್ಪಾಗುತ್ತದೆ’ ಎಂದು ನಗರಾಭಿವೃದ್ಧಿ ಇಲಾಖೆ ಆಕ್ಷೇಪ ವ್ಯಕ್ತಪಡಿಸಿದೆ.

ಟೆಂಡರ್ ಪ್ರಕ್ರಿಯೆಯ ಹಾದಿ:

‘ವಿಶ್ವೇಶ್ವರಯ್ಯ ಟರ್ಮಿನಲ್ ಕಾಮಗಾರಿ ಪೂರ್ಣಗೊಂಡಿದ್ದು, ಶೀಘ್ರದಲ್ಲಿ ಪ್ರಧಾನಿ ಅವರು ಉದ್ಘಾಟನೆ ಮಾಡಲಿದ್ದಾರೆ. ಟರ್ಮಿನಲ್ ಸಾರ್ವಜನಿಕರಿಗೆ ಲೋಕಾರ್ಪಣೆಗೊಂಡ ಬಳಿಕ ಹೆಚ್ಚಿನ ವಾಹನ ದಟ್ಟಣೆ ನಿವಾರಿಸಲು ರಸ್ತೆ ಅಭಿವೃದ್ಧಿ ಹಾಗೂ ಇತರ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬೇಕು’ ಎಂದು ವಿನಂತಿಸಿ ನೈರುತ್ಯ ರೈಲ್ವೆ ವಿಭಾಗದ ಅಧಿಕಾರಿಗಳು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿದ್ದರು.

ಪ್ರಯಾಣಿಕರ ಹಾಗೂ ಸ್ಥಳೀಯರ ಅನುಕೂಲಕ್ಕಾಗಿ ಈ ಕಾಮಗಾರಿಯ ಅವಶ್ಯಕತೆ ಇದೆ ಎಂದೂ ಬಿಬಿಎಂಪಿಯ ಮುಖ್ಯ ಆಯುಕ್ತರು ಪ್ರತಿಪಾದಿಸಿದ್ದರು. ಬೈಯಪ್ಪನಹಳ್ಳಿಯಲ್ಲಿ ಆರ್‌ಒಬಿ ನಿರ್ಮಾಣಕ್ಕಾಗಿ ಹೆಚ್ಚುವರಿಯಾಗಿ ಮೀಸಲಿರಿಸಿದ ₹20 ಕೋಟಿ ಅನುದಾನವನ್ನು ಇದಕ್ಕೆ ಒದಗಿಸಲಾಗಿದೆ ಎಂದೂ ಬಿಬಿಎಂಪಿ ಹೇಳಿಕೊಂಡಿತ್ತು. ಬಳಿಕ ಸೆಪ್ಟೆಂಬರ್‌ನಲ್ಲಿ ಟೆಂಡರ್ ಪ್ರಕ್ರಿಯೆ ನಡೆಸಲಾಗಿತ್ತು. ಅಕ್ಟೋಬರ್‌ನಲ್ಲಿ ಆರ್ಥಿಕ ಬಿಡ್ ತೆರೆಯಲಾಗಿತ್ತು. ತಾಂತ್ರಿಕ ಮೌಲ್ಯಮಾಪನದಲ್ಲಿ ಪಿಎನ್‌ಜಿ ಎಂಜಿನಿಯರಿಂಗ್ ಪ್ರೈವೇಟ್ ಲಿಮಿಟೆಡ್ (ಎಲ್–1) ಹಾಗೂ ಶಂಕರನಾರಾಯಣ ಕನ್‌ಸ್ಟ್ರಕ್ಷನ್ ಲಿಮಿಟೆಡ್ (ಎಲ್–2) ಅರ್ಹತೆ ಗಳಿಸಿದ್ದವು. ಎಲ್– 1 ಗುತ್ತಿಗೆದಾರರು ₹14.80 ಕೋಟಿ ಮೊತ್ತ ನಮೂದಿಸಿದ್ದರು. ಈ ಮೊತ್ತವು ಅಂದಾಜು ಮೊತ್ತಕ್ಕೆ ಹೋಲಿಸಿದರೆ ಶೇ 14ರಷ್ಟು ಹೆಚ್ಚು ಇತ್ತು. ಹೀಗಾಗಿ, ಈ ಬಗ್ಗೆ ತೀರ್ಮಾನ ಕೈಗೊಳ್ಳಲು ಸರ್ಕಾರದ ಅಧಿಕಾರಯುಕ್ತ ಸಮಿತಿಯ ಮುಂದೆ ಪ್ರಸ್ತಾವ ಮಂಡಿಸಲು ಬಿಬಿಎಂಪಿಯ ಮುಖ್ಯ ಆಯುಕ್ತರು ತೀರ್ಮಾನಿಸಿದರು. ಈ ಪ್ರಸ್ತಾವಕ್ಕೆ ನಗರಾಭಿವೃದ್ಧಿ ಇಲಾಖೆಯ ತಾಂತ್ರಿಕ ಕೋಶವು ಆಕ್ಷೇಪ ವ್ಯಕ್ತಪಡಿಸಿದೆ.

‘ಬೈಯಪ್ಪನಹಳ್ಳಿ ಆರ್‌ಒಬಿಗೆ 2012ರಲ್ಲಿ ಮೂಲ ದರ ₹20.41 ಕೋಟಿ ಆಗಿತ್ತು. 2018–19ನೇ ಸಾಲಿನಲ್ಲಿ ಪರಿಷ್ಕೃತ ಅಂದಾಜು ₹38.56 ಕೋಟಿ (ಬಿಬಿಎಂಪಿ ಪಾಲು) ಆಗಿದೆ. ಪರಿಷ್ಕೃತ ಅಂದಾಜಿಗೆ ಪಾವತಿಸಲು ₹20 ಕೋಟಿಯನ್ನು ನವ ನಗರೋತ್ಥಾನ ಯೋಜನೆಯಲ್ಲಿ ನೀಡಲಾಗಿದೆ. ಇದನ್ನೇ ರಸ್ತೆ ಅಭಿವೃದ್ಧಿಯ ಅನುದಾನವೆಂದು ಭಾವಿಸುವುದು ಸರಿಯಲ್ಲ. ಸದ್ಯ ಯಾವುದೇ ಅನುದಾನ ಇಲ್ಲ. ಜತೆಗೆ, ಆರ್‌ಒಬಿಯ ಮೂಲ ವಿನ್ಯಾಸವನ್ನು ಬದಲಿಸಿದ್ದು ರೈಲ್ವೆ ಇಲಾಖೆ. ಈ ವೆಚ್ಚವನ್ನು ರೈಲ್ವೆ ಇಲಾಖೆಯೇ ಭರಿಸುವುದು ಸೂಕ್ತ. ಈ ಎಲ್ಲ ಕಾರಣಗಳಿಂದ ಹೆಚ್ಚುವರಿ ಅನುದಾನಕ್ಕಾಗಿ ಆರ್ಥಿಕ ಇಲಾಖೆಯನ್ನು ಕೋರಬಹುದು’ ಎಂದು ನಗರಾಭಿವೃದ್ಧಿ ಇಲಾಖೆ ಸೂಚಿಸಿದೆ.

‘ಅಕ್ರಮಕ್ಕೆ ಹೆಸರುವಾಸಿ’

‘ಬಿಬಿಎಂಪಿಯು ತನ್ನ ಅವ್ಯವಹಾರ, ಅಕ್ರಮಗಳಿಗೆ ಹೆಸರುವಾಸಿಯಾಗಿದೆ. ಟೆಂಡರ್ ಪ್ರಕ್ರಿಯೆಯಿಂದ ಹಿಡಿದು ಕಾಮಗಾರಿ ಮುಗಿಯುವವರೆಗೆ ಅಕ್ರಮಗಳ ಸರಮಾಲೆಯನ್ನೇ ಸೃಷ್ಟಿಸುತ್ತಿದೆ. ಇದರಿಂದ ತನ್ನ ಬೊಕ್ಕಸ ಬರಿದಾದರೂ ಕೂಡ ಕಾಮಗಾರಿಗಳ ಹೆಸರಿನಲ್ಲಿ ನಡೆಸುವ ಲೂಟಿ ನಿಂತಿಲ್ಲ. ಉತ್ತಮ ಬೆಂಗಳೂರನ್ನು ನಿರ್ಮಿಸುತ್ತೇವೆ ಎಂದು ಮುಖ್ಯಮಂತ್ರಿಯವರು ಹೇಳುತ್ತಿದ್ದಾರೆ. ಆದರೆ, ಭ್ರಷ್ಟ ಅಧಿಕಾರಿಗಳನ್ನು ತೊಲಗಿಸಿ, ಬಿಬಿಎಂಪಿಯನ್ನು ಸುಧಾರಣೆ ಮಾಡದ ಹೊರತು ಬೇರೆ ಯಾವುದೇ ಬದಲಾವಣೆ ನಿರೀಕ್ಷಿಸಲು ಸಾಧ್ಯವಿಲ್ಲ’ ಎಂದು ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಪ್ರಧಾನ ಕಾರ್ಯದರ್ಶಿ ಸಿ.ಎನ್. ದೀಪಕ್ ತಿಳಿಸಿದರು.

ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿಗೆ ಅರ್ಜಿ ಆಹ್ವಾನ

ಬೆಂಗಳೂರು: ಕೃಷಿಕ್ ಸರ್ವೋದಯ ಫೌಂಡೇಷನ್ ಸಂಸ್ಥೆಯು 2022ನೇ ಸಾಲಿನ ಐ.ಎ.ಎಸ್, ಕೆ.ಎ.ಎಸ್ ಪರೀಕ್ಷೆಗಳ ತರಬೇತಿಗೆ ಅರ್ಜಿಗಳನ್ನು ಆಹ್ವಾನಿಸಿದೆ.

ತರಗತಿಗಳಿಗೆ ಸೇರಿದ ಪ್ರತಿಭಾನ್ವಿತ ಅಭ್ಯರ್ಥಿಗಳಿಗೆ ವಿದ್ಯಾರ್ಥಿ ವೇತನದ ಮೂಲಕ ಕೋರ್ಸ್ ಶುಲ್ಕದಲ್ಲಿ ರಿಯಾಯಿತಿ ನೀಡಲಾಗುವುದು.

ಅರ್ಜಿಗಳನ್ನು ಸಲ್ಲಿಸಲು 2022ರ ಜ.10 ಕಡೆಯ ದಿನಾಂಕ. ಭರ್ತಿ ಮಾಡಿದ ಅರ್ಜಿಗಳನ್ನು ಅಂಚೆ ಮೂಲಕ ಕೃಷಿಕ್ ಸರ್ವೋದಯ ಫೌಂಡೇಷನ್, ನಂ.15, 2ನೇ ಮಹಡಿ, ಹಳೆ ವಿಮಾನ ನಿಲ್ದಾಣ ರಸ್ತೆ, ಕೋಡಿಹಳ್ಳಿ, ಬೆಂಗಳೂರು–08 ಈ ವಿಳಾಸಕ್ಕೆ ಕಳುಹಿಸಬೇಕು. www.ksfkarnataka.com ವೆಬ್‌ಸೈಟ್‌ನಲ್ಲಿಯೂ ನೋಂದಾಯಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಸಂಪರ್ಕಕ್ಕೆ: 080 25202299 ಅಥವಾ 7625000990

ಆರ್.ಎಲ್. ಜಾಲಪ್ಪ ಪುಣ್ಯಸ್ಮರಣೆ

ಪ್ರಜಾವಾಣಿ ವಾರ್ತೆ



ಆರ್.ಎಲ್. ಜಾಲಪ್ಪ

ದೊಡ್ಡಬಳ್ಳಾಪುರ: ನಗರದ ಆರ್.ಎಲ್. ಜಾಲಪ್ಪ ಕ್ಯಾಂಪಸ್‌ನಲ್ಲಿ ಬುಧವಾರ ಇತ್ತೀಚೆಗೆ ನಿಧನರಾದ ಕೇಂದ್ರದ ಮಾಜಿ ಸಚಿವ ಆರ್.ಎಲ್. ಜಾಲಪ್ಪ ಅವರ ಪುಣ್ಯ ಸ್ಮರಣೆ ನಡೆಯಿತು.

ಪುಣ್ಯ ಸ್ಮರಣೆ ಅಂಗವಾಗಿ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಜಾಲಪ್ಪರ ಸಮಾಧಿಗೆ ಪೂಜೆ ಸಲ್ಲಿಸಿದರು.

ಶಾಸಕರಾದ ಟಿ. ವೆಂಕಟರಮಣಯ್ಯ, ಕುಮಾರ್ ಬಂಗಾರಪ್ಪ, ಕಾಂಗ್ರೆಸ್ ಮುಖಂಡ ವಿ.ಎಸ್. ಉಗ್ರಪ್ಪ, ಜಾಲಪ್ಪ ಅವರ ಹಿರಿಯ ಪುತ್ರ ಜೆ. ನರಸಿಂಹಸ್ವಾಮಿ, ಸಂಬಂಧಿ ಜಿ.ಎಚ್. ನಾಗರಾಜ್, ಜಾಲಪ್ಪ ಅವರ ಒಡನಾಡಿ ಆರ್.ಜಿ. ವೆಂಕಾಟಾಚಲಯ್ಯ ಇದ್ದರು.

ಪೂಜಾ ಕಾರ್ಯಕ್ರಮಕ್ಕೂ ಮೊದಲು ಜಾಲಪ್ಪ ಕುಟುಂಬದವರು ಸಮಾಧಿಗೆ ಸಾಂಪ್ರದಾಯಿಕವಾಗಿ ಪೂಜೆ ಸಲ್ಲಿಸಿದರು.

ಪುಣ್ಯ ಸ್ಮರಣೆಯಲ್ಲಿ ನೂರಾರು ಜನರು ಪಾಲ್ಗೊಂಡಿದ್ದರು.







ಕಾಮಗಾರಿಗಳಲ್ಲಿ ಅಕ್ರಮ: ನ್ಯಾ. ನಾಗಮೋಹನ್‌ದಾಸ್ ಸಮಿತಿ ವರದಿ ಅನುಷ್ಠಾನಕ್ಕೆ ಮೀನಮೇಷ

3 ವರ್ಷ ಆದರೂ ಸಿದ್ಧವಾಗಿಲ್ಲ ಆರೋಪ ಪಟ್ಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಾಂಧಿನಗರ, ಮಲ್ಲೇಶ್ವರ ಹಾಗೂ ರಾಜರಾಜೇಶ್ವರಿನಗರ ಕ್ಷೇತ್ರಗಳ ಎಂಜಿನಿಯರಿಂಗ್ ವಿಭಾಗಗಳಲ್ಲಿ 2008ರಿಂದ 2012ರ ನಡುವೆ ನಡೆದಿದ್ದ ಕಾಮಗಾರಿಗಳಲ್ಲಿ ಅಕ್ರಮವೆಸಗಿರುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲು ಬಿಬಿಎಂಪಿ ಮೀನಮೇಷ ಎಣಿಸುತ್ತಿದೆ.

ಈ ಮೂರು ಕ್ಷೇತ್ರಗಳಲ್ಲಿ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳಲ್ಲಿನ ಅಕ್ರಮಗಳ ಬಗ್ಗೆ ವಿಚಾರಣೆ ನಡೆಸಿರುವ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಸಮಿತಿಯು, 'ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ತಕ್ಷಣ ಶಿಸ್ತುಕ್ರಮ ಕೈಗೊಳ್ಳಬೇಕು.

> ನ್ಯಾ.ನಾಗಮೋಹನ್‌ದಾಸ್ ಸಮಿತಿ ವರದಿಯನ್ವಯ ಅಧಿಕಾರಿಗಳ ವಿರುದ್ಧ ಕರಡು ದೋಷಾರೋಪ ಪಟ್ಟಿ ಸಿದ್ಧಪಡಿಸುವ ಬಗ್ಗೆ ಪರಿಶೀಲಿಸಿ ಕ್ರಮ ವಹಿಸುತ್ತೇವೆ
> **ಕೆ.ಎ.ದಯಾನಂದ,** ವಿಶೇಷ ಆಯುಕ್ತ (ಆಡಳಿತ) ಬಿಬಿಎಂಪಿ

ಪ್ರಜಾವಾಣಿ ವಿಶೇಷ

ಸರ್ಕಾರಕ್ಕೆ ಆದ ನಷ್ಟಕ್ಕೆ ತಪ್ಪಿತಸ್ಥ ಅಧಿಕಾರಿಗಳು ಹಾಗೂ ಗುತ್ತಿಗೆದಾರರನ್ನೇ ಹೊಣೆಗಾರರನ್ನಾಗಿ ಮಾಡಬೇಕು' ಎಂದು ಶಿಫಾರಸು ಮಾಡಿತ್ತು. ಸಮಿತಿಯು ತನಿಖಾ ವರದಿಯನ್ನು ಜೆಡಿಎಸ್– ಕಾಂಗ್ರೆಸ್ ಮೈತ್ರಿ ಸರ್ಕಾರದ ಅಸ್ತಿತ್ವದಲ್ಲಿದ್ದಾಗ, ಅಂದಿನ ಉಪಮುಖ್ಯಮಂತ್ರಿ ಜಿ.ಪರಮೇಶ್ವರ ಅವರಿಗೆ ಸಲ್ಲಿಸಿತ್ತು.

ಯಾವ ವಿಭಾಗದಲ್ಲಿ ಎಷ್ಟು ವಸೂಲಿ ಬಾಕಿ?

ವಿಭಾಗ	ವಸೂಲಿ ಮಾಡಬೇಕಿರುವುದು (₹ ಕೋಟಿ)
ಗಾಂಧಿನಗರ	47.63
ಮಲ್ಲೇಶ್ವರ	24.01
ಆರ್.ಆರ್. ನಗರ	4.91

ಸಮಿತಿ ವರದಿ ಸಲ್ಲಿಸಿ ಮೂರು ವರ್ಷಗಳೇ ಕಳೆದಿವೆ. ತಪ್ಪಿತಸ್ಥರೆಂದು ಗುರುತಿಸಲಾದ 314 ಅಧಿಕಾರಿಗಳ ವಿರುದ್ಧ ಕರಡು ದೋಷಾರೋಪ ಪಟ್ಟಿ ಸಿದ್ಧಪಡಿಸುವಂತೆ ನಗರಾಭಿವೃದ್ಧಿ ಇಲಾಖೆಯು ಬಿಬಿಎಂಪಿಗೆ ಸೂಚನೆ ನೀಡುತ್ತಲೇ ಇದೆ. ಈ ಬಗ್ಗೆ ಇಲಾಖೆಯು 2019ರ ಅಕ್ಟೋಬರ್‌ನಿಂದ ಇದುವರೆಗೆ 10ಕ್ಕೂ ಅಧಿಕ ಪತ್ರಗಳನ್ನು ಬರೆದಿದೆ.

ಆದರೂ ಬಿಬಿಎಂಪಿ ಇವುಗಳಿಗೆ ಉತ್ತರಿಸುವ ಗೋಜಿಗೂ ಹೋಗಿಲ್ಲ.

ನಗರಾಭಿವೃದ್ಧಿ ಇಲಾಖೆಯು 2021ರ ಅಕ್ಟೋಬರ್ 08ರಂದು ಬಿಬಿಎಂಪಿಗೆ ಮತ್ತೊಂದು ಪತ್ರ ಬರೆದು, ಈ ಪ್ರಕರಣ ಸಂಬಂಧ ಅಧಿಕಾರಿಗಳು/ ಎಂಜಿನಿಯರ್‌ಗಳು ಸೇರಿ ಒಟ್ಟು 314 ಮಂದಿ ವಿರುದ್ಧ ಹೊರಡಿಸಬೇಕಾದ ಕರಡು ದೋಷಾರೋಪಣಾ ಪಟ್ಟಿಯನ್ನು ಪ್ರತ್ಯೇಕವಾಗಿ ಸಲ್ಲಿಸುವಂತೆ ಮತ್ತೆ ಜ್ಞಾಪಿಸಿದೆ. ಈ ಅಧಿಕಾರಿಗಳ ವಿರುದ್ಧ ಇನ್ನೂ ಕರಡು ದೋಷಾರೋಪಣಾ ಪಟ್ಟಿಯೂ ಸಿದ್ಧವಾಗಿಲ್ಲ.

ಈ ಮೂರು ಕ್ಷೇತ್ರಗಳಲ್ಲಿ ಅನುಷ್ಠಾನಗೊಳಿಸಲಾದ ಕಾಮಗಾರಿಗಳ ಅಕ್ರಮಗಳಿಗೆ ಕಾರಣರಾದ ಕಾರ್ಯಪಾಲಕ ಎಂಜಿನಿಯರ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್, ಸಹಾಯಕ ಎಂಜಿನಿಯರ್‌ಗಳನ್ನು ಹಾಗೂ ಗುತ್ತಿಗೆದಾರರನ್ನು ಗುರುತಿಸಿರುವ ಸಮಿತಿ, ಅವರ ಹೆಸರುಗಳನ್ನೂ ತನ್ನ ವರದಿಯಲ್ಲಿ ಉಲ್ಲೇಖಿಸಿತ್ತು. ಒಟ್ಟು ₹ 76.36 ಕೋಟಿಯನ್ನು ತಪ್ಪಿಸ್ಥರಿಂದ ವಸೂಲಿ ಮಾಡುವಂತೆಯೂ ಶಿಫಾರಸು ಮಾಡಿತ್ತು. ಆದರೆ, ಇದುವರೆಗೂ ಒಬ್ಬನೇ ಒಬ್ಬ ಅಧಿಕಾರಿ ಅಥವಾ ಗುತ್ತಿಗೆದಾರರ ವಿರುದ್ಧ ಕ್ರಮಕೈಗೊಂಡಿಲ್ಲ. ಈ ಮೂರು ಕ್ಷೇತ್ರಗಳ ಎಂಜಿನಿಯರಿಂಗ್ ವಿಭಾಗಗಳಲ್ಲಿ ನಡೆದಿದ್ದ ಅಕ್ರಮಗಳ ಕುರಿತು 'ಪ್ರಜಾವಾಣಿ'ಯು 'ಬ್ರಹ್ಮಾಂಡ ಭ್ರಷ್ಟಾಚಾರ' ಹೆಸರಿನಲ್ಲಿ ಸರಣಿ ವರದಿಗಳನ್ನು ಪ್ರಕಟಿಸಿ ಗಮನಸೆಳೆದಿತ್ತು. ಅಧಿಕಾರಿಗಳು ನಿಯಮಗಳನ್ನು ಗಾಳಿಗೆ ತೂರಿ ಹೇಗೆ ಭ್ರಷ್ಟಾಚಾರದಲ್ಲಿ ಭಾಗಿಯಾಗಿದ್ದಾರೆ ಎಂಬುದನ್ನು ಎಳೆ ಎಳೆಯಾಗಿ ವಿವರಿಸಿತ್ತು.

ನೇತ್ರದಾನಕ್ಕೆ 'ಮಿಸ್ಡ್ ಕಾಲ್' ಸೌಲಭ್ಯ

ಮೊಬೈಲ್ ನಂಬರ್ ಬಿಡುಗಡೆ ಮಾಡಿದ ಶಿವರಾಜ್‌ಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನೇತ್ರದಾನ ಮಾಡಲು ಇಚ್ಛಿಸುವವರು ಮಿಸ್ಡ್ ಕಾಲ್ (ಮೊಬೈಲ್ ಸಂಖ್ಯೆ– 8884018800) ನೀಡಿ ಹೆಸರು ನೋಂದಾಯಿಸಿಕೊಳ್ಳಬಹುದು' ಎಂದು ನಾರಾಯಣ ನೇತ್ರಾಲಯದ ವ್ಯವಸ್ಥಾಪಕ ನಿರ್ದೇಶಕ ಡಾ.ಕೆ. ಭುಜಂಗ ಶೆಟ್ಟಿ ತಿಳಿಸಿದರು.

ನೇತ್ರದಾನದ ಹೆಸರು ನೋಂದಣಿಗೆಂದೇ ರಾಜ್‌ಕುಮಾರ್ ನೇತ್ರ ಬ್ಯಾಂಕ್ ಮತ್ತು ನಾರಾಯಣ ನೇತ್ರಾಲಯದ ವತಿಯಿಂದ ಆರಂಭಿಸಿದ ಮೊಬೈಲ್ ಸಂಖ್ಯೆಯನ್ನು ನಟರಾದ ಶಿವರಾಜ್‌ಕುಮಾರ್ ಮತ್ತು ರಾಘವೇಂದ್ರ ರಾಜ್‌ಕುಮಾರ್ ಬುಧವಾರ ಲೋಕಾರ್ಪಣೆ ಮಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಭುಜಂಗ ಶೆಟ್ಟಿ, 'ನೇತ್ರದಾನಕ್ಕೆ ಹೆಸರು ನೋಂದಾಯಿಸುವ ಪ್ರಕ್ರಿಯೆ ಎಂದರೆ ಮೃತಪಟ್ಟ ಬಳಿಕ ಕಣ್ಣುಗಳನ್ನು ಬೇರೆಯವರಿಗೆ ದಾನ ಮಾಡುವ ಬಗ್ಗೆ ಔಪಚಾರಿಕ, ಸ್ವಯಂಪ್ರೇರಿತ ಒಪ್ಪಂದ. ಮಿಸ್ಡ್ ಕಾಲ್ ನೀಡಿದವರಿಗೆ ನೇತ್ರದಾನದ ಒಪ್ಪಂದದ ಅರ್ಜಿಯ ಲಿಂಕ್ ಕಳುಹಿಸಲಾಗುವುದು. ಅರ್ಜಿ ಭರ್ತಿ ಮಾಡಿ ಸಲ್ಲಿಸಿದ ದಾನಿಗಳಿಗೆ ನೇತ್ರದಾನ ಪ್ರತಿಜ್ಞೆ ಪ್ರಮಾಣಪತ್ರ ಮತ್ತು ನೇತ್ರದಾನದ ಕುರಿತ ಸೂಚನೆಗಳನ್ನು ಕಳುಹಿಸಲಾಗುವುದು. ನೇತ್ರದಾನ ಮಾಡಲು ಇಚ್ಛಿಸುವವರು ಎಲ್ಲೇ ಇದ್ದರೂ ಯಾವುದೇ ತೊಂದರೆಗಳಿಲ್ಲದೆ ಕಣ್ಣುಗಳನ್ನು ದಾನ ಮಾಡುವ ಪ್ರತಿಜ್ಞೆ ಮಾಡಲು ಈ ಸೌಲಭ್ಯ ಒದಗಿಸಲಾಗಿದೆ' ಎಂದು ಹೇಳಿದರು.

'ಐದು ವರ್ಷಗಳಿಂದ ನಾರಾಯಣ ನೇತ್ರಾಲಯವು ನೇತ್ರದಾನ ಪ್ರತಿಜ್ಞೆ ಕಾರ್ಯಕ್ರಮ ನಡೆಸಿಕೊಂಡು ಬರುತ್ತಿದೆ. ಪುನೀತ್ ರಾಜ್‌ಕುಮಾರ್ ಅವರ ನೇತ್ರದಾನದ ನಂತರ ಈ ಬಗ್ಗೆ ದೊಡ್ಡ ಅಲೆಯೇ ಉಂಟಾಗಿದೆ. ಹೊಸ ತಂತ್ರಜ್ಞಾನದಿಂದಾಗಿ ಪುನೀತ್ ಅವರ ಕಣ್ಣುಗಳನ್ನು ನಾಲ್ವರಿಗೆ ಅಳವಡಿಸಲಾಗಿದೆ. 2021ರ ನವೆಂಬರ್‌ನಲ್ಲಿ ದಾನಿಗಳಿಂದ 234 ಕಣ್ಣುಗಳನ್ನು ಸಂಗ್ರಹಿಸಲಾಗಿದೆ. ಡಿಸೆಂಬರ್ ತಿಂಗಳಲ್ಲಿ 27ನೇ ತಾರೀಕಿನವರೆಗೆ 209 ಕಣ್ಣುಗಳನ್ನು ಸಂಗ್ರಹಿಸಲಾಗಿದೆ. ಈ ಹಿಂದೆ, ತಿಂಗಳಲ್ಲಿ ನೇತ್ರ ಬ್ಯಾಂಕ್‌ನಲ್ಲಿ ತಿಂಗಳಿಗೆ 100ರಿಂದ 200 ಜನ ಮಾತ್ರ ನೇತ್ರದಾನಕ್ಕೆ ಒಪ್ಪಂದ ಮಾಡಿಕೊಳ್ಳುತ್ತಿದ್ದರು. ಪ್ರಸಕ್ತ ತಿಂಗಳಿನಲ್ಲಿ ಈವರೆಗೆ ಎರಡು ಸಾವಿರಕ್ಕೂ ಹೆಚ್ಚು ಜನರು ಕಣ್ಣುಗಳನ್ನು ದಾನ ಮಾಡಲು ಒಪ್ಪಂದ ಮಾಡಿಕೊಂಡಿದ್ದಾರೆ' ಎಂದು ವಿವರಿಸಿದರು.

ರಾಘವೇಂದ್ರ ರಾಜ್‌ಕುಮಾರ್ ಮಾತನಾಡಿ, 'ಪುನಿತ್ ರಾಜ್‌ಕುಮಾರ್ ಯಾವ ರೀತಿಯ ಸಮಾಜ ಸೇವೆ ಮಾಡಿದ್ದಾರೆ ಎಂಬುದು ಅವರ ನಿಧನದ ನಂತರ ಅರಿವಾಯಿತು. ಅವರ ಈ ರೀತಿಯ ಕಾರ್ಯದಿಂದಾಗಿ, ನಟನೆಗಿಂತ ಹೆಚ್ಚಾಗಿ ಸಮಾಜದ ಒಬ್ಬ ಆದರ್ಶ ವ್ಯಕ್ತಿಯನ್ನಾಗಿ ಅವರನ್ನು ನೋಡುವಂತಾಯಿತು' ಎಂದರು.

'ನೇತ್ರದಾನವನ್ನು ಜನಾಂದೋಲನವನ್ನಾಗಿ ಮಾಡಲು ಭುಜಂಗ ಶೆಟ್ಟಿ ಪ್ರಯತ್ನಿಸುತ್ತಿದ್ದಾರೆ. ನಾನು ಕೂಡ ಎಲ್ಲ ರೀತಿಯ ನೆರವು ನೀಡುತ್ತೇನೆ. ಅವರು ಅಮೂಲ್ಯ ಸಂದೇಶಗಳನ್ನು ರಚಿಸಿ ಕೊಟ್ಟರೆ, ಮನೆ ಮತ್ತು ಕಚೇರಿಯಲ್ಲಿ ಅದನ್ನು ಪ್ರದರ್ಶಿಸಲಾಗುವುದು' ಎಂದು ಅವರು ಹೇಳಿದರು.

'ಕುವೆಂಪು ಶ್ರೀರಾಮಾಯಣ ದರ್ಶನಂ ವಚನ ದೀಪಿಕೆ' ಕೃತಿ ಬಿಡುಗಡೆ

'ಆತ್ಮಾನಂದ ಇರುವುದು ಸಾಹಿತ್ಯದಲ್ಲಿ ಮಾತ್ರ'

ಪ್ರಜಾವಾಣಿ ವಾರ್ತೆ



'ಕುವೆಂಪು ಶ್ರೀರಾಮಾಯಣ ದರ್ಶನಂ ವಚನ ದೀಪಿಕೆ' ಕೃತಿಯನ್ನು ಮಲ್ಲೇಪುರಂ ಜಿ. ವೆಂಕಟೇಶ್ ಬಿಡುಗಡೆ ಮಾಡಿ ಕೃತಿಕಾರ ಜಿ. ಕೃಷ್ಣಪ್ಪ ಅವರಿಗೆ ನೀಡಿದರು. ಅನ್ನಪೂರ್ಣ ಪಬ್ಲಿಷಿಂಗ್ ಹೌಸ್‌ನ ಸುರೇಶ್ ಬಿ.ಕೆ., ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಜೇರಿಗೆ ಲೋಕೇಶ್, ಬಿ.ಎಂ.ಶ್ರೀ ಪ್ರತಿಷ್ಠಾನದ ಅಧ್ಯಕ್ಷ ಡಾ. ಬೈರಮಂಗಲ ರಾಮೇಗೌಡ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ, ಗೌರವ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ, ಶೇಷಾದ್ರಿಪುರ ಸಂಜೆ ಪದವಿ ಕಾಲೇಜಿನ ಪ್ರಾಂಶುಪಾಲ ಪ್ರೊ. ಎನ್.ಎಸ್. ಸತೀಶ್ ಇದ್ದರು –ಪ್ರಜಾವಾಣಿ ಚಿತ್ರ

ಬೆಂಗಳೂರು: 'ಅಂತರಂಗದ ವಿಕಾಸ ಆಗದೆ ಬಹಿರಂಗದ ವಿಕಾಸ ಆಗದು. ನೆಮ್ಮದಿ ಮತ್ತು ಆತ್ಮಾನಂದ ಇರುವುದು ಸಾಹಿತ್ಯದಲ್ಲಿ ಮಾತ್ರ' ಎಂದು ವಿದ್ವಾಂಸ ಮಲ್ಲೇಪುರಂ ಜಿ. ವೆಂಕಟೇಶ್ ಅಭಿಪ್ರಾಯಪಟ್ಟರು.

ಕರ್ನಾಟಕ ಗಾಂಧೀ ಸ್ಮಾರಕ ನಿಧಿ, ಅನ್ನಪೂರ್ಣ ಪಬ್ಲಿಷಿಂಗ್ ಹೌಸ್, ಗಾಂಧಿ ಸಾಹಿತ್ಯ ಪ್ರತಿಷ್ಠಾನ, ಶೇಷಾದ್ರಿಪುರ ಸಂಜೆ ಪದವಿ ಕಾಲೇಜು, ಉದಯ ಪ್ರಕಾಶನದ ಸಹಯೋಗದಲ್ಲಿ ನಗರದಲ್ಲಿ ಬುಧವಾರ ಆಯೋಜಿಸಿದ್ದ ಕುವೆಂಪು ಜನ್ಮ ಸಂಭ್ರಮ ಕಾರ್ಯಕ್ರಮದಲ್ಲಿ ಡಾ.ಜಿ. ಕೃಷ್ಣಪ್ಪ ಅವರ 'ಕುವೆಂಪು ಶ್ರೀರಾಮಾಯಣ ದರ್ಶನಂ ವಚನ ದೀಪಿಕೆ' ಗದ್ಯಾನುವಾದ ಕೃತಿ ಬಿಡುಗಡೆ ಮಾಡಿ ಅವರು ಮಾತನಾಡಿದರು.

'ಇತ್ತೀಚಿನ ದಿನಗಳಲ್ಲಿ ಬಹಿರಂಗದ ಕಡೆಗೆ ಇರುವ ತಹ ತಹ ಅಂತರಂಗದ ವಿಕಾಸದ ಕಡೆಗೆ ಇಲ್ಲವಾಗಿದೆ. ಅಂತರಂಗ ವಿಕಾಸ ಆಗದಿದ್ದರೆ ಅದು ಕೇವಲ ಒಣ ವ್ಯಾಪಾರ ಆಗಲಿದೆ. ಮನಸ್ಸಿಗೆ ನೆಮ್ಮದಿ, ಬುದ್ಧಿಗೆ ವಿಚಾರ ಮತ್ತು ಹೃದಯಕ್ಕೆ ಆತ್ಮಾನಂದ ಸಿಗುವುದು ಸಾಹಿತ್ಯದಲ್ಲಿ ಮಾತ್ರ. ಕುವೆಂಪು ರಾಮಾಯಣ ದರ್ಶನಂ ಓದಿದರೆ ಈ ಆತ್ಮಾನಂದ ಸಿಗಲಿದೆ' ಎಂದು ಹೇಳಿದರು.

'ಕುವೆಂಪು ರಾಮಾಯಣ ದರ್ಶನಂ ಬಳಿಕ ಎಷ್ಟೋ ಕಾವ್ಯಗಳು ಬಂದರೂ ಅದರ ಮಟ್ಟಕ್ಕೆ ಏರಲು ಆಗಿಲ್ಲ. ಅದನ್ನು ಓದಲು ಸಾಕಷ್ಟು ಪೂರ್ವ ತಯಾರಿ ಬೇಕಾಗುತ್ತದೆ. ಅದರ ಒಳ ಹೊಕ್ಕು ಅಧ್ಯಯನ ನಡೆಸಿರುವ ಜಿ. ಕೃಷ್ಣಪ್ಪ ಅವರು ಗದ್ಯ ರೂಪಕ್ಕೆ ತರುವ ಮೂಲಕ ಜನರಿಗೆ ಶ್ರೀ ರಾಮಾಯಣ ದರ್ಶನಂ ಅನ್ನು ಇನ್ನಷ್ಟು ಹತ್ತಿರವಾಗಿಸಿದ್ದಾರೆ' ಎಂದು ಬಣ್ಣಿಸಿದರು.

'ಈ ಕೃತಿ ರಚನೆ ಮಾಡಲು ಕೃಷ್ಣಪ್ಪನವರು ಹಲವು ವರ್ಷಗಳ ಕಾಲ ತಪಸ್ಸಿನಂತೆ ಕೆಲಸ ಮಾಡಿದ್ದಾರೆ. ರಾಮಾಯಣ ದರ್ಶನಂ ಅರ್ಥ ಮಾಡಿಕೊಳ್ಳಲು ಬೇಕಾದ ನಿಘಂಟನ್ನೂ ಅವರು ಈ ಪುಸ್ತಕದಲ್ಲಿ ನೀಡಿದ್ದಾರೆ. 750 ಪುಟಗಳ ಪುಸ್ತಕದಲ್ಲಿ ನಿಘಂಟಿಗಾಗಿಯೇ 100 ಪುಟಗಳನ್ನು ಮೀಸಲಿಟ್ಟಿದ್ದಾರೆ. ಕನ್ನಡ ಸಾಹಿತ್ಯದಲ್ಲಿ ಈ ಕೃತಿ ಮೈಲಿಗಲ್ಲಾಗಲಿದೆ' ಎಂದು ಆಶಿಸಿದರು.

ಕೃತಿ ಪರಿಚಯಿಸಿದ ಬಿಎಂಶ್ರೀ ಪ್ರತಿಷ್ಠಾನದ ಅಧ್ಯಕ್ಷ ಡಾ. ಬೈರಮಂಗಲ ರಾಮೇಗೌಡ, 'ಕುವೆಂಪು ರಾಮಾಯಣ ದರ್ಶನವನ್ನು ಹಲವರು ಗದ್ಯಾನುವಾದ ಮಾಡಿದ್ದಾರೆ. ಶ್ರೀ ರಾಮಾಯಣ ದರ್ಶನಂ ಓದಿದಷ್ಟೇ ರಸಾಸ್ವಾದವನ್ನು ಜಿ. ಕೃಷ್ಣಪ್ಪ ಅವರ ಗದ್ಯಾನುವಾದದ ಕೃತಿ ನೀಡುತ್ತಿದೆ. ಕುವೆಂಪು ಅವರು ಇಳಿದಷ್ಟೇ ಆಳಕ್ಕಿಳಿಯಲು ಮತ್ತು ಎತ್ತರಕ್ಕೇರಲು ಜಿ. ಕೃಷ್ಣಪ್ಪ ಪ್ರಯತ್ನಿಸಿದ್ದಾರೆ' ಎಂದು ಹೇಳಿದರು.

ಬಿಡುಗಡೆಯಾದ ಪುಸ್ತಕವನ್ನು ಜಿ. ಕೃಷ್ಣಪ್ಪ ಅವರು ಮಲ್ಲೇಪುರಂ ಜಿ. ವೆಂಕಟೇಶ್ ಪತ್ನಿ ಭವಾನಿ ವೆಂಕಟೇಶ್ ಅವರಿಗೆ ಅರ್ಪಿಸಿದರು.

ಕುವೆಂಪು ಶ್ರೀ ರಾಮಾಯಣ ದರ್ಶನಂ ವಚನ ದೀಪಿಕೆ

ಕೃತಿಕಾರ	ಡಾ. ಜಿ. ಕೃಷ್ಣಪ್ಪ
ಮುದ್ರಕರು	ಅನ್ನಪೂರ್ಣ ಪಬ್ಲಿಷಿಂಗ್ ಹೌಸ್
ಪುಸ್ತಕದ ದರ	₹800
ಪುಟ	750 ಪುಟಗಳು

'ಅಹಂ ಇರುವ ಅಧಿಕಾರಿಗೆ ಯಶಸ್ಸು ಸಾಧಿಸಲು ಸಾಧ್ಯವಿಲ್ಲ'



ಮಂಜುನಾಥ ಪ್ರಸಾದ್

ಬೆಂಗಳೂರು: ಸರ್ಕಾರಿ ಅಧಿಕಾರಿಗಳಲ್ಲಿ ಅಹಂ ಇದ್ದರೆ ಅವರು ವೃತ್ತಿಯಲ್ಲಿ ಯಶಸ್ಸು ಸಾಧಿಸಲು ಸಾಧ್ಯವಿಲ್ಲ. ತಾಳ್ಮೆಯಿಂದ ಜನರ ಮಾತು ಆಲಿಸುವ ಗುಣವುಳ್ಳವರು ಮಾತ್ರ ಯಶಸ್ವಿಯಾಗುತ್ತಾರೆ ಎಂದು ಮುಖ್ಯಮಂತ್ರಿ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ್ ಪ್ರಸಾದ್ ಹೇಳಿದರು.

ಕರ್ನಾಟಕ ಮಾಧ್ಯಮ ಅಕಾಡೆಮಿ ಬುಧವಾರ ಆಯೋಜಿಸಿದ್ದ, 'ಮಾಧ್ಯಮ, ಆಡಳಿತ, ಅಭಿವೃದ್ಧಿ' ಕುರಿತ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಸಾಮಾನ್ಯ ಜನರು ತಮ್ಮ ಕಷ್ಟಗಳಿಗೆ ಪರಿಹಾರ ಪಡೆಯುವುದಕ್ಕಾಗಿಯೇ ಅಧಿಕಾರಿಗಳ ಬಳಿ ಬರುತ್ತಾರೆ. ಅವರ ಕಷ್ಟಕ್ಕೆ ಸ್ಪಂದಿಸುವುದು, ಅಹವಾಲುಗಳನ್ನು ಆಲಿಸುವುದೇ ಅಧಿಕಾರಿಯ ಮೊದಲ ಕರ್ತವ್ಯ' ಎಂದರು.

ಜನಪರ ಕೆಲಸಗಳಿಗೆ ಅಡ್ಡಿಪಡಿಸುವ ಜನಪ್ರತಿನಿಧಿಗಳ ಸಂಖ್ಯೆ ಕಡಿಮೆ. ಅವರ ಜತೆ ಅಧಿಕಾರಿಗಳು ಸಂಘರ್ಷಕ್ಕೆ ಇಳಿದಾಗ ಮಾತ್ರ ಅಂತಹ ಸ್ಥಿತಿ ನಿರ್ಮಾಣವಾಗುತ್ತದೆ. ಬಿಬಿಎಂಪಿಯಲ್ಲಿ ನಾಲ್ಕು ವರ್ಷಗಳ ಕಾಲ ಆಯುಕ್ತರಾಗಿದ್ದ ಅವಧಿಯಲ್ಲಿ ಪಾಲಿಕೆಯ 198 ಮಂದಿ ಸದಸ್ಯರಲ್ಲಿ ಯಾರೊಬ್ಬರ ಜತೆಗೂ ಮುನಿಸಿಕೊಂಡ ಸಂದರ್ಭವೇ ಇಲ್ಲ ಎಂದು ಹೇಳಿದರು.

ಮಾಧ್ಯಮಗಳನ್ನು ಅಭಿವೃದ್ಧಿಗೆ ಪೂರಕವಾಗಿ ಬಳಸಿಕೊಳ್ಳುವುದಕ್ಕೆ ಅಧಿಕಾರಿಗಳು ಯೋಚಿಸಬೇಕು. ಸರ್ಕಾರದ ಜನಪರ ಕಾರ್ಯಕ್ರಮಗಳನ್ನು ಜನರಿಗೆ ತಲುಪಿಸುವುದಕ್ಕೆ ಮಾಧ್ಯಮಗಳ ಜತೆ ನಂಟು ಹೊಂದಿರಬೇಕು. ಆದರೆ, ವೈಯಕ್ತಿಕ ನೆಲೆಯಲ್ಲಿ ಅತಿಯಾದ ನಂಟು ಕೂಡ ಒಳ್ಳೆಯದಲ್ಲ ಎಂದು ಮಂಜುನಾಥ್ ಪ್ರಸಾದ್ ಹೇಳಿದರು.

ಕನ್ನಡಪ್ರಭ ಸಂಪಾದಕ ರವಿ ಹೆಗಡೆ ಕಾರ್ಯಕ್ರಮ ಉದ್ಘಾಟಿಸಿದರು. ಮಾಧ್ಯಮ ಅಕಾಡೆಮಿ ಅಧ್ಯಕ್ಷ ಕೆ. ಸದಾಶಿವ ಶೆಣೈ ಅಧ್ಯಕ್ಷತೆ ವಹಿಸಿದ್ದರು. ಸದಸ್ಯರಾದ ಕೆ.ಕೆ. ಮೂರ್ತಿ, ಕೂಡ್ಲಿ ಗುರುರಾಜ್, ಶಿವಕುಮಾರ್ ಬೆಳ್ಳಿತಟ್ಟೆ, ಬದ್ರುದ್ದೀನ್ ಮಾಣಿ, ಎಸ್. ಲಕ್ಷ್ಮೀನಾರಾಯಣ, ಎಂ. ಶಿವರಾಜ್ ಉಪಸ್ಥಿತರಿದ್ದರು.

ಮಹಡಿಯಿಂದ ಬಿದ್ದು ವಿದ್ಯಾರ್ಥಿಗೆ ಗಾಯ

ಹುಬ್ಬಳ್ಳಿ: ಕಿಮ್ಸ್ ವೈದ್ಯಕೀಯ ಕಾಲೇಜಿನ ಅಂತಿಮ ವರ್ಷದ ಎಂಬಿಬಿಎಸ್ ವಿದ್ಯಾರ್ಥಿ ಪುನೀತ್ ಎಂಬುವವರು ಹಾಸ್ಟೆಲ್‌ನ ಎರಡನೇ ಮಹಡಿಯಿಂದ ಬಿದ್ದು ಗಂಭೀರವಾಗಿ ಗಾಯಗೊಂಡಿದ್ದಾರೆ. ಡಿ. 28ರಂದು ಬೆಳಿಗ್ಗೆ ಘಟನೆ ನಡೆದಿದೆ.

ಅನಾರೋಗ್ಯದಿಂದ ಬಳಲುತ್ತಿದ್ದ ಪುನೀತ್, ಎರಡನೇ ಮಹಡಿಯಲ್ಲಿ ವಾಂತಿ ಮಾಡುವಾಗ ಆಯತಪ್ಪಿ ಕೆಳಕ್ಕೆ ಬಿದ್ದಿದ್ದಾರೆ. ಸ್ನೇಹಿತರು ಅವರನ್ನು ಆಸ್ಪತ್ರೆಗೆ ಕರೆ ತಂದಿದ್ದಾರೆ. ಕಾಲುಗಳು ಸೇರಿ ದೇಹದ ಇತರ ಭಾಗಗಳಿಗೆ ಗಾಯವಾಗಿದ್ದು, ವೈದ್ಯರು ಚಿಕಿತ್ಸೆ ನೀಡುತ್ತಿದ್ದಾರೆ ಎಂದು ಪೊಲೀಸರು ತಿಳಿಸಿದರು.

ಚಿತ್ರಾವಳಿ



ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು ಮತ್ತು ಕನ್ನಡ ಜನಶಕ್ತಿ ಕೇಂದ್ರದಿಂದ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಆಯೋಜಿಸಿದ್ದ ಕುವೆಂಪು ಜನ್ಮೋತ್ಸವ ಕಾರ್ಯಕ್ರಮದಲ್ಲಿ ವಸತಿ ಸಚಿವ ವಿ. ಸೋಮಣ್ಣ, ಕನ್ನಡ ಜನಶಕ್ತಿ ಕೇಂದ್ರದ ಅಧ್ಯಕ್ಷ ಸಿ.ಕೆ. ರಾಮೇಗೌಡ, ಅಖಿಲ ಕರ್ನಾಟಕ ರಾಜ್‌ಕುಮಾರ್ ಅಭಿಮಾನಿಗಳ ಸಂಘದ ಅಧ್ಯಕ್ಷ ಸಾ.ರಾ. ಗೋವಿಂದು, ಸಾಹಿತಿ ಗೋ.ರು. ಚನ್ನಬಸಪ್ಪ ಅವರು ಕುವೆಂಪು ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು

ಪ್ರಜಾವಾಣಿ ಚಿತ್ರ



ಎಂಇಎಸ್ ಪುಂಡರ ಕೃತ್ಯ ಖಂಡಿಸಿ ಕರ್ನಾಟಕ ಪರ ಸಂಘಟನೆಗಳ ಒಕ್ಕೂಟದ ಸದಸ್ಯರು ನಗರದ ಮೈಸೂರು ಬ್ಯಾಂಕ್ ವೃತ್ತದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ಬನ್ನೇರುಘಟ್ಟ: ಜ.1ರಿಂದ ಸಫಾರಿ ದರ ಏರಿಕೆ

ಪ್ರಜಾವಾಣಿ ವಾರ್ತೆ

ಆನೇಕಲ್: ಬನ್ನೇರುಘಟ್ಟ ಜೈವಿಕ ಉದ್ಯಾನದ ಸಫಾರಿ ದರವು ಹೊಸ ವರ್ಷಕ್ಕೆ ಏರಿಕೆಯಾಗಲಿದೆ.

ಇಂಧನ, ಪಶು ಆಹಾರ ದರ, ನಿರ್ವಹಣಾ ವೆಚ್ಚ ಏರಿಕೆಯಾದ ಹಿನ್ನೆಲೆಯಲ್ಲಿ ಮೃಗಾಲಯ ಪ್ರಾಧಿಕಾರದ ಕಾರ್ಯಕಾರಿ ಮಂಡಳಿಯು ಜ. 1ರಿಂದ ಪ್ರವೇಶ ದರದಲ್ಲಿ ಏರಿಕೆ ಮಾಡಲು ತೀರ್ಮಾನ ಕೈಗೊಂಡಿದೆ ಎಂದು ಜೈವಿಕ ಉದ್ಯಾನದ ಕಾರ್ಯನಿರ್ವಾಹಕ ನಿರ್ದೇಶಕಿ ವನಶ್ರೀ ವಿಪಿನ್ ಸಿಂಗ್ ಅವರು ತಿಳಿಸಿದ್ದಾರೆ.

ಮೃಗಾಲಯದ ಪ್ರಾಧಿಕಾರದ ತೀರ್ಮಾನದಂತೆ ಎಲ್ಲಾ ದರಗಳಲ್ಲೂ ಶೇ 10ರಷ್ಟು ಏರಿಕೆ ಮಾಡಲಾಗಿದೆ. 2020ರ ಜನವರಿಯಲ್ಲಿ ದರ ಪರಿಷ್ಕರಣೆ ಮಾಡಲಾಗಿತ್ತು. ಎರಡು ವರ್ಷಗಳ ನಂತರ ದರ ಪರಿಷ್ಕರಣೆ ಮಾಡಲಾಗುತ್ತಿದೆ ಎಂದು ವನಶ್ರೀ ವಿಪಿನ್‌ಸಿಂಗ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

	ಹಾಲಿ ದರ(₹ ಗಳಲ್ಲಿ)		ಪರಿಷ್ಕೃತ ದರ (₹ ಗಳಲ್ಲಿ)	
ನಾನ್ ಎಸಿ ಬಸ್ ಸಫಾರಿ(ಝೂ ಮತ್ತು ಸಫಾರಿ)	ಸೋಮ–ಶುಕ್ರ	ಶನಿ, ಭಾನು, ಸರ್ಕಾರಿ ರಜಾ ದಿನ	ಸೋಮ–ಶುಕ್ರ	ಶನಿ, ಭಾನು ಸರ್ಕಾರಿ ರಜಾ ದಿನ
ವಯಸ್ಕರು	300	350	330	380
ಮಕ್ಕಳು	150	200	180	230
ಹಿರಿಯ ನಾಗರಿಕರು	200	250	230	280
ಎಸಿ ಬಸ್ ಸಫಾರಿ (ಝೂ,ಸಫಾರಿ, ಬಟರ್‌ಫ್ಲೈ ಪಾರ್ಕ್, ಕ್ಯಾಮೆರಾ)				
ವಯಸ್ಕರು	600	650	650	750
ಮಕ್ಕಳು	400	450	450	500
ಜೀಪ್ ಸಫಾರಿ				
6 ಸೀಟರ್ ನಾನ್ ಎಸಿ ಜೀಪ್	3500	3500	3500	3800
6 ಸೀಟರ್ ಎಸಿ ಜೀಪ್	4000	4000	4000	4300
6 ಸೀಟರ್ ಎಸಿ Xylo	4500	4500	4500	5000
8 ಸೀಟರ್ ನಾನ್ ಎಸಿ ಜೀಪ್	4500	4500	4500	5000
7 ಸೀಟರ್ ಇನ್ನೋವಾ ಕಾರ್	5500	5500	5500	6000

ಎಂಜಿನಿಯರಿಂಗ್: ಸಂಜೆ ಕಾಲೇಜು ಬಂದ್

ಬೆಂಗಳೂರು: ರಾಜ್ಯದ ಎಲ್ಲ ಸಂಜೆ ಎಂಜಿನಿಯರಿಂಗ್ ಕಾಲೇಜುಗಳನ್ನು ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಮುಚ್ಚಲಾಗಿದೆ. ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿಯ (ಎಐಸಿಟಿಇ) ಸೂಚನೆಯಂತೆ ಸರ್ಕಾರ ಈ ಕ್ರಮ ಕೈಗೊಂಡಿದೆ.

ಈ ರೀತಿ ಮುಚ್ಚಿದ ಕಾಲೇಜುಗಳನ್ನು ರೆಗ್ಯುಲರ್ ಎಂಜಿನಿಯರಿಂಗ್ ಕಾಲೇಜುಗಳ ಜೊತೆ ಸಂಯೋಜಿಸಲಾಗಿದೆ. ಆದರೆ, ಲ್ಯಾಟರಲ್ ಎಂಟ್ರಿ (ಡಿಪ್ಲೊಮಾ ಓದಿದವರು) ಮೂಲಕ ಮೂರು ವರ್ಷದ ಎಂಜಿನಿಯರಿಂಗ್ ಕೋರ್ಸ್‌ಗೆ ದಾಖಲಾಗಿ 5,6,7 ಮತ್ತು 8ನೇ ಸೆಮಿಸ್ಟರ್‌ಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಸಂಜೆ ಎಂಜಿನಿಯರಿಂಗ್ ಕಾಲೇಜುಗಳು ಮುಂದುವರಿಯಲಿದೆ.

ರಾಜ್ಯದಾದ್ಯಂತ ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಸೇರಿ ಒಟ್ಟು 12 ಸಂಜೆ ಎಂಜಿನಿಯರಿಂಗ್ ಕಾಲೇಜುಗಳಿವೆ. ಎಸ್ಸೆಸ್ಸೆಲ್ಸಿಯ ಬಳಿಕ ಮೂರು ವರ್ಷದ ಡಿಪ್ಲೊಮಾ ಶಿಕ್ಷಣ ಪಡೆದ ವಿದ್ಯಾರ್ಥಿಗಳು ಹಗಲು ವೇಳೆ ಕೆಲಸ ಮಾಡಿ, ಸಂಜೆ ಎಂಜಿನಿಯರಿಂಗ್ ಕಾಲೇಜುಗಳಿಗೆ ದಾಖಲಾಗಿ ಎಂಜಿನಿಯರಿಂಗ್ ಪದವಿ ಪಡೆಯುತ್ತಿದ್ದರು. ಅಂಥವರಿಗೆ, ಎಐಸಿಟಿಇ ಈ ಕ್ರಮದಿಂದ ಸಮಸ್ಯೆ ಆಗಲಿದೆ.ಕೆಲಸದ ಒತ್ತಡದ ನಡುವೆಯೇ ಎಂಜಿನಿಯರಿಂಗ್ ಪದವಿ ಓದುವುದು ಸುಲಭವಲ್ಲ. ಇದು ಶಿಕ್ಷಣ ಗುಣಮಟ್ಟದ ಮೇಲೆಯೂ ತೀವ್ರ ಪರಿಣಾಮ ಉಂಟಾಗುತ್ತಿದೆ. ಅಲ್ಲದೆ, ಈ ಕಾಲೇಜುಗಳ ನಿರ್ವಹಣೆ ಕೂಡಾ ವೆಚ್ಚದಾಯಕ. ಈ ಕಾರಣ ನೀಡಿ ಪ್ರಸಕ್ತ ಸಾಲಿನಿಂದ ಎಂಜಿನಿಯರಿಂಗ್ ಕಾಲೇಜುಗಳನ್ನು ಬಂದ್ ಮಾಡಲು ಎಐಸಿಟಿಇ ನಿರ್ಧರಿಸಿದೆ.

'ಚಾರ್ಜ್‌ಶೀಟ್ ಇಲ್ಲದಿದ್ದರೂ ಮೊಕದ್ದಮೆ ರದ್ದಾಗದು'

ನವದೆಹಲಿ (ಪಿಟಿಐ): 'ಅಪರಾಧ ಎಸಗಿರಬಹುದಾದ ಆರೋಪಿಯ ಇತರ ಸಹಚರರ ವಿರುದ್ಧ ಚಾರ್ಜ್‌ಶೀಟ್ ದಾಖಲಾಗಿಲ್ಲ ಎನ್ನುವ ಕಾರಣಕ್ಕಾಗಿ ಆರೋಪಿಯ ವಿರುದ್ಧದ ಕ್ರಿಮಿನಲ್ ಮೊಕದ್ದಮೆಗಳನ್ನು ರದ್ದುಗೊಳಿಸಲಾಗದು' ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ನ್ಯಾಯಮೂರ್ತಿಗಳಾದ ಎಂ.ಆರ್. ಷಾ ಮತ್ತು ಬಿ.ವಿ. ನಾಗರತ್ನಾ ಅವರನ್ನೊಳಗೊಂಡ ನ್ಯಾಯಪೀಠವು, ಕರ್ನಾಟಕ ಹೈಕೋರ್ಟ್‌ನ ಆದೇಶದ ವಿರುದ್ಧ ಸುವರ್ಣ ಸಹಕಾರಿ ಬ್ಯಾಂಕ್ ಲಿಮಿಟೆಡ್ ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆ ಸಂದರ್ಭದಲ್ಲಿ, 'ಆರೋಪಿಯ ಇತರ ಸಹಚರರ ವಿರುದ್ಧ ಚಾರ್ಜ್ ಶೀಟ್ ಸಲ್ಲಿಸಲಾಗಿಲ್ಲ ಎಂದು ಕಂಡುಬಂದರೆ, ಸೆಕ್ಷನ್ 319 ಸಿಆರ್‌ಪಿಸಿ ಅಡಿಯಲ್ಲಿ ಅಧಿಕಾರ ಚಲಾಯಿಸುವ ಮೂಲಕ ನ್ಯಾಯಾಲಯವು ಅವರನ್ನು ಆರೋಪಿಗಳನ್ನಾಗಿ ಪರಿಗಣಿಸಬಹುದು' ಎಂದಿದೆ.

ಭಾರತೀಯ ದಂಡ ಸಂಹಿತೆಯ ಸೆಕ್ಷನ್ 120B (ಕ್ರಿಮಿನಲ್ ಪಿತೂರಿ), 408 (ಗುಮಾಸ್ತರಿಂದ ನಂಬಿಕೆಯ ಉಲ್ಲಂಘನೆ), 409 (ಸಾರ್ವಜನಿಕ ಸೇವಕರಿಂದ ನಂಬಿಕೆಯ ಉಲ್ಲಂಘನೆ) 420 (ವಂಚನೆ) ಮತ್ತು 149 ಅಡಿಯಲ್ಲಿ ಸಹ ಆರೋಪಿಗಳ ವಿರುದ್ಧ ಚಾರ್ಜ್ ಶೀಟ್ ಸಲ್ಲಿಸಲಾಗಿಲ್ಲದ ಕಾರಣ, ಮುಖ್ಯ ಆರೋಪಿಯ ವಿರುದ್ಧದ ಕ್ರಿಮಿನಲ್ ಮೊಕದ್ದಮೆಗಳನ್ನು ರದ್ದುಪಡಿಸಿ ರಾಜ್ಯ ಹೈಕೋರ್ಟ್ ಆದೇಶ ನೀಡಿತ್ತು.

ದೂರುದಾರ ಬ್ಯಾಂಕ್ ಬೆಂಗಳೂರಿನ ಹೆಚ್ಚುವರಿ ಮುಖ್ಯ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯಕ್ಕೆ ದೂರು ಸಲ್ಲಿಸಿದ್ದು, ಐಪಿಸಿಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಚಿಕ್ಕಪೇಟೆ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ತನಿಖೆಯನ್ನು ಪೂರ್ಣಗೊಳಿಸಿದ ನಂತರ, ಪ್ರಕರಣದ ಆರೋಪಿ ಸಂಖ್ಯೆ 1ರ ವಿರುದ್ಧ ಚಾರ್ಜ್‌ಶೀಟ್ ಕೂಡಾ ಸಲ್ಲಿಕೆಯಾಗಿದೆ.

ಮುಖ್ಯ ಆರೋಪಿಯ ಸಹಚರರಾಗಿದ್ದ ಆರೋಪಿ ಸಂಖ್ಯೆ 2 ಮತ್ತು ಆರೋಪಿ ಸಂಖ್ಯೆ 3 ಇವರ ವಿರುದ್ಧ ಪೊಲೀಸರ ವರದಿಯಲ್ಲಿ ಚಾರ್ಜ್‌ಶೀಟ್ ದಾಖಲಾಗಿರಲಿಲ್ಲ. ಇದನ್ನು ಗಮನಿಸಿ ಕರ್ನಾಟಕ ಹೈಕೋರ್ಟ್ ಆರೋಪಿ ಸಂಖ್ಯೆ 1–ಇವರ ವಿರುದ್ಧದ ಕ್ರಿಮಿನಲ್ ಮೊಕದ್ದಮೆಗಳನ್ನು ರದ್ದುಪಡಿಸಿ ಆದೇಶ ನೀಡಿತ್ತು.

'ಈ ಪ್ರಕರಣದಲ್ಲಿ ಮುಖ್ಯ ಆರೋಪಿಯ ವಿರುದ್ಧದ ಆರೋಪಗಳ ಮೇಲೆ ಗಮನ ಹರಿಸಿಲ್ಲ' ಎಂದು ತಿಳಿಸಿದ ಸುಪ್ರೀಂ ಕೋರ್ಟ್‌ನ ನ್ಯಾಯಪೀಠವು, ಕರ್ನಾಟಕ ಹೈಕೋರ್ಟ್ ನೀಡಿದ್ದ ಆದೇಶವನ್ನು ರದ್ದುಗೊಳಿಸುವುದಾಗಿ ತಿಳಿಸಿತು.

ಕೊಲೆ ಪ್ರಕರಣ: ಅಣ್ಣಾಮಲೈ, ಪ್ರತಾಪ ರೆಡ್ಡಿ ವಿಚಾರಣೆ

ಬೆಳಗಾವಿ: ಉತ್ತರ ಕನ್ನಡ ಜಿಲ್ಲೆಯ ಅಂಕೋಲಾದ ಉದ್ಯಮಿ ಆರ್.ಎನ್. ನಾಯಕ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾನೂನು ಮತ್ತು ಸುವ್ಯವಸ್ಥೆ ಎಡಿಜಿಪಿ ಪ್ರತಾಪ ರೆಡ್ಡಿ, ಮಾಜಿ ಐಪಿಎಸ್ ಅಧಿಕಾರಿ ಅಣ್ಣಾಮಲೈ ಇಲ್ಲಿನ 'ಕೋಕಾ' ವಿಶೇಷ ನ್ಯಾಯಾಲಯಕ್ಕೆ ಬುಧವಾರ ಹಾಜರಾಗಿ ತಮ್ಮ ಹೇಳಿಕೆ ನೀಡಿದ್ದಾರೆ.

ಭೂಗತಪಾತಕಿ ಬನ್ನಂಜೆ ರಾಜಾ ಪ್ರಮುಖ ಆರೋಪಿಯಾಗಿರುವ ಪ್ರಕರಣವಿದು. 2013ರಲ್ಲಿ ನಡೆದ ಆರ್.ಎನ್. ನಾಯಕ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸ್ ಅಧಿಕಾರಿಗಳ ವಿಶೇಷ ತಂಡ ಬನ್ನಂಜೆ ರಾಜಾ ಹಾಗೂ ಆತನ ಸಹಚರರನ್ನು 2015ರ ಆಗಸ್ಟ್‌ನಲ್ಲಿ ಬಂಧಿಸಿದ್ದರು. ಆಗ, ಅಣ್ಣಾಮಲೈ ತಂಡದಲ್ಲಿದ್ದರು. ಪ್ರತಾಪ ರೆಡ್ಡಿ ಪಶ್ಚಿಮ ವಲಯ ಐಜಿಪಿಯಾಗಿದ್ದರು. ಪ್ರಕರಣವನ್ನು ಭೇದಿಸುವಲ್ಲಿ ಇಬ್ಬರೂ ಪ್ರಮುಖ ಪಾತ್ರ ವಹಿಸಿದ್ದರು. ಅಣ್ಣಾಮಲೈ ಈಗ ತಮಿಳುನಾಡು ರಾಜ್ಯ ಬಿಜೆಪಿ ಘಟಕದ ಅಧ್ಯಕ್ಷರಾಗಿದ್ದಾರೆ.

ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತವನ್ನು ಪ್ರತಿನಿಧಿಸಿದ್ದ ಸುಮಂತ್

ವೃತ್ತಿಜೀವನಕ್ಕೆ ಕೈದೀವಿಗೆಯಾದ 'ಕೌಶಲ'

• ಕುಮಾರ ಸುಬ್ರಹ್ಮಣ್ಯ ಎಸ್.

ಬೆಂಗಳೂರು: ಈಗ ಪದವಿ, ಗಳಿಸಿದ ಅಂಕಪಟ್ಟಿ, ಪ್ರಮಾಣಪತ್ರಗಳಷ್ಟೇ ಕೈಯಲ್ಲಿದ್ದರೆ ಸಾಲದು. ಶೇ 99 ಅಂಕ ಗಳಿಸಿದರೂ ಕೌಶಲ ಇಲ್ಲದೇ ಇದ್ದರೆ ಅವಕಾಶ ಗಿಟ್ಟಿಸಿಕೊಳ್ಳುವುದು ಕಷ್ಟ. ಕೌಶಲವೆಂದರೆ ವೃತ್ತಿ ಜೀವನಕ್ಕೆ ಮಾತ್ರ ಸಂಬಂಧಿಸಿದ್ದಲ್ಲ. ಅದು ವೈಯಕ್ತಿಕ ಜೀವನದ ಯಶಸ್ಸಿಗೂ ಕೈದೀವಿಗೆ. ಕೌಶಲ ಸಿದ್ಧಿಸಿಕೊಂಡರೆ ಯಶಸ್ಸು, ಉನ್ನತ ಮಟ್ಟಕ್ಕೆ ಹೋಗಬಹುದು ಎನ್ನುವುದಕ್ಕೆ ಈ ಸುಮಂತ್ ಉದಾಹರಣೆ.

ಬಡತನದಲ್ಲೇ ಶಿಕ್ಷಣ ಪಡೆದು, ಸಿಕ್ಕ ಅವಕಾಶ ಬಳಸಿ ಅಂತರ-ರಾಷ್ಟ್ರೀಯ ಮಟ್ಟದಲ್ಲಿ 'ಕೌಶಲ' ಪ್ರದರ್ಶಿಸಿ, ಗುರುತಿಸಿಕೊಂಡ ಸುಮಂತ್, ಟೊಯೊಟಾ ಸಂಸ್ಥೆಯಲ್ಲಿ ಈಗ 'ಕೌಶಲ ತರಬೇತುದಾರ'.


ಪ್ರಶಸ್ತಿಗೆ ಪಾತ್ರವಾದ 'ಕೌಶಲ'

ಬಾಲ್ಯದಿಂದಲೂ ಅಂತರರಾಷ್ಟ್ರೀಯ ಮಟ್ಟದಲ್ಲಿ ದೇಶವನ್ನು ಪ್ರತಿನಿಧಿಸುವ ಕನಸುಕಂಡಿದ್ದ ಅವರು, ಛಲದಿಂದ ಸಾಧಿಸಿದವರು. ಅಂತರರಾಷ್ಟ್ರೀಯ ಮಟ್ಟದ ಕೌಶಲ ಸ್ಪರ್ಧೆಯಲ್ಲಿ ದೇಶವನ್ನು ಪ್ರತಿನಿಧಿಸಿ, ಪ್ರಶಸ್ತಿ ಬಾಚಿಕೊಂಡವರು.


ರಷ್ಯಾದಲ್ಲಿ ನಡೆದ ಕೌಶಲ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಸುಮಂತ್

ತುಮಕೂರಿನ ಸುಮಂತ್ ಸದ್ಯ ಬೆಂಗಳೂರು ನಿವಾಸಿ. 2019ರಲ್ಲಿ ರಷ್ಯಾದಲ್ಲಿ ನಡೆದ ಜಾಗತಿಕ ಕೌಶಲ ಸ್ಪರ್ಧೆಯಲ್ಲಿ ಭಾಗವಹಿಸಿ 'ಮೆಡಲಿಯನ್ ಆಫ್ ಎಕ್ಸ್‌ಲೆನ್ಸ್' ಗೌರವಕ್ಕೆ ಪಾತ್ರರಾಗಿದ್ದಾರೆ. ಮೆಕಾಟ್ರಾನಿಕ್ಸ್ ವಿಭಾಗದಲ್ಲಿ ತೋರಿದ ಕೌಶಲ ಅವರಿಗೆ ಈ ಪ್ರಶಸ್ತಿಯನ್ನು ಮುಡಿಗೇರಿಸಿದೆ.

ಹೊಸ ಬೆಳಕು

'ಬಡತನದಲ್ಲೇ ಬೆಳೆದವನು ನಾನು. ಎಸ್ಸೆಸ್ಸೆಲ್ಸಿ ಬಳಿಕ ನಿರೀಕ್ಷೆಯಂತೆ ಶಿಕ್ಷಣ ಮುಂದುವರಿಸಲು ಸಾಧ್ಯವಾಗಲಿಲ್ಲ. ಅರ್ಧಕ್ಕೆ ಶಿಕ್ಷಣ ನಿಲ್ಲಿಸಿ ಉದ್ಯೋಗ ಹುಡುಕುತ್ತಿದ್ದಾಗ ಟೊಯೊಟಾ ಸಂಸ್ಥೆ ನೀಡುತ್ತಿದ್ದ ಉಚಿತ ಡಿಪ್ಲೊಮಾ ತರಬೇತಿ ಬಗ್ಗೆ ಗೊತ್ತಾಯಿತು. ಡಿಪ್ಲೊಮಾ ಬಳಿಕ ಎಂಜಿನಿಯರಿಂಗ್ ಸೇರಿಕೊಂಡೆ. ಈ ನಡುವೆ, ಈ ಅಂತರರಾಷ್ಟ್ರೀಯ-ಮಟ್ಟದ ಸ್ಪರ್ಧೆಯ ಬಗ್ಗೆ ತಿಳಿಯಿತು. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ, ಸ್ಥಳೀಯ ಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಿದೆ. ರಾಷ್ಟ್ರೀಯ ಕೌಶಲ ಅಭಿವೃದ್ಧಿ ನಿಗಮ (ಎನ್‌ಎಸ್‌ಡಿಸಿ) ನನ್ನನ್ನು ಗುರುತಿಸಿ, ಆರ್ಥಿಕ ನೆರವು ನೀಡಿದ್ದರಿಂದ ಬದುಕಿಗೊಂದು ಹೊಸ ತಿರುವು ಸಿಕ್ಕಿತು' ಎಂದು ನೆನಪಿಸಿಕೊಂಡರು ಸುಮಂತ್.

'ಕೌಶಲ ಭಾರತ ಯೋಜನೆಯಡಿ ಎನ್‌ಎಸ್‌ಡಿಸಿಯು ವಿವಿಧ ವಿಭಾಗಗಳಲ್ಲಿ ಸ್ಪರ್ಧೆಗಳನ್ನು ಆಯೋಜಿಸುತ್ತದೆ. ಸ್ಥಳೀಯ, ಜಿಲ್ಲಾ, ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಅಂತರರಾಷ್ಟ್ರೀಯ ಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸುವ ಅವಕಾಶದ ಬಾಗಿಲು ತೆರೆದುಕೊಳ್ಳುತ್ತದೆ. 2019ರಲ್ಲಿ ರಷ್ಯಾದಲ್ಲಿ ನಡೆದ 45ನೇ ಜಾಗತಿಕ ಕೌಶಲ ಸ್ಪರ್ಧೆಯಲ್ಲಿ 60 ರಾಷ್ಟ್ರಗಳಿಂದ 56 ವಿಭಾಗಗಳಿಗೆ 1,600 ಹೆಚ್ಚು ಸ್ಪರ್ಧಿಗಳು ಭಾಗವಹಿಸಿದ್ದರು. ಈ ಸ್ಪರ್ಧೆಯಲ್ಲಿ 'ಮೆಡಲಿಯನ್ ಆಫ್ ಎಕ್ಸ್‌ಲೆನ್ಸ್ ಪದಕ ಸಿಕ್ಕಿದೆ' ಎಂದು ಸಂತಸ ಹಂಚಿಕೊಂಡರು.

ಸುದ್ದಿ 2 ನಿಮಿಷ

ಕೈಮಗ್ಗ ಉತ್ಪನ್ನಗಳಿಗೆ ತೆರಿಗೆ ವಿಧಿಸದಂತೆ ಒತ್ತಾಯ

ಬೆಂಗಳೂರು: ಕೈಮಗ್ಗ ಉತ್ಪನ್ನಗಳ ಮೇಲಿನ ತೆರಿಗೆಯನ್ನು ಸಂಪೂರ್ಣವಾಗಿ ಕೈಬಿಡುವಂತೆ ಜಿಎಸ್‌ಟಿ ಮಂಡಳಿಗೆ ಮನವರಿಕೆ ಮಾಡಿಕೊಡಿ ಎಂದು ಕೈಮಗ್ಗ ಉತ್ಪನ್ನಗಳ ಪರವಾಗಿ ಆಂದೋಲನ ನಡೆಸುತ್ತಿರುವ ಪ್ರಸನ್ನ ಮತ್ತು ಪ್ರಸಾದ್ ಬಿಡಪ್ಪ ಅವರು ಪ್ರಧಾನಿ, ಪ್ರತಿಪಕ್ಷ ನಾಯಕರನ್ನೂ ಒಳಗೊಂಡು ಎಲ್ಲಾ ರಾಜಕೀಯ ಪಕ್ಷಗಳ ಮುಖಂಡರು ಮತ್ತು ರಾಜ್ಯಗಳ ಮುಖ್ಯಮಂತ್ರಿಗಳಿಗೆ ಪತ್ರ ಬರೆದು ಮನವಿ ಮಾಡಿದ್ದಾರೆ.

ಫ್ಯಾಷನ್ ಪರವಾಗಿ ಮನವಿ ಮಾಡುತ್ತಿಲ್ಲ. ಲಕ್ಷಾಂತರ ಜನರ ಜೀವನೋಪಾಯ ಆಗಿರುವ ಕೈಮಗ್ಗ ವಲಯದ ಪರವಾಗಿ ಮನವಿ ಮಾಡುತ್ತಿದ್ದೇವೆ. ಕೈಮಗ್ಗವು ಭವಿಷ್ಯದ ಉತ್ಪನ್ನವಾಗಿದೆ. ಕೈಯಿಂದ ತಯಾರಿಸಿದ ಉತ್ಪನ್ನಗಳ ಮೂಲಕ ಕೇವಲ ಭಾರತೀಯರು ಮಾತ್ರವೇ ಎಲ್ಲಾ ರೀತಿಯ ಅಂತರರಾಷ್ಟ್ರೀಯ ಪೈಪೋಟಿಗಳನ್ನು ಮೀರಿ ಬೆಳೆಯಲು ಮತ್ತು ಆರ್ಥಿಕ ಬೆಳವಣಿಗೆ ಸಾಧಿಸಲು ಸಾಧ್ಯ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಪಾಸ್ ವಿತರಣೆ ಗೊಂದಲ: ವಿದ್ಯಾರ್ಥಿಗಳ ಪರದಾಟ



ಬೆಂಗಳೂರು: ವಿದ್ಯಾರ್ಥಿ ಬಸ್ ಪಾಸ್ ವಿತರಣೆಗೆ ಡಿ.31 ಕಡೆಯ ದಿನವಾಗಿದ್ದು, ಬೆಂಗಳೂರು ಒನ್ ಕಚೇರಿಗಳಿಗೆ ವಿದ್ಯಾರ್ಥಿಗಳು ಮುಗಿಬೀಳುತ್ತಿದ್ದಾರೆ. ಇದರ ನಡುವೆ ಕೆಲವೆಡೆ ಸರ್ವರ್ ಸಮಸ್ಯೆಯಿಂದ ಪಾಸ್ ವಿತರಣೆ ಸ್ಥಗಿತಗೊಂಡು ವಿದ್ಯಾರ್ಥಿಗಳು ಪರದಾಡಿದರು.

ಪಾಸ್ ವಿತರಣೆ ಕಾರ್ಯವನ್ನು ಆರಂಭವಾದ ಅರ್ಧಗಂಟೆಯಲ್ಲೇ ಸ್ಥಗಿತಗೊಳಿಸಲಾಗಿತ್ತು. ಜೆ.ಪಿ.ನಗರದ ಬೆಂಗಳೂರು ಒನ್ ಕಚೇರಿ ಎದುರು ವಿದ್ಯಾರ್ಥಿಗಳು ಬುಧವಾರ ಸಾಲುಗಟ್ಟಿ ನಿಂತಿದ್ದರು.

'ಸರ್ವರ್ ಸಮಸ್ಯೆ, ಕಾರ್ಡ್‌ಗಳು ಕೂಡ ಕಡಿಮೆ ಇವೆ ಎಂದು ಬೆಂಗಳೂರು ಒನ್ ಕಚೇರಿ ಸಿಬ್ಬಂದಿ ಸಬೂಬು ಹೇಳಿ ವಾಪಸ್ ಕಳುಹಿಸುತ್ತಿದ್ದಾರೆ. ಪಾಸ್‌ಗಾಗಿ ಪ್ರತಿದಿನ ಅಲೆದಾಡಬೇಕಾಗಿದೆ' ಎಂದು ವಿದ್ಯಾರ್ಥಿಗಳು ಅಳಲು ತೋಡಿಕೊಂಡರು.

'ಪಾಸ್ ವಿತರಣೆಗೆ ಡಿ.31ಕ್ಕೆ ಕಡೆ ದಿನವಾಗಿದ್ದು, ಅಷ್ಟರಲ್ಲೇ ಪಾಸ್ ಪಡೆದುಕೊಳ್ಳಬೇಕಿದೆ. ಪಾಸ್ ಸಿಗದಿದ್ದರೆ ವರ್ಷವಿಡಿ ಹಣ ಪಾವತಿಸಿ ಪ್ರಯಾಣ ಮಾಡಬೇಕಾಗುತ್ತದೆ' ಎಂದು ಆತಂಕ ವ್ಯಕ್ತಪಡಿಸಿದರು.

'ಮೊದಲೇ ಸಮಯ ನಿಗದಿ ಮಾಡಿಕೊಂಡು ಬರುವ ವಿದ್ಯಾರ್ಥಿಗಳಿಗೆ ಪಾಸ್ ವಿತರಣೆ ಮಾಡಲು ವಿಳಂಬ ಮಾಡುವುದಿಲ್ಲ. ಹೀಗೆ ಮಾಡದೆ ನೇರವಾಗಿ ಕಚೇರಿಗೆ ಬಂದವರಿಗೆ ತೊಂದರೆ ಆಗಿರಬಹುದು. ಕಾರ್ಡ್‌ಗಳ ಕೊರತೆ ಇಲ್ಲ. ಅವಧಿ ವಿಸ್ತರಣೆ ಬಗ್ಗೆ ಯಾವುದೇ ಮಾಹಿತಿ ಬಂದಿಲ್ಲ' ಎಂದು ಪಾಸ್ ವಿತರಣೆ ಜವಾಬ್ದಾರಿ ನಿರ್ವಹಿಸುವ ಬಿಎಂಟಿಸಿ ಅಧಿಕಾರಿಯೊಬ್ಬರು ತಿಳಿಸಿದರು.

ಸಾರಿಗೆ ವ್ಯವಸ್ಥೆ ಸುಧಾರಣೆಗೆ ಕರಡು ಮಸೂದೆ ಸಿದ್ಧಪಡಿಸಿದ ಡಲ್ಟ್ • ಸಲಹೆ ನೀಡಲು ಜ.31ರವರೆಗೆ ಕಾಲಾವಕಾಶ

ಪಾದಚಾರಿಗಳಿಗೆ, ಮೋಟಾರುರಹಿತ ಸಾರಿಗೆಗೆ ಮಣೆ

• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ಮಹಾನಗರಗಳ ಸಾರಿಗೆ ವ್ಯವಸ್ಥೆಯಲ್ಲಿ ಪಾದಚಾರಿಗಳಿಗೆ ಹಾಗೂ ಸೈಕಲ್‌ನಂತಹ ಮೋಟಾರುರಹಿತ ಸಾರಿಗೆ ಬಳಸುವವರಿಗೆ ಪ್ರಾಧಾನ್ಯತೆ ಕಲ್ಪಿಸುವ ಉದ್ದೇಶದಿಂದ ನಗರ ಭೂಸಾರಿಗೆ ನಿರ್ದೇಶನಾಲಯವು (ಡಲ್ಟ್) ಕರಡು ಮಸೂದೆಯೊಂದನ್ನು (ಆ್ಯಕ್ಟಿವ್ ಮೊಬಿಲಿಟಿ ಬಿಲ್) ಸಿದ್ಧಪಡಿಸಿದೆ.

ಈ ಕರಡು ಮಸೂದೆಯ ಪ್ರಕಾರ, ಇದು ಕಾಯ್ದೆಯಾಗಿ ಜಾರಿಯಾಗುವ ಎರಡು ವರ್ಷಗಳ ಒಳಗೆ ರಾಜ್ಯದ ಎಲ್ಲ ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ 'ಸಮಗ್ರ ಸಂಚಾರ ಯೋಜನೆ'ಯನ್ನು ಸಿದ್ಧಪಡಿಸುವುದು ಹಾಗೂ ಅದನ್ನು ನಗರ ಮಹಾಯೋಜನೆಯಲ್ಲೇ ಅಳವಡಿಸಿಕೊಳ್ಳುವುದು ಕಡ್ಡಾಯವಾಗಲಿದೆ. ನಗರಗಳಲ್ಲಿ ಜನರು ಅಲ್ಪ ದೂರದ ಪ್ರಯಾಣಕ್ಕೆ ನಡೆದೇ ಸಾಗುವುದನ್ನು ಹಾಗೂ ಸೈಕಲ್ ಬಳಕೆಯನ್ನು ಉತ್ತೇಜಿಸಲು ಅಗತ್ಯ ಇರುವ ಮೂಲಸೌಕರ್ಯ ಕಲ್ಪಿಸುವುದಕ್ಕೆ ಆದ್ಯತೆ ನೀಡಬೇಕಾಗುತ್ತದೆ. ಸಾರ್ವಜನಿಕ ಸಾರಿಗೆ ವ್ಯವಸ್ಥೆಗೆ ಪೂರಕವಾಗಿ ಜನರು ಕೊನೆಯ ತಾಣವನ್ನು ತಲುಪುವುದಕ್ಕೂ (ಲಾಸ್ಟ್‌ಮೈಲ್ ಕನೆಕ್ಟಿವಿಟಿ) ಅಗತ್ಯ ಸೌಕರ್ಯ ಒದಗಿಸಬೇಕಾಗುತ್ತದೆ.

> ಸಂಚಾರ ವ್ಯವಸ್ಥೆಯ ಸುಧಾರಣೆಗಾಗಿ ಈ ಮಸೂದೆ ಸಿದ್ಧಪಡಿಸಿದ್ದೇವೆ. ಈ ಕರಡು ಮಸೂದೆಗೆ ಸಲಹೆ ಸೂಚನೆ ನೀಡಲು 2022 ಜ.31ರವರೆಗೆ ಕಾಲಾವಕಾಶ ಕಲ್ಪಿಸಿದ್ದೇವೆ.
>
> **ವಿ.ಮಂಜುಳಾ,** ಆಯುಕ್ತರು, ಡಲ್ಟ್

ಮಸೂದೆಯಲ್ಲೇನಿದೆ?: ಇನ್ನು ಮುಂದೆ ಪರಿಪೂರ್ಣವಾದ ಹಾಗೂ ಪರಸ್ಪರ ಸಂಪರ್ಕ ಇರುವ ರೀತಿಯಲ್ಲಿ ಬೀದಿಗಳನ್ನು ವಿನ್ಯಾಸಗೊಳಿಸುವುದು, ನಿರ್ಮಿಸುವುದು ಹಾಗೂ ನಿರ್ವಹಣೆ ಮಾಡುವುದು ಆಯಾ ನಗರ ಸ್ಥಳೀಯ ಸಂಸ್ಥೆಗಳ ಕರ್ತವ್ಯ. ಸಾಕಷ್ಟು ಅಗಲವಾಗಿರುವ ಪಾದಚಾರಿ ಮಾರ್ಗಗಳನ್ನು ಅಭಿವೃದ್ಧಿಪಡಿಸುವುದು, ಸೈಕಲ್ ಸವಾರರಿಗಾಗಿ ಪ್ರತ್ಯೇಕ ಪಥ ನಿರ್ಮಿಸುವುದು, ನಡಿಗೆ ಹಾಗೂ ಸೈಕಲ್ ಬಳಕೆ ಎರಡಕ್ಕೂ ಅವಕಾಶ ಇರುವಂತೆ ನಗರ ಸ್ಥಳೀಯ ಸಂಸ್ಥೆಗಳು ಮೂಲಸೌಕರ್ಯ ಕಲ್ಪಿಸಬೇಕಾಗುತ್ತದೆ.

ನಗರದ ಬೀದಿಗಳನ್ನು ವಿನ್ಯಾಸಗೊಳಿಸುವಾಗ ವಾಹನಗಳಿಗೆ ಅನುಕೂಲ ಕಲ್ಪಿಸುವುದಕ್ಕಿಂತಲೂ ಹೆಚ್ಚಾಗಿ ಅದು ಎಲ್ಲ ವಯೋಮಾನದ, ಭಿನ್ನ ಸಾಮರ್ಥ್ಯಗಳ ಜನರ ಸ್ನೇಹಿಯಾಗಿರುವಂತೆ ನೋಡಿಕೊಳ್ಳಬೇಕು. ಪಾದಚಾರಿ ಮಾರ್ಗಕ್ಕೆ, ಸೈಕಲ್ ಪಥಗಳಿಗೆ ಹಾಗೂ ಅವಕಾಶ ಇರುವಲ್ಲೆಲ್ಲ ಸಾರ್ವಜನಿಕ ಸಾರಿಗೆಗೆ ಸಾಕಷ್ಟು ಸ್ಥಳಾವಕಾಶ ಕಲ್ಪಿಸಿ ನಂತರವಷ್ಟೇ ಖಾಸಗಿ ವಾಹನಗಳಿಗೆ ಎಷ್ಟು ಅಗಲದ ಮಾರ್ಗವನ್ನು ಉಳಿಸಿಕೊಳ್ಳಬೇಕು ಎಂಬುದನ್ನು ನಿರ್ಧರಿಸಬೇಕು. ನಡೆದು ಹೋಗುವವರಿಗೆ ಹಾಗೂ ಸೈಕಲ್ ಬಳಸುವವರಿಗೆ ಆದ್ಯತೆ ಸಿಗಬೇಕು.

ಸಾರಿಗೆ ವ್ಯವಸ್ಥೆಯಲ್ಲಿ ತಪ್ಪಿಹೋದ ಕೊಂಡಿಗಳನ್ನು ಮತ್ತೆ ಸಂಪರ್ಕಿಸುವುದಕ್ಕೆ ಆದ್ಯತೆ ಸಿಗಬೇಕು. ಪಾದಚಾರಿ ಮಾರ್ಗ, ಸೈಕಲ್ ಪಥಗಳ ಕೊರತೆ ಇರುವುದನ್ನು ನಗರ ಸ್ಥಳೀಯ ಸಂಸ್ಥೆಗಳೇ ಗುರುತಿಸಿ ಸ್ಥಳೀಯ ಯೋಜನಾ ಪ್ರಾಧಿಕಾರಕ್ಕೆ ಮಾಹಿತಿ ನೀಡಬೇಕು. ಅವುಗಳು ಈ ಸೌಕರ್ಯಗಳ ಅಭಿವೃದ್ಧಿಗೆ ಕ್ರಮಕೈಗೊಳ್ಳಬೇಕು. ಉದ್ಯಾನಗಳಲ್ಲಿ, ಕೆರೆ ದಂಡೆಗಳಲ್ಲಿ, ನಡಿಗೆ ಪಥ ಹಾಗೂ ಸೈಕ್ಲಿಂಗ್ ಪಥಗಳನ್ನು ನಿರ್ಮಿಸಬೇಕು.

ಈಗಿರುವ ಹಾಗೂ ಹೊಸ ಬಡಾವಣೆಗಳಲ್ಲಿ ಹೊಸ ಬೀದಿಗಳ ಅಭಿವೃದ್ಧಿ ಯೋಜನೆಗಳನ್ನು ರೂಪಿಸುವಾಗ ಪಾದಚಾರಿ ಮಾರ್ಗಗಳಿಗೆ, ಸೈಕಲ್ ಪಥಗಳಿಗೆ ಪ್ರಾಧಾನ್ಯತೆ ಸಿಗುವಂತೆ ಹಾಗೂ ಅವುಗಳು ಪಾದಚಾರಿ ಮಾರ್ಗಗಳ, ಸೈಕಲ್ ಪಥಗಳ ವಿಸ್ತೃತ ಜಾಲಕ್ಕೆ ಜೋಡಣೆ ಆಗಿರುವಂತೆ ನೋಡಿಕೊಳ್ಳಬೇಕು.

ಸಂಚಾರ ಆಧಾರಿತ ಅಭಿವೃದ್ಧಿ ವಲಯಗಳನ್ನು ಗುರುತಿಸಿ ಅವುಗಳಿಗೆ ಸ್ಥಳೀಯ ಯೋಜನಾ ಪ್ರಾಧಿಕಾರದಿಂದ ಮಂಜೂರಾತಿ ಪಡೆಯಲಾಗಿದ್ದರೆ, ಅದಕ್ಕೆ ಪೂರಕವಾಗಿ ಸಂಚಾರ ಕೇಂದ್ರಗಳ ಸುತ್ತಮುತ್ತ ಪಾದಚಾರಿ ಮಾರ್ಗ ಹಾಗೂ ಸೈಕಲ್ ಪಥಗಳನ್ನು ಅಭಿವೃದ್ಧಿಪಡಿಸಬೇಕು.

ಒಟ್ಟು 26 ಪುಟಗಳ ಈ ಮಸೂದೆಯು ಒಟ್ಟು 55 ಸೆಕ್ಷನ್‌ಗಳನ್ನು ಒಳಗೊಂಡಿದೆ.

'ಜನಸ್ನೇಹಿ ಮಸೂದೆ ಶೀಘ್ರ ಜಾರಿಯಾಗಲಿ'

'ಸಂಚಾರ ಮೂಲಸೌಕರ್ಯ ಸುಧಾರಣೆಗಾಗಿ ಡಲ್ಟ್ ಸಿದ್ಧಪಡಿಸಿರುವ ಮಸೂದೆಯೂ ನಿಜಕ್ಕೂ ಜನಸ್ನೇಹಿಯಾಗಿದೆ. ಪ್ರಸ್ತುತ ವಾಹನಗಳನ್ನೇ ಕೇಂದ್ರವಾಗಿಟ್ಟುಕೊಂಡು ರಸ್ತೆ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಇದು ತಪ್ಪು. ಸಾರಿಗೆ ವ್ಯವಸ್ಥೆಯಲ್ಲಿ ಪಾದಚಾರಿಗಳಿಗೆ ಹಾಗೂ ಸೈಕಲ್ ಬಳಸುವವರಿಗೆ ಹೆಚ್ಚು ಪ್ರಾಧಾನ್ಯ ಸಿಗಲೇಬೇಕು. ಪರಿಸರ ಸಂರಕ್ಷಣೆಯ ಮತ್ತು ಹವಾಮಾನ ವೈಪರೀತ್ಯದ ಸವಾಲುಗಳನ್ನು ಸಮರ್ಥವಾಗಿ ಮೆಟ್ಟಿನಿಲ್ಲಬೇಕಾದರೆ ಮೋಟಾರುರಹಿತ ಸಾರಿಗೆಯ ಮೊರೆ ಹೋಗುವುದು ಅನಿವಾರ್ಯ. ಹಾಗಾಗಿ ಸರ್ಕಾರ ಈ ಮಸೂದೆಯನ್ನು ಶೀಘ್ರವೇ ಜಾರಿಗೆ ತರಬೇಕು' ಎಂದು ಜನಾಗ್ರಹ ಸಂಸ್ಥೆಯ ಸಾರ್ವಜನಿಕ ಸಹಭಾಗಿತ್ವ ವಿಭಾಗದ ಮುಖ್ಯಸ್ಥ ಶ್ರೀನಿವಾಸ ಅಲವಿಲ್ಲಿ ಅಭಿಪ್ರಾಯಪಟ್ಟರು.

'ಸುಸ್ಥಿರ ಅಭಿವೃದ್ಧಿಗೆ ಪೂರಕ'

'ರಾಜ್ಯದ ನಗರ ಸಾರಿಗೆ ವ್ಯವಸ್ಥೆಯಲ್ಲಿ ಪಾದಚಾರಿಗಳು ಹಾಗೂ ಸೈಕಲ್ ಬಳಸುವವರು ಹೆಚ್ಚಿನ ಅಪಾಯವನ್ನು ಎದುರಿಸುತ್ತಿದ್ದಾರೆ. ಅಪಘಾತಕ್ಕೆ ಒಳಗಾಗುವವರಲ್ಲೂ ಅವರೇ ಹೆಚ್ಚು. ನಡೆದು ಸಾಗುವುದು ಹಾಗೂ ಸೈಕಲ್ ಬಳಕೆಯಿಂದ ಜನರ ಆರೋಗ್ಯ ಸುಧಾರಣೆ ಆಗುವುದಷ್ಟೇ ಅಲ್ಲ, ಸಾಮಾಜಿಕ ಸ್ವಾಸ್ಥ್ಯ ಕಾಪಾಡುವುದಕ್ಕೂ ನೆರವಾಗಲಿದೆ. ಈ ಮಸೂದೆಯು ಕಡಿಮೆ ವರಮಾನ ಹೊಂದಿರುವ ವರ್ಗದ ಜನರಿಗೂ ಸಾರಿಗೆ ವ್ಯವಸ್ಥೆಯಲ್ಲಿ ಸಮಪಾಲು ಕಲ್ಪಿಸಲಿದೆ. ಇಂತಹ ರಸ್ತೆ ಬಳಕೆದಾರರ ಹಕ್ಕನ್ನು ಕಾಪಾಡುವ ಮೂಲಕ ಸುಸ್ಥಿರ ಅಭಿವೃದ್ಧಿಗೂ ಈ ಮಸೂದೆ ಪೂರಕವಾಗಲಿದೆ' ಎಂದು ಮಸೂದೆಯ ಕರಡಿನ ಪ್ರಸ್ತಾವನೆಯಲ್ಲಿ ಹೇಳಲಾಗಿದೆ.


ಪೊಲೀಸರು ವಶಕ್ಕೆ ಪಡೆದಿರುವ ಚಿನ್ನಾಭರಣ

ಜ್ಯುವೆಲ್ಲರ್ಸ್ ಮಾಲೀಕರಿಗೆ ವಂಚಿಸಿದ್ದ ಆರೋಪಿ ಬಂಧನ

ಬೆಂಗಳೂರು: ಆಭರಣ ಮಾಡಿಕೊಡುವುದಾಗಿ ಚಿನ್ನದ ಅಂಗಡಿ ಮಾಲೀಕರಿಂದ ಚಿನ್ನದ ಗಟ್ಟಿ ಹಾಗೂ ಆಭರಣಗಳನ್ನು ಪಡೆದು, ತಲೆಮರೆಸಿಕೊಂಡಿದ್ದ ಆರೋಪಿಯನ್ನು ಜಯನಗರ ಪೊಲೀಸರು ಬಂಧಿಸಿದ್ದಾರೆ.

ಜಯನಗರದ ಸುನೀಲ್ ಕುಮಾರ್ ಬೌಲ್ (63) ಬಂಧಿತ ಆರೋಪಿ. ಜಯನಗರದ ಜ್ವಾಲಮಾಲ ಜ್ಯುವೆಲ್ಲರ್ಸ್‌ನ ಮಾಲೀಕ ರಾಕೇಶ್ ಬೆಳ್ಳೂರು, ಅಲಂಕೃತಿ ಜ್ಯುವೆಲ್ಲರ್ಸ್‌ನ ರಾಜೇಶ್ ಹಾಗೂ ಕಬ್ಬನ್ ಪಾರ್ಕ್ ಠಾಣಾ ವ್ಯಾಪ್ತಿಯ ನವರತನ್ ಜ್ಯುವೆಲ್ಲರ್ಸ್‌ನ ಮಾಲೀಕರಿಗೆ ಆಭರಣಗಳನ್ನು ಮಾಡಿಕೊಡುವುದಾಗಿ ಹೇಳಿ, ಚಿನ್ನದ ಆಭರಣಗಳು ಹಾಗೂ ಚಿನ್ನದ ಗಟ್ಟಿ ಪಡೆದಿದ್ದ. ಆದರೆ, ಆಭರಣ ಮಾಡಿಕೊಡದೆ ತಲೆಮರೆಸಿಕೊಂಡಿದ್ದ. ಈ ಸಂಬಂಧ ಸುನೀಲ್ ವಿರುದ್ಧ ಜಯನಗರ ಹಾಗೂ ಕಬ್ಬನ್ ಪಾರ್ಕ್ ಠಾಣೆಗಳಲ್ಲಿ ದೂರುಗಳು ದಾಖಲಾಗಿದ್ದವು.

'ವಿಶೇಷ ತಂಡಕ್ಕೆ ಸುನೀಲ್ ಸಿಕ್ಕಿಬಿದ್ದ. ವಿಚಾರಣೆ ನಡೆಸಿದಾಗ ಅವೆನ್ಯೂ ರಸ್ತೆಯಲ್ಲಿರುವ ಮಣಪ್ಪುರಂ ಗೋಲ್ಡ್ ಲೋನ್ ಕಂಪನಿಯಲ್ಲಿ ಚಿನ್ನ ಅಡವಿಟ್ಟಿರುವುದಾಗಿ ತಪ್ಪೊಪ್ಪಿಕೊಂಡಿದ್ದ. ಆರೋಪಿ ಅಡವಿಟ್ಟಿದ್ದ ₹55 ಲಕ್ಷ ಬೆಲೆ ಬಾಳುವ 947 ಗ್ರಾಂ ತೂಕದ ಆಭರಣಗಳನ್ನು ವಶಕ್ಕೆ ಪಡೆಯಲಾಗಿದೆ' ಎಂದು ಪೊಲೀಸರು ತಿಳಿಸಿದರು.

ನೈಜೀರಿಯಾದ ಮೂವರು ಆರೋಪಿಗಳ ಬಂಧನ

ಹೊಸ ವರ್ಷಕ್ಕೆ ತರಿಸಿದ್ದ ₹80 ಲಕ್ಷದ ಡ್ರಗ್ಸ್ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸ ವರ್ಷಾಚರಣೆ ಸಂದರ್ಭದಲ್ಲಿ ನಡೆಯುವ ಪಾರ್ಟಿಗಳಿಗೆ ಸರಬರಾಜು ಮಾಡಲು ಮಾದಕ ವಸ್ತುಗಳನ್ನು ಸಂಗ್ರಹಿಸಿ ಇಟ್ಟಿದ್ದ ಮನೆಯೊಂದರ ಮೇಲೆ ಬಾಗಲೂರು ಪೊಲೀಸರು ದಾಳಿ ನಡೆಸಿದ್ದು, ನೈಜೀರಿಯಾದ ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ.

ಆರೋಪಿಗಳ ಮನೆಯಲ್ಲಿ ಸಿಕ್ಕ ₹80 ಲಕ್ಷ ಮೌಲ್ಯದ ಮಾದಕ ವಸ್ತುಗಳನ್ನು ಪೊಲೀಸರು ಜಪ್ತಿ ಮಾಡಿದ್ದಾರೆ.


ಪೊಲೀಸರು ಜಪ್ತಿ ಮಾಡಿರುವ ಡ್ರಗ್ಸ್ ಹಾಗೂ ಮೊಬೈಲ್‌ಗಳು

'ಆರೋಪಿಗಳು ಬ್ಯುಸಿನೆಸ್ ವೀಸಾ ಪಡೆದು ಭಾರತಕ್ಕೆ ಬಂದಿದ್ದರು. ಮುಂಬೈನಿಂದ ಮಾದಕ ವಸ್ತುಗಳನ್ನು ಖರೀದಿಸುತ್ತಿದ್ದರು. ಯಾರಿಗೂ ಅನುಮಾನ ಬರದಂತೆ ಸೋಪ್ ಬಾಕ್ಸ್‌ಗಳಲ್ಲಿ ಮಾದಕ ವಸ್ತುಗಳನ್ನು ತಂದು ಬೆಂಗಳೂರಿನಲ್ಲಿ ಮಾರುತ್ತಿದ್ದರು. ಇದನ್ನೇ ವೃತ್ತಿಯಾಗಿ ಮಾಡಿಕೊಂಡು ಹಣ ಸಂಪಾದಿಸುತ್ತಿದ್ದರು' ಎಂದು ಪೊಲೀಸರು ತಿಳಿಸಿದರು.

'ಖಚಿತ ಮಾಹಿತಿ ಮೇರೆಗೆ ಆರೋಪಿಗಳ ಮನೆಯ ಮೇಲೆ ಬುಧವಾರ ದಾಳಿ ನಡೆಸಲಾಯಿತು. ಈ ವೇಳೆ ಮನೆಯಲ್ಲಿ ಪತ್ತೆಯಾದ 400 ಗ್ರಾಂ ಎಂಡಿಎಂಎ, 40 ಗ್ರಾಂ ಕೊಕೇನ್, 40 ಗ್ರಾಂ ಹ್ಯಾಶಿಶ್, ಡ್ರಗ್ಸ್ ತುಂಬಿಸಿದ್ದ ಐದು ಸೋಪ್ ಬಾಕ್ಸ್‌ಗಳು, ತೂಕದ ಯಂತ್ರ ಹಾಗೂ ಐದು ಮೊಬೈಲ್‌ಗಳನ್ನು ಜಪ್ತಿ ಮಾಡಲಾಯಿತು' ಎಂದು ಮಾಹಿತಿ ನೀಡಿದರು.

ಅಪರಾಧ ಸುದ್ದಿ

'ಆರೋಪಿಗಳು ಹೊಸ ವರ್ಷದ ಪಾರ್ಟಿಗಳಿಗೆ ಪೂರೈಸಲು ಮಾದಕ ವಸ್ತುಗಳನ್ನು ತರಿಸಿಕೊಂಡಿದ್ದರು. ಅವರ ವಿರುದ್ಧ ಎನ್‌ಡಿಪಿಎಸ್ ಕಾಯ್ದೆ ಹಾಗೂ ವಿದೇಶಿಯರ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ' ಎಂದರು.

ಎಎಪಿ ಕಾರ್ಯಕರ್ತರ ಮೇಲೆ ಹಲ್ಲೆ: ಬಂಧನಕ್ಕೆ ಆಗ್ರಹ

ಬೆಂಗಳೂರು: 'ತಿಪ್ಪಸಂದ್ರ ಮುಖ್ಯರಸ್ತೆಯಲ್ಲಿ ಪ್ರತಿಭಟನೆ ನಡೆಸುತ್ತಿದ್ದ ಆಮ್ ಆದ್ಮಿ ಪಕ್ಷದ (ಎಎಪಿ) ಕಾರ್ಯಕರ್ತರ ಮೇಲೆ ಹಲ್ಲೆ ನಡೆಸಿದ ಶಾಸಕ ಎಸ್.ರಘು ಹಾಗೂ ಬೆಂಬಲಿಗರನ್ನು ಬಂಧಿಸಬೇಕು' ಎಂದು ಎಎಪಿಯ ಬೆಂಗಳೂರು ನಗರ ಘಟಕದ ಅಧ್ಯಕ್ಷ ಮೋಹನ್ ದಾಸರಿ ಆಗ್ರಹಿಸಿದರು.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಪ್ರತಿಭಟನೆ ನಡೆಸುತ್ತಿದ್ದವರ ಪೈಕಿ ನಮ್ಮ ಪಕ್ಷದ ಐವರು ಮುಖಂಡರನ್ನು ಪೊಲೀಸರು ಬಂಧಿಸಿದ್ದರು. ಇದೇ ವೇಳೆ ಜೀವನ್ ಬಿಮಾ ನಗರ ಪೊಲೀಸ್ ಠಾಣೆಗೆ ಬಂದ ಶಾಸಕ ರಘು ಅವರ ಆಪ್ತ ಸಹಾಯಕ ಉನ್ನಿಕೃಷ್ಣನ್ ಹಾಗೂ ಬಿಜೆಪಿ ಕಾರ್ಯಕರ್ತರು ದಾಂದಲೆ ಮಾಡಿದ್ದಾರೆ. ಠಾಣೆಯೊಳಗೆ ತೆರಳುತ್ತಿದ್ದ ನಮ್ಮ ಮೇಲೆ ಹಲ್ಲೆ ಮಾಡಿದ್ದಾರೆ. ಘಟನೆ ನಡೆದು ಒಂದು ದಿನವಾದರೂ ಪೊಲೀಸರು ಆರೋಪಿಗಳನ್ನು ಬಂಧಿಸಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

ಚಿತ್ರಾವಳಿ


ಶಿವಮೊಗ್ಗದಲ್ಲಿ ಬುಧವಾರ ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ ಆಯೋಜಿಸಿದ್ದ ವಿಜ್ಞಾನ ಸಮ್ಮೇಳನದಲ್ಲಿ ಚಿತ್ರದುರ್ಗ ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರಿಗೆ 'ಡಾ.ಎಚ್‌.ಎನ್‌.ಪ್ರಶಸ್ತಿ' ಪ್ರದಾನ ಮಾಡಲಾಯಿತು. ಮಾಜಿ ಸಚಿವ ಎಸ್‌.ಕೆ. ಕಾಂತ, ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ ಅಧ್ಯಕ್ಷ ಡಾ.ಹುಲಿಕಲ್ ನಟರಾಜ್, ಕುವೆಂಪು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಬಿ.ಪಿ. ವೀರಭದ್ರಪ್ಪ, ಇಸ್ರೊ ಮಾಜಿ ಅಧ್ಯಕ್ಷ ಡಾ.ಎ.ಎಸ್. ಕಿರಣ್‌ಕುಮಾರ್, ಪ್ರೆಸ್‌ಟ್ರಸ್ಟ್ ಅಧ್ಯಕ್ಷ ಎನ್‌.ಮಂಜುನಾಥ್, ಸೀತಾರಾಮ್, ವೈಜ್ಞಾನಿಕ ಸಂಶೋಧನಾ ಪರಿಷತ್ತಿನ ರಾಜ್ಯ ಸಂಘಟನಾ ಕಾರ್ಯದರ್ಶಿ ವಿ.ಟಿ. ಸ್ವಾಮಿ ಇದ್ದರು.


ಹೆನ್ನಾಗರ ಗ್ರಾಮ ಪಂಚಾಯಿತಿ ವತಿಯಿಂದ ಎಚ್‌.ಹೊಸಹಳ್ಳಿಯಲ್ಲಿ ₹4.50 ಲಕ್ಷ ವೆಚ್ಚದಲ್ಲಿ ನಿರ್ಮಿಸಿರುವ ಹೈಮಾಸ್ಕ್ ವಿದ್ಯುತ್ ದೀಪವನ್ನು ಕಾಂಗ್ರೆಸ್ ಮುಖಂಡ ಆರ್‌.ಕೆ.ರಮೇಶ್ ಲೋಕಾರ್ಪಣೆ ಮಾಡಿದರು. ರಾಜೇಶ್ವರ ಶಿವಾಚಾರ್ಯ ಸ್ವಾಮೀಜಿ, ಪಂಚಾಯಿತಿ ಅಧ್ಯಕ್ಷ ಮುನಿರತ್ನ ಮುನಿರಾಜು, ಉಪಾಧ್ಯಕ್ಷ ಪ್ರಸನ್ನ ಕುಮಾರ್, ಮುಖಂಡರಾದ ಮರಿಸ್ವಾಮಿ, ಆರ್‌.ಕೆ.ಕೇಶವ ರೆಡ್ಡಿ, ಜಗನ್ನಾಥ್, ಕಿರಣ್, ಲೋಕನಾಥ್ ಹಾಗೂ ಇತರರು ಇದ್ದಾರೆ.


ಮಂಡ್ಯ ಜಿಲ್ಲೆಯ ಹರಿಹರಪುರದಲ್ಲಿ ದಲಿತರ ಮೇಲೆ ದೌರ್ಜನ್ಯ ಎಸಗಿದವರನ್ನು ಕೂಡಲೇ ಬಂಧಿಸಬೇಕು ಎಂದು ಆಗ್ರಹಿಸಿ ದಲಿತ ಹಕ್ಕುಗಳ ಸಮಿತಿಯ ಸದಸ್ಯರು ಮೈಸೂರು ಬ್ಯಾಂಕ್ ವೃತ್ತದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು.

–ಪ್ರಜಾವಾಣಿ ಚಿತ್ರಗಳು

ಪಟಾಕಿ ಸಿಡಿದು ರಥಕ್ಕೆ ಬೆಂಕಿ

ಪ್ರಜಾವಾಣಿ ವಾರ್ತೆ

ರಾಮದುರ್ಗ: ತಾಲ್ಲೂಕಿನ ಶಿವಪೇಟೆಯ ಜಡಿಶಂಕರಲಿಂಗ ದೇವರ ಜಾತ್ರೆ ವೇಳೆ ಪಟಾಕಿಯಿಂದ ತಗುಲಿದ ಬೆಂಕಿ ಕಿಡಿಯಿಂದಾಗಿ ರಥದ ಮೇಲ್ಭಾಗದಲ್ಲಿ ಹಾಕಿದ್ದ ಕಾಗದದ ಧ್ವಜಗಳು ಸುಟ್ಟು ಹೋದ ಘಟನೆ ಮಂಗಳವಾರ ಸಂಜೆ ನಡೆದಿದ್ದು, ಆತಂಕದ ಪರಿಸ್ಥಿತಿ ನಿರ್ಮಾಣವಾಗಿತ್ತು. ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ.

ಘಟನೆಯ ವಿಡಿಯೊ ಹಾಗೂ ಫೋಟೊಗಳು ಬುಧವಾರ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿವೆ.

38ನೇ ಮಹಾರಥೋತ್ಸವದ ಸಡಗರದಲ್ಲಿ ಭಕ್ತ ಸಮೂಹ ಪಾಲ್ಗೊಂಡಿತ್ತು. ದೇವಸ್ಥಾನ ಸಮಿತಿಯವರು ರಥೋತ್ಸವ ಮುಗಿದ ಮೇಲೆ ಪಟಾಕಿ ಸಿಡಿಸುತ್ತಿದ್ದರು. ಆ ವೇಳೆ, ಕಿಡಿಯು ತೇರಿನ ಕಳಶದ ಬಳಿ ಅಲಂಕಾರಕ್ಕೆಂದು ಹಾಕಿದ್ದ ಕಾಗದದ ಧ್ವಜಗಳಿಗೆ ಬಿದ್ದಿದೆ. ಬೆಂಕಿ ಕಾಣಿಸಿಕೊಳ್ಳುತ್ತಿದ್ದಂತೆ ಭಕ್ತರು ಬಾಳೆ ಎಲೆ, ಬಟ್ಟೆಗಳನ್ನು ಬಳಸಿ ಬೆಂಕಿ ನಂದಿಸಿದ್ದಾರೆ. ಇಡೀ ತೇರನ್ನು ಬೆಂಕಿ ಆವರಿಸಿಕೊಂಡಿತ್ತು. ಈ ಘಟನೆಯಿಂದ ಭಕ್ತರು ಅಪಶಕುನದ ಭೀತಿಯಿಂದ ಮಂಕಾಗಿದ್ದರು.

ನಂತರ ನಡೆದ ಧರ್ಮಸಭೆಯಲ್ಲಿ ಮಾತನಾಡಿದ ಅವರಾದಿ ಮಠದ ಶಿವಮೂರ್ತಿ ಸ್ವಾಮೀಜಿ, ತೊರಗಲ್‌ಮಠದ ಚನ್ನಮಲ್ಲ ಶಿವಾಚಾರ್ಯ ಸ್ವಾಮೀಜಿ ಮತ್ತು ರಾಮದುರ್ಗದ ಶಿವಮೂರ್ತೇಶ್ವರ ಮಠದ ಶಾಂತವೀರ ಸ್ವಾಮೀಜಿ, 'ಬೆಂಕಿ ಅವಘಡದಿಂದ ಭಕ್ತರು ಭಯ ಅಥವಾ ಆತಂಕ ಪಡುವ ಅಗತ್ಯವಿಲ್ಲ. ಗ್ರಾಮಕ್ಕೆ ಅಂಟಿದ ಶಾಪ ಸುಟ್ಟು ಹೋಗಿದೆ ಎಂದು ಭಾವಿಸಬೇಕು' ಎಂದು ಜನರನ್ನು ಸಮಾಧಾನಪಡಿಸಿದ್ದಾರೆ.


ರಾಮದುರ್ಗ ತಾಲ್ಲೂಕಿನ ಶಿವಪೇಟೆಯ ಜಡಿಶಂಕರಲಿಂದ ದೇವರ ರಥೋತ್ಸವದ ವೇಳೆ ತೇರಿಗೆ ತಗುಲಿದ್ದ ಬೆಂಕಿಯನ್ನು ಭಕ್ತರು ನಂದಿಸಿದರು

₹5.8 ಲಕ್ಷ ಮೌಲ್ಯದ ಮಾದಕ ವಸ್ತು ಜಪ್ತಿ

ಬೆಂಗಳೂರು: ಹೊರ ರಾಜ್ಯಗಳಿಂದ ಮಾದಕ ವಸ್ತುಗಳನ್ನು ತಂದು ನಗರದಲ್ಲಿ ಮಾರುತ್ತಿದ್ದ ಕೇರಳ ಮೂಲದ ವ್ಯಕ್ತಿಯನ್ನು ಗೋವಿಂದಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಬೆಸಿಲ್ ಜಾರ್ಜ್ (28) ಬಂಧಿತ. ಆತನಿಂದ 575 ಗ್ರಾಂ ಚರಸ್ ಹಾಗೂ ಮೊಬೈಲ್ ಜಪ್ತಿ ಮಾಡಲಾಗಿದೆ. ಇದರ ಒಟ್ಟು ಮೌಲ್ಯ ₹5.8 ಲಕ್ಷ ಎಂದು ಅಂದಾಜಿಸಲಾಗಿದೆ. ಆರೋಪಿಯು ಹಿಮಾಚಲ ಪ್ರದೇಶದಿಂದ ಮಾದಕ ವಸ್ತುಗಳನ್ನು ತಂದು ಕಾಲೇಜು ವಿದ್ಯಾರ್ಥಿಗಳು, ಯುವಕರು, ಐಟಿ ಕಂಪನಿ ಉದ್ಯೋಗಿಗಳು ಹಾಗೂ ಗಣ್ಯ ವ್ಯಕ್ತಿಗಳಿಗೆ ಮಾರಾಟ ಮಾಡುತ್ತಿದ್ದ ಎಂಬುದು ವಿಚಾರಣೆಯಿಂದ ಗೊತ್ತಾಗಿದೆ' ಎಂದು ಪೊಲೀಸರು ಹೇಳಿದ್ದಾರೆ.

'ಎಚ್‌ಬಿಆರ್ ಲೇಔಟ್‌ನ 1ನೇ ಹಂತದ 4ನೇ ಬ್ಲಾಕ್‌ನಲ್ಲಿರುವ ಅರಣ್ಯ ಇಲಾಖೆ ಕಚೇರಿ ಮುಂಭಾಗದ ರಸ್ತೆಯಲ್ಲಿ ಅಪರಿಚಿತ ವ್ಯಕ್ತಿಯೊಬ್ಬ ಮಾದಕ ವಸ್ತು ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಲಭಿಸಿತ್ತು. ಇದರ ಆಧಾರದಲ್ಲಿ ದಾಳಿ ನಡೆಸಿ ಆತನನ್ನು ಬಂಧಿಸಲಾಗಿದೆ' ಎಂದು ತಿಳಿಸಿದ್ದಾರೆ.

'ಆರೋಪಿಯು ಮಾದಕ ವಸ್ತು ಜಾಲದಲ್ಲಿ ಭಾಗಿಯಾಗಿರುವ ಹಲವು ಪೆಡ್ಲರ್‌ಗಳ ಜೊತೆ ನಿಕಟ ಸಂಪರ್ಕ ಹೊಂದಿರುವ ಅನುಮಾನ ಇದೆ. ಹೀಗಾಗಿ ವಿಚಾರಣೆ ತೀವ್ರಗೊಳಿಸಿದ್ದವೆ' ಎಂದರು.

ಕೃಷ್ಣಮೃಗ ಚರ್ಮ, ಕೊಂಬು ಜಪ್ತಿ


ಕೃಷ್ಣಮೃಗದ ಚರ್ಮ ಮತ್ತು ಕೊಂಬುಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಸಾರಕ್ಕಿ ಮಾರುಕಟ್ಟೆ ಬಳಿ ಕೃಷ್ಣಮೃಗಗಳ ಚರ್ಮ ಮತ್ತು ಕೊಂಬುಗಳನ್ನು ಮಾರಾಟ ಮಾಡಲು ಯತ್ನಿಸುತ್ತಿದ್ದ ಇಬ್ಬರು ಆರೋಪಿಗಳನ್ನು ಜೆ.ಪಿ.ನಗರ ಪೊಲೀಸರು ಬುಧವಾರ ಬಂಧಿಸಿದ್ದಾರೆ.

'ಜಾಲಹಳ್ಳಿಯಲ್ಲಿ ವಾಸವಿದ್ದ ಲೋಕೇಶ್ (45) ಹಾಗೂ ಯರ್ರಿಸ್ವಾಮಿ (37) ಬಂಧಿತರು. ಆರೋಪಿಗಳಿಂದ ಕೃಷ್ಣಮೃಗಗಳ ಎರಡು ಚರ್ಮ ಹಾಗೂ 4 ಕೊಂಬುಗಳನ್ನು ವಶಕ್ಕೆ ಪಡೆಯಲಾಗಿದೆ' ಎಂದು ಪೊಲೀಸರು ತಿಳಿಸಿದರು.

'ಯರ್ರಿಸ್ವಾಮಿ ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯವರು. ಅಲ್ಲಿನ ಪಾಲೂರು ಅರಣ್ಯ ಪ್ರದೇಶದಲ್ಲಿ ಎರಡು ಕೃಷ್ಣಮೃಗಗಳನ್ನು ಕೊಂದು, ಅವುಗಳ ಚರ್ಮ ಮತ್ತು ಕೊಂಬುಗಳನ್ನು ಸಂಗ್ರಹಿಸಿ ಇಟ್ಟುಕೊಂಡಿದ್ದ. ಅವುಗಳನ್ನು ಬೆಂಗಳೂರಿಗೆ ತಂದು, ಸ್ನೇಹಿತ ಲೋಕೇಶ್‌ನ ಸಹಾಯದಿಂದ ಮಾರಾಟ ಮಾಡಲು ಸಾರಕ್ಕಿ ಮಾರುಕಟ್ಟೆ ಬಳಿಗೆ ಇಬ್ಬರೂ ಬಂದಿದ್ದರು'.

'ಅನುಮಾನಾಸ್ಪದವಾಗಿ ಓಡಾಡುತ್ತಿದ್ದ ಇವರನ್ನು ಪೊಲೀಸರು ತಪಾಸಣೆ ನಡೆಸಿದಾಗ, ಚರ್ಮ ಮತ್ತು ಕೊಂಬುಗಳು ಪತ್ತೆಯಾದವು. ಆರೋಪಿಗಳ ವಿರುದ್ಧ ವನ್ಯಜೀವಿ ಸಂರಕ್ಷಣಾ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದೂ ಪೊಲೀಸರು ತಿಳಿಸಿದರು.

ಸನ್ನತಿಗೆ ಭೇಟಿ ನೀಡಿದ ಎಎಸ್‌ಐ ನೇತೃತ್ವದ ತಂಡ

ಬೌದ್ಧ ಸ್ತೂಪ ಅಭಿವೃದ್ಧಿ; ಪ್ರಸ್ತಾವಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ಚಿತ್ತಾಪುರ ತಾಲ್ಲೂಕಿನ ಸನ್ನತಿಯಲ್ಲಿರುವ ಎರಡು ಸಾವಿರ ವರ್ಷ ಇತಿಹಾಸದ ಬೌದ್ಧ ಸ್ತೂಪದ ಅಭಿವೃದ್ಧಿಗೆ ತಕ್ಷಣ ಪ್ರಸ್ತಾವ ಸಲ್ಲಿಸಲು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ (ಎಎಸ್‌ಐ) ಹೆಚ್ಚುವರಿ ಮಹಾನಿರ್ದೇಶಕ ಜಾನವಿಜ್ ಶರ್ಮಾ ಅವರು ಹಂಪಿ ಎಎಸ್‌ಐ ವೃತ್ತದ ಅಧೀಕ್ಷಕ ಅಧಿಕಾರಿ ನಿಖಿಲ್ ದಾಸ್ ಅವರಿಗೆ ಸೂಚಿಸಿದರು.

'ಅಶೋಕನ ಕಾಲಘಟ್ಟದ ಪ್ರಾಕೃತ ಭಾಷೆ ಮತ್ತು ಬ್ರಾಹ್ಮಿ ಲಿಪಿಯಲ್ಲಿರುವ ಶಾಸನಗಳು ಇಲ್ಲಿ ಸಿಕ್ಕಿದ್ದು, ಇವುಗಳನ್ನು ಭಾಷಾಂತರ ಮಾಡಿ ಇತಿಹಾಸ ತಜ್ಞರನ್ನು ಆಹ್ವಾನಿಸಿ ಹೆಚ್ಚಿನ ಸಂಶೋಧನೆ ಮಾಡಬೇಕಿದೆ. ಸನ್ನತಿ ಬೌದ್ಧ ಧರ್ಮದ ವಿಶ್ವದ ಬಹುದೊಡ್ಡ ತಾಣವಾಗಿದ್ದು, ಇದನ್ನು ಯೂನೆಸ್ಕೊ ವಿಶ್ವ ಪಾರಂಪರಿಕ ಪಟ್ಟಿಯಲ್ಲಿ ಸೇರ್ಪಡೆ ಆಗಬೇಕಿದೆ' ಎಂದು ಅವರು ತಿಳಿಸಿದರು.

'ಪ್ರಜಾವಾಣಿ'ಯ ಭಾನುವಾರದ ಪುರವಣಿಯಲ್ಲಿ ಈಚೆಗೆ ಪ್ರಕಟವಾದ ವರದಿ ಹಾಗೂ ವಿಡಿಯೊ ಗಮನಿಸಿದ ಸಂಸದ ಡಾ.ಉಮೇಶ ಜಾಧವ ಅವರು ಕೇಂದ್ರ ಸಂಸ್ಕೃತಿ ಸಚಿವ ಅರ್ಜುನ್ ರಾಮ್ ಮೇಘ್ವಾಲ್ ಅವರನ್ನು ಭೇಟಿಯಾಗಿ, ಸನ್ನತಿಯ ಅಭಿವೃದ್ಧಿ ಮತ್ತು ಸಂರಕ್ಷಣೆಗೆ ಕೋರಿದ್ದರು.

ವರದಿ ಪರಿಣಾಮ

ಸಚಿವರ ಸೂಚನೆ ಮೇರೆಗೆ ಜಾನವಿಜ್ ಶರ್ಮಾ ನೇತೃತ್ವದ ಎಎಸ್‌ಐ ಅಧಿಕಾರಿಗಳ ತಂಡವು ಮಂಗಳವಾರ ಸನ್ನತಿ ಮತ್ತು ಕನಗನಹಳ್ಳಿಗೆ ಭೇಟಿ ನೀಡಿತು. ಅಲ್ಲಿ ಸಾಮ್ರಾಟ್ ಅಶೋಕ ಮತ್ತು ಕುಟುಂಬ ಸದಸ್ಯರುಳ್ಳ ಶಿಲ್ಪಕ್ಕೆ ಗಾಜಿನ ರಕ್ಷಾ ಕವಚ ಮಾಡಲಾಯಿತು.


ಕಲಬುರಗಿ ಜಿಲ್ಲೆಯ ಸನ್ನತಿ ಬಳಿ ಇರುವ ಬೌದ್ಧ ಸ್ತೂಪದ ಅವಶೇಷಗಳನ್ನು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ಅಧಿಕಾರಿ ಜಾನವಿಜ್ ಶರ್ಮಾ, ಹಂಪಿ ವೃತ್ತದ ಅಧೀಕ್ಷಕ ನಿಖಿಲ್ ದಾಸ್ ಮಂಗಳವಾರ ಪರಿಶೀಲಿಸಿದರು

> ಪ್ರಸ್ತಾವನೆಯನ್ನು ಅನುಮೋದಿಸಿ 2022ರ ಏಪ್ರಿಲ್‌ನಿಂದಲೇ ಸಂರಕ್ಷಣೆ ಕಾರ್ಯವನ್ನು ಭರದಿಂದ ಆರಂಭಿಸಲಾಗುವುದು. ಹಣಕಾಸಿಗೆ ಯಾವುದೇ ಕೊರತೆಯಿಲ್ಲ.
>
> **ಜಾನವಿಜ್ ಶರ್ಮಾ,** ಹೆಚ್ಚುವರಿ ಮಹಾನಿರ್ದೇಶಕ, ಎಎಸ್‌ಐ

ಕೋವಿಡ್ ಎರಡನೇ ಅಲೆ ಆರ್ಭಟ, ಪ್ರವಾಹ ತಂದೊಡ್ಡಿದ ಸಂಕಟ ● ವರ್ಷಾಂತ್ಯದಲ್ಲಿ ಓಮೈಕ್ರಾನ್ ಕಾಟ

ಕಹಿ ನೆನಪುಗಳಲ್ಲೇ ಕಳೆದು ಹೋದ 2021

ಪ್ರವಾಹಗಳಿಂದ ನಲುಗಿದ ಬಿಬಿಎಂಪಿ

- ಕೋರಮಂಗಲ ಕಣಿವೆಯ ರಾಜಕಾಲುವೆಯನ್ನು ₹ 169 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಗೊಳಿಸುವ 'ನಾಗರಿಕರ ನೀರ ಹಾದಿ' ಯೋಜನೆಗೆ ರಾಜ್ಯ ಸರ್ಕಾರ ಜನವರಿ ತಿಂಗಳಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿತು.
- ಆಸ್ತಿ ತೆರಿಗೆ ಪಾವತಿಗೆ ಸಂಬಂಧಿಸಿದ ವಲಯ ವರ್ಗೀಕರಣಕ್ಕೆ ಸಂಬಂಧಿಸಿದಂತೆ ತಪ್ಪು ಮಾಹಿತಿ ನೀಡಿದ 78 ಸಾವಿರ ಮನೆಗಳ ಮಾಲೀಕರಿಗೆ ವ್ಯತ್ಯಾಸದ ಮೊತ್ತ ಪಾವತಿಸುವಂತೆ ಫೆಬ್ರುವರಿ ತಿಂಗಳಿನಿಂದ ನೋಟಿಸ್ ಜಾರಿ ಮಾಡಿತು.
- ಅಕ್ಟೋಬರ್ 8ರಂದು ಪಶ್ಚಿಮವಲಯದ ಮಹಾಲಕ್ಷ್ಮೀ ಬಡಾವಣೆ ಹಾಗೂ ಗೋವಿಂದರಾಜಪುರ ವಿಧಾನ ಸಭಾ ಕ್ಷೇತ್ರಗಳ ಹಾಗೂ 17ರಂದು ಎಚ್ಎಸ್ಆರ್ ಬಡಾವಣೆ ಪ್ರದೇಶದಲ್ಲಿ ಪ್ರವಾಹ
- ನವೆಂಬರ್ ತಿಂಗಳ 21 ಮತ್ತು 22ರಂದು ಸುರಿದ ಭಾರಿ ಮಳೆಗೆ ಯಲಹಂಕ ಪ್ರದೇಶದಲ್ಲಿ ಪ್ರವಾಹ ಸೃಷ್ಟಿ



ನವೆಂಬರ್ 22ರಂದು ಪ್ರವಾಹ ಉಂಟಾದ ಸಂದರ್ಭದಲ್ಲಿ ಯಲಹಂಕದ ಕೇಂದ್ರೀಯ ವಿಹಾರ್ ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ ಸಿಲುಕಿದ್ದವರನ್ನು ರಕ್ಷಣೆ ಮಾಡಲಾಯಿತು



ಕೋವಿಡ್ ಲಸಿಕೆ ಹಾಕಿಸಿಕೊಳ್ಳಲು ನಗರದ ದಾಸಪ್ಪ ಆಸ್ಪತ್ರೆಯ ಆವರಣದಲ್ಲಿ ಜನರು ಕಾಯುತ್ತಿರುವುದು

ವರ್ಷವಿಡೀ ಕಾಡಿದ ಕೋವಿಡ್

- **2021 ಜ.16:** ಇಲ್ಲಿನ ವಿಕ್ಟೋರಿಯಾ ಆಸ್ಪತ್ರೆಯ ಆವರಣದಲ್ಲಿರುವ ಪ್ರಧಾನ ಮಂತ್ರಿ ಸ್ವಾಸ್ಥ್ಯ ಸುರಕ್ಷಾ ಯೋಜನೆ (ಪಿಎಂಎಸ್‌ಎಸ್‌ವೈ) ಆಸ್ಪತ್ರೆಯಲ್ಲಿ ಕೋವಿಡ್ ಲಸಿಕೆ ವಿತರಣೆಗೆ ಚಾಲನೆ.
- **ಫೆಬ್ರುವರಿ:** ನಗರದಲ್ಲಿ ಕೋವಿಡ್ ಹೊಸ ಪ್ರಕರಣ ಸಂಖ್ಯೆ 200ರ ಆಸುಪಾಸಿಗೆ ಇಳಿಕೆ. ಆಸ್ಪತ್ರೆಗಳಲ್ಲಿ ಕೋವಿಡೇತರ ಚಿಕಿತ್ಸೆಗಳಿಗೆ ಆದ್ಯತೆ. ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ 4 ಸಾವಿರಕ್ಕೆ ಇಳಿಕೆ.
- **ಮಾರ್ಚ್:** ಎರಡನೇ ವಾರದ ಬಳಿಕ ಕೋವಿಡ್ ಪ್ರಕರಣಗಳ ಸಂಖ್ಯೆ ಏರುಗತಿ ಪಡೆದು, ದಿನವೊಂದಕ್ಕೆ ದೃಢಪಡುತ್ತಿದ್ದ ಸೋಂಕಿತರ ಸಂಖ್ಯೆ 2 ಸಾವಿರ ಆಸುಪಾಸಿಗೆ ಏರಿಕೆ. ಏ.30 ರಂದು 26,756 ಮಂದಿಗೆ ಸೋಂಕು ದೃಢ. ಕೋವಿಡ್ ಆರೈಕೆ ಕೇಂದ್ರಗಳ ಸ್ಥಾಪನೆ. ಖಾಸಗಿ ಆಸ್ಪತ್ರೆಗಳಲ್ಲಿಯೂ ಚಿಕಿತ್ಸೆ.
- **ಏಪ್ರಿಲ್:** ಕೆಲ ದಿನಗಳು 20 ಸಾವಿರಕ್ಕೂ ಅಧಿಕ ಕೋವಿಡ್ ಪ್ರಕರಣಗಳು ದೃಢ. ವೈದ್ಯಕೀಯ ಆಮ್ಲಜನಕ, ರೆಮ್‌ಡಿಸಿವಿರ್ ಔಷಧ ಕೊರತೆ. ರೋಗಿಗಳ ಪರದಾಟ.
- **ಮೇ:** ನಗರದಲ್ಲಿ 3 ಲಕ್ಷಕ್ಕೂ ಅಧಿಕ ಸಕ್ರಿಯ ಪ್ರಕರಣ. ಆಸ್ಪತ್ರೆಗಳಲ್ಲಿ ಆಮ್ಲಜನ ಸಂಪರ್ಕ ಹಾಗೂ ತೀವ್ರ ನಿಗಾ ಘಟಕ (ಐಸಿಯು) ಹಾಸಿಗೆಗಳ ಸಮಸ್ಯೆ. ಪ್ರತಿನಿತ್ಯ ನೂರಕ್ಕೂ ಅಧಿಕ ಮರಣ ಪ್ರಕರಣಗಳ ವರದಿ.
- **ಮೇ-ಜೂನ್:** ಶಿಲೀಂಧ್ರ ಸೋಂಕು ಪ್ರಕರಣಗಳು ಹೆಚ್ಚಳ. ಕೋವಿಡ್‌ನಿಂದ ಚೇತರಿಸಿಕೊಂಡ ಹಲವರಿಗೆ ಕಪ್ಪು ಶಿಲೀಂಧ್ರ ಸೋಂಕು ಪತ್ತೆ.

2021 ಹಿನ್ನೋಟ

ಇದರಿಂದಾಗಿ ಆಸ್ಪತ್ರೆಗಳಲ್ಲಿ ಹಾಸಿಗೆ ಹಾಗೂ ಚಿಕಿತ್ಸೆಗೆ ಬೇಕಾದ 'ಲಿಪೋಸೋಮಲ್ ಆಂಫೊಟೆರಿಸಿನ್ ಬಿ' ಔಷಧ ಸಮಸ್ಯೆಯಾಯಿತು. ಕೆಲವರು ದೃಷ್ಟಿ ಕಳೆದುಕೊಂಡರು.

- ಕೋವಿಡ್ ಲಸಿಕೆ ಪಡೆದುಕೊಳ್ಳಲು ನಗರದ ವಿವಿಧ ಆರೋಗ್ಯ ಕೇಂದ್ರಗಳಲ್ಲಿ ಮುಗಿ ಬಿದ್ದ ಜನರು.
- **ಜುಲೈ:** ಎರಡನೇ ವಾರದ ಬಳಿಕ ಹೊಸ ಪ್ರಕರಣಗಳ ಸಂಖ್ಯೆ ಇಳಿಮುಖ. ದಿನವೊಂದಕ್ಕೆ ದೃಢಪಡುತ್ತಿದ್ದ ಪ್ರಕರಣಗಳ ಸಂಖ್ಯೆ 500ರ ಗಡಿಯೊಳಗೆ ವರದಿ.
- ಕೊರೊನಾ ಸೋಂಕಿನಿಂದ ಚೇತರಿಸಿಕೊಂಡ ಮಕ್ಕಳಿಗೆ ಅಂಗಾಂಗ ಉರಿಯೂತ ಸಮಸ್ಯೆ (ಮಿಸ್-ಸಿ) ಕಾಡಿತು. ಇಂದಿರಾಗಾಂಧಿ ಮಕ್ಕಳ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಯಿತು.
- **ಜು.15:** ಸಂಜಯ ಗಾಂಧಿ ಟ್ರಾಮಾ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆಯಲ್ಲಿ ರೋಬೋಟಿಕ್ ಶಸ್ತ್ರಚಿಕಿತ್ಸೆ ಮತ್ತು ಕ್ರೀಡಾ ವಿಭಾಗದ ಅತ್ಯಾಧುನಿಕ ಕಟ್ಟಡದ ಶಿಲಾನ್ಯಾಸ.
- **ಆಗಸ್ಟ್:** ಸಂಭಾವ್ಯ ಕೋವಿಡ್ ಮೂರನೇ ಅಲೆಯ ಮುನ್ನೆಚ್ಚರಿಕಾ ಕ್ರಮವಾಗಿ ರಾಜೀವ್ ಗಾಂಧಿ ಎದೆರೋಗಗಳ ಆಸ್ಪತ್ರೆಯಲ್ಲಿ 200 ಹಾಸಿಗೆಗಳ ಕೋವಿಡ್ ಚಿಕಿತ್ಸಾ ನಿರ್ಧಾರ ಕೇಂದ್ರ (ಟ್ರಯಾಜ್ ಸೆಂಟರ್) ನಿರ್ಮಾಣ.
- **ಸೆ.23:** ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ಇನ್ಫೊಸಿಸ್ ಪ್ರತಿಷ್ಠಾನದ ನಿರ್ಮಿಸಿರುವ ಹೊರರೋಗಿ ವಿಭಾಗ ಘಟಕ (ಓಪಿಡಿ ಬ್ಲಾಕ್) ಸೇರಿದಂತೆ ವಿವಿಧ ವೈದ್ಯಕೀಯ ಸೌಲಭ್ಯಗಳಿಗೆ ಚಾಲನೆ.
- **ಅ.10:** ರಾಜ್ಯ ಸರ್ಕಾರವು ವಿಕ್ಟೋರಿಯಾ ಆಸ್ಪತ್ರೆ ಆವರಣದಲ್ಲಿ ನಿರ್ಮಿಸಿರುವ ಇನ್‌ಸ್ಟಿಟ್ಯೂಟ್ ಆಫ್ ಗ್ಯಾಸ್ಟ್ರೊ ಎಂಟ್ರಾಲಜಿ ಸೈನ್ಸಸ್ ಆ್ಯಂಡ್ ಆರ್ಗನ್ ಟ್ರಾನ್ಸ್‌ಪ್ಲಾಂಟ್ ಆಸ್ಪತ್ರೆಗೆ ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ಅವರಿಂದ ಚಾಲನೆ.
- **ಅಕ್ಟೋಬರ್:** ಅ.29ರಂದು ಮೃತಪಟ್ಟ ನಟ ಪುನೀತ್ ರಾಜ್‌ಕುಮಾರ್ ಅವರ ನೇತ್ರಗಳನ್ನು ದಾನವಾಗಿ ಪಡೆದ ನಾರಾಯಣ ನೇತ್ರಾಲಯ. ಹೊಸ ತಂತ್ರಜ್ಞಾನದ ನೆರವಿನಿಂದ ಎರಡು ಕಣ್ಣುಗಳನ್ನು ನಾಲ್ವರಿಗೆ ಅಳವಡಿಕೆ.
- **ನ.17:** ಇನ್ಫೊಸಿಸ್ ಪ್ರತಿಷ್ಠಾನವು ನಗರದ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ಆವರಣದಲ್ಲಿ ನಿರ್ಮಿಸಿಕೊಟ್ಟಿರುವ 350 ಹಾಸಿಗೆಗಳ ಹೊಸ ಕಟ್ಟಡ ಸಂಕೀರ್ಣಕ್ಕೆ ಚಾಲನೆ. ಇದರೊಂದಿಗೆ ಜಗತ್ತಿನ ಅತೀ ದೊಡ್ಡ ಹೃದ್ರೋಗ ಆಸ್ಪತ್ರೆಯಾಗಿ ಹೊರಹೊಮ್ಮಿದ ಜಯದೇವ ಆಸ್ಪತ್ರೆ.
- **ನ.27:** ರಾಜಾಜಿನಗರದ ಇಎಸ್‌ಐ ಆಸ್ಪತ್ರೆಯ ಶವಾಗಾರದಲ್ಲಿ 15 ತಿಂಗಳ ಬಳಿಕ ಕೋವಿಡ್‌ನಿಂದ ಮೃತಪಟ್ಟ ಇಬ್ಬರ ದೇಹ ಪತ್ತೆ.
- **ಡಿ.2:** ವೈರಾಣುವಿನ ವಂಶವಾಹಿ ಸಂರಚನಾ ವಿಶ್ಲೇಷಣೆಯಿಂದ (ಜೀನೋಮ್ ಸೀಕ್ವೆನ್ಸಿಂಗ್) ನಗರದಲ್ಲಿ ಇಬ್ಬರಿಗೆ ಓಮೈಕ್ರಾನ್ ಸೋಂಕು ದೃಢ. ದೇಶದಲ್ಲಿಯೇ ಪ್ರಥಮ ಪ್ರಕರಣ ಇಲ್ಲಿ ವರದಿ. ಬೌರಿಂಗ್ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ವ್ಯವಸ್ಥೆ.
- **2021 ಡಿ.23:** ಲಸಿಕೆ ವಿತರಣೆಯಲ್ಲಿ ಶೇ 100 ರಷ್ಟು ಸಾಧನೆ. ಕೋವಿಡ್ ಲಸಿಕೆಯ ಎರಡೂ ಡೋಸ್‌ಗಳ ವಿತರಣೆಯಲ್ಲಿ ಬೆಂಗಳೂರು ನಗರ ಜಿಲ್ಲೆ ಶೇ 100 ರಷ್ಟು ಸಾಧನೆ ಮಾಡಿತು. ಈ ಸಾಧನೆ ಮಾಡಿದ ರಾಜ್ಯದ ಪ್ರಥಮ ಜಿಲ್ಲೆ ಎಂಬ ಹಿರಿಮೆಗೆ ಭಾಜನ.



ನಗರದಲ್ಲಿ ವೈದ್ಯಕೀಯ ಆಮ್ಲಜನಕದ ಅಭಾವ ಸೃಷ್ಟಿಯಾದಾಗ ದ್ವಿಚಕ್ರ ವಾಹನದಲ್ಲಿಯೇ ಆಮ್ಲಜನಕದ ಸಿಲಿಂಡರ್‌ಗಳನ್ನು ಒಯ್ಯುತ್ತಿರುವುದು – ಪ್ರಜಾವಾಣಿ ಸಂಗ್ರಹ ಚಿತ್ರಗಳು

ವಿಷಾದದ ನಡುವೆ ಸಂಭ್ರಮ

- **ಫೆ.8ರಿಂದ 12:** ಹೆಸರಘಟ್ಟದ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಯ (ಐಐಎಚ್‌ಆರ್) ಪ್ರಾಂಗಣದಲ್ಲಿ ಭೌತಿಕ ಮತ್ತು ಆನ್‌ಲೈನ್ ಮೂಲಕ ನಡೆದ 'ರಾಷ್ಟ್ರೀಯ ತೋಟಗಾರಿಕೆ ಮೇಳ'ದಲ್ಲಿ 211 ಕೃಷಿ ಪ್ರಾತ್ಯಕ್ಷಿಕೆಗಳು ಹಾಗೂ 257 ಹೊಸ ತಂತ್ರಜ್ಞಾನಗಳನ್ನು ರೈತರಿಗೆ ಪರಿಚಯಿಸಲಾಯಿತು. ಕೋವಿಡ್ ನಿರ್ಬಂಧಗಳಿಂದ ಮೇಳದ ಭೌತಿಕ ವೀಕ್ಷಣೆಗೆ 70 ಸಾವಿರ ಮಂದಿಗೆ ಅವಕಾಶವಿತ್ತು. ಆನ್‌ಲೈನ್ ವೇದಿಕೆಗಳಲ್ಲಿ 16.3 ಲಕ್ಷ ಮಂದಿ ಮೇಳ ಕಣ್ತುಂಬಿಕೊಂಡರು.
- **ನ.11-14:** ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ವತಿಯಿಂದ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ (ಜಿಕೆವಿಕೆ) ಆವರಣದಲ್ಲಿ 'ಕೃಷಿ ಮೇಳ' ಭೌತಿಕ ಹಾಗೂ ಆನ್‌ಲೈನ್ ಮೂಲಕ ನಡೆಯಿತು. 10 ಹೊಸ ತಳಿಗಳು ಹಾಗೂ 28 ನೂತನ ಕೃಷಿ ತಂತ್ರಜ್ಞಾನಗಳು ರೈತರ ಗಮನ ಸೆಳೆಯಿತು. 8 ಲಕ್ಷಕ್ಕೂ ಹೆಚ್ಚು ಜನ ಮೇಳಕ್ಕೆ ಬಂದಿದ್ದರು.
- **ಡಿ.18 ಮತ್ತು 19:** ಸಾಹಿತ್ಯ ಮತ್ತು ಸಂಸ್ಕೃತಿ ಬಿಂಬಿಸುವ 'ಬೆಂಗಳೂರು ಸಾಹಿತ್ಯ ಉತ್ಸವ' ದೊಮ್ಮಲೂರಿನ ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ (ಬಿಐಸಿ) ನಡೆಯಿತು. ಅಂತರರಾಷ್ಟ್ರೀಯ ಲೇಖಕರು ಸೇರಿದಂತೆ 160ಕ್ಕೂ ಹೆಚ್ಚು ಸಾಹಿತಿಗಳು, ಭಾಷಣಕಾರರು ಉತ್ಸವದಲ್ಲಿ ಭಾಗಿಯಾಗಿದ್ದರು.

ಕೆಂಗೇರಿವರೆಗೆ ಮೆಟ್ರೊ

- ಮೆಟ್ರೊ ರೈಲು ನೇರಳೆ ಮಾರ್ಗ ಮೈಸೂರು ರಸ್ತೆಯಿಂದ ಕೆಂಗೇರಿ ತನಕ ವಿಸ್ತರಣೆಗೊಂಡರೆ, ಹಸಿರು ಮಾರ್ಗ ಯಲಚೇನಹಳ್ಳಿಯಿಂದ ಕನಕಪುರ ರಸ್ತೆಯ ರೇಷ್ಮೆ ಸಂಸ್ಥೆ ತನಕ ವಿಸ್ತರಣೆಗೊಂಡಿದೆ. ವಿಮಾನ ನಿಲ್ದಾಣ ಸಂಪರ್ಕ ಕಲ್ಪಿಸುವ ಕಾಮಗಾರ ಭರದಿಂದ ಸಾಗಿದೆ.
- ಆರನೇ ವೇತನ ಆಯೋಗದ ಶಿಫಾರಸುಗಳನ್ನು ಸಾರಿಗೆ ನೌಕರರಿಗೂ ಅನ್ವಯಿಸಬೇಕು ಎಂದು ಒತ್ತಾಯಿಸಿ 2021ರ ಏಪ್ರಿಲ್‌ನಲ್ಲಿ ನೌಕರರು ಮುಷ್ಕರ ನಡೆಸಿದ್ದರು. ಜಗ್ಗದ ಸರ್ಕಾರ, ಮುಷ್ಕರನಿರತ ನೌಕರರ ವಜಾ ಮತ್ತು ಅಮಾನತು ಕ್ರಮ ಅನುಸರಿಸಿತು. ಕೋವಿಡ್ ಕಾರಣದಿಂದ ನೌಕರರಿಗೆ ವರ್ಷವಿಡೀ ಸಮಯಕ್ಕೆ ಸರಿಯಾಗಿ ವೇತನ ಬಿಡುಗಡೆಯಾಗಿಲ್ಲ.
- ಎಲೆಕ್ಟ್ರಿಕ್ ವಾಹನಗಳ ಜಮಾನಕ್ಕೆ ಹೊಂದಿಕೊಳ್ಳುವ ಹೆಜ್ಜೆಯನ್ನು ಬಿಎಂಟಿಸಿ ಇದೇ ಮೊದಲ ಬಾರಿಗೆ ಇಟ್ಟಿತು. ಎಲೆಕ್ಟ್ರಿಕ್ ಬಸ್‌ಗಳ ಸಂಚಾರವನ್ನು ಬೆಂಗಳೂರಿನಲ್ಲಿ ಆರಂಭಿಸಿತು.

ಸಿಬಿಐ

- **ಜನವರಿ**– ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿದ ಆರೋಪದ ಮೇಲೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ವಿರುದ್ಧ ಎಫ್‌ಐಆರ್ ದಾಖಲು.
- **ಮಾರ್ಚ್**– ಐಎಂಎ ಪ್ರಕರಣದಲ್ಲಿ ಬಿಡಿಎ ಹಿಂದಿನ ಕಾರ್ಯನಿರ್ವಾಹಕ ಎಂಜಿನಿಯರ್ ವಿರುದ್ಧ ಆರೋಪಪಟ್ಟಿ ಸಲ್ಲಿಕೆ.

ಆದಾಯ ತೆರಿಗೆ

- **ಅಕ್ಟೋಬರ್**– ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಸಚಿವಾಲಯದ ಸಿಬ್ಬಂದಿ ಆಯನೂರು ಉಮೇಶ್ ಸೇರಿದಂತೆ ಹಲವರ ಮೇಲೆ ಆದಾಯ ತೆರಿಗೆ ಇಲಾಖೆ ದಾಳಿ. ₹ 750 ಕೋಟಿ ಅಘೋಷಿತ ಆಸ್ತಿ ಪತ್ತೆ.

ಭ್ರಷ್ಟಾಚಾರ ನಿಗ್ರಹ ದಳ

- **ಫೆಬ್ರುವರಿ**– ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿದ ಆರೋಪದ ಮೇಲೆ ಒಂಭತ್ತು ಮಂದಿ ಸರ್ಕಾರಿ ಅಧಿಕಾರಿಗಳ ಮೇಲೆ ದಾಳಿ.
- **ನವೆಂಬರ್**– ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮೇಲೆ ದಾಳಿ. ನೂರಾರು ಕೋಟಿ ರೂಪಾಯಿ ಮೌಲ್ಯದ ಅಕ್ರಮಗಳ ಪತ್ತೆ.
- **ನವೆಂಬರ್**– ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿದ ಆರೋಪದ ಮೇಲೆ 15 ಮಂದಿ ಸರ್ಕಾರಿ ಅಧಿಕಾರಿಗಳ ಮೇಲೆ ದಾಳಿ.

ಆಲಮಟ್ಟಿ ಕಾಲುವೆ: ಡಿಪಿಆರ್‌ಗೆ ಒಪ್ಪಿಗೆ

ಬೆಂಗಳೂರು: ಆಲಮಟ್ಟಿ ಎಡದಂಡೆ ಕಾಲುವೆಯ ಕಿ.ಮೀ 0.00 ಯಿಂದ 68.24 ವರೆಗಿನ ಬಾಕಿ ಉಳಿದ ಹಾಗೂ ವಿತರಣಾ ಕಾಲುವೆಗಳ ಸ್ಟ್ರಕ್ಚರ್ ಒಳಗೊಂಡಂತೆ ಆಧುನಿಕ ಕಾಮಗಾರಿಯ ವಿವರವಾದ ಯೋಜನಾ ವರದಿಗೆ(ಡಿಪಿಆರ್) ಆಡಳಿತಾತ್ಮಕ ಅನುಮೋದನೆ ಸಿಕ್ಕಿದೆ. ಈ ಕಾಮಗಾರಿಯ ಅಂದಾಜು ಮೊತ್ತ ₹ 75.41 ಕೋಟಿ.

ಅಲ್ಲದೆ, ಆಲಮಟ್ಟಿ ಎಡದಂಡೆ ಮುಖ್ಯ ಕಾಲುವೆ ಕಿ.ಮೀ 0.00 ರಿಂದ 68.24 ವರೆಗಿನ ಹಾಳಾಗಿರುವ ಆಯ್ದ ಭಾಗಗಳ ಹಾಗೂ ವಿತರಣಾ ಕಾಲುವೆಗಳ ಸ್ಟ್ರಕ್ಚರ್ ಒಳಗೊಂಡ ಆಧುನೀಕರಣ ಕಾಮಗಾರಿಯ ₹112.48 ಕೋಟಿ ಅಂದಾಜು ಮೊತ್ತದ (2016-17 ನೇ ಸಾಲಿನ ದರಪಟ್ಟಿ ಅನ್ವಯ) ವಿವರವಾದ ಯೋಜನಾ ವರದಿಗೆ(ಡಿಪಿಆರ್) ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಎಂದು ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ತಿಳಿಸಿದ್ದಾರೆ.

ಈಗಾಗಲೇ ಆಲಮಟ್ಟಿ ಎಡದಂಡೆ ಮುಖ್ಯ ಕಾಲುವೆಯ ಕಿ.ಮೀ 0.00 ರಿಂದ 68.24 ವರೆಗಿನ (ಆಯ್ದ ಭಾಗಗಳ) ಸ್ಟ್ರಕ್ಚರ್ ಒಳಗೊಂಡಂತೆ ಆಧುನೀಕರಣದ ಪ್ಯಾಕೇಜ್ ಕಾಮಗಾರಿ ಪೂರ್ಣಗೊಂಡಿದೆ. ಕಿ.ಮೀ 0.00 ರಿಂದ 68.42 ವರೆಗಿನ (ಆಯ್ದ ಭಾಗಗಳ) ವಿತರಣಾ ಕಾಲುವೆಗಳ ಆಧುನೀಕರಣದ ಕಾಮಗಾರಿಗಳನ್ನು 3 ಪ್ಯಾಕೇಜ್‌ಗಳಲ್ಲಿ ಗುತ್ತಿಗೆ ವಹಿಸಿದ್ದು, ಕಾಮಗಾರಿ ಪ್ರಗತಿಯಲ್ಲಿದೆ.

ಮೇಕೆದಾಟು ಹೆಸರಲ್ಲಿ ಮಕ್ಮಲ್ ಟೋಪಿ: ಎಚ್‌ಡಿಕೆ ಟೀಕೆ



ಬೆಂಗಳೂರು: 'ಕೃಷ್ಣೆಯ ಕಡೆಗೆ ಕಾಂಗ್ರೆಸ್ ನಡಿಗೆ ಎಂದು ಪಾದಯಾತ್ರೆ ಮಾಡಿದ್ದ ಕಾಂಗ್ರೆಸ್ ಪಕ್ಷದವರು ಉತ್ತರ ಕರ್ನಾಟಕದವರಿಗೆ ಟೋಪಿ ಹಾಕಿದ್ದರು. ಈಗ ಮೇಕೆದಾಟು ಯೋಜನೆ ಹೆಸರಿನಲ್ಲಿ ಪಾದಯಾತ್ರೆ ಮಾಡಿ ನನ್ನನ್ನೂ ಸೇರಿಸಿ 83 ತಾಲ್ಲೂಕುಗಳ ಜನರಿಗೆ ಮಕ್ಮಲ್ ಟೋಪಿ ಹಾಕಲು ಹೊರಟಿದ್ದಾರೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಟೀಕಿಸಿದ್ದಾರೆ.

'ಮೇಕೆದಾಟು ಯೋಜನೆಗೆ ಆಗ್ರಹಿಸಿ ನಾವು ನಡೆಸುವ ಪಾದಯಾತ್ರೆ ಪಕ್ಷಾತೀತ. ಕುಮಾರಸ್ವಾಮಿ ಅವರೂ ಭಾಗವಹಿಸಬಹುದು' ಎಂಬ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿಕೆಗೆ ಬುಧವಾರ ಸರಣಿ ಟ್ವೀಟ್ ಮೂಲಕ ಪ್ರತಿಕ್ರಿಯಿಸಿರುವ ಅವರು, ಕಾಂಗ್ರೆಸ್ ನಾಯಕರ ವಿರುದ್ಧ ಹರಿಹಾಯ್ದಿದ್ದಾರೆ.

'30 ವರ್ಷ ಆಳಿದವರು ಕೃಷ್ಣಾ- ಕಾವೇರಿ ವಿಚಾರದಲ್ಲಿ ಮಾಡಿದ್ದೇನು? ಕೃಷ್ಣೆಯ ಕಡೆಗೆ ಕಾಂಗ್ರೆಸ್ ನಡಿಗೆ ಎಂದು ಪಾದಯಾತ್ರೆ ಮಾಡಿ ಟೋಪಿ ಹಾಕಿದ್ದರು. ಮೇಕೆದಾಟು ವಿಚಾರದಲ್ಲೂ ಅದೇ ಆಗಲಿದೆ. ಈಗ ಬೇಕಿರುವುದು ಹೊಸ ಘೋಷಣೆಯಲ್ಲ. ಮೇಕೆದಾಟು ಯೋಜನೆಯನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯುವ ಪ್ರಯತ್ನವನ್ನು ಮಾಡಬೇಕಾಗಿದೆ' ಎಂದು ಕುಮಾರಸ್ವಾಮಿ ಹೇಳಿದ್ದಾರೆ. ಐದು ವರ್ಷ ಕಾಂಗ್ರೆಸ್ ಸರ್ಕಾರವೇ ಇತ್ತು. ಆಗ, 'ಸಿದ್ಧಹಸ್ತ'ರೇ ಮುಖ್ಯಮಂತ್ರಿಯಾಗಿದ್ದರು. ಆಗ ಕೇಂದ್ರದ ಮುಂದೆ ಪ್ರತಾಪ ತೋರಬಹುದಿತ್ತು. ಗಾಂಧೀಜಿ ಪ್ರತಿಮೆ ಮುಂದೆ ಉಪವಾಸ ಕುಳಿತ ಮಣ್ಣಿನ ಮಗನ(ದೇವೇಗೌಡರ) ಖದರಿಗೆ ಕೇಂದ್ರ ಸರ್ಕಾರ ನಡುಗಿತ್ತು. ದೆಹಲಿಯಿಂದ ಮಂತ್ರಿಗಳು ಓಡಿ ಬಂದಿದ್ದರು. ನೀರಾವರಿ ವಿಚಾರದಲ್ಲಿ ಎಚ್‌. ಡಿ. ದೇವೇಗೌಡರ ಕೊಡುಗೆಗೆ ಸಂಬಂಧಿಸಿದಂತೆ ಸತ್ಯ ಹೇಳಲು ಕಾಂಗ್ರೆಸ್ ಹಿಂಜರಿಯುತ್ತಿದೆ ಎಂದು ದೂರಿದ್ದಾರೆ.

ಪಾಪ ತೊಳೆಯುವ ತಾಯಿ 'ಲೋಕಪಾವನಿ' ಈಗ ಮತ ಗಳಿಕೆಗೆ ದಾಳವಾಗುತ್ತಿರುವುದು ನಾಡಿನ ದುರ್ದೈವ. ನೀರಿನ ಮುಂದೆ 'ಕಪಟ ನಾಟಕ' ಮಾಡುವ ಸಿದ್ದಹಸ್ತ, 'ಡಿಸೈನ್' ಶೂರರಿಗೆ ಮುಂದೆ ಶಾಸ್ತಿ ಕಾದಿದೆ. ಭೂತಾಯಿ ಒಡಲಿನ ಮಣ್ಣು ಬಗೆದ, ಕಲ್ಲುಬಂಡೆಗಳನ್ನೇ ನುಂಗಿದ 'ರಕ್ಕಸ ರಾಜಕಾರಣ'ದ ಕಾಕದೃಷ್ಟಿ ಈಗ ತಾಯಿ ಕಾವೇರಿ ಮೇಲೂ ಬಿದ್ದಿದೆ ಎಂದು ಕಿಡಿ ಕಾರಿದ್ದಾರೆ.

ನನ್ನ ವಿರುದ್ಧ ಬಿಜೆಪಿ– ಜೆಡಿಎಸ್ ಷಡ್ಯಂತ್ರ: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನನ್ನ ವಿರುದ್ಧ ಬಿಜೆಪಿ, ಜೆಡಿಎಸ್ ಷಡ್ಯಂತ್ರ ನಡೆಸುತ್ತಿವೆ. ಅದು ನನಗೆ ಗೊತ್ತಿದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ನೀಡಿರುವ ಹೇಳಿಕೆ, ರಾಜ್ಯ ರಾಜಕೀಯದಲ್ಲಿ ಚರ್ಚೆಗೆ ಕಾರಣವಾಗಿದೆ.



ಡಿ.ಕೆ. ಶಿವಕುಮಾರ್

ಇತ್ತೀಚೆಗೆ ದೆಹಲಿಗೆ ತೆರಳಿದ್ದ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ, ಬಿಜೆಪಿಯ ಹಲವು ನಾಯಕರನ್ನು ಭೇಟಿ ಮಾಡಿದ್ದರು ಎಂಬ ವದಂತಿಗಳು ಹರಿದಾಡುತ್ತಿವೆ. ಈ ಬಗ್ಗೆ ಸುಳಿವು ಸಿಕ್ಕಿದ್ದರಿಂದಲೇ ಶಿವಕುಮಾರ್ ಈ ಹೇಳಿಕೆ ನೀಡಿದ್ದಾರೆ ಎನ್ನಲಾಗಿದೆ.

ಕಾಂಗ್ರೆಸ್ ಪಾದಯಾತ್ರೆ ಟೀಕಿಸುತ್ತಿರುವ ಕುಮಾರಸ್ವಾಮಿ ವಿರುದ್ಧ ವಾಗ್ದಾಳಿ ನಡೆಸಿರುವ ಶಿವಕುಮಾರ್, 'ಮೇಕೆದಾಟು ಯೋಜನೆಗಾಗಿ ನಮ್ಮದು ಪಕ್ಷಾತೀತ ಹೋರಾಟ. ಜೆಡಿಎಸ್‌ನವರು, ಬಿಜೆಪಿಯವರು, ಸಂಘಸಂಸ್ಥೆಗಳು, ಸಿನಿಮಾ ಕ್ಷೇತ್ರದವರು, ಮಠಾಧೀಶರುಗಳಿಗೂ ಭಾಗವಹಿಸುವಂತೆ ಮನವಿ ಮಾಡಿದ್ದೇನೆ' ಎಂದು ಹೇಳಿದರು.

'ರಾಜಕಾರಣ, ಪವಿತ್ರ ಕಾವೇರಿ ಯಾರ ಸ್ವತ್ತೂ ಅಲ್ಲ. ಇಡೀ ರಾಜ್ಯದ ಜನರ ಆಸ್ತಿ. ಮೇಕೆದಾಟು ಯೋಜನೆ ನನಗಾಗಿ ಅಲ್ಲ, ಜನರಿಗಾಗಿ. ಕುಮಾರಸ್ವಾಮಿ ಏನೇ ಹೇಳಿದರೂ ನಮ್ರತೆಯಿಂದ ಸ್ವೀಕರಿಸುತ್ತೇನೆ' ಎಂದು ಪ್ರತಿಕ್ರಿಯಿಸಿದರು.

'ಹಳೇ ಮೈಸೂರು ಭಾಗದಲ್ಲಿ ಶಿವಕುಮಾರ್ ಬೆಳೆಯುತ್ತಿರುವುದರಿಂದ ದೇವೇಗೌಡರ ಕುಟುಂಬ ವಿಚಲಿತವಾಗಿದೆಯೇ?' ಎಂಬ ಪ್ರಶ್ನೆಗೆ ಉತ್ತರಿಸಿದ ಶಿವಕುಮಾರ್, 'ಅವರ ಜತೆ ಸ್ಪರ್ಧಿಸುವಷ್ಟು ಶಕ್ತಿ ನನಗಿಲ್ಲ' ಎಂದರು.

ಪಕ್ಷದ ಅಧ್ಯಕ್ಷರಾಗಿ ಜಾರಿಕೆ ಉತ್ತರ ನೀಡಬಾರದು ಎಂಬ ಮಾಧ್ಯಮದವರ ಪ್ರಶ್ನೆಗೆ, 'ಯಾವ ವಯಸ್ಸಿನಲ್ಲಿ ಎಲ್ಲೆಲ್ಲಿ ಕುಸ್ತಿ, ಜಗಳ ಮಾಡಬೇಕೋ ಮಾಡಿದ್ದೇನೆ. ಕೂದಲು ಬೆಳ್ಳಗಾಗಿವೆ. ಅವರಿಗೆ ಶಕ್ತಿ ಇರಬಹುದು, ನಮಗೆ ಇಲ್ಲ. ಅವರ ಮಾತಿಗೆ ಜನ ಉತ್ತರ ನೀಡುತ್ತಾರೆ. ನನ್ನ ಮೇಲೆ ಏನೆಲ್ಲಾ ಪ್ರಯೋಗ ಆಗಬೇಕೋ ಅವೆಲ್ಲ ಆಗಿವೆ. ಎರಡೂ ಪಕ್ಷದಿಂದ ನನ್ನ ವಿರುದ್ಧ ದೊಡ್ಡ ಮಟ್ಟದಲ್ಲಿ ಷಡ್ಯಂತ್ರ ನಡೆಯುತ್ತಿದೆ' ಎಂದರು.

'ಮೇಕೆದಾಟು ಹೋರಾಟ ಮಾಡಿಯೇ ಮಾಡುತ್ತೇವೆ. ನಾನು, ಶಾಸಕಾಂಗ ಪಕ್ಷದ ನಾಯಕರು, ಶಾಸಕರು, ಮುಖಂಡರು ಸೇರಿ ಈ ಬಗ್ಗೆ ತೀರ್ಮಾನಿಸಿದ್ದೇವೆ' ಎಂದ ಅವರು, 'ಕುಮಾರಸ್ವಾಮಿ ಹಿರಿಯರು, ಬುದ್ಧಿವಂತರು. ಅವರಿಗೆ ರಾಜಕಾರಣದಲ್ಲಿ ಬಹಳ ಅನುಭವವಿದೆ. ಅವರಿಗೆ ಹೋರಾಟದ ಕುಟುಂಬದ ಹಿನ್ನೆಲೆಯಿದೆ. ಅವರು ಸಿನಿಮಾ ನಿರ್ದೇಶಕರು, ನಿರ್ಮಾಪಕರು. ಅವರಿಗೆ ಯಾವ ಸಮಯದಲ್ಲಿ ಏನು ಹೇಳಬೇಕು ಅನ್ನೋದು ಗೊತ್ತಿದೆ' ಎಂದು ಹೇಳಿದರು.


'ಕುಮಾರಸ್ವಾಮಿಗೆ ಏಕೆ ಹೊಟ್ಟೆ ಉರಿ?'



'ಪಾದಯಾತ್ರೆಯನ್ನು ಕಾಂಗ್ರೆಸ್ ಪಕ್ಷ ಹೈಜಾಕ್ ಮಾಡಿದೆ' ಎಂಬ ಕುಮಾರಸ್ವಾಮಿ ಹೇಳಿಕೆಗೆ ತಿರುಗೇಟು ನೀಡಿದ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, 'ನಾನು ಮುಖ್ಯಮಂತ್ರಿಯಾಗಿದ್ದಾಗ ಮೇಕೆದಾಟು ಯೋಜನೆಯ ಡಿಪಿಆರ್ ಸಿದ್ಧಪಡಿಸಿದ್ದೆ. ಹೈಜಾಕ್ ಮಾಡಲು ಕುಮಾರಸ್ವಾಮಿ, ಮೇಕೆದಾಟು ಯೋಜನೆ ಮಾಡಿದ್ದರಾ?' ಎಂದು ಕಿಡಿಕಾರಿದರು.

'ಮೇಕೆದಾಟು ಯೋಜನೆ ಅನುಷ್ಠಾನಗೊಳಿಸಲು ನಾವೀಗ ಪಾದಯಾತ್ರೆ ಮಾಡುತ್ತಿದ್ದೇವೆ. ಇದರಿಂದ ಕುಮಾರಸ್ವಾಮಿಗೆ ಏಕೆ ಹೊಟ್ಟೆಯುರಿ' ಎಂದು ಪ್ರಶ್ನಿಸಿದ ಅವರು, 'ಪಾದಯಾತ್ರೆ ಹೈಜಾಕ್ ಎಂದರೆ ಏನರ್ಥ. ಅದೇನು ಸರ್ಕಾರಿ ಕಾರ್ಯಕ್ರಮವಾ ಹೈಜಾಕ್ ಮಾಡಲು' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮೇಕೆದಾಟು ಪಾದಯಾತ್ರೆಯಿಂದ ಹೊಟ್ಟೆ ಉರಿ ಇಲ್ಲ: ಎಚ್‌ಡಿಡಿ



ಹಾಸನ: 'ಮೇಕೆದಾಟು ಯೋಜನೆ ಜಾರಿಗಾಗಿ ಕಾಂಗ್ರೆಸ್ ಹಮ್ಮಿಕೊಂಡಿರುವ ಪಾದಯಾತ್ರೆಯಿಂದ ಸಮಸ್ಯೆ ಬಗೆಹರಿಯುವುದಾದರೆ ಒಳ್ಳೆಯದು. ಆ ಬಗ್ಗೆ ನನಗೆ ಹೊಟ್ಟೆ ಉರಿ ಇಲ್ಲ' ಎಂದು ರಾಜ್ಯಸಭಾ ಸದಸ್ಯ ಎಚ್‌.ಡಿ.ದೇವೇಗೌಡ ಹೇಳಿದರು.

ಹೊಳೆನರಸೀಪುರ ತಾಲ್ಲೂಕಿನ ಹರದನಹಳ್ಳಿಯಲ್ಲಿ ಬುಧವಾರ ಕುಟುಂಬ ಸಮೇತ ಮನೆ ದೇವರಿಗೆ ಪೂಜೆ ಸಲ್ಲಿಸಿ ಬಳಿಕ ಮಾತನಾಡಿದ ಅವರು, 'ಕುಮಾರಸ್ವಾಮಿ ಸರ್ಕಾರದಲ್ಲಿ ಡಿ.ಕೆ.ಶಿವಕುಮಾರ್ ಅವರೇ ನೀರಾವರಿ ಸಚಿವರಾಗಿದ್ದರು. ಆಗ ಮಾಡಿದ್ದರೆ ಬಹುಶಃ ನಮಗೇನಾದ್ರೂ ಕೀರ್ತಿ ಬರುತ್ತೆ ಅಂತಾ ಈ ಬಗ್ಗೆ ಯೋಚನೆ ಮಾಡಲಿಲ್ಲವೇ? ನಾನೂ ಹಲವು ಪಾದಯಾತ್ರೆ ಮಾಡಿದ್ದೇನೆ. ರಾಜ್ಯದಲ್ಲಿ ಕೃಷ್ಣಾ, ಮಹಾದಾಯಿ ಇಲ್ಲವೇ? ಕೇವಲ ಮೇಕೆದಾಟು ವಿಚಾರವೇ ಕಾಂಗ್ರೆಸ್‌ಗೆ ಯಾಕೆ ಮುಖ್ಯ' ಎಂದು ಪ್ರಶ್ನಿಸಿದರು.

'ರಾಜ್ಯದಲ್ಲಿ ಮತಾಂತರ ನಿಷೇಧ ಕಾಯಿದೆ ಯಾರಿಗೆ ಬೇಕು? ನಾನು ಮುಖ್ಯಮಂತ್ರಿ, ಪ್ರಧಾನಿಯಾಗಿದ್ದೆ. ನನ್ನ ಕಾಲದಲ್ಲಿ ಮತಾಂತರ ಆಗುವ ಒಂದು ಘಟನೆ ನಡೀತಾ? ನನ್ನ ಆಡಳಿತದಲ್ಲಿ ಹಿಂದೂಸ್ತಾನ ಮತ್ತು ಕರ್ನಾಟದಲ್ಲಿ ಮತಾಂತರ ಆಗಿದಿಯಾ? ಈಗ ಯಾಕೆ ಶುರುವಾಯ್ತು. ಅಧಿಕಾರ ನಡೆಸುವವರು ಎಲ್ಲರನ್ನು ವಿಶ್ವಾಸಕ್ಕೆ ಪಡೆದು ಆಡಳಿತ ನಡೆಸಬೇಕು' ಎಂದು ಸಲಹೆ ನೀಡಿದರು.

ನಗರದಲ್ಲಿ ಇಂದು

ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕನ್ನಡಿಗ ಸಾಹಿತಿಗಳ ವಿಶೇಷ ಅಂಚೆ ಲಕೋಟೆ ಬಿಡುಗಡೆ: ಮುಖ್ಯ ಅತಿಥಿ– ಸಚಿವ ವಿ. ಸುನೀಲ್ ಕುಮಾರ್, ಗೌರವ ಅತಿಥಿಗಳು– ಎಲ್.ಕೆ. ದಾಸ್, ಎನ್. ಮಂಜುಳಾ, ಎಸ್. ರಂಗಪ್ಪ, ಉಪಸ್ಥಿತಿ– ಶಾರದಾ ಸಂಪತ್, ಆಯೋಜನೆ– ಅಂಚೆ ಇಲಾಖೆ, ಸ್ಥಳ– ಮೇಘದೂತ ಸಭಾಂಗಣ, ಪ್ರಧಾನ ಅಂಚೆ ಕಚೇರಿ, ಬೆಳಿಗ್ಗೆ 9.30

'ಸಕಾಲಮಿತ್ರ' ಕಾರ್ಯಕ್ರಮದ ಉದ್ಘಾಟನೆ: ಸಚಿವ ಬಿ.ಸಿ. ನಾಗೇಶ್, ವಿಶೇಷ ಆಹ್ವಾನಿತರು– ಶಾಸಕರಾದ ಆರ್. ಮಂಜುನಾಥ್, ಎಸ್. ಆರ್. ವಿಶ್ವನಾಥ್, ಆಯೋಜನೆ: ಆಚಾರ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಸಕಾಲ ಮಿಷನ್, ಸ್ಥಳ– ಆಚಾರ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಆಚಾರ್ಯ ಡಾ.ಸರ್ವಪಲ್ಲಿ ರಾಧಾಕೃಷ್ಣ ರಸ್ತೆ, ಸೋಲುದೇವನಹಳ್ಳಿ, ಬೆಳಿಗ್ಗೆ 10

ಕುವೆಂಪು ಜನ್ಮದಿನಾಚರಣೆ: ಉದ್ಘಾಟನೆ: ಪಿ. ಶಿವಕುಮಾರ್, ಆಯೋಜನೆ– ಜಾಗೃತಿ ಟ್ರಸ್ಟ್, ಸ್ಥಳ– ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಸಂಜಪ್ಪ ವೃತ್ತ, ಶಾಂತಿನಗರ, ಬೆಳಿಗ್ಗೆ 10

2020ನೇ ಸಾಲಿನ ವಿವಿಧ ವಾರ್ಷಿಕ ಪ್ರಶಸ್ತಿ ಹಾಗೂ ಬಹುಮಾನ ಪ್ರದಾನ: ಉದ್ಘಾಟನೆ ಹಾಗೂ ಪ್ರಶಸ್ತಿ ಪ್ರದಾನ– ಸಚಿವ ವಿ. ಸುನೀಲ್ ಕುಮಾರ್, ಪುಸ್ತಕಗಳ ಬಿಡುಗಡೆ– ಮಲ್ಲೇಪುರಂ ಜಿ. ವೆಂಕಟೇಶ್, ಉಪಸ್ಥಿತಿ– ಎನ್. ಮಂಜುಳಾ, ಎಸ್. ರಂಗಪ್ಪ, ಅಧ್ಯಕ್ಷತೆ– ನಂದೀಶ್ ಹಂಚೆ, 'ಅತ್ಯುತ್ತಮ ಪ್ರಕಾಶನ ಪ್ರಶಸ್ತಿ'– ಹುಬ್ಬಳ್ಳಿಯ ಸಾಹಿತ್ಯ ಪ್ರಕಾಶನ, 'ಡಾ.ಎಂ.ಎಂ. ಕಲಬುರ್ಗಿ ಮಾನವಿಕ ಅಧ್ಯಯನ ಪ್ರಶಸ್ತಿ'– ಡಾ.ಟಿ. ವಿ. ವೆಂಕಟಾಚಲ ಶಾಸ್ತ್ರಿ, 'ಡಾ.ಜಿ.ಪಿ. ರಾಜರತ್ನಂ ಸಾಹಿತ್ಯ ಪರಿಚಾರಕ ಪ್ರಶಸ್ತಿ'– ಸೈಯದ್ ಇಸಾಕ್, ಆಯೋಜನೆ– ಕನ್ನಡ ಪುಸ್ತಕ ಪ್ರಾಧಿಕಾರ, ಸ್ಥಳ– ನಯನ ಸಭಾಂಗಣ, ಜೆ.ಸಿ. ರಸ್ತೆ, ಬೆಳಿಗ್ಗೆ 11



ವೆಂಕಟಾಚಲಶಾಸ್ತ್ರಿ

ಅಮರ ಮನ್ನಿ ನಾಟಕದ ಸಾಕ್ಷ್ಯಚಿತ್ರರೂಪ ಬಿಡುಗಡೆ: ಕಾರ್ಯಕ್ರಮ ಉದ್ಘಾಟನೆ– ಎಂ.ಎನ್. ವೆಂಕಟಾಚಲಯ್ಯ, ಮುಖ್ಯ ಅತಿಥಿ– ದಿಲೀಪ್ ಸುರಾನ, ಅಧ್ಯಕ್ಷತೆ– ಕೆ.ಜಿ. ರಾಘವನ್, ಆಯೋಜನೆ– ಭಾರತೀಯ ವಿದ್ಯಾಭವನ, ಬೆಳಿಗ್ಗೆ 11 (ಆನ್‌ಲೈನ್ ಕಾರ್ಯಕ್ರಮ)

ಸಾವಿತ್ರಿಬಾಯಿ ಫುಲೆ ಉನ್ನತಿ ಶಿಷ್ಯವೇತನ ಮತ್ತು ಯುವ ಘಟಕಕ್ಕೆ ಚಾಲನೆ: ಮುಖ್ಯ ಅತಿಥಿಗಳು– ಜಮೀರ್ ಅಹ್ಮದ್ ಖಾನ್, ಆಯೋಜನೆ– ರೇನ್‌ಬೋ ಹೋಮ್ಸ್, ಸ್ಥಳ– ಆಶೀರ್ವಾದ್, 30, ಸೇಂಟ್ ಮಾರ್ಕ್ಸ್ ರಸ್ತೆ, ಬೆಳಿಗ್ಗೆ 11

ರಂಗ ಪ್ರವೇಶ: ಶಿವಾನಿ, ಗುರು– ಸಂಜಯ್ ಶಾಂತಾರಾಮ್, ಆಯೋಜನೆ– ಶಿವಪ್ರಿಯಾ ನೃತ್ಯ ಶಾಲೆ, ಸ್ಥಳ: ಚೌಡಯ್ಯ ಸ್ಮಾರಕ ಭವನ, ವೈಯಾಲಿಕಾವಲ್, ಸಂಜೆ 5.30



ಶಿವಾನಿ

ಬೆಂಗಳೂರು ನಗರ ಪೊಲೀಸ್ ಕ್ರೀಡಾಕೂಟ ಸಮಾರೋಪ ಸಮಾರಂಭ: ಮುಖ್ಯ ಅತಿಥಿಗಳು– ಸಚಿವ ಆರಗ ಜ್ಞಾನೇಂದ್ರ, ಪ್ರಫುಲ್ಲ ಜ್ಞಾನೇಂದ್ರ, ಉಪಸ್ಥಿತಿ– ಕಮಲ್ ಪಂತ್, ಆಯೋಜನೆ– ಬೆಂಗಳೂರು ನಗರ ಪೊಲೀಸ್, ಸ್ಥಳ– ಎ.ಎಸ್.ಆರ್. ಕವಾಯತು ಮೈದಾನ, ಆಡುಗೋಡಿ, ಸಂಜೆ 4

ವಿಜ್ಞಾನ ಪ್ರತಿಭೆಗಳ ಅನ್ವೇಷಣೆ ಕಾರ್ಯಕ್ರಮ: ಸೈಬರ್ ಸುರಕ್ಷತೆ ಬಗ್ಗೆ ಉಪನ್ಯಾಸ– ಉದಯ ಶಂಕರ್ ಪುರಾಣಿಕ್, ಆಯೋಜನೆ–ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ಸಂಜೆ 4 (ಆನ್‌ಲೈನ್ ಕಾರ್ಯಕ್ರಮ)

ಯುವ ಸೌರಭ: ಅಧ್ಯಕ್ಷತೆ– ವಿ. ಸೋಮಣ್ಣ, ಮುಖ್ಯ ಅತಿಥಿಗಳು– ತೇಜಸ್ವಿಸೂರ್ಯ, ಅ. ದೇವೇಗೌಡ, ಉಪಸ್ಥಿತಿ– ಶೈಲಜಾ ವಿ. ಸೋಮಣ್ಣ, ಆಯೋಜನೆ– ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ವಿ. ಸೋಮಣ್ಣ ಪ್ರತಿಷ್ಠಾನ, ಸ್ಥಳ– ಜ್ಞಾನ ಸೌಧ, 3ನೇ ಮುಖ್ಯ ರಸ್ತೆ, ಕಲ್ಯಾಣ ನಗರ, ಮೂಡಲಪಾಳ್ಯ, ಸಂಜೆ 4.30

ಕನ್ನಡ ರತ್ನ ಜೆ.ಪಿ. ರಾಜರತ್ನಂ ಅವರ ಕುರಿತು ಉಪನ್ಯಾಸ ಕಾರ್ಯಕ್ರಮ: ಉಪನ್ಯಾಸಕರು– ಸುಜಾತಾ ಲಕ್ಷ್ಮೀಪುರ, ಎಂ.ಸಿ. ನರೇಂದ್ರ, ಅಧ್ಯಕ್ಷತೆ– ಜಗದೀಶ ರೆಡ್ಡಿ, ಆಯೋಜನೆ ಹಾಗೂ ಸ್ಥಳ– ಕನ್ನಡ ಯುವಜನ ಸಂಘ, ಹೊಂಬೇಗೌಡನಗರ, ಸಂಜೆ 6.30

ಸುಗಮ ಸುರಕ್ಷಾ ಸಂಚಾರಕ್ಕಾಗಿ ತಂತ್ರಜ್ಞಾನ ಆಧಾರಿತ ಸೌಲಭ್ಯಗಳು, ಸಂಚಾರ ಬೀಟ್ ವ್ಯವಸ್ಥೆ ಹಾಗೂ ಸಂಚಾರ ಪೊಲೀಸರ ಕಾರ್ಯ ನಿರ್ವಹಣೆಗೆ ಮಾರ್ಗಸೂಚಿಗಳ ಲೋಕಾರ್ಪಣೆ: ಬಸವರಾಜ ಬೊಮ್ಮಾಯಿ, ಆಯೋಜನೆ– ಬೆಂಗಳೂರು ಸಂಚಾರ ಪೊಲೀಸ್, ಸ್ಥಳ, ಪುರಭವನ, ಸಂಜೆ 6.30

ರಂಗ ಹಬ್ಬ ನಾಟಕ ಪ್ರದರ್ಶನ: 'ಮುಖ್ಯಮಂತ್ರಿ', ಮುಖ್ಯ ಪಾತ್ರದಲ್ಲಿ– 'ಮುಖ್ಯಮಂತ್ರಿ' ಚಂದ್ರು, ಆಯೋಜನೆ– ಕಲಾ ಗಂಗೋತ್ರಿ, ಸ್ಥಳ: ರಂಗ ಶಂಕರ, ಜೆ.ಪಿ. ನಗರ, ಸಂಜೆ 7.30



'ಮುಖ್ಯಮಂತ್ರಿ' ಚಂದ್ರು



ಆದರ್ಶ ಸುಗಮ ಸಂಗೀತ ಅಕಾಡೆಮಿ ಟ್ರಸ್ಟ್ ಬುಧವಾರ ಆಯೋಜಿಸಿದ್ದ ಕುವೆಂಪು ಮತ್ತು ಸಿ.ಅಶ್ವಥ್ ಜನ್ಮದಿನದ ಕಾರ್ಯಕ್ರಮದಲ್ಲಿ (ಕುಳಿತವರು ಎಡದಿಂದ) ಗಾಯಕ ಶಿರಸಿ ರತ್ನಾಕರ, ಕನ್ನಡ ಮಿತ್ರರು ಸಂಘದ ಅಧ್ಯಕ್ಷ ಆರ್‌.ಎ.ಎಸ್‌ ಪಾಟೀಲ ಮತ್ತು ಕುಂಚ ಕಲಾವಿದ ಭದ್ರಾವತಿ ಗುರು ಅವರಿಗೆ 'ಕನ್ನಡ ನಿತ್ಯೋತ್ಸವ ಪ್ರಶಸ್ತಿ' ಪ್ರದಾನ ಮಾಡಲಾಯಿತು. (ನಿಂತವರು ಎಡದಿಂದ) ಕಟ್ಟೆ ಸತ್ಯನಾರಾಯಣ, ಆದರ್ಶ ಸುಗಮ ಸಂಗೀತ ಅಕಾಡೆಮಿ ಅಧ್ಯಕ್ಷ ಕಿಕ್ಕೇರಿ ಕೃಷ್ಣಮೂರ್ತಿ, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಅಧ್ಯಕ್ಷ ಆನೂರು ಅನಂತಕೃಷ್ಣ ಶರ್ಮ, ಗಾಯಕ ನಗರ ಶ್ರೀನಿವಾಸ ಉಡುಪ, ವಿಧಾನ ಪರಿಷತ್ ಸದಸ್ಯ ಯು.ಬಿ.ವೆಂಕಟೇಶ್, ಧನಲಕ್ಷ್ಮೀ ಚೆಲುವರಾಯಸ್ವಾಮಿ ಮತ್ತು ಗಾಯಕಿ ಅರ್ಚನಾ ಉಡುಪ ಇದ್ದಾರೆ –ಪ್ರಜಾವಾಣಿ ಚಿತ್ರ

ವಿಜ್ಞಾನ ಗ್ರಾಮಕ್ಕೆ 10 ಎಕರೆ ಜಮೀನು ನೀಡಲು ಮನವಿ

ಶಿವಮೊಗ್ಗ: 'ವಿಜ್ಞಾನ ಗ್ರಾಮದ ಕಲ್ಪನೆ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ತಿನ ಬಹುಮುಖ್ಯ ಯೋಜನೆ. ಈಗಾಗಲೇ ಈ ಯೋಜನೆಗೆ ಹಲವರು ಕೈಜೋಡಿಸಿದ್ದಾರೆ. ಸರ್ಕಾರದ ನೆರವಿನ ಅಗತ್ಯವಿದೆ. ಕನಿಷ್ಠ 10 ಎಕರೆ ಜಮೀನನ್ನಾದರೂ ವಿಜ್ಞಾನ ಗ್ರಾಮಕ್ಕೆ ಸರ್ಕಾರ ನೀಡಬೇಕು' ಎಂದು ಪರಿಷತ್ತಿನ ಅಧ್ಯಕ್ಷ ಡಾ.ಹುಲಿಕಲ್ ನಟರಾಜ್ ಮನವಿ ಮಾಡಿದರು.

ಕುವೆಂಪು ರಂಗಮಂದಿರದಲ್ಲಿ ಬುಧವಾರ ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ ಆಯೋಜಿಸಿದ್ದ ರಾಜ್ಯ ಮಟ್ಟದ ಪ್ರಥಮ ವೈಜ್ಞಾನಿಕ ಸಮ್ಮೇಳನದಲ್ಲಿ ಮಾತನಾಡಿದರು.

'ಹಲವು ಕಂಪನಿಗಳು ವಿಜ್ಞಾನ ಗ್ರಾಮಕ್ಕೆ ನೆರವು ನೀಡಲು ಮುಂದಾಗಿವೆ. ಸರ್ಕಾರದ ಸಹಾಯದ ನಿರೀಕ್ಷೆ ಇದೆ. ಈ ಗ್ರಾಮವನ್ನು ಮತ್ತೆ ಸರ್ಕಾರಕ್ಕೆ ನೀಡಲಾಗುವುದು' ಎಂದರು.

'ಪ್ರತಿ ಜಿಲ್ಲಾ ಕೇಂದ್ರದಲ್ಲಿ ಕಾರ್ಮಿಕ ಭವನ'

ಹುಬ್ಬಳ್ಳಿ: 'ರಾಜ್ಯದ ಪ್ರತಿ ಜಿಲ್ಲಾ ಕೇಂದ್ರಗಳಲ್ಲಿ ಕಾರ್ಮಿಕ ಭವನ ನಿರ್ಮಿಸಿ, ಕಾರ್ಮಿಕರಿಗೆ ಅಗತ್ಯವಾದ ಸೌಲಭ್ಯಗಳನ್ನು ಒದಗಿಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಇಲ್ಲಿನ ಕೃಷ್ಣನಗರದಲ್ಲಿ ಕಾರ್ಮಿಕ ಭವನ ಉದ್ಘಾಟಿಸಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಈಗಾಗಲೇ ಎಂಟು ಜಿಲ್ಲೆಗಳಲ್ಲಿ ಕಾರ್ಮಿಕ ಭವನ ನಿರ್ಮಿಸಲಾಗಿದ್ದು, ಹುಬ್ಬಳ್ಳಿಯ ಈ ಭವನ ಒಂಬತ್ತನೇಯದು. ಪ್ರತಿ ಜಿಲ್ಲೆಯಲ್ಲೂ ಭವನ ನಿರ್ಮಿಸಿ, ಒಂದೇ ಕಟ್ಟಡದಲ್ಲಿ ಕಾರ್ಮಿಕರಿಗೆ ಅಗತ್ಯವಿರುವ ಸೇವೆಗಳನ್ನು ಒದಗಿಸಲಾಗುವುದು' ಎಂದರು.

'ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ರೂಪಿಸಿರುವ 'ಸಂಚಾರಿ ಕ್ಲಿನಿಕ್ ಆಂಬುಲೆನ್ಸ್' ಆಧುನಿಕ ವೈದ್ಯಕೀಯ ಪರಿಕರಗಳನ್ನು ಒಳಗೊಂಡಿದೆ. ಪ್ರಥಮ ಚಿಕಿತ್ಸಾ ಸೇವೆಗಳು, ರಕ್ತ ಹಾಗೂ ಮೂತ್ರ ಪರೀಕ್ಷೆ ಪ್ರಯೋಗಾಲಯ ಸೇರಿ ಹಲವು ಪರಿಕರಗಳಿವೆ. ಮುಂದಿನ ಬಜೆಟ್‌ನಲ್ಲಿ ಇವುಗಳಿಗೆ ಹೆಚ್ಚಿನ ಅನುದಾನ ಮೀಸಲಿಡಲಾಗುವುದು' ಎಂದು ಭರವಸೆ ನೀಡಿದರು.

‘ಓಮೈಕ್ರಾನ್ ಪ್ರತಿರೋಧಕ ಶಕ್ತಿ ತಪ್ಪಿಸಲಿದೆ’

ರಾಷ್ಟ್ರೀಯ ಜಿನೋಮ್ ಸೀಕ್ವೆನ್ಸಿಂಗ್ ಸಂಸ್ಥೆ ಹೇಳಿಕೆ



ಮುಂಬೈನ ರೈಲು ನಿಲ್ದಾಣದಲ್ಲಿ ಬುಧವಾರ ಪ್ರಯಾಣಿಕರಿಗೆ ಕೋವಿಡ್ ಪರೀಕ್ಷೆ ನಡೆಯಿತು —ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ‘ಕೋವಿಡ್ ಲಸಿಕೆ ಪಡೆದಿರುವುದರಿಂದ ಮತ್ತು ಈ ಹಿಂದೆ ಕೋವಿಡ್ ತಗುಲಿದ್ದರಿಂದ ಬಂದಿರುವ ಪ್ರತಿರೋಧಕ ಶಕ್ತಿಯನ್ನು ತಪ್ಪಿಸಿ, ಕೋವಿಡ್ ಹರಡುವ ಸಾಮರ್ಥ್ಯ ಓಮೈಕ್ರಾನ್ ರೂಪಾಂತರ ತಳಿಗೆ ಇರುವ ಸಾಧ್ಯತೆ ಅತ್ಯಧಿಕವಾಗಿದೆ ಎಂದು ಈವರೆಗಿನ ದತ್ತಾಂಶಗಳು ಮತ್ತು ವೈಜ್ಞಾನಿಕ ಅಧ್ಯಯನಗಳು ಹೇಳುತ್ತವೆ’ ಎಂದು ಕೇಂದ್ರ ಸರ್ಕಾರದ ವೈರಾಣು ಸಂರಚನೆ ವಿಶ್ಲೇಷಣೆ ಸಂಸ್ಥೆ ಐಎನ್‌ಎಸ್‌ಎಸಿಒಜಿ ಹೇಳಿದೆ.

ದೇಶದಲ್ಲಿ ಕೋವಿಡ್ ಸೇರಿದಂತೆ ವೈರಾಣುಗಳಿಂದ ಬರುವ ರೋಗಗಳ, ವೈರಾಣು ಸಂರಚನೆ ವಿಶ್ಲೇಷಣೆಯನ್ನು ನಡೆಸುವ ಪ್ರಧಾನ ಸಂಸ್ಥೆ ಇದಾಗಿದೆ. ಕೇಂದ್ರ ಸರ್ಕಾರದ ಜೈವಿಕ ವಿಜ್ಞಾನ ಇಲಾಖೆಯ ಅಡಿ ಈ ಸಂಸ್ಥೆ ಕಾರ್ಯನಿರ್ವಹಿಸುತ್ತದೆ. ಈಗ ದೇಶದಾದ್ಯಂತ ಓಮೈಕ್ರಾನ್ ಪ್ರಕರಣಗಳ ಪತ್ತೆಗೆ ನಡೆಸುತ್ತಿರುವ ವೈರಾಣು ಸಂರಚನೆ ವಿಶ್ಲೇಷಣೆ (ಜಿನೋಮ್ ಸೀಕ್ವೆನ್ಸಿಂಗ್) ಪರೀಕ್ಷೆಗಳನ್ನು ಈ ಸಂಸ್ಥೆಯ ಮಾರ್ಗ ಸೂಚಿಯ ಅಡಿಯಲ್ಲಿಯೇ ನಡೆಸಲಾಗುತ್ತಿದೆ.

‘ಡೆಲ್ಟಾರೂಪಾಂತರತಳಿಯುಅತ್ಯಂತ ಕಳವಳಕಾರಿತಳಿಯಾಗಿದ್ದರೂ,ಆಫ್ರಿಕಾದ ದಕ್ಷಿಣ ದೇಶಗಳು, ಯೂರೋಪ್‌ನ ದೇಶಗಳು ಮತ್ತು ಅಮೆರಿಕದಲ್ಲಿ ಓಮೈಕ್ರಾನ್ ವ್ಯಾಪಕವಾಗಿ ಹರಡಿದೆ. ಈ ದೇಶಗಳಲ್ಲಿ ಓಮೈಕ್ರಾನ್ ತಳಿಯೇ, ಪ್ರಧಾನ ತಳಿಯಾಗಿದೆ. ಲಸಿಕೆಯಿಂದ ಬಂದಿರುವ ಪ್ರತಿರೋಧಕ ಶಕ್ತಿಯನ್ನು ತಪ್ಪಿಸುವ ಸಾಮರ್ಥ್ಯ ಓಮೈಕ್ರಾನ್ ತಳಿಗೆ ಇದೆ ಎಂಬುದನ್ನು ಪ್ರಾಯೋಗಿಕ ಅಧ್ಯಯನಗಳಲ್ಲಿ ಪತ್ತೆಯಾಗಿದೆ. ಈ ಕಾರಣದಿಂದಲೇ ಡೆಲ್ಟಾವನ್ನು ಮೀರಿ, ತೀವ್ರವಾಗುವ ಸಾಮರ್ಥ್ಯ ಈ ತಳಿಗೆ ಇರುವ ಸಾಧ್ಯತೆ ಇದೆ’ ಎಂದು ಐಎನ್‌ಎಸ್‌ಎಸಿಒಜಿ ತನ್ನ ದಿನದ ಪ್ರಕಟಣೆಯಲ್ಲಿ ವಿವರಿಸಿದೆ.


ಕಡಿಮೆ ತೀವ್ರತೆಗೆ ಕಾರಣ ಅಸ್ಪಷ್ಟ: ‘ಓಮೈಕ್ರಾನ್‌ನಿಂದ ಕೋವಿಡ್ ತಗುಲಿದಾಗ ಉಂಟಾಗುವ ರೋಗದ ಲಕ್ಷಣಗಳ ತೀವ್ರತೆಯು, ಆರಂಭದ ದಿನಗಳಲ್ಲಿ ಅಂದಾಜಿಸಿದ್ದಕ್ಕಿಂತ ಕಡಿಮೆ ಇದೆ. ಈಗ ಹೆಚ್ಚಿನ ಸಂಖ್ಯೆಯಲ್ಲಿ ಪ್ರಕರಣಗಳು ಪತ್ತೆಯಾಗುತ್ತಿದ್ದರೂ, ಕೋವಿಡ್‌ನ ಈ ಹಿಂದಿನ ಅಲೆಗಳಲ್ಲಿ ಇದ್ದಷ್ಟು ರೋಗ ತೀವ್ರತೆ ಈಗ ಇಲ್ಲ’ ಎಂದು ಐಎನ್‌ಎಸ್‌ಎಸಿಒಜಿ ಹೇಳಿದೆ.

‘ಓಮೈಕ್ರಾನ್‌ನಿಂದ ಬರುತ್ತಿರುವ ಕೋವಿಡ್‌ನ ತೀವ್ರತೆ ಕಡಿಮೆ ಇರುವುದು ಏಕೆ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಈ ಹಿಂದೆ ಕೋವಿಡ್ ಬಂದಿದ್ದರಿಂದ ಮತ್ತು ಲಸಿಕೆಯಿಂದ ಉಂಟಾಗಿರುವ ಪ್ರತಿರೋಧಕ ಶಕ್ತಿಯ ಕಾರಣದಿಂದ ರೋಗದ ತೀವ್ರತೆ ಕಡಿಮೆ ಇರುವ ಸಾಧ್ಯತೆ ಇದೆ. ಅಲ್ಲದೆ, ರೋಗದ ತೀವ್ರತೆಯನ್ನು ಹೆಚ್ಚಿಸುವ ಸಾಮರ್ಥ್ಯ ಈ ತಳಿಗೆ ಇಲ್ಲದೇ ಇರುವ ಸಾಧ್ಯತೆಯೂ ಇದೆ. ಈ ಬಗ್ಗೆ ನಡೆಯುತ್ತಿರುವ ಅಧ್ಯಯನಗಳು ಇನ್ನೂ ಪೂರ್ಣಗೊಂಡಿಲ್ಲ. ಈ ಹಿಂದೆ ಕೋವಿಡ್ ಬರದೇ ಇದ್ದವರಲ್ಲಿ, ಲಸಿಕೆ ಹಾಕಿಸಿಕೊಳ್ಳದೇ ಇರುವವರಲ್ಲಿ ಮತ್ತು ಲಸಿಕೆಯ ಎರಡೂ ಡೋಸ್ ಹಾಕಿಸಿಕೊಳ್ಳದೇ ಇರುವವರಲ್ಲಿ ಓಮೈಕ್ರಾನ್‌ನಿಂದ ಕೋವಿಡ್ ಬಂದರೆ, ಅದರ ತೀವ್ರತೆ ಕಡಿಮೆ ಇರುತ್ತದೆ ಎಂದು ಹೇಳಲಾಗದು. ಹೀಗಾಗಿ ಓಮೈಕ್ರಾನ್‌ನ ಅಪಾಯದ ಮಟ್ಟ ಅತ್ಯಧಿಕವಾಗಿಯೇ ಇದೆ ಎಂದು ಹೇಳಬಹುದು’ ಎಂದು ವಿವರಿಸಿದೆ.

ಕೋವಿಡ್ ನಿಯಂತ್ರಣಕ್ಕೆ ಬಿಬಿಎಂಪಿ– ಪೊಲೀಸ್ ಇಲಾಖೆ ಜಂಟಿ ಕ್ರಮ

ರಾತ್ರಿ ಕರ್ಫ್ಯೂ ಕಟ್ಟುನಿಟ್ಟಿನ ಜಾರಿ

ಪ್ರಜಾವಾಣಿ ವಾರ್ತೆ



ರಾತ್ರಿ ಕರ್ಫ್ಯೂ ವೇಳೆ ಬುಧವಾರ ವಿಧಾನಸೌಧ ಮುಂಭಾಗದ ರಸ್ತೆಯಲ್ಲಿ ಕಂಡುಬಂದಿದ್ದು ಹೀಗೆ —ಪ್ರಜಾವಾಣಿ ಚಿತ್ರ

ಬೆಂಗಳೂರು: ‘ನಗರದಲ್ಲಿ ಕೋವಿಡ್ ನಿಯಂತ್ರಣಕ್ಕೆ ರಾಜ್ಯ ಸರ್ಕಾರ ಹೊರಡಿಸಿರುವ ನಿರ್ಬಂಧಗಳ ಕಟ್ಟುನಿಟ್ಟಿನ ಜಾರಿಗೆ ಬಿಬಿಎಂಪಿ ಹಾಗೂ ಪೊಲೀಸ್ ಇಲಾಖೆ ಜಂಟಿಯಾಗಿ ಕಾರ್ಯಾಚರಣೆ ನಡೆಸಬೇಕು. ಕೋವಿಡ್ ರೂಪಾಂತರಿ ವೈರಾಣು ಓಮೈಕ್ರಾನ್ ಹರಡುವಿಕೆ ನಿಯಂತ್ರಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಓಮೈಕ್ರಾನ್ ಸೋಂಕು ನಿಯಂತ್ರಿಸುವ ಸಂಬಂಧ ಬುಧವಾರ ಏರ್ಪಡಿಸಿದ್ದ ಬಿಬಿಎಂಪಿ ಹಾಗೂ ಪೊಲೀಸ್ ಇಲಾಖೆಯ ಅಧಿಕಾರಿಗಳ ಜಂಟಿ ಸಭೆಯಲ್ಲಿ ಅವರು ಮಾತನಾಡಿದರು.

‘ಬಿಬಿಎಂಪಿ ವ್ಯಾಪ್ತಿಯಲ್ಲಿ ಮೂರು ದಿನಗಳಿಂದ ಸರಾಸರಿ 250 ಕೋವಿಡ್ ಪ್ರಕರಣಗಳು ಕಂಡುಬರುತ್ತಿದೆ. ಇದನ್ನು ನಿಯಂತ್ರಿಸಬೇಕಾದರೆ ಕೋವಿಡ್ ನಿರ್ಬಂಧಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲೇಬೇಕಾಗಿದೆ. ರೆಸ್ಟೋರೆಂಟ್, ಕ್ಲಬ್, ಪಬ್‌ಗಳಲ್ಲಿ ಶೇ 50ಕ್ಕಿಂತ ಹೆಚ್ಚು ಆಸನಗಳ ಭರ್ತಿಗೆ ಅವಕಾಶ ನೀಡಬಾರದು. ಇವುಗಳಿಗೆ ಭೇಟಿ ನೀಡುವ ಸಾರ್ವಜನಿಕರು ಲಸಿಕೆಯ ಎರಡೂ ಡೋಸ್ ಪಡೆದಿದ್ದರೆ ಮಾತ್ರ ಪ್ರವೇಶಕ್ಕೆ ಅನುಮತಿ ನೀಡಬೇಕು. ಇಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಯನ್ನು ಆಗಾಗ ಕಡ್ಡಾಯವಾಗಿ ಆರ್‌ಟಿಪಿಸಿಆರ್ ಪರೀಕ್ಷೆಗೆ ಒಳಪಡಿಸಬೇಕು. ಅವರು ಸೋಂಕು ಹೊಂದಿಲ್ಲದಿದ್ದರೆ ಹಾಗೂ ಕೋವಿಡ್ ಲಸಿಕೆಯ ಎರಡೂ ಡೋಸ್ ಪಡೆದಿದ್ದರೆ ಮಾತ್ರ ಕರ್ತವ್ಯ ನಿರ್ವಹಿಸಲು ಅವಕಾಶ ನೀಡಬೇಕು’ ಎಂದು ಹೇಳಿದರು.

‘ಮಾರುಕಟ್ಟೆ, ಪಿ.ಜಿ (ಪೇಯಿಂಗ್ ಗೆಸ್ಟ್), ಹಾಸ್ಟೆಲ್, ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳ ಜೊತೆ ಸಂಬಂಧಪಟ್ಟ ಅಧಿಕಾರಿಗಳು ಸಭೆ ನಡೆಸಬೇಕು. ಕೋವಿಡ್ ನಿಯಮ ಉಲ್ಲಂಘಿಸದಂತೆ ಎಚ್ಚರಿಕೆ ವಹಿಸಬೇಕು. ಹೊಸ ವರ್ಷಾಚರಣೆಯ ಸಂದರ್ಭದಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಕೋವಿಡ್ ನಿಯಂತ್ರಣ ನಿಯಮ ಪಾಲನೆಯಾಗುವಂತೆ ನೋಡಿಕೊಳ್ಳಲು ಬಿಬಿಎಂಪಿ ಹಾಗೂ ಪೊಲೀಸ್ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಬೇಕು’ ಎಂದು ಸೂಚನೆ ನೀಡಿದರು.

ಬಿಬಿಎಂಪಿಯ ಆಡಳಿತಾಧಿಕಾರಿ ರಾಕೇಶ್ ಸಿಂಗ್, ‘ರಾತ್ರಿ 10ರ ನಂತರ ಹೊಸ ವರ್ಷಾರಣೆಯ ಸಂಭ್ರಮ, ಸಭೆ ಸಮಾರಂಭ ಮಾಡುವುದು ಕಂಡು ಬಂದಲ್ಲಿ ಅಂತಹವರ ಮೇಲೆ ಕಾನೂನು ರೀತಿಯ ಕ್ರಮ ಕೈಗೊಳ್ಳಬೇಕು’ ಎಂದು ಸೂಚಿಸಿದರು.

ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್, ‘ನಗರದಲ್ಲಿ ರಾತ್ರಿ ಕರ್ಫ್ಯೂವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲಾಗುತ್ತಿದೆ. ಸಾರ್ವಜನಿಕ ಸ್ಥಳದಲ್ಲಿ ಯಾವುದೇ ಅಹಿತರ ಘಟನೆ ನಡೆಯದಂತೆ ನೋಡಿಕೊಳ್ಳುವ ಜವಾಬ್ದಾರಿಯೂ ಅಧಿಕಾರಿಗಳ ಮೇಲಿದೆ’ ಎಂದರು

ಬಿಬಿಎಂಪಿ ವಿಶೇಷ ಆಯುಕ್ತ(ಆರೋಗ್ಯ) ಡಾ. ತ್ರಿಲೋಕ್ ಚಂದ್ರ, ಹೆಚ್ಚುವರಿ ಪೊಲೀಸ್ ಕಮಿಷನರ್‌ಗಳಾದ ಮುರುಗನ್, ಸೌಮ್ಯೇಂದು ಮುಖರ್ಜಿ, ಎಲ್ಲಾ ವಲಯ ಜಂಟಿ ಕಮಿಷನರ್‌ಗಳು, ಡಿಸಿಪಿಗಳು, ಬಿಬಿಎಂಪಿಯ ವಲಯ ಆಯುಕ್ತರು, ಮುಖ್ಯ ಆರೋಗ್ಯಾಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದರು.

ವಿದೇಶದಿಂದ ಬಂದ 20 ಮಂದಿಗೆ ಸೋಂಕು


ಪ್ರಜಾವಾಣಿ ವಾರ್ತೆ


ದೇವನಹಳ್ಳಿ: ಇಲ್ಲಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬುಧವಾರ ಮುಂಜಾನೆ ಹೈರಿಸ್ಕ್ ದೇಶಗಳಿಂದ ಬಂದಿರುವ ಪ್ರಯಾಣಿಕರ ಪೈಕಿ 20 ಮಂದಿಗೆ ಕೋವಿಡ್ ಸೋಂಕು ದೃಢಪಟ್ಟಿದೆ.

ಪ್ಯಾರಿಸ್‌ನಿಂದ ಬಂದಿರುವ 7, ಇಂಗ್ಲೆಂಡ್ ಮತ್ತು ಫ್ರಾಂಕ್‌ಫರ್ಟ್‌ನಿಂದ ಬಂದಿರುವ ತಲಾ ಐವರು, ಕುವೈತ್, ಅರಬ್ ಎಮಿರೇಟ್ಸ್, ಇಥಿಯೋಪಿಯಾದಿಂದ ಬಂದಿರುವ ತಲಾ ಒಬ್ಬರಿಗೆ ಸೋಂಕು ದೃಢಪಟ್ಟಿದೆ ಎಂದು ಜಿಲ್ಲಾಧಿಕಾರಿ ಕೆ. ಶ್ರೀನಿವಾಸ್ ತಿಳಿಸಿದ್ದಾರೆ.

ಹೈರಿಸ್ಕ್ ದೇಶಗಳಿಂದ ಬರುತ್ತಿರುವ ಪ್ರಯಾಣಿಕರಲ್ಲಿ ಸೋಂಕು ಹೆಚ್ಚಾಗಿ ಕಂಡು ಬರುತ್ತಿರುವ ಕಾರಣ ವಿಮಾನ ನಿಲ್ದಾಣದಲ್ಲಿ ತಪಾಸಣೆಯನ್ನು ತೀವ್ರಗೊಳಿಸಲಾಗುತ್ತಿದೆ. ರಾತ್ರಿ 10 ಗಂಟೆ ನಂತರ ಕರ್ಫ್ಯೂ ಜಾರಿಗೊಳಿಸಲಾಗಿದ್ದು, ಜನರು ಕೂಡ ಸಹಕಾರ ನೀಡಬೇಕು ಎಂದು ಕೋರಿದ್ದಾರೆ.

ರಾಜ್ಯದಲ್ಲಿ ಓಮೈಕ್ರಾನ್ ಸೋಂಕು ಹೆಚ್ಚಾಗುತ್ತಿರುವ ಕಾರಣ ಜಿಲ್ಲೆಯಾದ್ಯಂತ 90 ತಂಡಗಳನ್ನು ರಚಿಸಿ ಲಸಿಕೆ ಹಾಕುತ್ತಿದ್ದೇವೆ. ಸೋಂಕು ನಿಯಂತ್ರಣಕ್ಕಾಗಿ ಅಗತ್ಯ ಕ್ರಮ ಕೈಗೊಳ್ಳುತ್ತಿದ್ದೇವೆ ಎಂದು ತಿಳಿಸಿದ್ದಾರೆ.





ಇ–ಖಾತೆ ನೀಡಲು ಲಂಚ: ಮಧ್ಯವರ್ತಿ ಬಂಧನ

ಬೆಂಗಳೂರು: ನಿವೇಶನವೊಂದರ ಖರೀದಿದಾರರಿಗೆ ಇ–ಖಾತಾ ನೀಡಲು ನೆಲಮಂಗಲ ನಗರಸಭೆಯ ಬಿಲ್ ಕಲೆಕ್ಟರ್ ಯಲ್ಲಪ್ಪ ಪರವಾಗಿ ₹ 15,000 ಲಂಚ ಪಡೆದ ಖಾಸಗಿ ಸಹಾಯಕ ಶಿವಕುಮಾರ್ ಎಂಬುವವರನ್ನು ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ಬೆಂಗಳೂರು ಗ್ರಾಮಾಂತರ ಜಿಲ್ಲಾ ಘಟಕದ ಅಧಿಕಾರಿಗಳು ಬುಧವಾರ ಬಂಧಿಸಿದ್ದಾರೆ.

ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಮಾದಿಹಳ್ಳಿಯ ನಿವಾಸಿಯೊಬ್ಬರು ನೆಲಮಂಗಲ ನಗರಸಭೆ ವ್ಯಾಪ್ತಿಯಲ್ಲಿ ನಿವೇಶನ ಖರೀದಿಸಿದ್ದರು. ಆಸ್ತಿ ನೋಂದಣಿ ಬಳಿಕ ಇ–ಖಾತಾ ನೀಡುವಂತೆ ನಗರಸಭೆಗೆ ಅರ್ಜಿ ಸಲ್ಲಿಸಿದ್ದರು.

ಇ–ಖಾತಾ ನೀಡಲು ₹ 20,000 ಲಂಚಕ್ಕೆ ಬೇಡಿಕೆ ಇಟ್ಟಿದ್ದ ಯಲ್ಲಪ್ಪ, ₹ 5,000 ಮುಂಗಡವಾಗಿ ಪಡೆದಿದ್ದರು. ಉಳಿದ ಮೊತ್ತವನ್ನು ಶಿವಕುಮಾರ್ ಬಳಿ ನೀಡುವಂತೆ ಸೂಚಿಸಿದ್ದರು. ಈ ಬಗ್ಗೆ ಆಸ್ತಿ ಮಾಲೀಕರು ಎಸಿಬಿಗೆ ದೂರು ನೀಡಿದ್ದರು. ಬುಧವಾರ ಲಂಚ ಪಡೆಯುತ್ತಿದ್ದಾಗ ದಾಳಿ ಮಾಡಿದ ಎಸಿಬಿ ಅಧಿಕಾರಿಗಳು ಖಾಸಗಿ ವ್ಯಕ್ತಿಯನ್ನು ಬಂಧಿಸಿದರು. ಬಿಲ್ ಕಲೆಕ್ಟರ್ ತಲೆಮರೆಸಿಕೊಂಡಿದ್ದಾರೆ ಎಂದು ಎಸಿಬಿ ಅಧಿಕಾರಿಗಳು ತಿಳಿಸಿದ್ದಾರೆ.

ಹಣ ಮರುಪಾವತಿಸುವಂತೆ ಮಣಿಪಾಲ್ ಆಸ್ಪತ್ರೆಗೆ ಬಿಬಿಎಂಪಿ ಸೂಚನೆ

ಹೆಚ್ಚುವರಿ ಶುಲ್ಕ ವಸೂಲಿ: ಆಸ್ಪತ್ರೆ ವಿರುದ್ಧ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಚಿಕಿತ್ಸೆಗೆ ಸರ್ಕಾರ ನಿಗದಿ ಪಡಿಸಿದ್ದಕ್ಕಿಂತ ಹೆಚ್ಚು ಶುಲ್ಕವನ್ನು ರೋಗಿಯ ಕಡೆಯವರಿಂದ ವಸೂಲಿ ಮಾಡಿರುವ ಮಣಿಪಾಲ ಆಸ್ಪತ್ರೆ ವಿರುದ್ಧ ಬಿಬಿಎಂಪಿ ಕ್ರಮ ಕೈಗೊಂಡಿದೆ.

ಪಾಲಿಕೆಯ ವಿಶೇಷ ಆಯುಕ್ತರಾದ (ಆರೋಗ್ಯ) ಡಾ.ಕೆ.ವಿ.ತ್ರಿಲೋಕಚಂದ್ರ ಅವರ ನಿರ್ದೇಶನದ ಮೇರೆಗೆ ಯಲಹಂಕ ವಲಯದ ಆರೋಗ್ಯಾಧಿಕಾರಿ ಡಾ. ಭಾಗ್ಯಲಕ್ಷ್ಮೀ ಅವರು ಮಣಿಪಾಲ್ ಆಸ್ಪತ್ರೆಗೆ ಮಂಗಳವಾರ ಭೇಟಿ ನೀಡಿ ಪರಿಶೀಲಿಸಿದರು. ಕೋವಿಡ್ ಚಿಕಿತ್ಸೆ ಪಡೆದ ಮೂವರು ರೋಗಿಗಳಿಂದ ಆಸ್ಪತ್ರೆಯುವರು ಹೆಚ್ಚುವರಿಯಾಗಿ ಶುಲ್ಕ ಪಡೆದಿರುವುದು ಈ ವೇಳೆ ಕಂಡುಬಂದಿತ್ತು.

ಆಸ್ಪತ್ರೆಯವರು ಒಬ್ಬ ರೋಗಿಯಿಂದ ₹50,816, ಮತ್ತೊಬ್ಬ ರೋಗಿಯಿಂದ 1,967, ಮತ್ತೊಬ್ಬ ರೋಗಿಯಿಂದ ₹2,788 ಹೆಚ್ಚುವರಿ ಶುಲ್ಕ ಪಡೆದಿದ್ದರು. ಪಡೆದಿರುವ ಹೆಚ್ಚುವರಿ ಮೊತ್ತವನ್ನು ರೋಗಿಯ ಕಡೆಯವರಿಗೆ ಕೂಡಲೆ ಮರುಪಾವತಿಸುವಂತೆ ಆಸ್ಪತ್ರೆಯ ವ್ಯವಸ್ಥಾಪಕರಿಗೆ ಡಾ. ಭಾಗ್ಯಲಕ್ಷ್ಮೀ ಸೂಚಿಸಿದರು. ಇದಕ್ಕೆ ಆಸ್ಪತ್ರೆಯವರೂ ಒಪ್ಪಿದ್ದಾರೆ ಎಂದು ಬಿಬಿಎಂಪಿ ತಿಳಿಸಿದೆ.

‘ಕೋವಿಡ್ ಚಿಕಿತ್ಸೆ ಎಷ್ಟು ಶುಲ್ಕ ಪಡೆಯಬಹುದು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು 2020ರ ಜೂ 23ರಂದು ಹೊರಡಿಸಿರುವ ಆದೇಶದಲ್ಲಿ ತಿಳಿಸಿದೆ. ಸರ್ಕಾರ ನಿಗದಿಪಡಿಸಿದ ದರಕ್ಕಿಂತ ಹೆಚ್ಚು ಹಣ ಪಡೆಯುವುದು ಕಾನೂನುಬಾಹಿರ. ಖಾಸಗಿ ಆಸ್ಪತ್ರೆಗಳು ರೋಗಿಗಳಿಂದ ಇದಕ್ಕಿಂತ ಹೆಚ್ಚು ಮೊತ್ತವನ್ನು ವಸೂಲಿ ಮಾಡಿದರೆ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ’ ಎಂದು ಬಿಬಿಎಂಪಿಯು ಪ್ರಕಟಣೆಯಲ್ಲಿ ತಿಳಿಸಿದೆ.

‘ಹೆಚ್ಚು ಹಣ ಕೇಳಿದರೆ ದೂರು ನೀಡಿ’

ಬಿಬಿಎಂಪಿ ವ್ಯಾಪ್ತಿಯ ಖಾಸಗಿ ಆಸ್ಪತ್ರೆಗಳಲ್ಲಿ ಕೋವಿಡ್ ಚಿಕಿತ್ಸೆಗೆ ರಾಜ್ಯ ಸರ್ಕಾರ ನಿಗದಿಪಡಿಸಿರುವ ದರವನ್ನು ಮಾತ್ರ ಪಡೆಯಬೇಕು. ಇದಕ್ಕಿಂತ ಹೆಚ್ಚು ಶುಲ್ಕ ವಿಧಿಸಿದರೆ ಪಾಲಿಕೆಯ ದೂರವಾಣಿ ಸಂಖ್ಯೆಗೆ ಕರೆ ಮಾಡಬಹುದು. ಈ ಸಂಬಂಧ ಯಾವುದೇ ದೂರುಗಳು ಬಂದಲ್ಲಿ ತಕ್ಷಣ ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಡಾ. ತ್ರಿಲೋಕಚಂದ್ರ ಅವರು ಎಲ್ಲಾ ಆರೋಗ್ಯಾಧಿಕಾರಿಗಳಿಗೆ ಹಾಗೂ ಆರೋಗ್ಯ ವೈದ್ಯಾಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ದೂರು ನೀಡಲು ಸಂಪರ್ಕ ಸಂಖ್ಯೆ:
ಬಿಬಿಎಂಪಿ ಮುಖ್ಯ ಆರೋಗ್ಯಾಧಿಕಾರಿ (ಸಾರ್ವಜನಿಕ ಆರೋಗ್ಯ): 080-22975516
ಸಹಾಯವಾಣಿ: 080-22660000
ವಾಟ್ಸ್‌ಆ್ಯಪ್ ಸಂಖ್ಯೆ: 9480685700


ಕೋವಿಡ್ ಚಿಕಿತ್ಸೆ– ನಿಗದಿತ ದರ (ದಿನವೊಂದಕ್ಕೆ)	
ಜನರಲ್ ವಾರ್ಡ್	₹10,000
ಎಚ್‌ಡಿಯು ವಾರ್ಡ್	₹12,000
ಐಸೋಲೇಷನ್ ಐಸಿಯು (ವೆಂಟಿಲೇಟರ್ ರಹಿತ)	₹15,000
ಐಸೋಲೇಷನ್ ಐಸಿಯು (ವೆಂಟಿಲೇಟರ್ ಸಹಿತ)	₹25,000

ಉಪತಹಶೀಲ್ದಾರ್ ಸೇರಿ ನಾಲ್ವರು ಅಮಾನತು

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ತಾಲ್ಲೂಕಿನ ತುರುವನೂರು ಗ್ರಾಮ ಪಂಚಾಯಿತಿಗೆ ನಡೆದ ಉಪ ಚುನಾವಣೆಯಲ್ಲಿ ಕರ್ತವ್ಯಲೋಪ ಎಸಗಿದ ಆರೋಪದ ಮೇಲೆ ಉಪತಹಶೀಲ್ದಾರ್ ಸೇರಿ ನಾಲ್ವರನ್ನು ಸೇವೆಯಿಂದ ಅಮಾನತುಗೊಳಿಸಿ ಜಿಲ್ಲಾಧಿಕಾರಿ ಕವಿತಾ ಎಸ್.ಮನ್ನಿಕೇರಿ ಆದೇಶ ಹೊರಡಿಸಿದ್ದಾರೆ.

ತುರುವನೂರು ಉಪತಹಶೀಲ್ದಾರ್ ಮಂಜಪ್ಪ, ಹಿರೇಕಬ್ಬಿಗೆರೆ ಗ್ರಾಮ ಲೆಕ್ಕಿಗ ಎಚ್.ವಿಜಯಕುಮಾರ್, ಕೂನಬೇವು ಗ್ರಾಮ ಲೆಕ್ಕಿಗ ಎಲ್.ಮಂಜುನಾಥ್, ಗೋನೂರು ಗ್ರಾಮ ಲೆಕ್ಕಿಗ ಟಿ.ಸ್ವಾಮಿ ಅಮಾನತುಗೊಂಡವರು.



ಭಾರತದ ಕಿರಿಯ ಕವಯತ್ರಿ ಕುಮಾರಿ ಅಮನಾ ಜೆ.ಕುಮಾರ್ ಅವರ ‘ವರ್ಲ್ಡ್ ಅಮಿಡ್ಸ್ಟ್ ದಿ ವರ್ಡ್ಸ್’ ಅವರ ಕವನ ಸಂಕಲನವನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ರಾಜಭವನದಲ್ಲಿ ಬುಧವಾರ ಬಿಡುಗಡೆ ಮಾಡಿದರು. 155 ಕವಿತೆಗಳನ್ನು ಕವನ ಸಂಕಲನ ಹೊಂದಿದೆ.

‘ರಾಜ್ಯದಲ್ಲಿ ಎಂಇಎಸ್ ನಿಷೇಧಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಪರ ಸಂಘಟನೆಗಳು ಕರೆ ನೀಡಿರುವ ಕರ್ನಾಟಕ ಬಂದ್‌ಗೆ (ಡಿ.31) ಬೆಂಬಲ ವ್ಯಕ್ತಪಡಿಸಿರುವ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ರಾಜ್ಯ ಘಟಕದ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್, ‘ಮಹಾರಾಷ್ಟ್ರ ಏಕೀಕರಣ ಸಮಿತಿಯನ್ನು (ಎಂಇಎಸ್) ರಾಜ್ಯದಲ್ಲಿ ನಿಷೇಧಿಸಬೇಕು’ ಎಂದು ಆಗ್ರಹಿಸಿದ್ದಾರೆ.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ರಾಜ್ಯದಲ್ಲಿ ಎಂಇಎಸ್ ನಿಷೇಧಿಸಲು ಸಾಧ್ಯವಾಗದಿದ್ದರೆ, ಸಮಿತಿಯನ್ನು ಹದ್ದುಬಸ್ತಿನಲ್ಲಿಡಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕ್ರಮಕೈಗೊಳ್ಳಬೇಕು. ಈ ರೀತಿಯ ಸಮಸ್ಯೆಗಳು ಎದುರಾಗದಂತೆ ತಡೆಯಲು ಮಹಾಜನ್ ವರದಿಯ ಪಾಲನೆಯೊಂದೇ ಸರಿಯಾದ ಉಪಾಯ’ ಎಂದು ಹೇಳಿದರು.

‘ಕೇಂದ್ರ ಸರ್ಕಾರವು ಕೃಷಿ ಕಾಯ್ದೆಯನ್ನು ಹಿಂಪಡೆದಿದ್ದರೂ ಕೃಷಿ ಸಚಿವರು ಮೂಡಿಸಿರುವ ಗೊಂದಲಕ್ಕೆ ಸ್ಪಷ್ಟ ಮಾಹಿತಿ ನೀಡಬೇಕು. ಹಾಲಿಗೆ ನೀಡುತ್ತಿರುವ ಪ್ರೋತ್ಸಾಹಧನವನ್ನು ಹೆಚ್ಚಳ ಮಾಡಬೇಕು’ ಎಂದು ಆಗ್ರಹಿಸಿದರು.

ಕನ್ನಡ ಪರ ಸಂಘಟನೆಗಳಲ್ಲೇ ಭಿನ್ನಾಭಿಪ್ರಾಯ

ನಾಳೆ ಸಂಪೂರ್ಣ ಬಂದ್ ಅನುಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) ನಿಷೇಧಕ್ಕೆ ಆಗ್ರಹಿಸಿ ಕನ್ನಡ ಚಳವಳಿ ವಾಟಾಳ್ ಪಕ್ಷದ ವಾಟಾಳ್ ನಾಗರಾಜ್ ನೇತೃತ್ವದಲ್ಲಿ ಕನ್ನಡ ಪರ ಸಂಘಟನೆಗಳ ಒಕ್ಕೂಟ ಕರೆ ನೀಡಿರುವ ಶುಕ್ರವಾರದ ಕರ್ನಾಟಕ ಬಂದ್ ಕುರಿತು ಕನ್ನಡ ಪರ ಸಂಘಟನೆಗಳಲ್ಲೇ ಭಿನ್ನಾಭಿಪ್ರಾಯ ಕಾಣಿಸಿಕೊಂಡಿದೆ. ಹೀಗಾಗಿ ಸಂಪೂರ್ಣ ರಾಜ್ಯ ಬಂದ್ ಸಾಧ್ಯತೆ ಕುರಿತು ಅನುಮಾನ ಮೂಡಿದೆ.

ಮಹಾರಾಷ್ಟ್ರದಲ್ಲಿ ಕನ್ನಡ ಬಾವುಟ ಸುಟ್ಟಿರುವುದು, ಬೆಳಗಾವಿಯಲ್ಲಿ ಸಂಗೊಳ್ಳಿ ರಾಯಣ್ಣ ಪ್ರತಿಮೆ ಭಗ್ನ, ಬಸವೇಶ್ವರರ ಭಾವಚಿತ್ರಕ್ಕೆ ಸಗಣಿ ಬಳಿದಿರುವುದನ್ನು ಖಂಡಿಸಿ ಬಂದ್‌ಗೆ ಕರೆ ನೀಡಲಾಗಿದೆ. ರಾಜ್ಯದಲ್ಲಿ ಎಂಇಎಸ್ ನಿಷೇಧ ಸೇರಿದಂತೆ ಹಲವು ಬೇಡಿಕೆಗಳನ್ನು ಮುಂದಿಟ್ಟುಕೊಂಡು ಹೋರಾಟ ನಡೆಸಲಾಗುತ್ತಿದೆ.

ಕರ್ನಾಟಕ ರಕ್ಷಣಾ ವೇದಿಕೆಯ ಟಿ.ಎ. ನಾರಾಯಣ ಗೌಡ ಬಣ ಬಂದ್ ಬೆಂಬಲಿಸುವುದಿಲ್ಲ ಎಂದು ಈ ಹಿಂದೆಯೇ ಘೋಷಿಸಿತ್ತು. ಪ್ರವೀಣ್ ಕುಮಾರ್ ಶೆಟ್ಟಿ ಬಣವೂ ಬಂದ್‌ಗೆ ಬೆಂಬಲ ನೀಡದಿರಲು ನಿರ್ಧರಿಸಿದೆ. ವಾಟಾಳ್ ನಾಗರಾಜ್ ಅವರಿಗೆ ಬುಧವಾರ ಪತ್ರ ಬರೆದಿರುವ ಪ್ರವೀಣ್ ಕುಮಾರ್ ಶೆಟ್ಟಿ, ಜನರು ಕೋವಿಡ್‌ನಿಂದ ಆರ್ಥಿಕ ಸಂಕಷ್ಟದಲ್ಲಿರುವ ಕಾರಣದಿಂದ ಬಂದ್ ಕೈಬಿಡುವಂತೆ ಮನವಿ ಮಾಡಿದ್ದಾರೆ.

ರಾಜ್ಯ ಸರ್ಕಾರಿ ಸ್ವಾಮ್ಯದ ಸಾರಿಗೆ ಸಂಸ್ಥೆಗಳ ನೌಕರರು, ಹೋಟೆಲ್ ಮಾಲೀಕರ ಸಂಘಟನೆ ಕೂಡ ಬಂದ್‌ಗೆ ಬೆಂಬಲ ನೀಡಿಲ್ಲ. ಈ ಹಿಂದೆ ಬಂದ್ ಕರೆ ನೀಡಿದಾಗ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದ ಹಲವು ಸಂಘಟನೆಗಳು ಈ ಬಾರಿ ದೂರ ಉಳಿದಿವೆ.

ಕೆಲವರ ಬೆಂಬಲ: ಕರ್ನಾಟಕ ರಾಜ್ಯ ರೈತ ಸಂಘದ ಕೋಡಿಹಳ್ಳಿ ಚಂದ್ರಶೇಖರ್ ಬಣ ಸೇರಿದಂತೆ ಕೆಲವು ಸಂಘಟನೆಗಳು ಬಂದ್ ಕರೆಯನ್ನು ಬೆಂಬಲಿಸಿವೆ. ಬೆಂಗಳೂರು ನಗರದಲ್ಲಿ ಓಲಾ, ಉಬರ್ ಮಾಲೀಕರು ಮತ್ತು ಚಾಲಕರ ಸಂಘಟನೆಗಳು, ಆಟೊ ರಿಕ್ಷಾ ಚಾಲಕರ ಕೆಲವು ಸಂಘಟನೆಗಳು ಬೆಂಬಲ ಪ್ರಕಟಿಸಿವೆ.

> ಕೋವಿಡ್‌ನಿಂದಾಗಿ 2 ವರ್ಷಗಳಿಂದ ವಾಣಿಜ್ಯ ಚಟುವಟಿಕೆಗಳು ಸರಿಯಾಗಿ ನಡೆಯುತ್ತಿಲ್ಲ. ಬಲವಂತದ ಬಂದ್‌ಗೆ ಕಾನೂನು ಕ್ರಮ ಅನಿವಾರ್ಯ
>
> **ಆರಗ ಜ್ಞಾನೇಂದ್ರ,** ಗೃಹ ಸಚಿವ

‘ಪ್ರಜಾವಾಣಿ’ ಜತೆ ಮಾತನಾಡಿದ ವಾಟಾಳ್ ನಾಗರಾಜ್, ‘ಬಂದ್ ಕರೆಗೆ ಕೆಲವು ಸಂಘಟನೆಗಳ ಬೆಂಬಲ ಇಲ್ಲ ಎಂಬುದು ನಿಜ. ಆದರೆ, ಈ ಬಾರಿ ಕನ್ನಡ ಬಾವುಟ ಸುಟ್ಟಿರುವಂತಹ ವಿಚಾರವಿದೆ. ಹೀಗಾಗಿ ಜನಸಾಮಾನ್ಯರು ಒಕ್ಕೊರಲಿನಿಂದ ಬೆಂಬಲ ನೀಡುತ್ತಿದ್ದಾರೆ. ಬಂದ್ ಸಂಪೂರ್ಣ ಯಶಸ್ವಿಯಾಗುವುದರಲ್ಲಿ ಅನುಮಾನ ಬೇಡ’ ಎಂದರು.

ಬಂದ್ ಕೈಬಿಡಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮನವಿ

ಹುಬ್ಬಳ್ಳಿ: ‘ಜನ ಸಂಕಷ್ಟದಲ್ಲಿರುವುದರಿಂದ ಕರ್ನಾಟಕ ಬಂದ್ ಕೈ ಬಿಡಬೇಕು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಗೃಹ ಸಚಿವ ಆರಗ ಜ್ಞಾನೇಂದ್ರ ಕನ್ನಡಪರ ಸಂಘಟನೆಗಳಿಗೆ ಮನವಿ ಮಾಡಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಬೊಮ್ಮಾಯಿ, ‘ಎಂಇಎಸ್ ವಿರುದ್ಧ ಈಗಾಗಲೇ ನಾವು ಕಠಿಣ ಕ್ರಮಗಳನ್ನು ಕೈಗೊಂಡಿದ್ದೇವೆ. ಆದ್ದರಿಂದ ಉದ್ದೇಶಿತ ಬಂದ್ ಕೈ ಬಿಡಬೇಕು. ಕೋವಿಡ್‌ನಿಂದ ಸಾಕಷ್ಟು ಸಮಸ್ಯೆ ಆಗಿದೆ. ಬಲವಂತದ ಬಂದ್‌ಗೆ ಮುಂದಾದರೆ ಅಲ್ಲಿಯೇ ಉತ್ತರ ನೀಡಬೇಕಾಗುತ್ತದೆ’ ಎಂದು ಎಚ್ಚರಿಕೆ ನೀಡಿದರು.

ಹುಬ್ಬಳ್ಳಿಯಲ್ಲಿ ಬಿಜೆಪಿ ಕಾರ್ಯಕಾರಿಣಿ ಅಂತ್ಯ: ಬಹಿರಂಗ ಹೇಳಿಕೆ ನೀಡಲು ಹಿಂದೇಟು

ಎಚ್ಚರಿಕೆ ಬೆನ್ನಲ್ಲೇ ಎಚ್ಚೆತ್ತ ನಾಯಕರು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ವಿಜಯನಗರದಲ್ಲಿ ಮುಂದಿನ ಕಾರ್ಯಕಾರಿಣಿ
- ಸಚಿವರ ಭೇಟಿಗೆ ಕಾರ್ಯಕರ್ತರ ದಂಡು

ಹುಬ್ಬಳ್ಳಿ: ಮುಖ್ಯಮಂತ್ರಿ ಬದಲಾವಣೆ, ಪಕ್ಷದ ಆಂತರಿಕ ವಿಚಾರ ಹಾಗೂ ಅಸಮಾಧಾನಗಳನ್ನು ಬಹಿರಂಗವಾಗಿ ಎಲ್ಲಿಯೂ ಮಾತನಾಡುವಂತಿಲ್ಲ ಎಂದು ವರಿಷ್ಠರು ಎಚ್ಚರಿಕೆ ನೀಡಿದ ಬೆನ್ನಲ್ಲೇ, ಬುಧವಾರ ಕೆಲ ಶಾಸಕರು ಹಾಗೂ ಸಚಿವರು ಮಾಧ್ಯಮಗಳ ಎದುರು ಮಾತನಾಡಲು ಹಿಂದೇಟು ಹಾಕಿದರು.

ಇಲ್ಲಿನ ಡೆನಿಸನ್ಸ್ ಹೋಟೆಲ್‌ನಲ್ಲಿ ಬುಧವಾರ ಮುಕ್ತಾಯವಾದ ಎರಡು ದಿನಗಳ ಬಿಜೆಪಿ ಕಾರ್ಯಕಾರಿಣಿ ಸಭೆಯ ಬಳಿಕ ಹೊರಬಂದ ಬಹುತೇಕ ನಾಯಕರು, ಪಕ್ಷದ ಯಾವುದೇ ಆಂತರಿಕವಾಗಿ ನಡೆದ ಚರ್ಚೆಯ ವಿವರವನ್ನು ಬಿಟ್ಟು ಕೊಡಲಿಲ್ಲ.

ಸಭೆಯಲ್ಲಿ ಪಾಲ್ಗೊಳ್ಳಲು ತೆರಳುವ ಮುನ್ನ ಶಾಸಕ ಎಂ.ಪಿ. ರೇಣುಕಾಚಾರ್ಯ ಮಾಧ್ಯಮದವರ ಜೊತೆ ಮಾತನಾಡುತ್ತಿದ್ದರು. ಆಗ ಸಭೆ ಮುಗಿಸಿ ಹೊರಬಂದ ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ 'ಕ್ಯಾ ಚಲ್ ರಹಾ ಹೈ.. ರೇಣುಕಾಚಾರಿ' ಎಂದರು. ರೇಣುಕಾಚಾರ್ಯ ಮಾತನಾಡುವುದನ್ನು ಬಿಟ್ಟು, ಕೂಡಲೇ ಅವರ ಹಿಂದೆ ಹೋದರು. ಬಳಿಕ ಮತ್ತೆ ಬಂದು ಮಾಧ್ಯಮದವರ ಜೊತೆ ಮಾತನಾಡಿದರು.

ಸಚಿವ ಮುರುಗೇಶ ನಿರಾಣಿ ಅವರನ್ನು ಮಾತನಾಡಲು ಮಾಧ್ಯಮದವರು ಕರೆದರೂ ನೋಡಿಯೋ ನೋಡದಂತೆ ಹೊರಟರು. ಶಾಸಕ ಬಸನಗೌಡ ಪಾಟೀಲ ಯತ್ನಾಳ, 'ಕಾರ್ಯಕಾರಿಣಿ ಕುರಿತು ಮಾಧ್ಯಮಗಳಿಗೆ ಹೇಳಿಕೆ ನೀಡದಂತೆ ರಾಜ್ಯ ಘಟಕದ ಅಧ್ಯಕ್ಷರು ಸೂಚಿಸಿದ್ದಾರೆ. ಪಕ್ಷದ ನಿಲುವಿಗೆ ಬದ್ಧನಿದ್ದೇನೆ' ಎಂದಷ್ಟೇ ಹೇಳಿದರು.

ವಿಜಯನಗರದಲ್ಲಿ ಮುಂದಿನ ಕಾರ್ಯಕಾರಿಣಿ: 'ಮುಂದಿನ ಕಾರ್ಯಕಾರಿಣಿ 2022ರ ಮಾರ್ಚ್ 28 ಮತ್ತು 29ರಂದು ನೂತನ ಜಿಲ್ಲೆ ವಿಜಯನಗರದಲ್ಲಿ ನಡೆಯಲಿದೆ. ಸಚಿವ ಆನಂದ್ ಸಿಂಗ್ ಕಾರ್ಯಚರಣೆಯ ನೇತೃತ್ವ ವಹಿಸುವರು' ಎಂದು ಪ್ರಧಾನ ಕಾರ್ಯದರ್ಶಿ ಮಹೇಶ ಟೆಂಗಿನಕಾಯಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಸಭೆ: ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ ಕಟೀಲ್ ಅವರು ವಿವಿಧ ವಿಭಾಗಗಳ ಮುಖಂಡರ ಜೊತೆ ನಡೆಸಿದ ಸಮಾಲೋಚನೆಯಲ್ಲಿ '150 ಗುರಿ' ತಲುಪಲು ಕಾರ್ಯ ಯೋಜನೆ ರೂಪಿಸಿಕೊಳ್ಳುವಂತೆ ಸೂಚಿಸಿದರು.

ಇದೇ ವಿಷಯವನ್ನು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ ಮಹೇಶ ಟೆಂಗಿನಕಾಯಿ, 'ಮುಂದಿನ ಕಾರ್ಯಕಾರಿಣಿ ತನಕ ಇಲ್ಲಿ ವರಿಷ್ಠರು ರೂಪಿಸಿರುವ ನೀಲನಕ್ಷೆಯಂತೆ ಎಲ್ಲರೂ ಕೆಲಸ ಮಾಡಬೇಕು. ಈ ಕುರಿತು ಕಟೀಲ್ ಅವರು ಪಕ್ಷದ ಸಂಘಟನಾ ಮತ್ತು ಸಹ ಸಂಘಟನಾ ಕಾರ್ಯದರ್ಶಿಗಳ ಜೊತೆ ಚರ್ಚಿಸಿದ್ದಾರೆ. ಎಲ್ಲರಿಗೂ ಸ್ಪಷ್ಟ ಕಾರ್ಯಸೂಚಿ ನೀಡಲಾಗಿದೆ. ಸಂಘಟನೆಯ ದೃಷ್ಟಿಯಿಂದ ಪ್ರಮುಖ ಹಾಗೂ ಪೇಜ್ ಪ್ರಮುಖ ತಂಡಗಳನ್ನು ಬಲಿಷ್ಠಗೊಳಿಸಲು ಆದ್ಯತೆ ನೀಡಲಾಗುವುದು' ಎಂದು ಹೇಳಿದರು.



ಹುಬ್ಬಳ್ಳಿಯಲ್ಲಿ ಬುಧವಾರ ನಡೆದ ಬಿಜೆಪಿ ಕಾರ್ಯಕಾರಿಣಿಯಲ್ಲಿ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಮತ್ತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚರ್ಚಿಸಿದರು. ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಇದ್ದಾರೆ —ಪ್ರಜಾವಾಣಿ ಚಿತ್ರ

ಪ್ರಮುಖರ ಸಭೆ ರದ್ದು

ಹುಬ್ಬಳ್ಳಿ: ಕಾರ್ಯಕಾರಿಣಿ ಸಭೆಯ ಭಾಗವಾಗಿ ಬುಧವಾರ ಮಧ್ಯಾಹ್ನ ನಡೆಯಬೇಕಿದ್ದ ಪ್ರಮುಖರ ಸಭೆ ರದ್ದುಪಡಿಸಲಾಯಿತು.

ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಮತ್ತು ಶಾಸಕ ಬಿ.ಎಸ್. ಯಡಿಯೂರಪ್ಪ ಅವರು ಪಾಲ್ಗೊಳ್ಳದ ಕಾರಣ ಸಭೆ ರದ್ದುಪಡಿಸಲಾಗಿದೆ ಎಂದು ಪಕ್ಷದ ಮೂಲಗಳು ಖಚಿತಪಡಿಸಿವೆ.

ಈ ಕುರಿತು ಪತ್ರಿಕಾಗೋಷ್ಠಿಯಲ್ಲಿ ಪ್ರತಿಕ್ರಿಯಿಸಿದ ರಾಜ್ಯ ಪ್ರಧಾನ ಕಾರ್ಯದರ್ಶಿ ಮಹೇಶ ಟೆಂಗಿನಕಾಯಿ, 'ಪ್ರಮುಖರ ಸಭೆ ಮೊದಲು ನಿಗದಿಯಾಗಿರಲಿಲ್ಲ. ಹೀಗಾಗಿ ನಡೆಯಲಿಲ್ಲ. ರಾಷ್ಟ್ರೀಯ ಅಧ್ಯಕ್ಷರು ಬಾರದ ಕಾರಣ ಸಭೆ ವಿಷಯವನ್ನು ಅಜೆಂಡಾದಲ್ಲಿ ಸೇರಿಸಿರಲಿಲ್ಲ' ಎಂದರು.

ಮುಖ್ಯಮಂತ್ರಿ ಅವರ ಪ್ರವಾಸ ಕಾರ್ಯಕ್ರಮದಲ್ಲಿ ಪ್ರಮುಖರ ಸಭೆ ಇರುವುದಾಗಿ ಮಾಧ್ಯಮಗಳಿಗೆ ಮಾಹಿತಿ ನೀಡಲಾಗಿತ್ತಲ್ಲವೇ ಎನ್ನುವ ಪ್ರಶ್ನೆಗೆ, 'ಗೊಂದಲದಿಂದ ಹೀಗಾಗಿದೆ' ಎಂದು ಸಮಜಾಯಿಷಿ ನೀಡಿದರು.

ಕೇಂದ್ರದ ಸಾಧನೆಗೆ ಅಭಿನಂದನಾ ನಿರ್ಣಯ

ದಿವ್ಯ ಕಾಶಿ, ಭವ್ಯ ಕಾಶಿ ಸೇರಿದಂತೆ ಕೇಂದ್ರ ಸರ್ಕಾರದ ವಿವಿಧ ಸಾಧನೆಗಳಿಗೆ ಅಭಿನಂದನೆ ಸಲ್ಲಿಸುವ ನಿರ್ಣಯವನ್ನು ಕಾರ್ಯಕಾರಿಣಿಯಲ್ಲಿ ಕೈಗೊಳ್ಳಲಾಯಿತು.

'ಪೆಟ್ರೋಲ್, ಡೀಸೆಲ್ ಬೆಲೆ ಇಳಿಕೆಗಾಗಿ, ದಾಖಲೆ ಪ್ರಮಾಣದಲ್ಲಿ ಕೋವಿಡ್ ಲಸಿಕೆ ನೀಡಿ ಭಾರತವನ್ನು ವಿಶ್ವ ಗುರುವಾಗಿಸಿದ್ದಕ್ಕೆ, ಜಾಗತಿಕ ಮಟ್ಟದಲ್ಲಿ ಯುದ್ಧ ಸಾಮಗ್ರಿಗಳ ರಫ್ತು ವಹಿವಾಟು ಹಾಗೂ ಸ್ವಸಹಾಯ ಗುಂಪುಗಳಿಗೆ ₹1,625 ಕೋಟಿ ಬಿಡುಗಡೆಯ ಸಾಧನೆಗಳನ್ನು ಕೊಂಡಾಡಿ ಎಂದು ಕೇಂದ್ರ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸಲಾಯಿತು' ಎಂದು ಪಕ್ಷದ ರಾಜ್ಯ ಮುಖ್ಯ ವಕ್ತಾರ ಎಂ.ಜಿ. ಮಹೇಶ ತಿಳಿಸಿದರು.

'ಸಂಘಟನೆಗೆ ಒತ್ತು ನೀಡಲು ಸೂಚನೆ'

ಹುಬ್ಬಳ್ಳಿ: 'ಪಕ್ಷ ಸಂಘಟನೆಗೆ ಒತ್ತು ಕೊಡಬೇಕು. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ 150 ಸ್ಥಾನ ಗೆಲ್ಲಲು ಶಪಥ ಮಾಡಬೇಕು ಎಂದು ಪಕ್ಷದ ಎಲ್ಲಾ ನಾಯಕರಿಗೆ ಸೂಚಿಸಲಾಗಿದೆ' ಎಂದು ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಹೇಳಿದರು.

ಕಾರ್ಯಕಾರಿಣಿ ಸಭೆ ಬಳಿಕ ಮಾಧ್ಯಮದವರ ಜೊತೆ ಮಾತನಾಡಿದ ಅವರು, 'ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಆಗಿರುವ ಸಾಧನೆಗಳನ್ನು ಜನರ ಮುಂದಿಟ್ಟು ಚುನಾವಣೆ ಎದುರಿಸಲಿದ್ದೇವೆ' ಎಂದರು.


'ಸಿದ್ದರಾಮಯ್ಯ ಸರ್ಕಾರವಿದ್ದಾಗ ರಾಜ್ಯದಲ್ಲಿ ಹಿಂದೂಗಳ ಹತ್ಯೆಯಾಗುತ್ತಿತ್ತು. ದೊಡ್ಡ ಮಟ್ಟದಲ್ಲಿ ಭ್ರಷ್ಟಾಚಾರಗಳು ನಡೆದಿದ್ದವು. ಹೀಗಾಗಿ ಕಾಂಗ್ರೆಸ್ ಮೇಲೆ ದೇಶದ ಜನರಿಗೆ ವಿಶ್ವಾಸವಿಲ್ಲ. ಆ ಪಕ್ಷದಲ್ಲಿ ಒಳಜಗಳ ನಡೆಯುತ್ತಿದೆ. ಬಿಜೆಪಿ ವಿರುದ್ಧ ಕಾಂಗ್ರೆಸ್ ಸುಳ್ಳು ಆರೋಪಗಳನ್ನು ಮಾಡುತ್ತಿದೆ' ಎಂದು ಟೀಕಿಸಿದರು.

'ಸಿದ್ದರಾಮಯ್ಯ ಸರ್ಕಾರದಲ್ಲಿ ಅಧಿಕಾರಿಗಳು ಆತ್ಮಹತ್ಯೆ ಮಾಡಿಕೊಂಡಿದ್ದರು. ಇದೆಲ್ಲವನ್ನೂ ಚುನಾವಣೆ ಸಂದರ್ಭದಲ್ಲಿ ಜನರಿಗೆ ಮುಟ್ಟಿಸಲಾಗುವುದು' ಎಂದರು.

ಅನುಭವಿಗಳು ಸಚಿವ ಸ್ಥಾನ ಬಿಟ್ಟುಕೊಡಲಿ: ರೇಣುಕಾಚಾರ್ಯ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಹಿಂದೆ 2–3 ಬಾರಿ ಸಚಿವರಾಗಿ, ಈಗಲೂ ಮತ್ತೆ ಸಚಿವರಾಗಿಯೇ ಮುಂದುವರಿಯುತ್ತಿರುವ ಕೆಲವರು ತಮ್ಮ ಸ್ಥಾನ ಬಿಟ್ಟುಕೊಟ್ಟು ಹೊಸಬರಿಗೆ ಅವಕಾಶ ನೀಡಲಿ' ಎಂದು ಶಾಸಕ ಎಂ.ಪಿ. ರೇಣುಕಾಚಾರ್ಯ ಆಗ್ರಹಿಸಿದರು.



ರೇಣುಕಾಚಾರ್ಯ

ಇಲ್ಲಿ ಬುಧವಾರ ಮಾಧ್ಯಮಗಳ ಜೊತೆ ಮಾತನಾಡಿ 'ನನಗೇ ಸಚಿವ ಸ್ಥಾನ ಕೊಡಿ ಎಂದು ಕೇಳುವುದಿಲ್ಲ. ಅದರ ಆಸೆಯೂ ನನಗಿಲ್ಲ. ಹೊಸ ಶಾಸಕರಿಗೆ ಸಚಿವ ಸ್ಥಾನ ಕೊಟ್ಟು ಅನುಭವಿ ನಾಯಕರು ಪಕ್ಷ ಸಂಘಟನೆ ಕೆಲಸದಲ್ಲಿ ತೊಡಗಿಕೊಳ್ಳಬೇಕು. ಇದನ್ನು ಪಕ್ಷದ ಹಿರಿಯರಿಗೂ ತಿಳಿಸಿದ್ದೇನೆ' ಎಂದರು.

'ಗುಜರಾತ್ ಮಾದರಿಯಲ್ಲಿ ರಾಜ್ಯದಲ್ಲಿಯೂ ಸಂಪುಟ ವಿಸ್ತರಣೆ ಮಾಡಬೇಕು. ನನಗೆ ಸಚಿವ ಸ್ಥಾನಕ್ಕಿಂತ ನನ್ನ ಕ್ಷೇತ್ರದ ಅಭಿವೃದ್ಧಿ ಮುಖ್ಯ. ಇಟಲಿಯ ಸೋನಿಯಾ ಗಾಂಧಿ ಮಾತು ಕೇಳುವ ಕಾಂಗ್ರೆಸ್ಸಿಗರಿಗೆ ತಾಕತ್ತಿದ್ದರೆ, ಒಂದೇ ಒಂದು ಸಾರಿ ಬಹಿರಂಗವಾಗಿ ನಾವು ಹಿಂದೂ ಎಂದು ಹೇಳಿಕೊಳ್ಳಲಿ ನೋಡೋಣ' ಎಂದು ಸವಾಲು ಹಾಕಿದರು.

'ಸಚಿವ ಸ್ಥಾನ ಬಿಡಲು ಸಿದ್ಧ'

ರೇಣುಕಾಚಾರ್ಯ ಅವರ ಮಾತಿಗೆ ಪ್ರತಿಕ್ರಿಯಿಸಿರುವ ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ, 'ಸಚಿವ ಸ್ಥಾನ ಧಾರಾಳವಾಗಿ ಬಿಟ್ಟು, ಪಕ್ಷದ ಸಂಘಟನೆಗಾಗಿ ದುಡಿಯಲು ಸಿದ್ಧನಿದ್ದೇನೆ' ಎಂದು ಹೇಳಿದರು.



ಕೆ.ಎಸ್.ಈಶ್ವರಪ್ಪ

'ಸಂಪುಟದಿಂದ ನನ್ನನ್ನು ಕೈ ಬಿಡುವುದಿದ್ದರೆ ನಾನು ತಯಾರಿದ್ದೇನೆ. ಪಕ್ಷ ಸಂಘಟನೆಗೆ ಶ್ರಮಿಸುತ್ತೇನೆ. ಅಧಿಕಾರ ಎಷ್ಟರ ಮಟ್ಟಿಗೆ ಒಳ್ಳೆಯದು ಹಾಗೂ ಕೆಟ್ಟದ್ದು ಎನ್ನುವುದು ನನಗೆ ಗೊತ್ತು. ಜ. 5 ರಂದು ಶಿವಮೊಗ್ಗದಲ್ಲಿ ಹಿಂದುಳಿದ ವರ್ಗಗಳ ರಾಜ್ಯ ಕಾರ್ಯಕಾರಿಣಿ ಸಭೆ ನಡೆಯಲಿದೆ. ಅಲ್ಲಿ ನಾವು ಮುಂದಿನ ಚುನಾವಣೆಗಳ ಹಾಗೂ ಪಕ್ಷ ಸಂಘಟನೆ ಬಗ್ಗೆ ಚರ್ಚೆ ನಡೆಸಲಿದ್ದೇವೆ' ಎಂದು ತಿಳಿಸಿದರು.

ಪಿಎಂ-ಕಿಸಾನ್ ನಿಧಿ: ಜ.10ರಂದು ಹಣ ಬಿಡುಗಡೆ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಜನವರಿ 1ರಂದು ಪಿಎಂ-ಕಿಸಾನ್ ಸಮ್ಮಾನ್ ನಿಧಿಯಿಂದ (ಪಿಎಂ-ಕಿಸಾನ್) 10 ಸಾವಿರಕ್ಕೂ ಅಧಿಕ ಫಲಾನುಭವಿ ರೈತರಿಗೆ ₹20 ಸಾವಿರ ಕೋಟಿಯನ್ನು ಬಿಡುಗಡೆ ಮಾಡಲಿದ್ದಾರೆ.

ರೈತರ ಖಾತೆಗೆ ಸೇರ್ಪಡೆಗೊಳ್ಳುತ್ತಿರುವ 10ನೇ ಕಂತು ಇದಾಗಿದೆ ಎಂದು ಪ್ರಧಾನಿ ಕಾರ್ಯಾಲಯ ತಿಳಿಸಿದೆ. ಯೋಜನೆಯಡಿ ಫಲಾನುಭವಿಗಳಿಗೆ ವಾರ್ಷಿಕ ₹6,000 ಹಣ ಮೂರು ಕಂತುಗಳ ರೂಪದಲ್ಲಿ ಸಿಗಲಿದೆ. ಇದುವರೆಗೆ ₹ 1.6 ಲಕ್ಷ ಕೋಟಿಯನ್ನು ರೈತರ ಖಾತೆಗಳಿಗೆ ವರ್ಗಾಯಿಸಲಾಗಿದೆ.

ದೌರ್ಜನ್ಯ: ಕೋಟ ಪಿಎಸ್‌ಐ ಅಮಾನತು

ಪ್ರಜಾವಾಣಿ ವಾರ್ತೆ

ಉಡುಪಿ: ಬ್ರಹ್ಮಾವರದ ಕೋಟತಟ್ಟು ಬಾರಿಕೆರೆ ಕೊರಗ ಕಾಲೊನಿಯಲ್ಲಿ ಸೋಮವಾರ ರಾತ್ರಿ ನಡೆದ ಪೊಲೀಸ್ ದೌರ್ಜನ್ಯ ಪ್ರಕರಣ ಸಂಬಂಧ, ಕೋಟ ಠಾಣೆಯ ಪಿಎಸ್‌ಐ ಬಿ.ಪಿ. ಸಂತೋಷ್ ಅವರನ್ನು ಅಮಾನತು ಮಾಡಲಾಗಿದೆ.

ಉಡುಪಿಯ ಡಿಎಸ್‌ಪಿ ಪ್ರಕರಣದ ತನಿಖೆ ನಡೆಸಿ ಸಲ್ಲಿಸಿದ ವರದಿ ಆಧರಿಸಿ ಪಶ್ಚಿಮ ವಲಯ ಐಜಿಪಿ ದೇವಜ್ಯೋತಿ ರೇ ಅವರು ಕೋಟ ಪಿಎಸ್‌ಐ ಅವರನ್ನು ಅಮಾನತುಗೊಳಿಸಿದ್ದಲ್ಲದೆ ಠಾಣೆಯ ಐವರು ಸಿಬ್ಬಂದಿಯನ್ನು ವರ್ಗಾವಣೆ ಮಾಡಿದ್ದಾರೆ ಎಂದು ಉಡುಪಿ ಎಸ್‌ಪಿ ಎನ್. ವಿಷ್ಣುವರ್ಧನ್ ತಿಳಿಸಿದರು.


ಪ್ರಕರಣದ ವಿವರ: ಡಿ.27ರಂದು ರಾತ್ರಿ ಕೋಟತಟ್ಟು ಬಾರಿಕೆರೆ ಕೊರಗರ ಕಾಲೊನಿಯಲ್ಲಿ ಮದುವೆ ಪ್ರಯುಕ್ತ ಮೆಹಂದಿ ಕಾರ್ಯಕ್ರಮದಲ್ಲಿ ಲೌಡ್ ಸ್ಪೀಕರ್ ಬಳಸಲಾಗಿತ್ತು. ಇದಕ್ಕೆ ಸ್ಥಳೀಯರೊಬ್ಬರು ಆಕ್ಷೇಪ ವ್ಯಕ್ತಪಡಿಸಿ ಕೋಟ ಠಾಣೆಗೆ ದೂರು ನೀಡಿದ್ದರು. ಲೌಡ್ ಸ್ಪೀಕರ್ ಬಂದ್ ಮಾಡುವಂತೆ ಸೂಚನೆ ನೀಡಿದರೂ ಪಾಲಿಸಲಿಲ್ಲ ಎಂದು ಸ್ಥಳೀಯರ ಮೇಲೆ ಪೊಲೀಸರು ಲಾಠಿ ಬೀಸಿದ್ದರು.

ಮದುಮಗ ಸೇರಿದಂತೆ ಹಲವರನ್ನು ವಶಕ್ಕೆ ಪಡೆದು ಠಾಣೆಗೆ ಎಳೆದೊಯ್ಯಲಾಗಿತ್ತು. ಕೊರಗ ಮಹಿಳೆಯರು ಹಾಗೂ ಮಕ್ಕಳ ಮೇಲೆ ಪೊಲೀಸರು ಅಮಾನುಷವಾಗಿ ಹಲ್ಲೆ ನಡೆಸಿದ್ದಾರೆ ಎಂದು ಕೊರಗ ಸಮುದಾಯದ ಮುಖಂಡರು ಕೋಟ ಠಾಣೆ ಎದುರು ಪ್ರತಿಭಟನೆ ನಡೆಸಿ, ತಪ್ಪಿತಸ್ಥರ ವಿರುದ್ಧ ಶಿಸ್ತುಕ್ರಮಕ್ಕೆ ಒತ್ತಾಯಿಸಿದ್ದರು.

ಸಚಿವ ಕೋಟ ಶ್ರೀನಿವಾಸ ಪೂಜಾರಿ, ಕುಂದಾಪುರ ಶಾಸಕ ಹಾಲಾಡಿ ಶ್ರೀನಿವಾಸ ಶೆಟ್ಟಿ ಅವರೂ ಘಟನೆಯನ್ನು ಖಂಡಿಸಿ ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಎಸ್‌ಪಿಗೆ ಸೂಚಿಸಿದ್ದರು.

ಪರಿಶಿಷ್ಟರ ರಕ್ಷಣೆಗೆ ಬದ್ಧ: ಪೂಜಾರಿ

ಹುಬ್ಬಳ್ಳಿ: 'ಬ್ರಹ್ಮಾವರದ ಕೋಟತಟ್ಟು ಬಾರಿಕೆರೆ ಕೊರಗ ಕಾಲೊನಿಯಲ್ಲಿ ಸೋಮವಾರ ರಾತ್ರಿ ನಡೆದ ಪೊಲೀಸ್ ದೌರ್ಜನ್ಯ ಪ್ರಕರಣ ಸಂಬಂಧ ಸೂಕ್ತ ಕಾನೂನು ಕ್ರಮ ಜರುಗಿಸುವುದಾಗಿ ಗೃಹ ಸಚಿವರು ತಿಳಿಸಿದ್ದಾರೆ. ರಾಜ್ಯ ಸರ್ಕಾರ ಪರಿಶಿಷ್ಟರ ರಕ್ಷಣೆಗೆ ಬದ್ಧವಾಗಿದೆ' ಎಂದು ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಹೇಳಿದರು.



ಕೋಟಾ ಶ್ರೀನಿವಾಸ

ಇಲ್ಲಿ ನಡೆದ ಕಾರ್ಯಕಾರಿಣಿ ಸಭೆ ಬಳಿಕ ಬುಧವಾರ ಮಾಧ್ಯಮದವರ ಜೊತೆ ಮಾತನಾಡಿ, 'ಮೆಹಂದಿ ಸಮಾರಂಭದ ವೇಳೆ ಕೊರಗ ಕಾಲೊನಿಯಲ್ಲಿ ವಿನಾಕಾರಣ ಪೊಲೀಸರು ಲಾಠಿಪ್ರಹಾರ ಮಾಡಿದ್ದು ಸರಿಯಲ್ಲ. ನನ್ನೂರಿನ ಜನರ ಜೊತೆ ಈಗಾಗಲೇ ಮಾತನಾಡಿ ಧೈರ್ಯ ತುಂಬಿದ್ದೇನೆ. ಸಮಾಜದ ಕಟ್ಟಕಡೆಯ ವ್ಯಕ್ತಿಗೂ ನ್ಯಾಯ ದೊರೆಯಬೇಕು ಎನ್ನುವ ಆಶಯ ಹೊಂದಿದ್ದೇನೆ' ಎಂದು ಹೇಳಿದರು.

ಪೂಜಾರಿ ಭೇಟಿ: ಪೊಲೀಸರಿಂದ ಹಲ್ಲೆಗೊಳಗಾದ ಯುವಕನನ್ನು ಮದುವೆಯಾಗಿರುವ ಕುಮಟಾದ ಯುವತಿಯ ಮನೆಗೆ ಬುಧವಾರ ಭೇಟಿ ನೀಡಿದ ಸಚಿವ ಕೋಟ ಶ್ರೀನಿವಾಸ ಪೂಜಾರಿ ದಂಪತಿಯನ್ನು ಹರಸಿ ರಕ್ಷಣೆಯ ಭರವಸೆ ನೀಡಿದರು.

'ನನ್ನ ಕ್ಷೇತ್ರದ ದಲಿತ ಕುಟುಂಬದ ಮದುವೆ ಮನೆಯಲ್ಲಿ ಆಗಿರುವ ಇಂಥ ತೊಂದರೆಯ ಬಗ್ಗೆ ನೋವಿದೆ. ಸಮಾಜ ಕಲ್ಯಾಣ ಇಲಾಖೆ ಅವರ ರಕ್ಷಣೆ ಹಾಗೂ ಅಭಿವೃದ್ಧಿಗೆ ಸದಾ ಇದೆ' ಎಂದಿದ್ದಾರೆ.

ಸ್ಥಳ ವಿವಾದ: ಮೂರು ದಿನ ತಾಯಿಯ ಹೆಣ ಹೂಳದೇ ನಿರ್ಲಕ್ಷ್ಯ

ಕೆಜಿಎಫ್: ಮೃತ ತಾಯಿಯ ಶವ ಸಂಸ್ಕಾರ ಮಾಡಲು ಸ್ಥಳ ನಿಗದಿಪಡಿಸುವ ವಿಚಾರದಲ್ಲಿ ಕುಟುಂಬದವರ ನಡುವೆ ಉದ್ಭವಿಸಿದ ವೈಮನಸ್ಯದಿಂದ ಮೂರು ದಿನ ಶವವನ್ನು ಹೂಳದೆ ಇದ್ದ ಘಟನೆ ತಾಲ್ಲೂಕಿನ ರಾಜಪೇಟೆ ರೋಡ್‌ನಲ್ಲಿ ನಡೆದಿದೆ.

ಗ್ರಾಮದ ಸರೋಜಮ್ಮ (80) ಅನಾರೋಗ್ಯದಿಂದ ಭಾನುವಾರ ಆಂಧ್ರದಲ್ಲಿ ನಿಧನರಾಗಿದ್ದರು. ಅವರಿಗೆ ಮಕ್ಕಳಿಲ್ಲ. ಸರೋಜಮ್ಮ ಅವರ ಪತಿಯ ಎರಡನೇ ಪತ್ನಿಯ ಇಬ್ಬರು ಹೆಣ್ಣುಮಕ್ಕಳು ದೊಡ್ಡಮ್ಮನ ಶವ ಹೂಳಲು ರಾಜಪೇಟೆ ರೋಡ್‌ಗೆ ತಂದಿದ್ದರು. ತಮ್ಮ ಜಮೀನಿನಲ್ಲಿರುವ ತಂದೆಯ ಸಮಾಧಿ ಪಕ್ಕದಲ್ಲಿಯೇ ಶವ ಹೂಳಲು ಆ ಹೆಣ್ಣುಮಕ್ಕಳ ಸ್ವಂತ ತಾಯಿ ಮತ್ತು ಸಹೋದರ ವಿರೋಧ ವ್ಯಕ್ತಪಡಿಸಿದ್ದರು. ಇದರಿಂದ ಶವವನ್ನು ಅಂತ್ಯಸಂಸ್ಕಾರ ಮಾಡಿರಲಿಲ್ಲ. ಮೃತದೇಹ ಇಟ್ಟುಕೊಂಡಿದ್ದರಿಂದ ಗ್ರಾಮಸ್ಥರು ಆಕ್ಷೇಪ ವ್ಯಕ್ತಪಡಿಸಿದ್ದರು. ಗ್ರಾಮಸ್ಥರ ಗಲಾಟೆಯಿಂದ ವಿಚಲಿತರಾದ ಹೆಣ್ಣು ಮಕ್ಕಳು ಶವವನ್ನು ಬಿಟ್ಟು ತಮ್ಮ ಊರಿಗೆ ತೆರಳಿದ್ದರು..

ಸುದ್ದಿ ತಿಳಿದ ನಂತರ ತಹಶೀಲ್ದಾರ್ ಅವರು ಸ್ಥಳಕ್ಕೆ ಧಾವಿಸಿ ಗ್ರಾಮಸ್ಥರ ಸಹಾಯದಿಂದ ಸರ್ಕಾರಿ ಸ್ಮಶಾನದಲ್ಲಿ ಮಂಗಳವಾರ ಅಂತ್ಯಕ್ರಿಯೆ ನೆರವೇರಿಸಿದರು.

'ಹಿಂದೂ ದೇವಾಲಯ ಸ್ವತಂತ್ರ'

ಒಂದನೇ ಪುಟದಿಂದ...

'ಪಕ್ಷಕ್ಕೆ ಯಡಿಯೂರಪ್ಪ ಅವರ ಸುದೀರ್ಘ ನಾಯಕತ್ವ ಸಿಕ್ಕಿದೆ. ಅವರ ನಂತರ ಅಧಿಕಾರ ನಡೆಸುವಾಗ ಸಂದರ್ಭದಲ್ಲಿ ಹಲವಾರು ಪ್ರಶ್ನೆಗಳು ಉದ್ಭವವಾಗುತ್ತವೆ. ಅವುಗಳಿಗೆಲ್ಲ ಕಾರ್ಯ ದಕ್ಷತೆಯಿಂದ ನಿರ್ಣಯ ಕೈಗೊಂಡು, ಕಾಲ ಕಾಲಕ್ಕೆ ಅವುಗಳನ್ನು ಜನ ಸಮೂಹಕ್ಕೆ ತಿಳಿಸುತ್ತಾ ಉತ್ತರ ಕೊಡಬೇಕಾಗುತ್ತದೆ' ಎಂದು ಹೇಳಿದರು.

'ಮಾತುಗಳಿಂದ ಜನರ ಮನಸ್ಸು ಗೆಲ್ಲಲು ಸಾಧ್ಯವಿಲ್ಲ. ಕ್ರಿಯಾಶೀಲತೆಯಿಂದ ಮಾತ್ರ ಸಾಧ್ಯ. ಇಲ್ಲದಿದ್ದರೆ, ಶಬ್ದ, ಶಬ್ದವಾಗಿ ಉಳಿಯುತ್ತದೆ. ನಾನು ತಪ್ಪು ಮಾಡಿದರೆ, ತಿದ್ದುವ ಅಧಿಕಾರ ನಿಮಗಿದೆ. ನನಗೆ ಯಾವುದೇ ಪ್ರತಿಷ್ಠೆ ಇಲ್ಲ. ಎಲ್ಲವೂ ಬಿಜೆಪಿಯ ಪ್ರತಿಷ್ಠೆ. ಅದನ್ನು ಕಾಪಾಡುವ ಕೆಲಸ ಮಾಡಬೇಕಿದೆ' ಎಂದರು.

'ಎಲ್ಲ ಕೆಲಸಗಳನ್ನು ಹೇಗೆ ಮಾಡಲಾಗುವುದು ಎಂಬ ಪ್ರಶ್ನೆ ಬೇಡ. ಅದಕ್ಕೊಂದು ಯೋಜನೆ ರೂಪಿಸಲಾಗಿದೆ. ನೀಡಿದ ಎಲ್ಲ ಭರವಸೆಗಳನ್ನು ಈಡೇರಿಸಲಾಗುವುದು. ಜನರ ಮುಂದೆ ಸಾಧನೆಗಳ ಪಟ್ಟಿ (ರಿಪೋರ್ಟ್ ಕಾರ್ಡ್) ಮಂಡಿಸಿ ಮತ ಕೇಳಲಾಗುವುದು. 2023ರಲ್ಲಿಯೂ ಬಿಜೆಪಿ ಅಧಿಕಾರಕ್ಕೆ ಬರಲಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಪರಿವಾರದ ಆಗ್ರಹ: ಹಿಂದೂ ದೇವಾಲಯಗಳ ಮೇಲೆ ಇರುವ ಸರ್ಕಾರದ ನಿಯಂತ್ರಣವನ್ನು ತೆಗೆದುಹಾಕಿ, ಅವುಗಳನ್ನು ಮುಕ್ತಗೊಳಿಸಬೇಕೆಂದು ಸಂಘಪರಿವಾರದ ಸಹಭಾಗಿ ಸಂಘಟನೆಗಳಾದ ಆರೆಸ್ಸೆಸ್, ವಿಶ್ವ ಹಿಂದೂ ಪರಿಷತ್, ಬಜರಂಗದಳ ಮತ್ತಿತರ ಸಂಘಟನೆಗಳು ಆಗ್ರಹಿಸುತ್ತಲೇ ಬಂದಿದ್ದವು. ಹಿಂದೂ ದೇವಾಲಯಗಳಲ್ಲಿ ಭಕ್ತರು ಹಾಕುವ ಕಾಣಿಕೆಗಳನ್ನು ಮುಜರಾಯಿ ಇಲಾಖೆ ಮೂಲಕ ಸರ್ಕಾರವೇ ಪಡೆದು ಅನ್ಯ ಉದ್ದೇಶಕ್ಕೆ ಬಳಸುತ್ತಿದೆ. ಅದರ ಬದಲು, ಆಯಾ ದೇವಸ್ಥಾನಗಳ ಹುಂಡಿಗಳಲ್ಲಿ ಸಂಗ್ರಹವಾಗುವ ಸಂಪನ್ಮೂಲವನ್ನು ದೇವಾಲಯಗಳ ಅಭಿವೃದ್ಧಿ ಮತ್ತು 'ಹಿಂದೂ'ಗಳ ಕಲ್ಯಾಣಕ್ಕೆ ಬಳಸಬೇಕು ಎಂಬುದು ಈ ಸಂಘಟನೆಗಳ ಒತ್ತಾಯವಾಗಿತ್ತು. ಅದನ್ನು ಈಗ ಅನುಷ್ಠಾನಕ್ಕೆ ತರಲು ಸರ್ಕಾರ ಮುಂದಾಗಿದೆ.

'ಪಿಸುಮಾತಿನ ಆಂದೋಲನ ಮಣಿಸೋಣ'

ಒಂದನೇ ಪುಟದಿಂದ...

'ದೇಶದಲ್ಲಿ ಸುಳ್ಳು ಮಾಹಿತಿಗಳ ನಕಾರಾತ್ಮಕ ಪಿಸುಮಾತಿನ ಆಂದೋಲನ ನಡೆದಿದೆ. ಇದನ್ನು ಕಡೆಗಣಿಸುವಂತಿಲ್ಲ. ತುರ್ತುಪರಿಸ್ಥಿತಿ ಸಂದರ್ಭದಲ್ಲಿ ಇಂದಿರಾಗಾಂಧಿ, ಎಲ್ಲ ಮಾಧ್ಯಮಗಳನ್ನು ತಮ್ಮ ಸುಪರ್ದಿಯಲ್ಲಿ ಇಟ್ಟುಕೊಂಡಿದ್ದರೂ, ಪಿಸುಮಾತಿನ ಆಂದೋಲನದಿಂದ ಸೋತಿದ್ದಾಗಿ ಹೇಳಿಕೊಂಡಿದ್ದರು' ಎಂದರು.

ಮಹಾಭಾರತ ಯುದ್ಧದ ಸಂದರ್ಭದಲ್ಲಿ ಕೌರವರ ಬಳಿ 11 ಅಕ್ಷೋಹಿಣಿ ಸೈನ್ಯ ಇತ್ತು. ಪಾಂಡವರ ಬಳಿ 7 ಅಕ್ಷೋಹಿಣಿ ಸೈನ್ಯವಿತ್ತು. ಕೌರವರ ಎಲ್ಲ ತಂತ್ರಗಳಿಗೆ ಪ್ರತಿ ತಂತ್ರ ಹೂಡಿ ಪಾಂಡವರು ಯುದ್ಧವನ್ನು ಗೆದ್ದರು. ಕರ್ನಾಟಕವನ್ನು ಐದು ಭಾಗವಾಗಿ ವಿಂಗಡಿಸಿದ, ಆಯಾ ಭಾಗಕ್ಕೆ ಸರಿಯಾದ ರೀತಿಯಲ್ಲಿ ರಣನೀತಿಗಳನ್ನು ರೂಪಿಸಬೇಕು. ಕರಾವಳಿ, ಹಳೇ ಮೈಸೂರು, ಉತ್ತರ ಕರ್ನಾಟಕ, ಮಧ್ಯ ಕರ್ನಾಟಕ ಮತ್ತು ಬೆಂಗಳೂರು ಮಹಾನಗರ ಎಲ್ಲದಕ್ಕೂ ವಿಭಿನ್ನ ಕಾರ್ಯತಂತ್ರ ರೂಪಿಸಬೇಕು ಎಂದು ಸಲಹೆ ನೀಡಿದರು.

'ಪ್ರಾಥಮಿಕ ಶಿಕ್ಷಣದಲ್ಲೂ ಎನ್‌ಇಪಿ ಜಾರಿ'

ಹುಬ್ಬಳ್ಳಿ: ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿಯೂ ಮುಂದಿನ ಏಪ್ರಿಲ್‌ನಿಂದ ಹೊಸ ಶಿಕ್ಷಣ ನೀತಿ ಜಾರಿ ಮಾಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಹೊಸ ಶಿಕ್ಷಣ ನೀತಿ ಜಾರಿಗೊಳಿಸುವುದು ಅಷ್ಟು ಸುಲಭವಾಗಿರಲಿಲ್ಲ. ಧೈರ್ಯದಿಂದ ಜಾರಿಗೊಳಿಸುವ ಮೂಲಕ ದೇಶದಲ್ಲಿಯೇ ಮೊದಲ ಸ್ಥಾನದಲ್ಲಿದ್ದೇವೆ ಎಂದು ಹೇಳಿದರು.

ನಮ್ಮ ನಾಯಕ ನರೇಂದ್ರ ಮೋದಿ ಹೊಸ ಶಿಕ್ಷಣ ನೀತಿ ತಂದಿದ್ದಾರೆ. ಸ್ಥಾಪಿತ ಶಕ್ತಿಗಳು ಬದಲಾವಣೆಗೆ ವಿರೋಧ ಮಾಡುವುದು ಸಹಜ. ಹಾಗೆಂದು ಹಳೇ ಆಲದಮರಕ್ಕೆ ನೇಣು ಹಾಕಿಕೊಳ್ಳುವ ಬದಲು ಮಕ್ಕಳಿಗೆ ನೆರಳು, ಫಲ ಕೊಡುವ ಹೊಸ ಗಿಡ ನೆಡುವ ಕೆಲಸ ಮಾಡಬೇಕಿದೆ. ಅದನ್ನು ಮಾಡಿದ್ದೇವೆ ಎಂದರು.

ಪ್ರಕರಣಗಳ ಪ್ರಮಾಣ ದೆಹಲಿಯಲ್ಲಿ ಶೇ 86, ಮುಂಬೈನಲ್ಲಿ ಶೇ 80ರಷ್ಟು ಹೆಚ್ಚಳ

ಮುಂಬೈ, ದೆಹಲಿಯಲ್ಲಿ ಕೋವಿಡ್ ಅಬ್ಬರ

ನವದೆಹಲಿ (ಪಿಟಿಐ): ಓಮೈಕ್ರಾನ್ ಒಳಗೊಂಡಂತೆ, ದೇಶದಲ್ಲಿ ಕೊರೊನಾ ವೈರಸ್ ಪ್ರಕರಣಗಳು ಸತತವಾಗಿ ಏರಿಕೆ ಕಾಣುತ್ತಿವೆ. ಬುಧವಾರ ಬೆಳಿಗ್ಗೆ ಕೊನೆಗೊಂಡ 24 ಗಂಟೆಗಳ ಅವಧಿಯಲ್ಲಿ ದೇಶದಲ್ಲಿ 9,195 ಪ್ರಕರಣಗಳು ವರದಿಯಾಗಿದ್ದು, ಇವುಗಳಲ್ಲಿ ಮಹಾರಾಷ್ಟ್ರ ಹಾಗೂ ದೆಹಲಿ ಮುಂಚೂಣಿಯಲ್ಲಿವೆ.

ದೆಹಲಿಯಲ್ಲಿ 923 ಕೋವಿಡ್ ಪ್ರಕರಣಗಳು ಪತ್ತೆಯಾಗಿದ್ದು, ಹಿಂದಿನ ದಿನಕ್ಕೆ ಹೋಲಿಸಿದರೆ ಶೇ 86ರಷ್ಟು ಏರಿಕೆ ಕಂಡುಬಂದಿದೆ. ಇದು ಮಾರ್ಚ್ 30ರ ಬಳಿಕ ದಾಖಲಾದ ಗರಿಷ್ಠ ಸಂಖ್ಯೆಯಾಗಿದೆ. ಕೋವಿಡ್ ದೃಢಪಡುವ ಪ್ರಮಾಣ ಸಹ ಶೇ 1.29ಕ್ಕೆ ಹೆಚ್ಚಳವಾಗಿದೆ.

ಮುಂಬೈನಲ್ಲಿ ಪ್ರಕರಣಗಳು ಶೇ 80ರಷ್ಟು ಜಿಗಿದಿವೆ. ಮಂಗಳವಾರ 1,377 ಸೋಂಕಿತರು ಕಂಡುಬಂದಿದ್ದ ನಗರದಲ್ಲಿ ಬುಧವಾರ 2,510 ಪ್ರಕರಣಗಳು ವರದಿಯಾಗಿವೆ.

ಕಳೆದ 8–10 ದಿನಗಳ ಅವಧಿಯಲ್ಲಿ ಮಹಾರಾಷ್ಟ್ರದ ಸಕ್ರಿಯ ಪ್ರಕರಣಗಳು 5 ಸಾವಿರದ ಗಡಿ ದಾಟಿವೆ. ಡಿಸೆಂಬರ್ 10ರಂದು ರಾಜ್ಯದಲ್ಲಿ 6,543 ಸಕ್ರಿಯ ಪ್ರಕರಣಗಳಿದ್ದವು, ಇವುಗಳ ಸಂಖ್ಯೆ ಬುಧವಾರ 11,492ಕ್ಕೆ ಏರಿಕೆಯಾಗಿದೆ. ಸದ್ಯದಲ್ಲೇ ಈ ಸಂಖ್ಯೆ 20 ಸಾವಿರದ ಗಡಿ ದಾಟಬಹುದು ಎಂದು ಆರೋಗ್ಯ ಸಚಿವ ರಾಜೇಶ್ ಟೋಪೆ ಅಂದಾಜಿಸಿದ್ದಾರೆ.

ದೇಶದಲ್ಲಿ ಓಮೈಕ್ರಾನ್ ಪ್ರಕರಣಗಳಲ್ಲೂ ಏರಿಕೆ ಕಂಡಬಂದಿದ್ದು, 21 ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಂದ ಒಟ್ಟು 781 ಪ್ರಕರಣ ದಾಖಲಾಗಿವೆ. 241 ಮಂದಿ ಗುಣಮುಖರಾಗಿದ್ದಾರೆ. ದೆಹಲಿಯಲ್ಲಿ ಅತಿಹೆಚ್ಚು, ಅಂದರೆ, 238 ಓಮೈಕ್ರಾನ್ ಸೋಂಕಿತರು ಇದ್ದಾರೆ. ನಂತರದ ಸ್ಥಾನದಲ್ಲಿರುವ ಮಹಾರಾಷ್ಟ್ರದಲ್ಲಿ 167 ಪ್ರಕರಣ ದೃಢಪಟ್ಟಿವೆ. ಕೇರಳದಲ್ಲಿ 65, ತೆಲಂಗಾಣದಲ್ಲಿ 62 ಪ್ರಕರಣ ದಾಖಲಾಗಿವೆ.

ಸೋಂಕು: ಶೇ 11ರಷ್ಟು ಏರಿಕೆ

ಬರ್ಲಿನ್ (ಎಪಿ): ಜಗತ್ತಿನಾದ್ಯಂತ ಕಳೆದ ಒಂದು ವಾರದಲ್ಲಿ ಕೊರೊನಾ ವೈರಸ್ ಪ್ರಕರಣಗಳಲ್ಲಿ ಶೇ 11ರಷ್ಟು ಹೆಚ್ಚಳ ಕಂಡುಬಂದಿದೆ ಎಂದು ತಿಳಿಸಿರುವ ವಿಶ್ವ ಆರೋಗ್ಯ ಸಂಸ್ಥೆಯು (ಡಬ್ಲ್ಯುಎಚ್‌ಒ), ಓಮೈಕ್ರಾನ್ ತಳಿ 'ಹೆಚ್ಚು ಅಪಾಯಕಾರಿ' ಎಂದು ಎಚ್ಚರಿಸಿದೆ.

ಡಿಸೆಂಬರ್ 22ರಿಂದ 26ರ ಅವಧಿಯಲ್ಲಿ ಅಮೆರಿಕ ಒಳಗೊಂಡಂತೆ ಜಗತ್ತಿನಾದ್ಯಂತ 49.9 ಲಕ್ಷ ಸೋಂಕಿತರು ಪತ್ತೆಯಾಗಿದ್ದಾರೆ ಎಂದು ತಿಳಿಸಿದೆ. ಇದರಲ್ಲಿ ಯುರೋಪ್‌ನ ಪಾಲು ಅರ್ಧದಷ್ಟಿದ್ದು, 28.4 ಲಕ್ಷ ಸೋಂಕಿತರು ಇದ್ದಾರೆ. ಹಿಂದಿನ ವಾರಗಳಿಗೆ ಹೋಲಿಸಿದರೆ, ಕಳೆದ ವಾರ ಯುರೋಪ್‌ನಲ್ಲಿ ಆಗಿರುವ ಹೆಚ್ಚಳ ಶೇ 3 ಮಾತ್ರ. ಆದರೆ ಬೇರೆ ಪ್ರದೇಶಗಳಿಗೆ ಹೋಲಿಸಿದರೆ ಇಲ್ಲಿ ಸೋಂಕು ದರ ಅತ್ಯಧಿಕವಾಗಿದೆ. ಪ್ರತೀ ಲಕ್ಷ ಜನರ ಪೈಕಿ 304.6 ಜನರಲ್ಲಿ ಸೋಂಕು ಕಂಡುಬರುತ್ತಿದೆ.

ಇದೇ ಅವಧಿಯಲ್ಲಿ 14.8 ಲಕ್ಷ ಹೊಸ ಪ್ರಕರಣ ವರದಿಯಾಗುವ ಮೂಲಕ, ಅಮೆರಿಕ ವಲಯದಲ್ಲಿ ಕೋವಿಡ್ ಪ್ರಕರಣಗಳ ಪ್ರಮಾಣ ಶೇ 39ರಷ್ಟು ಹೆಚ್ಚಳವಾಗಿದೆ. ಇಲ್ಲಿ ಸೋಂಕು ದರ 144.4ರಷ್ಟಿದೆ. ಅಮೆರಿಕ ದೇಶವೊಂದರಲ್ಲೇ 11.8 ಲಕ್ಷ ಪ್ರಕರಣಗಳು ಕಂಡುಬಂದಿದ್ದು, ಶೇ 38ರಷ್ಟು ಏರಿಕೆ ದಾಖಲಿಸಿವೆ. ಆಫ್ರಿಕಾದಲ್ಲಿ 2.75 ಲಕ್ಷ ಪ್ರಕರಣಗಳು ಕಂಡುಬಂದಿದ್ದು ಶೇ 7ರಷ್ಟು ಏರಿಕೆ ದಾಖಲಾಗಿದೆ.

ಮೊದಲು ಸೋಂಕು ಪತ್ತೆಯಾಗಿದ್ದ ದಕ್ಷಿಣ ಆಫ್ರಿಕಾದಲ್ಲಿ ಪ್ರಕರಣಗಳು ಇಳಿಮುಖವಾಗಿವೆ. ಬ್ರಿಟನ್ ಹಾಗೂ ಡೆನ್ಮಾರ್ಕ್‌ನಲ್ಲಿ ಓಮೈಕ್ರಾನ್‌ನಿಂದ ಆಸ್ಪತ್ರೆ ಸೇರುವವರ ಪ್ರಮಾಣ ಕಡಿಮೆಯಾಗಿದೆ. ಸೋಂಕಿನ ತೀವ್ರತೆಯನ್ನು ಅರಿಯಬೇಕಾದರೆ, ಇನ್ನಷ್ಟು ಕ್ಲಿನಿಕಲ್ ಮಾಹಿತಿಗಳು ಅಗತ್ಯ ಎಂದು ಸಂಸ್ಥೆ ತಿಳಿಸಿದೆ.

ಕೋವಿಡ್ ಸುನಾಮಿ: ಟೆಡ್ರೋಸ್ ಆತಂಕ

ಓಮೈಕ್ರಾನ್ ಮತ್ತು ಡೆಲ್ಟಾ ರೂಪಾಂತರಗಳೆರಡರಿಂದಲೂ ಉಂಟಾಗಲಿರುವ ಪ್ರಕರಣಗಳ ಸುನಾಮಿಯು ಜಗತ್ತಿನ ಆರೋಗ್ಯ ವ್ಯವಸ್ಥೆಯನ್ನು ಪ್ರಪಾತಕ್ಕೆ ತಳ್ಳಲಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಬುಧವಾರ ಎಚ್ಚರಿಸಿದೆ.

'ಓಮೈಕ್ರಾನ್ ತಳಿಯ ಪ್ರಕರಣಗಳು ವೇಗವಾಗಿ ಹಬ್ಬುತ್ತಿರುವ ಬಗ್ಗೆ ತೀವ್ರ ಕಳವಳವಿದ್ದು, ಡೆಲ್ಟಾ ತಳಿ ಕೂಡಾ ಪ್ರಕರಣಗಳನ್ನು ಸುನಾಮಿಯಂತೆ ಹೆಚ್ಚಿಸಬಲ್ಲದು. ಈ ವಿದ್ಯಮಾನವು ಈಗಾಗಲೇ ದಣಿದಿರುವ ಆರೋಗ್ಯ ವಲಯದ ಮೇಲೆ ಅತಿಹೆಚ್ಚು ಒತ್ತಡ ಉಂಟು ಮಾಡಲಿದೆ' ಎಂದು ಮುಖ್ಯಸ್ಥ ಟೆಡ್ರೊಸ್ ಅಧಾನೊಮ್ ಘೆಬ್ರೆಯೆಸಸ್ ಹೇಳಿದ್ದಾರೆ.

ಓಮೈಕ್ರಾನ್: 5 ಪ್ರಕರಣ ಪತ್ತೆ

ಬೆಂಗಳೂರು: ರಾಜ್ಯದಲ್ಲಿ ಓಮೈಕ್ರಾನ್‌ನ 5 ಹೊಸ ಪ್ರಕರಣಗಳು ಬುಧವಾರ ಪತ್ತೆಯಾಗಿದ್ದು, ಒಟ್ಟು ಪ್ರಕರಣಗಳ ಸಂಖ್ಯೆ 43ಕ್ಕೆ ಏರಿಕೆಯಾಗಿದೆ.

ಬೆಂಗಳೂರಿನಲ್ಲಿ 4, ದಾವಣಗೆರೆಯಲ್ಲಿ ಒಂದು ಪ್ರಕರಣ ಹೊಸದಾಗಿ ದೃಢಪಟ್ಟಿದೆ. ಈ ಬೆನ್ನಲ್ಲೇ ಕೋವಿಡ್ ಪ್ರಕರಣಗಳ ಸಂಖ್ಯೆ ಕೂಡ ಏರಿಕೆ ಕಂಡಿದ್ದು, ಒಂದೇ ದಿನ 566 ಮಂದಿಯಲ್ಲಿ ಸೋಂಕು ದೃಢಪಟ್ಟಿದೆ. ಎರಡೂವರೆ ತಿಂಗಳ ಅವಧಿಯಲ್ಲಿ ದಿನವೊಂದಕ್ಕೆ ದೃಢಪಟ್ಟ ಗರಿಷ್ಠ ಪ್ರಕರಣಗಳು ಇವಾಗಿವೆ. ರಾಜ್ಯದ 22 ಜಿಲ್ಲೆಗಳಲ್ಲಿ ಕೋವಿಡ್ ಪ್ರಕರಣಗಳು ಹೊಸದಾಗಿ ಪತ್ತೆಯಾಗಿವೆ.

- ಸೀರಂ ಇನ್‌ಸ್ಟಿಟ್ಯೂಟ್ ತಯಾರಿಸುವ ಕೋವೊವ್ಯಾಕ್ಸ್ ಲಸಿಕೆಯ 7 ಕೋಟಿ ಡೋಸ್‌ಗಳನ್ನು ನ್ಯೂಜಿಲೆಂಡ್, ನೆದರ್ಲೆಂಡ್ಸ್ ಹಾಗೂ ಆಸ್ಟ್ರೇಲಿಯಾಗೆ ರಫ್ತು ಮಾಡಲು ಕೇಂದ್ರ ಸರ್ಕಾರ ಅನುಮತಿ ನೀಡಿದೆ
- ಕೋವಿಡ್ ಪ್ರಕರಣಗಳು ಹೆಚ್ಚಳ ಕಾಣುತ್ತಿರುವ ಹಿನ್ನೆಲೆಯಲ್ಲಿ, ತಮಿಳುನಾಡಿನ ಎಲ್ಲ ಕಡಲ ತೀರಗಳಲ್ಲಿ ಹೊಸ ವರ್ಷಾಚರಣೆಯನ್ನು ರದ್ದುಪಡಿಸಲಾಗಿದೆ
- ದೆಹಲಿಯಲ್ಲಿ ಓಮೈಕ್ರಾನ್ ಪ್ರಕರಣಗಳು ಅತ್ಯಧಿಕವಾಗುತ್ತಿದ್ದು, ನಗರದ ಕೋಚಿಂಗ್ ಕೇಂದ್ರಗಳನ್ನು ಮುಚ್ಚಲಾಗಿದ್ದು, ಮುಂದಿನ ಆದೇಶದವರೆಗೆ ಆನ್‌ಲೈನ್ ತರಗತಿ ನಡೆಸುವಂತೆ ಸೂಚಿಸಲಾಗಿದೆ
- ಪಶ್ಚಿಮ ಬಂಗಾಳದಲ್ಲಿ ಕೋವಿಡ್ ಸ್ಥಿತಿ ಹದಗೆಟ್ಟರೆ, ಶಾಲಾ–ಕಾಲೇಜುಗಳನ್ನು ಕೆಲಕಾಲ ಬಂದ್ ಮಾಡುವ ಸುಳಿವನ್ನು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ನೀಡಿದ್ದಾರೆ
- ಚೆನ್ನೈನಲ್ಲಿ 45 ಓಮೈಕ್ರಾನ್ ಪತ್ತೆಯಾಗಿರುವದರಿಂದ, ಕಂಟೇನ್ಮೆಂಟ್ ವಲಯಗಳನ್ನು ಗುರುತಿಸುವ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ
- ತೆಲುಗು ನಟ ಮನೋಜ್ ಮಂಚು ಅವರಿಗೆ ಕೋವಿಡ್ ದೃಢಪಟ್ಟಿದೆ

10 ವಿದ್ಯಾರ್ಥಿಗಳಿಗೆ ಕೋವಿಡ್ ದೃಢ

ಶ್ರೀನಿವಾಸಪುರ: ತಾಲ್ಲೂಕಿನ ಸೋಮಯಾಜಲಹಳ್ಳಿಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯ 10 ವಿದ್ಯಾರ್ಥಿಗಳಿಗೆ ಕೋವಿಡ್ ಸೋಂಕು ದೃಢಪಟ್ಟಿದೆ.

ವಸತಿ ಶಾಲೆಯಲ್ಲಿನ 221 ವಿದ್ಯಾರ್ಥಿಗಳಿಗೆ ಬುಧವಾರ ಕೋವಿಡ್ ಪರೀಕ್ಷೆ ನಡೆಸಲಾಗಿತ್ತು. ಅವರಲ್ಲಿ ಹತ್ತು ವಿದ್ಯಾರ್ಥಿಗಳಲ್ಲಿ ಸೋಂಕು ಪತ್ತೆಯಾಗಿದೆ. ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ವಿ. ಉಮಾದೇವಿ ತಿಳಿಸಿದ್ದಾರೆ.

ಹಳ್ಳಿಕೆರೆ ಸರ್ಕಾರಿ ಶಾಲೆ ವಿದ್ಯಾರ್ಥಿಗಳಿಗೆ ಕೋವಿಡ್ (ಮದ್ದೂರು ವರದಿ): ತಾಲ್ಲೂಕಿನ ಕೆ.ಹೊನ್ನಲಗೆರೆ ಬಳಿಯ ಹಳ್ಳಿಕೆರೆ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯ 5 ವಿದ್ಯಾರ್ಥಿಗಳಿಗೆ ಕೋವಿಡ್ ದೃಢಪಟ್ಟಿದೆ.

ಪಶ್ಚಿಮ ಬಂಗಾಳದ 23 ಕಾರ್ಮಿಕರಿಗೆ ಸೋಂಕು

ಹಾಸನ: ಸಕಲೇಶಪುರ ತಾಲ್ಲೂಕಿನ ದೇವಿಹಳ್ಳಿ ಹಾಗೂ ಆನೆ ಮಹಲ್ ಕಾಫಿ ತೋಟಗಳಲ್ಲಿರುವ ಪಶ್ಚಿಮ ಬಂಗಾಳದ 35 ಕಾರ್ಮಿಕರ ಪೈಕಿ 23 ಮಂದಿಗೆ ಕೋವಿಡ್ ದೃಢಪಟ್ಟಿದೆ.

ಪುರುಷೋತ್ತಮ ಮಾಸ್ಟರ್, ವಿದ್ಯಾವರ್ಧಕ ಸಂಘಕ್ಕೆ ಪ್ರಶಸ್ತಿ

ಬೆಂಗಳೂರು: ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ನೀಡುವ ಕಯ್ಯಾರ ಕಿಞ್ಞಣ್ಣ ರೈ ಪ್ರಶಸ್ತಿಗೆ ಕಾಸರಗೋಡಿನ ಬಿ. ಪುರುಷೋತ್ತಮ ಮಾಸ್ಟರ್ ಹಾಗೂ ಜಯದೇವಿತಾಯಿ ಲಿಗಾಡೆ ಪ್ರಶಸ್ತಿಗೆ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ ಆಯ್ಕೆಯಾಗಿದೆ.

ಪ್ರಾಧಿಕಾರದ ಅಧ್ಯಕ್ಷ ಸಿ. ಸೋಮಶೇಖರ್ ನೇತೃತ್ವದ ಸಮಿತಿ ಈ ಆಯ್ಕೆ ಮಾಡಿದೆ. ಪ್ರಶಸ್ತಿ ತಲಾ ₹ 1 ಲಕ್ಷ ನಗದು ಒಳಗೊಂಡಿದೆ. ಪುರುಷೋತ್ತಮ ಮಾಸ್ಟರ್ ಅವರು ಕಣ್ಣೂರು ವಿಶ್ವವಿದ್ಯಾಲಯದ ಸಂದರ್ಶಕ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ್ದರು. ಗಡಿ ಭಾಗದಲ್ಲಿ ಕನ್ನಡದ ಅನೇಕ ಜ್ವಲಂತ ಸಮಸ್ಯೆಗಳಿಗೆ ಸ್ಪಂದಿಸಿ, ಹೋರಾಟ ನಡೆಸಿದ್ದರು.



ಪುರುಷೋತ್ತಮ ಮಾಸ್ಟರ್

1890ರ ಜು.20ರಂದು ಸ್ಥಾಪನೆಯಾದ ಕರ್ನಾಟಕ ವಿದ್ಯಾವರ್ಧಕ ಸಂಘವು ನೆಲ, ಜಲ, ಭಾಷೆ ಮತ್ತು ಕರ್ನಾಟಕದ ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿ, ಬೆಳೆಸಲು ಶ್ರಮಿಸುತ್ತಿದೆ ಎಂದು ತಿಳಿಸಿದೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ





ತೀರ್ಥಹಳ್ಳಿ ತಾಲ್ಲೂಕಿನ ಕುಪ್ಪಳಿಯ ಹೇಮಾಂಗಣದಲ್ಲಿ ಬುಧವಾರ ನಡೆದ 117ನೇ ಕುವೆಂಪು ಜನ್ಮದಿನೋತ್ಸವ ಹಾಗೂ ವಿಶ್ವಮಾನವ ದಿನಾಚರಣೆ ಕಾರ್ಯಕ್ರಮದಲ್ಲಿ 'ಕುವೆಂಪು ರಾಷ್ಟ್ರೀಯ ಪುರಸ್ಕಾರ'ವನ್ನು ತೆಲುಗು ಸಾಹಿತಿ ಪಿ. ಸತ್ಯವತಿ ಅವರಿಗೆ ಪ್ರದಾನ ಮಾಡಲಾಯಿತು. ಕುವೆಂಪು ಪ್ರತಿಷ್ಠಾನದ ಅಧ್ಯಕ್ಷ ಪ್ರೊ. ಹಂಪ ನಾಗರಾಜಯ್ಯ, ಕೆಎಸ್‌ನ ಪ್ರತಿಷ್ಠಾನದ ಅಧ್ಯಕ್ಷ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ, ನಾಟಕಕಾರ ಡಾ.ಕೆ.ವೈ. ನಾರಾಯಣಸ್ವಾಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕ ರಂಗಪ್ಪ, ವಿಶ್ರಾಂತ ಕುಲಪತಿ ಡಾ.ಕೆ. ಚಿದಾನಂದಗೌಡ, ಕುವೆಂಪು ವಿವಿ ಕುಲಪತಿ ಪ್ರೊ. ಬಿ.ಪಿ. ವೀರಭದ್ರಪ್ಪ, ವಿಮರ್ಶಕ ಡಿ.ಎಸ್. ನಾಗಭೂಷಣ್ ಇದ್ದರು.

13ನೇ ದಿನಕ್ಕೆ ಕಾಲಿಟ್ಟ ವೈದ್ಯರ ಪ್ರತಿಭಟನೆ

ನವದೆಹಲಿ (ಪಿಟಿಐ): ವೈದ್ಯಕೀಯ ಸ್ನಾತ್ತಕೋತ್ತರ ಕೋರ್ಸ್‌ಗಳ ಪ್ರವೇಶ ಪರೀಕ್ಷೆಗೆ ಸಂಬಂಧಿಸಿದ ಕೌನ್ಸಿಲಿಂಗ್(ನೀಟ್ ಪಿಜಿ ಕೌನ್ಸಿಲಿಂಗ್) ವಿಳಂಬವಾಗಿದ್ದನ್ನು ವಿರೋಧಿಸಿ ವೈದ್ಯರು ನಡೆಸುತ್ತಿರುವ ಪ್ರತಿಭಟನೆ ಬುಧವಾರ 13ನೇ ದಿನಕ್ಕೆ ಕಾಲಿಟ್ಟಿತು. ಪ್ರತಿಭಟನೆಗೆ ಮತ್ತಷ್ಟು ಸ್ಥಾನಿಕ ವೈದ್ಯರು ಬೆಂಬಲ ನೀಡಿದರು.

ಇಳಕಲ್‌ನ ಸೇಂಟ್ ಪಾಲ್ ಶಾಲೆಯಲ್ಲಿ ಆಮಿಷವೊಡ್ಡಿ ಮತಾಂತರ: ಬಿಜೆಪಿ ಆರೋಪ

ಮತಾಂತರ: ಶಾಲೆ ಮಾನ್ಯತೆ ರದ್ದತಿಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಇಳಕಲ್ (ಬಾಗಲಕೋಟೆ ಜಿಲ್ಲೆ): 'ಪಟ್ಟಣದ ಸೇಂಟ್ ಪಾಲ್ ಕಾನ್ವೆಂಟ್ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಹಾಗೂ ಪಾಲಕರಿಗೆ ಆಮಿಷ ಒಡ್ಡಿ ಮತಾಂತರ ಮಾಡಲಾಗುತ್ತಿದ್ದು, ಕೂಡಲೇ ಶಾಲೆಯ ಮಾನ್ಯತೆ ರದ್ದುಪಡಿಸಿ, ಮತಾಂತರಕ್ಕೆ ಕುಮ್ಮಕ್ಕು ನೀಡಿದವರ ವಿರುದ್ಧ ಸರ್ಕಾರ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿ ಇಲ್ಲಿಯ ಬಿಜೆಪಿ ಹಾಗೂ ಆರ್‌ಎಸ್‌ಎಸ್ ಪ್ರಮುಖರು ಬುಧವಾರ ಪ್ರತಿಭಟನೆ ನಡೆಸಿದರು.

'ಡಿ.25ರಂದು ಇಲ್ಲಿನ ಸೇಂಟ್ ಪಾಲ್ ಕಾನ್ವೆಂಟ್ ಶಾಲೆಯಲ್ಲಿ ಕ್ರಿಸ್‌ಮಸ್ ಆಚರಣೆ ನಡೆದಲ್ಲಿ ವಿದ್ಯಾರ್ಥಿಗಳು ಹಾಗೂ ಪಾಲಕರನ್ನು ಸೇರಿಸಿ, ಅವರಿಗೆ ಮಾಂಸದ ಊಟ ಬಡಿಸಿ, ಪ್ರಸಾದವೆಂದು ವೈನ್ ಹಾಗೂ 'ಸತ್ಯವೇದ' ಎನ್ನುವ ಪುಸ್ತಕ ನೀಡಿದ್ದಾರೆ. ಶಾಲೆಯ ನೆರೆಹೊರೆಯವರು ನೀಡಿದ ದೂರಿನ ಮೇರೆಗೆ ಶಿಕ್ಷಣ ಸಂಯೋಜಕರು ಶಾಲೆಗೆ ಭೇಟಿ ನೀಡಿ, ಬಿಇಒ ಅವರಿಗೆ ವರದಿ ನೀಡಿದ್ದಾರೆ. ಆದರೂ ಈವರೆಗೆ ಶಾಲೆಯ ಸಿಬ್ಬಂದಿ ಹಾಗೂ ಆಡಳಿತ ಮಂಡಳಿ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲ' ಎಂದು ಬಿಜೆಪಿ ಮುಖಂಡರು ಆರೋಪಿಸಿದರು.

'ಶಾಲೆಯ ಮುಖ್ಯಶಿಕ್ಷಕ ಸೆಲ್ವಿಯಾ ಡಿ.ಮಾರ್ಕ್ ಮತ್ತು ಆಡಳಿತ ಮಂಡಳಿ ಸದಸ್ಯ ಜಾನ್ಸನ್ ಡಿ.ಮಾರ್ಕ್ ಅವರು ಹರಪನಹಳ್ಳಿಯ ಉಮೇಶ ನಾಯಕ ಎಂಬ ಪಾದ್ರಿಯ ಜೊತೆಗೂಡಿ, ಶಾಲೆಯಲ್ಲಿ ಪ್ರತಿ ಭಾನುವಾರ ವಿದ್ಯಾರ್ಥಿಗಳು, ಪಾಲಕರು ಹಾಗೂ ವಿವಿಧ ಸಮುದಾಯಗಳ ಬಡವರನ್ನು ಹಾಗೂ ಮುಗ್ಧರನ್ನು ಕರೆ ತಂದು ಆಮಿಷ ಒಡ್ಡುತ್ತಿದ್ದಾರೆ. ಇಲ್ಲಿ ಕ್ರೈಸ್ತ ಧರ್ಮದ ಬೋಧನೆ ಮಾಡಿ, ಮತಾಂತರಕ್ಕೆ ಪ್ರಚೋದಿಸುತ್ತಿದ್ದಾರೆ' ಎಂದು ದೂರಿದರು. ಬಳಿಕ ಗ್ರೇಡ್ 2 ತಹಶಿಲ್ದಾರ್ ರತ್ನಾ ಕೆ. ಅವರಿಗೆ ಮನವಿ ಸಲ್ಲಿಸಿದರು.

ಶಾಲೆ ಬಂದ್: ಈ ಶಾಲೆಯಲ್ಲಿ 400 ವಿದ್ಯಾರ್ಥಿಗಳು ಓದುತ್ತಿದ್ದು, ಮುಂದಿನ ಆದೇಶದವರೆಗೆ ಶಾಲೆ ಮುಚ್ಚುವಂತೆ ಬಿಇಒ ಅವರು ಸೂಚನೆ ನೀಡಿದ್ದರಿಂದ ಡಿ.27ರಿಂದ ಶಾಲೆಯನ್ನು ಮುಚ್ಚಲಾಗಿದೆ.




ಇಳಕಲ್‌ನ ಸೇಂಟ್ ಪಾಲ್ ಶಾಲೆಯಲ್ಲಿ ಮತಾಂತರ ನಡೆಯುತ್ತಿದೆ ಎಂದು ಆರೋಪಿಸಿ ಬಿಜೆಪಿ ಹಾಗೂ ಸಂಘ ಪರಿವಾರದ ಪ್ರಮುಖರು ಬುಧವಾರ ಪ್ರತಿಭಟನೆ ನಡೆಸಿ ಶಾಲೆಯ ಮಾನ್ಯತೆ ರದ್ದುಪಡಿಸುವಂತೆ ಒತ್ತಾಯಿಸಿದರು

ಮತಾಂತರ ಆರೋಪ ಸುಳ್ಳು

ಇಳಕಲ್: 'ಸೇಂಟ್ ಪಾಲ್ ಸ್ಕೂಲ್ ನೇಕಾರ ಸೊಸೈಟಿಯ ಬಾಡಿಗೆ ಕಟ್ಟಡದಲ್ಲಿದೆ. ಶಾಲೆಗೆ ಸಂಬಂಧಿಸಿದ ಜಾಗ ಇಲ್ಲವೇ ಕಟ್ಟಡದಲ್ಲಿ ಕ್ರಿಸ್‌ಮಸ್ ಆಚರಣೆ ನಡೆದಿಲ್ಲ. ಮಾಂಸದ ಅಡುಗೆಯನ್ನೂ ತಯಾರಿಸಿಲ್ಲ. ಅಂದು ಶಾಲೆಗೆ ರಜೆ ನೀಡಲಾಗಿತ್ತು. ಶಾಲೆಯಲ್ಲಿ ಯಾವುದೇ ಮತಾಂತರದ ಚಟುವಟಿಕೆಗಳು ನಡೆದಿಲ್ಲ' ಎಂದು ಸೆಂಟ್‌ಪಾಲ್ ಕಾನ್ವೆಂಟ್ ಸ್ಕೂಲ್‌ನ ಅಧ್ಯಕ್ಷ ಪ್ರಶಾಂತ ಹಂಚಾಟೆ ಸ್ಪಷ್ಟಪಡಿಸಿದರು.

ತಮ್ಮ ವಿರುದ್ಧದ ಆರೋಪಗಳಿಗೆ ಪ್ರತಿಕ್ರಿಯಿಸಿದ ಆಡಳಿತ ಮಂಡಳಿ ಸದಸ್ಯ ಜಾನ್ಸನ್ ಡಿ.ಮಾರ್ಕ್, 'ನಮ್ಮ ಮೇಲಿನ ಆರೋಪಗಳು ಸುಳ್ಳು. ನಾವು ಮತಾಂತರ ಮಾಡುತ್ತಿಲ್ಲ. ಶಾಲೆಗೆ ಹೊಂದಿಕೊಂಡಿರುವ ಬೇರೆ ಕಟ್ಟಡದಲ್ಲಿ ಕ್ರಿಸ್‌ಮಸ್ ಆಚರಣೆ ನಡೆದಿದ್ದನ್ನು ಕೆಲವರು ತಪ್ಪಾಗಿ ಗ್ರಹಿಸಿದ್ದಾರೆ' ಎಂದಿದ್ದಾರೆ.

ಮತಾಂತರ ನಿಷೇಧ ಕಾಯ್ದೆ ವಿರೋಧಿಸಲು ವಿಶ್ವನಾಥ್ ಸಲಹೆ



ಮೈಸೂರು: 'ಮಠಾಧೀಶರು ಹಾಗೂ ಧರ್ಮಾಧಿಕಾರಿಗಳು ಮತಾಂತರ ನಿಷೇಧ ಕಾಯ್ದೆಯನ್ನು ಖಂಡಿಸಬೇಕು' ಎಂದು ವಿಧಾನ ಪರಿಷತ್ ಸದಸ್ಯ ಅಡಗೂರು ಎಚ್.ವಿಶ್ವನಾಥ್ ಒತ್ತಾಯಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಸಂಶೋಧಕರ ಸಂಘ ಹಾಗೂ ದಲಿತ ವಿದ್ಯಾರ್ಥಿಗಳ ಒಕ್ಕೂಟವು ಮಾನಸಗಂಗೋತ್ರಿಯಲ್ಲಿ ಬುಧವಾರ ಏರ್ಪಡಿಸಿದ್ದ ಕುವೆಂಪು ಜನ್ಮದಿನಾಚರಣೆಯಲ್ಲಿ ಸರ್ವಧರ್ಮಗಳ ಧರ್ಮಾಧಿಕಾರಿಗಳ ಸಮ್ಮುಖದಲ್ಲಿ ಅವರು ಮಾತನಾಡಿದರು.

'ವಿದೇಶೀಯರನ್ನು ಹಾಗೂ ಬೇರೆ ಧರ್ಮದವರನ್ನು ಮದುವೆ ಮಾಡಿಕೊಂಡು ಬಂದವರಿಗೆ ಲಿಂಗಧಾರಣೆ ಮಾಡುವುದು ಮತಾಂತರದಂತೆಯೇ. ಕಾಯ್ದೆ ಜಾರಿಗೆ ಬಂದರೆ ಈ ರೀತಿ ಲಿಂಗಧಾರಣೆ ಮಾಡುವ ಸ್ವಾಮೀಜಿಗಳನ್ನು ಜೈಲಿಗೆ ಕಳುಹಿಸುತ್ತಾರೆಯೇ' ಎಂದು ಪ್ರಶ್ನಿಸಿದರು.

'ಜಾತಿಗೊಂದು ಮಠ ಕಟ್ಟಿಕೊಂಡಿರುವ ಮಠಾಧೀಶರು ಕಾಯ್ದೆ ಬಗ್ಗೆ ಮಾತನಾಡುತ್ತಿಲ್ಲ. ಕ್ರೈಸ್ತ, ಮುಸ್ಲಿಮರು ಹೆಚ್ಚಿರುವ ದೇಶಗಳಲ್ಲಿ ಲಕ್ಷಾಂತರ ಭಾರತೀಯರಿದ್ದಾರೆ, ನಮ್ಮಲ್ಲಿರುವ ಕ್ರೈಸ್ತರನ್ನು, ಮುಸ್ಲಿಮರನ್ನು ಸಹಿಸಿಕೊಳ್ಳದಿರುವುದು ಸರಿಯಲ್ಲ' ಎಂದು ಪ್ರತಿಪಾದಿಸಿದರು.

'ಮುಸ್ಲಿಮರ ಬಳಿಕ ಹಿಂದುತ್ವ ಬ್ರಿಗೇಡ್‌ನ ಗುರಿ ಕ್ರೈಸ್ತರು'

ನವದೆಹಲಿ: ಮುಸ್ಲಿಮರ ಬಳಿಕ ಹಿಂದುತ್ವ ಬ್ರಿಗೇಡ್ ಕ್ರೈಸ್ತರನ್ನು ಗುರಿ ಮಾಡುತ್ತಿದೆ ಎಂದು ಕಾಂಗ್ರೆಸ್ ನಾಯಕ ಪಿ. ಚಿದಂಬರಂ ಬುಧವಾರ ಆರೋಪಿಸಿದ್ದಾರೆ.

ನೊಬೆಲ್ ಪ್ರಶಸ್ತಿ ವಿಜೇತೆ ಮದರ್ ತೆರೆಸಾ ಮಿಷನರೀಸ್ ಆಫ್ ಚಾರಿಟಿ (ಎಂಒಸಿ) ಖಾತೆ ನವೀಕರಣವನ್ನು ನಿರಾಕರಿಸುವ ಮೂಲಕ ಬಡವರು ಹಾಗೂ ಉತ್ತಮ ಸೇವೆ ಮಾಡುತ್ತಿರುವ ಸರ್ಕಾರೇತರ ಸಂಸ್ಥೆಯ (ಎನ್‌ಜಿಒ) ಮೇಲೆ ದಾಳಿ ಮಾಡಿದೆ ಎಂದು ಆರೋಪಿಸಿದ್ದಾರೆ.

ಮುಖ್ಯ ಸುದ್ದಿವಾಹಿನಿಗಳು ಈ ಕುರಿತು ವರದಿ ಮಾಡದಿರುವುದು ಚಿದಂಬರಂ ಆಕ್ರೋಶಕ್ಕೆ ಕಾರಣವಾಗಿದೆ. 'ಇದು ನಿಜಕ್ಕೂ ಅವಮಾನಕರ ಎಂದು ಹೇಳಿದ್ದಾರೆ.

ಕೋಲ್ಕತ್ತ, ಪಶ್ಚಿಮ ಬಂಗಾಳದಲ್ಲಿ ಮಿಷನರೀಸ್ ಆಫ್ ಚಾರಿಟಿಗೆ ಭವಿಷ್ಯದ ವಿದೇಶ ದೇಣಿಗೆ ನಿರಾಕರಿಸಿರುವುದು ಆಶ್ಚರ್ಯಕರವಾದದ್ದೇನೂ ಇಲ್ಲ. ಇದು ಭಾರತದಲ್ಲಿ ಬಡವರು ಹಾಗೂ ದಲಿತರ ಸೇವೆಗೆ ತಮ್ಮ ಜೀವನವನ್ನೇ ಮುಡಿಪಾಗಿಟ್ಟ ನೊಬೆಲ್ ಪ್ರಶಸ್ತಿ ವಿಜೇತೆ ಮದರ್ ತೆರೆಸಾ ಅವರ ಸ್ಮರಣೆಗೆ ಆದ ದೊಡ್ಡ ಅವಮಾನ ಎಂದು ಹೇಳಿದ್ದಾರೆ.

'ಕ್ರೈಸ್ತಧರ್ಮ ಮಾರುಕಟ್ಟೆಯ ಸರಕೇ?'

ಮೈಸೂರು: 'ಕ್ರೈಸ್ತಧರ್ಮ ಮಾರುಕಟ್ಟೆಯ ಸರಕೇ? ನಿಮ್ಮ ಧರ್ಮವನ್ನು ಸರಕಾಗಿಸಬೇಡಿ. ಮೋಸದ ಮತಾಂತರ ತಡೆಯುವುದೇ ಮತಾಂತರ ನಿಷೇಧ ಕಾಯ್ದೆಯ ಉದ್ದೇಶ' ಎಂದು ಸಂಸದ ಪ್ರತಾಪ ಸಿಂಹ ಅವರು ಪ್ರತಿಪಾದಿಸಿದರು.

ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಜನರನ್ನು ಮಂಗಗಳನ್ನಾಗಿಸಿ ಮತಾಂತರಿಸುವುದಕ್ಕೆ ನಮ್ಮ ವಿರೋಧವಿದೆ. ಉತ್ಪನ್ನವನ್ನು ಮಾರಲು ತಂತ್ರಗಳನ್ನು ಅನುಸರಿಸುವಂತೆ, ನಿಮ್ಮ ಧರ್ಮವನ್ನು ತಂತ್ರಗಾರಿಕೆಯಿಂದ ಪ್ರಚಾರ ಮಾಡ ಬೇಡಿ' ಎಂದು ಮತಾಂತರ ನಿಷೇಧ ಕಾಯ್ದೆ ವಿರೋಧಿಸುತ್ತಿರುವವರ ಮೇಲೆ ಹರಿಹಾಯ್ದರು.

ಕರ್ನಾಟಕ ಸರ್ಕಾರ

ಪೊಲೀಸ್ ಇಲಾಖೆ

ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್‌ರವರ ಕಛೇರಿ, ನಂ. 2, ನೃಪತುಂಗ ರಸ್ತೆ, ಬೆಂಗಳೂರು–560001,
ದೂರವಾಣಿ ಸಂಖ್ಯೆ: 080 22942822 ಇ–ಮೇಲ್: ssstores1co@ksp.gov.in

ಸಂಖ್ಯೆ: 59/ಸಂಗ್ರಹ–1(3)/2021–22 ದಿನಾಂಕ: 29–12–2021

ಇ–ಖರೀದಿ ನೋಟೀಸ್

ಸರ್ಕಾರದ ನೋಟಿಫಿಕೇಷನ್ ನಂ. ಡಿಪಿಎಆರ್ 3 ಇಪಿಆರ್ 2010(2), ದಿನಾಂಕ: 01–06–2010 ರ ಪ್ರಕಾರ ಪೊಲೀಸ್ ಇಲಾಖೆಯು ಇನ್ನು ಮುಂದೆ ರೂ. 1.00 ಲಕ್ಷ ಮತ್ತು ಇದಕ್ಕಿಂತ ಹೆಚ್ಚಿನ ಮೌಲ್ಯದ ಸಮವಸ್ತ್ರ ಮತ್ತು ಕಿಟ್ ಸಾಮಗ್ರಿಗಳ ಖರೀದಿಯನ್ನು ಕೆ.ಟಿ.ಪಿ.ಪಿ. (ತಿದ್ದುಪಡಿ) ಕಾಯ್ದೆ –2007 ರ ಸೆಕ್ಷನ್ 18 'ಎ'ರ ಅನ್ವಯ ಇ–ಖರೀದಿ ಮೂಲಕ ಖರೀದಿಸಲು ನಿರ್ಧರಿಸಿದೆ.

ಕ್ರ. ಸಂ.	ಟೆಂಡರ್ ಸಂಖ್ಯೆ	ಟೆಂಡರ್ ಸಂಕ್ಷಿಪ್ತ ವಿವರ	ಟೆಂಡರ್ ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ
1.	59/STS-1(3)/ 2021-22	ಪೊಲೀಸ್ ಸಿಬ್ಬಂದಿಗೆ ಅವಶ್ಯವಿರುವ ಸ್ಕೈ ಬ್ಲೂ ಟಿ–ಷರ್ಟ್ & ನೇವಿ ಬ್ಲೂ ಶಾರ್ಟ್ – 54,068 ಜೊತೆ, ಸ್ಕೈ ಬ್ಲೂ ಟಿ–ಷರ್ಟ್ & ನೇವಿ ಬ್ಲೂ ಟ್ರಾಕ್ ಪ್ಯಾಂಟ್ – 676 ಜೊತೆ, ಪಿಟಿ ಶೂ–ಸ್ಪೋರ್ಟ್ಸ್ ಫುಟ್‌ವೇರ್ – ನೇವಿ ಬ್ಲೂ – 27,639 ಜೊತೆ, ಖಾಕಿ ಸಾಕ್ಸ್ –1,53,547 ಜೊತೆ, ಫೈಬರ್ ಗ್ಲಾಸ್ ಹೆಲ್ಮೆಟ್ – 8,360 ಸಂಖ್ಯೆ, ಮಸ್ಕಿಟೋ ನೆಟ್ – 5,455 ಸಂಖ್ಯೆ, ಕೇನ್ ಲಾಠಿ – 7,510 ಸಂಖ್ಯೆಗಳ ಖರೀದಿ	27-01-2022

ಮೇಲ್ಕಂಡ ಕಿಟ್ ಸಾಮಗ್ರಿಗಳನ್ನು ಸರಬರಾಜು ಮಾಡಲು ಇಚ್ಛಿಸುವವರು ಇ–ಖರೀದಿ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಬೇಕು. ಇ–ಖರೀದಿಯ ಬಗ್ಗೆ ತರಬೇತಿ ಕಾರ್ಯಕ್ರಮವನ್ನು ಇ–ಖರೀದಿ ಪ್ರೊಕ್ಯೂರ್‌ಮೆಂಟ್ ಸೆಲ್‌ನಲ್ಲಿ ವ್ಯವಸ್ಥೆಗೊಳಿಸುತ್ತಿದ್ದು, ಹೆಚ್ಚಿನ ವಿವರಗಳಿಗೆ www.eproc.karnataka.gov.in ಅಥವಾ ಹೆಲ್ಪ್‌ಲೈನ್ 080–25501227, 25501216 ಗಳಿಗೆ ಸಂಪರ್ಕಿಸತಕ್ಕದ್ದು.

ಸಹಿ/–
ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ರವರ ಪರವಾಗಿ

ವಾ.ಸಾ.ಸಂ.ಇ/ಬೆಂ.ನಗರ/2583/ಆಕಾರ್/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ

**ಕಾರ್ಯಪಾಲಕ ಇಂಜನೀಯರ್‌ರವರ ಕಛೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹರಪನಹಳ್ಳಿ**

ಸಂಖ್ಯೆ: EE/RDWS&SD/HRP/ISRA-tender/Tech/2021–22/958
ದಿನಾಂಕ: 27–12–2021

ಇ–ಪ್ರೋಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ–25/2021–22

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹರಪನಹಳ್ಳಿರವರು ವಿಜಯನಗರ ಜಿಲ್ಲೆಯಡಿ ಬರುವ 6 ತಾಲ್ಲೂಕುಗಳಲ್ಲಿರುವ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗಗಳ ಜಲ ಜೀವನ್ ಮಿಷನ್ ಯೋಜನೆಯಡಿ ಮಾಹಿತಿ, ಶಿಕ್ಷಣ, ಸಂವಹನ (IEC) ಮತ್ತು ಸಾಮರ್ಥ್ಯ ಅಭಿವೃದ್ಧಿ (HRD) ಚಟುವಟಿಕೆಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಹಮ್ಮಿಕೊಳ್ಳಲು ಅನುಷ್ಠಾನ ಬೆಂಬಲ ಸಂಪನ್ಮೂಲ ಸಂಸ್ಥೆಗಳ (ISRA) ಆಯ್ಕೆ ಮಾಡಲು E-procurement Portal ನಲ್ಲಿ ನೊಂದಣಿ ಮಾಡಿದ ಅರ್ಹ ಸಂಸ್ಥೆಯವರಿಂದ (NGOs/VOs/SHGs) ಸ್ಪರ್ಧಾತ್ಮಕ ಟೆಂಡರ್‌ಗಳನ್ನು ಇ–ಪ್ರೋಕ್ಯೂರಮೆಂಟ್ ಮೂಲಕ ಇ–ಟೆಂಡರ್ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ನಿಗದಿತ ಅವಧಿ ದಿನಾಂಕ: 28.12.2021 ರಿಂದ 07.01.2022 ರ ಸಾಯಂಕಾಲ 5.00 ಗಂಟೆಯವರೆಗೆ ಮತ್ತು ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ತೆರೆಯುವ ದಿನಾಂಕ: 10.01.2022 ಬೆಳಗ್ಗೆ 11.00 ಗಂಟೆ ನಂತರ. ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ (e-procurement portal) ವೆಬ್‌ಸೈಟ್‌ನಲ್ಲಿ ಪಡೆಯಬಹುದು. (www.eproc.karnataka.gov.in) ಈ ಬಗ್ಗೆ ಇನ್ನು ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹರಪನಹಳ್ಳಿರವರ ಕಛೇರಿಯ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜನೀಯರ್, ಗ್ರಾಕುನೀ&ನೈ. ವಿಭಾಗ, ಹರಪನಹಳ್ಳಿ
ಡಿಐಪಿಆರ್/ಬಳ್ಳಾರಿ/555/ಎಂಸಿಎ/2021–22

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರವರ ಕಛೇರಿ, ಘನ ತ್ಯಾಜ್ಯ ನಿರ್ವಹಣೆ, ಎನ್.ಆರ್. ಚೌಕ, ಬೆಂಗಳೂರು–560 002.

ಸಂಖ್ಯೆ:ಕಾಪಾಅ/ಘತ್ಯಾನಿ/ಟೆಂಡರ್/13/2021-22 ದಿನಾಂಕ: 29-12-2021

ಅಲ್ಪಾವಧಿ ಟೆಂಡರ್‌ಗಳ ಆಹ್ವಾನ (ಐಎಫ್‌ಟಿ) (ದ್ವಿ ಲಕೋಟೆ ಪದ್ಧತಿ)
(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಘನ ತ್ಯಾಜ್ಯ ನಿರ್ವಹಣೆ, ಬೃಬೆಂಮಪಾ, ಬೆಂಗಳೂರು ಇವರು ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳ ಸ್ಥಾಪನೆ ಮತ್ತು ನಿರ್ವಹಣೆಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಪ್ಯಾಕೇಜ್ ಹೆಸರು	ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)
1)	ಮಿಟ್ಟಗಾನಹಳ್ಳಿಯ ವೈಜ್ಞಾನಿಕ ಭೂಮಿ ತುಂಬುವ ತಾಣದ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಜೈವಿಕ ಉತ್ಪನ್ನಗಳು/ಕಿಣ್ವಗಳನ್ನು ಒದಗಿಸುವುದು ಹಾಗೂ ಸಮಗ್ರ ಅಭಿವೃದ್ಧಿ ಕಾಮಗಾರಿಗಳು (ಪ್ಯಾಕೇಜ್–1).	900.00
2)	ಮಂದೂರು ಭೂಮಿ ತುಂಬುವ ತಾಣದ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಜೈವಿಕ ಉತ್ಪನ್ನಗಳು/ಕಿಣ್ವಗಳನ್ನು ಒದಗಿಸುವುದು ಹಾಗೂ ಸಮಗ್ರ ಅಭಿವೃದ್ಧಿ ಕಾಮಗಾರಿಗಳು (ಪ್ಯಾಕೇಜ್–2).	1000.00

ಇಎಂಡಿ ರೂ.ಗಳಲ್ಲಿ : ಇಎಂಡಿ ಘೋಷಣೆ ಪತ್ರ ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 675 ವೆಚ್ಚ-12/2020 ದಿನಾಂಕ: 22-12-2020ರ ಪ್ರಕಾರ ವಿನಾಯಿತಿ ನೀಡಲಾಗಿದೆ.

ಟೆಂಡರ್‌ನ ಕಾರ್ಯಸೂಚಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್‌ನಿಂದ ದಿನಾಂಕ: 31-12-2021 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಟೆಂಡರ್ ದಾಖಲೆಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ: 12-01-2022ರ ಸಂಜೆ 4:00 ಗಂಟೆಯೊಳಗೆ. 3) ಪೂರ್ವ ಬಿಡ್ ಸಭೆಯನ್ನು ದಿನಾಂಕ: 05-01-2022 ರಂದು ಸಂಜೆ 4:00 ಗಂಟೆಗೆ ನಡೆಸಲಾಗುವುದು. 4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 14-01-2022ರ ಸಂಜೆ 4:30 ಗಂಟೆಗೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಅಥವಾ https://eproc.karnataka.gov.in ಇಲ್ಲಿಗೆ ಲಾಗಿನ್‌ಮಾಡಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ಘನ ತ್ಯಾಜ್ಯ ನಿರ್ವಹಣೆ, ಬೃಬೆಂಮಪಾ.

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಮೈಸೂರು ಮಹಾನಗರ ಪಾಲಿಕೆ

ಟೆಂಡರ್ ಪ್ರಕಟಣೆ ಸಂಖ್ಯೆ: ಸಂ.ಮೈನಪಾ/ಉ.ಆ(ಆ)/ಕೇ.ಉ.ಶಾ/ಟಿ.ಎನ್/002/2021–22
ಉಪ ಆಯುಕ್ತರು (ಆಡಳಿತ) ಮೈಸೂರು ಮಹಾನಗರ ಪಾಲಿಕೆ, ಮೈಸೂರು – 570024.
ದಿನಾಂಕ : 21–12–2021

ಟೆಂಡರ್ ಪ್ರಕಟಣೆ
ಕರ್ನಾಟಕ ಸರ್ಕಾರದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

ಮೈಸೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ನಗರ ಪಾಲಿಕೆ ಅನುದಾನದಲ್ಲಿ **ಮೈಸೂರು ಮಹಾನಗರ ಪಾಲಿಕೆಗೆ ಅವಶ್ಯವಿರುವ ಸ್ವಚ್ಛತಾ ಸಾಮಾಗ್ರಿಗಳು ಮತ್ತು ತೋಟಗಾರಿಗೆ ಉಪಕರಣಗಳನ್ನು ಹಾಗೂ ಕೀಟನಾಶಕಗಳನ್ನು ಸರಬರಾಜು ಮಾಡುವ** ಕಾಮಗಾರಿಗೆ ಟೆಂಡರ್‌ನ್ನು ಆಹ್ವಾನಿಸಲಾಗಿದ್ದು, ಟೆಂಡರ್‌ನ್ನು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ "E-procurement" Portal ಮುಖಾಂತರ ಸಲ್ಲಿಸಬಹುದಾಗಿರುತ್ತದೆ, ಮುಂದುವರೆದು ಕಾಮಗಾರಿಗಳ ಹೆಸರು, ಟೆಂಡರ್‌ಗಿಟ್ಟ ಮೊತ್ತ ಹಾಗೂ ಇ.ಎಂ.ಡಿ ಹಾಗೂ ಇನ್ನಿತರೆ ಷರತ್ತುಗಳ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಯವರ ಕಛೇರಿಯಿಂದ ಪಡೆಯಬಹುದಾಗಿರುತ್ತದೆ ಹಾಗೂ ದಿನಾಂಕ: 21.12.2021 ರ ನಚಿತರ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ವೈಬ್ ಸೈಟ್‌ನಲ್ಲಿ **https://eproc.karnataka.gov.in** ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಂಡು ತಮ್ಮ ಬಿಡ್ಡನ್ನು ಸಲ್ಲಿಸಬಹುದಾಗಿರುತ್ತದೆ, ಟೆಂಡರ್‌ಗಳಿಗೆ ಬಿಡ್ಡನ್ನು ಸಲ್ಲಿಸುವ ಕೊನೆಯ **ದಿನಾಂಕ : 05–01–2022** ಹಾಗೂ ಬಿಡ್ಡನ್ನು ತೆರೆಯುವ **ದಿನಾಂಕ : 07–01–2022** ಇನ್ನಿತರೆ ಹೆಚ್ಚಿನ ಮಾಹಿತಿಯನ್ನು ಕಛೇರಿ ವ್ಯವಸ್ಥಾಪಕರು ಕೇಂದ್ರ ಉಗ್ರಾಣ ಶಾಖೆಯಿಂದ ದೂರವಾಣಿ ಮುಖೇನ : 9964374716 ಅಥವಾ ಕಛೇರಿಯಿಂದ ಪಡೆಯಬಹುದಾಗಿದೆ.

ಸಹಿ/– ಉಪ ಆಯುಕ್ತರು (ಆಡಳಿತ)
ಮೈಸೂರು ಮಹಾನಗರ ಪಾಲಿಕೆ, ಮೈಸೂರು

ಕರ್ನಾಟಕ ರಾಜ್ಯ ಪೊಲೀಸ್
(ISO 9001:2015 - ಪ್ರಮಾಣಿತ ನೇಮಕಾತಿ ಪ್ರಕ್ರಿಯೆ)

ನ್ಯಾಯ ವಿಜ್ಞಾನ ಪ್ರಯೋಗಾಲಯ ಮತ್ತು ಪ್ರಾದೇಶಿಕ ನ್ಯಾಯ ವಿಜ್ಞಾನ ಪ್ರಯೋಗಾಲಯ ಘಟಕಗಳಲ್ಲಿ ಖಾಲಿ ಇರುವ ವೈಜ್ಞಾನಿಕ ಅಧಿಕಾರಿ (ಕಲ್ಯಾಣ ಕರ್ನಾಟಕ ಸ್ಥಳೀಯ ಮತ್ತು ಮಿಕ್ಕುಳಿದ ವೃಂದಧ) ಒಟ್ಟು–16 ಹುದ್ದೆಗಳಿಗೆ ಆನ್‌ಲೈನ್ (Online) ಮುಖಾಂತರ ಕರ್ನಾಟಕ ರಾಜ್ಯ ಪೊಲೀಸ್ ವತಿಯಿಂದ ಅರ್ಜಿಯನ್ನು ಆಹ್ವಾನಿಸಲಾಗಿರುತ್ತದೆ.

ಅರ್ಜಿ ಸಲ್ಲಿಸುವ ದಿನಾಂಕ: 30.12.2021 ರಿಂದ 28.01.2022.

ಟಿಪ್ಪಣಿ : ಪೊಲೀಸ್ ಇಲಾಖೆಯ ನೇಮಕಾತಿಯು ಸಂಪೂರ್ಣ ಪಾರದರ್ಶಕತೆಯಿಂದ ಕೂಡಿರುತ್ತದೆ. ಇಲಾಖೆಯು ನಿಗಧಿಪಡಿಸಿದ ಶುಲ್ಕವನ್ನು ಮಾತ್ರ ಪಾವತಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಅಧಿಕೃತ ವೆಬ್‌ಸೈಟ್ https://recruitment.ksp.gov.in ನ್ನು ವೀಕ್ಷಿಸುವುದು.

ಸಹಿ/–
DIPR/DDU/ZEN/RO-2576/2021-22 ಎಡಿಜಿಪಿ, ನೇಮಕಾತಿ

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಹೇಮಾವತಿ ನಾಲಾ ತನಿಖಾ ವಿಭಾಗ, ಹೆಬ್ಬೂರು–572 120 ತುಮಕೂರು ಜಿಲ್ಲೆ.
ಪೋನ್ ನಂ.0816–2241043 ಇ–ಮೇಲ್:eehebbur1@gmail.com
ಸಂಖ್ಯೆ:03/2021–22 ದಿನಾಂಕ: 23.12.2021

ಅಲ್ಪಾವಧಿ ಇ–ಪ್ರೊಕ್ಯೂರ್‌ವಮೆಂಟ್ ಟೆಂಡರ್ ಪ್ರಕಟಣೆ

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ/ ಪಿಡಬ್ಲ್ಯೂಡಿ, ಮೈಸೂರು/ಬೆಂಗಳೂರು ಇವರ ಪರವಾಗಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ 18 ಕಾಮಗಾರಿಗಳಿಗೆ ಅಲ್ಪಾವಧಿ ಟೆಂಡರ್ ಅನ್ನು ಇ–ಪ್ರಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು ಈ ಕಛೇರಿಯಲ್ಲಿ ಹಾಗೂ ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ www.eproc. karnataka. gov.in ರಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಹೇಮಾವತಿ ನಾಲಾ ತನಿಖಾ ವಿಭಾಗ, ಕಾ.ನೀ.ನಿ.ನಿ, ಹೆಬ್ಬೂರು
DIPR/TUM/496/MCA/2021-22

ಮೈಸೂರು ಮಹಾನಗರ ಪಾಲಿಕೆ

ಟೆಂಡರ್ ಪ್ರಕಟಣೆ ಸಂಖ್ಯೆ: ಸಂ.ಮೈನಪಾ/ಉ.ಆ(ಆ)/ಕೇ.ಉ.ಶಾ/ಟಿ.ಎನ್/04/2021–22
ಉಪ ಆಯುಕ್ತರು (ಆಡಳಿತ) ಮೈಸೂರು ಮಹಾನಗರ ಪಾಲಿಕೆ, ಮೈಸೂರು – 570024.
ದಿನಾಂಕ : 29–12–2021

ಅಲ್ಪಾವಧಿ ಟೆಂಡರ್ ಪ್ರಕಟಣೆ
ಕರ್ನಾಟಕ ಸರ್ಕಾರದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

ಮೈಸೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ನಗರ ಪಾಲಿಕೆ ಅನುದಾನದಲ್ಲಿ **ಮೈಸೂರು ಮಹಾನಗರ ಪಾಲಿಕೆಯ ವಿವಿಧ ವಾಹನಗಳಿಗೆ ಅವಶ್ಯವಿರುವ ವಿವಿಧ ಮಾದರಿಯ ಟೈರ್ ಮತ್ತು ಟ್ಯೂಬ್‌ಗಳನ್ನು ಸರಬರಾಜು ಮಾಡುವ** ಕಾಮಗಾರಿಗೆ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಲಾಗಿದ್ದು, ಟೆಂಡರ್‌ನ್ನು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ "E-procurement" Portal ಮುಖಾಂತರ ಸಲ್ಲಿಸಬಹುದಾಗಿರುತ್ತದೆ, ಮುಂದುವರೆದು ಕಾಮಗಾರಿಗಳ ಹೆಸರು, ಟೆಂಡರ್‌ಗಿಟ್ಟ ಮೊತ್ತ ಹಾಗೂ ಇ.ಎಂ.ಡಿ ಹಾಗೂ ಇನ್ನಿತರೆ ಷರತ್ತುಗಳ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಯವರ ಕಛೇರಿಯಿಂದ ಪಡೆಯಬಹುದಾಗಿರುತ್ತದೆ ಹಾಗೂ ದಿನಾಂಕ: 29.12.2021 ರ ನಂತರ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ವೈಬ್ ಸೈಟ್‌ನಲ್ಲಿ **https://eproc.karnataka.gov.in** ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಂಡು ತಮ್ಮ ಬಿಡ್ಡನ್ನು ಸಲ್ಲಿಸಬಹುದಾಗಿರುತ್ತದೆ, ಟೆಂಡರ್‌ಗಳಿಗೆ ಬಿಡ್ಡನ್ನು ಸಲ್ಲಿಸುವ ಕೊನೆಯ **ದಿನಾಂಕ: 05–01–2022** ಹಾಗೂ ಬಿಡ್ಡನ್ನು ತೆರೆಯುವ **ದಿನಾಂಕ: 07–01–2022** ಇನ್ನಿತರೆ ಹೆಚ್ಚಿನ ಮಾಹಿತಿಯನ್ನು ಕಛೇರಿ ವ್ಯವಸ್ಥಾಪಕರು ಕೇಂದ್ರ ಉಗ್ರಾಣ ಶಾಖೆಯಿಂದ ದೂರವಾಣಿ ಮುಖೇನ : 9964374716 ಅಥವಾ ಕಛೇರಿಯಿಂದ ಪಡೆಯಬಹುದಾಗಿದೆ.

ಸಹಿ/– ಉಪ ಆಯುಕ್ತರು (ಆಡಳಿತ)
ಮೈಸೂರು ಮಹಾನಗರ ಪಾಲಿಕೆ, ಮೈಸೂರು

(ಕರ್ನಾಟಕ ಸರ್ಕಾರ)

ಹಾಸನ ನಗರಾಭಿವೃದ್ಧಿ ಪ್ರಾಧಿಕಾರ, ಬಿ.ಎಂ ರಸ್ತೆ, ಹಾಸನ

ಸಂಖ್ಯೆ: ಹಾನಪ್ರಾ/ಸಿ.ಎ.ನಿವೇಶನ/ಹಂಚಿಕೆ/ತಿದ್ದುಪಡಿ/ಪ್ರಕಟಣೆ/02/2021–22
ದಿನಾಂಕ:20.12.2021

ಹಾಸನ ನಗರಾಭಿವೃದ್ಧಿ ಪ್ರಾಧಿಕಾರದ ಒಡೆತನದಲ್ಲಿ ಲಭ್ಯವಿರುವ ನಾಗರೀಕ ಸೌಕರ್ಯ ನಿವೇಶನಗಳ ಹಂಚಿಕೆ ತಿದ್ದುಪಡಿ ಪ್ರಕಟಣೆ

ಹಾಸನ ನಗರಾಭಿವೃದ್ಧಿ ಪ್ರಾಧಿಕಾರದಿಂದ ನಾಗರೀಕ ಸೌರ್ಕಯ ನಿವೇಶನಗಳನ್ನು ವಿವಿಧ ಸಂಘ ಸಂಸ್ಥೆಗಳಿಗೆ, ಸರ್ಕಾರಿ, ಅರೆ ಸರ್ಕಾರಿ ಹಾಗೂ ಕೇಂದ್ರ ಸರ್ಕಾರಿ ಕಛೇರಿಗಳಿಗೆ ನಾಗರೀಕ ಸೌಕರ್ಯಕ್ಕಾಗಿ ಹಂಚಿಕೆ ಮಾಡುವ ಸಂಬಂಧ ಸಂಖ್ಯೆ: ಹಾನಪ್ರಾ/ಸಿ.ಎ.ನಿವೇಶನ/ಹಂಚಿಕೆ/ತಿದ್ದುಪಡಿ/ಪ್ರಕಟಣೆ/01/2021–22 ದಿನಾಂಕ:13.12.2021ರಲ್ಲಿ ಪ್ರಕಟಿಸಿರುವಂತೆ ಕ್ರಮ ಸಂಖ್ಯೆ (3)ರ ಸಿ.ಎ. ನಿವೇಶನ ಸಂಖ್ಯೆ:5(2)ರಲ್ಲಿನ ಅಳತೆಯನ್ನು ಮಾರ್ಪಡಿಸಲಾಗಿದ್ದು, ಈ ಕೆಳಕಂಡಂತೆ ಮರುಪ್ರಕಟಣೆ ಹೊರಡಿಸಲಾಗಿದೆ. ಉಳಿದಂತೆ ಷರತ್ತು ಮತ್ತು ನಿಂಭದನೆಗಳು ಹಾಗೂ ಅರ್ಜಿ ಸಲ್ಲಿಸುವ ದಿನಾಂಕ ಮತ್ತು ಕಡೆಯ ದಿನಾಂಕದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ. ಕ್ರ.ಸಂ.1)ಗ್ರಾಮ/ ಬಡಾವಣೆ ಹೆಸರು:ಎಸ್.ಎಂ.ಕೆ.ನಗರ ನಕ್ಷೆಯಲ್ಲಿರುವಂತೆ ಸ್ಥಳದ ಗುರುತು: ಎಸ್.ಎಂ.ಕೆ.ನಗರ ವಸತಿ ಬಡಾವಣೆ ಸರ್ವೆ ನಂ.ಪ್ರಾಧಿಕಾರದ ವಸತಿ ಬಡಾವಣೆ. ಸಿ.ಎ. ನಿವೇಶನ ಸಂಖ್ಯೆ: 5(1) ವಿಸ್ತೀರ್ಣ ಚ.ಅಡಿ.: 88200 ಚ.ಅಡಿ ಒಂದಕ್ಕೆ: 883/– ಗುತ್ತಿಗೆ ಮೊಬಲಗಿನ ಒಟ್ಟು ಮೌಲ್ಯ: 77880600 ಪ್ರಾರಂಭಿಕ ಠೇವಣಿ ಶೇಕಡಾ 10 ರಷ್ಟು: 7788060 ನೊಂದಣಿ ಶುಲ್ಕ: 7000 ನಿಗಧಿತ ಉದ್ದೇಶ: ಶೈಕ್ಷಣಿಕ/ಸಾಂಸ್ಕೃತಿಕ/ಧಾರ್ಮಿಕ/ಸಾಮಾಜಿಕ/ ಸರ್ಕಾರಿ/ಅರೆಸರ್ಕಾರಿ 2)ಎಸ್.ಎಂ.ಕೆ.ನಗರ ನಕ್ಷೆಯಲ್ಲಿರುವಂತೆ ಸ್ಥಳದ ಗುರುತು: ಎಸ್.ಎಂ.ಕೆ.ನಗರ ವಸತಿ ಬಡಾವಣೆ ಸರ್ವೆ ನಂ.ಪ್ರಾಧಿಕಾರದ ವಸತಿ ಬಡಾವಣೆ. ಸಿ.ಎ. ನಿವೇಶನ ಸಂಖ್ಯೆ: 5(2) ವಿಸ್ತೀರ್ಣ ಚ.ಅಡಿ.: 50219 ಚ.ಅಡಿ ಒಂದಕ್ಕೆ: 883/– ಗುತ್ತಿಗೆ ಮೊಬಲಗಿನ ಒಟ್ಟು ಮೌಲ್ಯ: 44343377 ಪ್ರಾರಂಭಿಕ ಠೇವಣಿ ಶೇಕಡಾ 10 ರಷ್ಟು: 4434338 ನೊಂದಣಿ ಶುಲ್ಕ: 5000 ನಿಗಧಿತ ಉದ್ದೇಶ: ಶೈಕ್ಷಣಿಕ/ಸಾಂಸ್ಕೃತಿಕ/ಧಾರ್ಮಿಕ/ಸಾಮಾಜಿಕ/ ಸರ್ಕಾರಿ/ಅರೆಸರ್ಕಾರಿ

ಸಹಿ/–(ಕೆ.ಎಂ.ರಮೇಶ್) ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಹಾಸನ
ಸಹಿ/– (ಲಲಾಟಮೂರ್ತಿ) ಅಧ್ಯಕ್ಷರು, ನಗರಾಭಿವೃದ್ಧಿ ಪ್ರಾಧಿಕಾರ, ಹಾಸನ
ವಾಸಾಸಂಇ/ಹಿಸನಿ/ಹಾಸನ/ಎಂಸಿಎ/600/2021–22

ಪರಸ್ಪರ ಅಂತರ ಕಾಯ್ದುಕೊಳ್ಳಿ

ಮೈಸೂರು ಮಹಾನಗರ ಪಾಲಿಕೆ

ಟೆಂಡರ್ ಪ್ರಕಟಣೆ ಸಂಖ್ಯೆ: ಸಂ.ಮೈನಪಾ/ಉ.ಆ(ಆ)/ಕೇ.ಉ.ಶಾ/ಟಿ.ಎನ್/ 03/2021–22
ಉಪ ಆಯುಕ್ತರು (ಆಡಳಿತ) ಮೈಸೂರು ಮಹಾನಗರ ಪಾಲಿಕೆ, ಮೈಸೂರು – 570024.
ದಿನಾಂಕ : 21–12–2021

ಟೆಂಡರ್ ಪ್ರಕಟಣೆ
ಕರ್ನಾಟಕ ಸರ್ಕಾರದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

ಮೈಸೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ನಗರ ಪಾಲಿಕೆ ಅನುದಾನದಲ್ಲಿ **ಮೈಸೂರು ಮಹಾನಗರ ಪಾಲಿಕೆಯ ಸಾಮಾನ್ಯ ಸಭೆ ಹಾಗೂ ವಿವಿಧ ಸ್ಥಾಯಿ ಸಮಿತಿ ಸಭೆಗಳಿಗೆ ಊಟ ಉಪಹಾರ ಹಾಗೂ ಪಾನೀಯಗಳನ್ನು ಸರಬರಾಜು ಮಾಡುವ** ಕಾಮಗಾರಿಗೆ ಟೆಂಡರ್‌ನ್ನು ಆಹ್ವಾನಿಸಲಾಗಿದ್ದು, ಟೆಂಡರ್‌ನ್ನು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ "E-procurement" Portal ಮುಖಾಂತರ ಸಲ್ಲಿಸಬಹುದಾಗಿರುತ್ತದೆ, ಮುಂದುವರೆದು ಕಾಮಗಾರಿಗಳ ಹೆಸರು, ಟೆಂಡರ್‌ಗಿಟ್ಟ ಮೊತ್ತ ಹಾಗೂ ಇ.ಎಂ.ಡಿ ಹಾಗೂ ಇನ್ನಿತರೆ ಷರತ್ತುಗಳ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಯವರ ಕಛೇರಿಯಿಂದ ಪಡೆಯಬಹುದಾಗಿರುತ್ತದೆ ಹಾಗೂ ದಿನಾಂಕ: 21.12.2021 ರ ನಂತರ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ವೈಬ್ ಸೈಟ್‌ನಲ್ಲಿ **https://eproc.karnataka.gov.in** ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಂಡು ತಮ್ಮ ಬಿಡ್ಡನ್ನು ಸಲ್ಲಿಸಬಹುದಾಗಿರುತ್ತದೆ, ಟೆಂಡರ್‌ಗಳಿಗೆ ಬಿಡ್ಡನ್ನು ಸಲ್ಲಿಸುವ ಕೊನೆಯ **ದಿನಾಂಕ : 05–01–2022** ಹಾಗೂ ಬಿಡ್ಡನ್ನು ತೆರೆಯುವ **ದಿನಾಂಕ: 07–01–2022** ಇನ್ನಿತರೆ ಹೆಚ್ಚಿನ ಮಾಹಿತಿಯನ್ನು ಕಛೇರಿ ವ್ಯವಸ್ಥಾಪಕರು ಕೇಂದ್ರ ಉಗ್ರಾಣ ಶಾಖೆಯಿಂದ ದೂರವಾಣಿ ಮುಖೇನ : 9964374716 ಅಥವಾ ಕಛೇರಿಯಿಂದ ಪಡೆಯಬಹುದಾಗಿದೆ.

ಸಹಿ/– ಉಪ ಆಯುಕ್ತರು (ಆಡಳಿತ)
ಮೈಸೂರು ಮಹಾನಗರ ಪಾಲಿಕೆ, ಮೈಸೂರು

ಕರ್ನಾಟಕ ಸರ್ಕಾರ

**ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ,
ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ ಬೆಳಗಾವಿ**

ನಂ. ಕಾ.ನಿ.ಅ./ಗ್ರಾ.ಕು.ನೀ.&ನೈ/ಬೆಳಗಾವಿ/ತಿಬಿ-2/ಕು.ನೀ.ಸ.ಯೋ/ಕೆಡಬ್ಲ್ಯು-3/ಟೆಂಡರ್-43/2021-22/3008 ದಿನಾಂಕ: 28-12-2021

ಪ್ರೊಕ್ಯೂರ್‌ಮೆಂಟ್ ರೀತ್ಯಾ ದ್ವಿ–ಲಕೋಟೆ ಮಾದರಿಯ ಟೆಂಡರ್ ಪ್ರಕಟಣೆ ಸಂಖ್ಯೆ: 43/2021–22

ಕರ್ನಾಟಕ ಸರಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಅಧಿಕೃತ ಅರ್ಹ ಗುತ್ತಿಗೆದಾರರಿಂದ ಸನ್ 2021–22ನೇ ಸಾಲಿನ ಜಲ ಜೀವನ್ ಮಿಷನ್ ಯೋಜನೆಯಡಿ ಬೆಳಗಾವಿ ಜಿಲ್ಲೆಯಲ್ಲಿನ ಈ ಕೆಳಕಂಡ ಕಾಮಗಾರಿಗಳಿಗೆ Standard Tender Document KW-3 ರ ನಿಬಂಧನೆಗೋಳಪಟ್ಟಂತೆ ದ್ವಿ–ಲಕೋಟೆ ಪದ್ಧತಿಯನ್ವಯ ಐಟಂವಾರು ಗುತ್ತಿಗೆಯನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ.

1) ಇ–ಪ್ರೊಕ್ಯೂರ್‌ಮೆಂಟ್ ಟೆಂಡರಿಂಗ್ ಮೂಲಕ ಭರ್ತಿ ಮಾಡಿದ ಫಾರಂಗಳನ್ನು ಸಲ್ಲಿಸುವ **ಕೊನೆಯ ದಿನಾಂಕ ಮತ್ತು ಸಮಯ : 11–01–2022 ರ ಸಾಯಂಕಾಲ 17:30 ಗಂಟೆವರೆಗೆ** 2) ಇ–ಪ್ರೊಕ್ಯೂರ್‌ಮೆಂಟ್ ತಾಂತ್ರಿಕ ಬಿಡ್‌ನ್ನು ತೆರೆಯುವ **ದಿನಾಂಕ ಮತ್ತು ಸಮಯ: 13–01–2022 ಮುಂಜಾನೆ 11:00 ಗಂಟೆ** ನಂತರ. 4) ಭರ್ತಿ ಮಾಡಿದ ಇ–ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ ತಾಂತ್ರಿಕ ಬಿಡ್ ಅನುಮೋದಿಸಿದ ನಂತರ.

ಇಟೆಂಟ್ ನಂ. 34731, 36101, 37245, 36506, 37246.

ಸೂಚನೆ : ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿದವರ ಕಚೇರಿಗೆ ಅಥವಾ e-procurement portal, www.eproc.karnataka.gov.in ಮುಖಾಂತರ ಸಂಪರ್ಕಿಸಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಗ್ರಾ.ಕು.ನೀ.&ನೈ. ವಿಭಾಗ, ಬೆಳಗಾವಿ
DIPO/RO No. 1126/2021-22

ಕರ್ನಾಟಕ ಸರಕಾರ

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಕಲಬುರಗಿ

ಚಂದ್ರಶೇಖರ ಪಾಟೀಲ ಕ್ರೀಡಾಂಗಣ ಎದುರುಗಡೆ, ಕಲಬುರಗಿ

ಸಂಖ್ಯೆ: ಜಿಮರಘಕ/ಮ.ಮ.ಅ.ಇ/ಸು.ಸಂ/ಬಾಮೂಸಿ/ಟೆಂ/2021–22 ದಿನಾಂಕ: 28–12–2021

:: ಅಲ್ಪಾವಧಿ ಮರು ಇ–ಟೆಂಡರ್ ಪ್ರಕಟಣೆ ::

ಬಾಹ್ಯಮೂಲದಿಂದ ಸಿಬ್ಬಂದಿ ಸೇವೆ ಪಡೆಯುವುದಕ್ಕಾಗಿ ಅಲ್ಪಾವದಿ ಮರು ಇ-ಟೆಂಡರ್ ಪ್ರಕಟಣೆ
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

2021–22ನೇ ಸಾಲಿಗೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಕಲಬುರಗಿ, ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ 05 ಮಕ್ಕಳ ಪಾಲನಾ ಸಂಸ್ಥೆಗಳಿಗೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಮತ್ತು ರಾಜ್ಯ ಮಹಿಳಾ ನಿಲಯ ಸಂಸ್ಥೆಗೆ ವಿವಿಧ 66 ಹುದ್ದೆಗಳಿಗೆ ಬಾಹ್ಯಮೂಲದಿಂದ ಸಿಬ್ಬಂದಿ ಸೇವೆ ಪಡೆಯುವುದಕ್ಕೆ ನೋಂದಾಯಿತ ಸೆಕ್ಯೂರಿಟಿ ಏಜೆನ್ಸಿ, ಮ್ಯಾನ್‌ಪವರ ಏಜೆನ್ಸಿ ಹಾಗೂ ಬಾಹ್ಯಮೂಲ ಸಂಸ್ಥೆಗಳಿಂದ ಎರಡು ಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಇಚ್ಛೆಯುಳ್ಳವರು ಕರ್ನಾಟಕ ಸರ್ಕಾರದ ಇ–ಆಡಳಿತ ಇಲಾಖೆಯ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವಿಳಾಸ http://eproc.karnataka.gov.in. ನಲ್ಲಿ ಟೆಂಡರ್ ನಂ. ಮೂಲಕ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಟೆಂಡರ್ ಅಂದಾಜು ಮೊತ್ತ ರೂ. 87,08,868 (ರೂಪಾಯಿ: ಎಂಬತ್ತೇಳು ಲಕ್ಷ ಎಂಟು ಸಾವಿರದ ಎಂಟು ನೂರಾ ಅರವತ್ತೆಂಟು ಮಾತ್ರ) ಇ.ಎಂ.ಡಿ. ಮೊತ್ತ ರೂ. 1,00,000 (ರೂಪಾಯಿ: ಒಂದು ಲಕ್ಷ ಮಾತ್ರ).

ವಿವರ ಮತ್ತು ನಿಗದಿಪಡಿಸಿದ ಪ್ರಾರಂಭ ಮತ್ತು ಕೊನೆಯ ದಿನಾಂಕ ಹಾಗೂ ಸಮಯ

1) ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಭರ್ತಿ ಮಾಡಿದ ಟೆಂಡರ್ ಅರ್ಜಿಗಳನ್ನು ಆನ್‌ಲೈನ್ ಮೂಲಕ ಸಲ್ಲಿಸುವುದು ದಿನಾಂಕ: 28–12–2021 ರ ಬೆಳಗ್ಗೆ 10–30 ಗಂಟೆ ರಿಂದ ದಿನಾಂಕ: 05–01–2022 ರ ಸಂಜೆ 5–30 ಗಂಟೆಯವರೆಗೆ,
2) ಸಲ್ಲಿಸಲಾದ ತಾಂತ್ರಿಕ ಬಿಡ್‌ಗಳನ್ನು ತೆರೆಯುವುದು : ದಿನಾಂಕ: 07–01–2022 ರಂದು ಬೆಳಗ್ಗೆ 11–00 ಗಂಟೆಗೆ,
3) ಸಲ್ಲಿಸಲಾದ ಆರ್ಥಿಕ ಬಿಡ್‌ಗಳನ್ನು ತೆರೆಯುವುದು ದಿನಾಂಕ: 10–01–2022 ರಂದು ಬೆಳಗ್ಗೆ 11–00 ಗಂಟೆಗೆ.

ಹೆಚ್ಚಿನ ವಿವರಗಳಿಗೆ ಮೇಲ್ಕಂಡ ಕಛೇರಿಗೆ ಕಚೇರಿ ವೇಳೆಯಲ್ಲಿ ಬಂದು ಸಂಪರ್ಕಿಸಬಹುದಾಗಿದೆ.

ಸಹಿ/– ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು
ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/865/ಎಂ.ಸಿ.&ಎ/2021–22

ಕರ್ನಾಟಕ ಸರ್ಕಾರ

**ಕಾರ್ಯನಿರ್ವಾಹಕ ಇಂಜನೀಯರ್‌ರವರ ಕಛೇರಿ
ಲೋಕೋಪಯೋಗಿ ಇಲಾಖೆ, ವಿಭಾಗ, ಯಾದಗಿರಿ**

ಸಂಃಕಾನಿಇಂಃಲೋಇಃಇ–ಟೆಂಡರ್/ತಾಂಶಾ–3ಃ2021–22/3825 ದಿನಾಂಕ ಃ 23–12–2021

:: ಇ–ಟೆಂಡರ್ ಅವಧಿ ವಿಸ್ತರಣೆ ಪ್ರಕಟಣೆ ::

ವಿಷಯಃ ಕೆಕೆಆರ್‌ಡಿಬಿ ಯೋಜನೆ, 5054 ಅಪೆಂಡಿಕ್ಸ್–ಇ, 4216 ಇಲಾಖಾ ವಸತಿಗೃಹ, 4202 ಕೆಪಿಎಸ್(ಶಿಕ್ಷಣ) ಮತ್ತು 8443 ಠೇವಣಿ ವಂತಿಕೆ ಕಾಮಗಾರಿಗಳ ಅವಧಿ ವಿಸ್ತರಣೆ ಕುರಿತು.

ಉಲ್ಲೇಖಃ ಈ ಕಛೇರಿಯ ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ ಕ್ರ.ಸಂಃಕಾನಿಅ/ಲೋಇ/ಯಾವಿ/ತಾಂಶಾ–3/2021–22/3805, ದಿನಾಂಕಃ 22–12–2021.

ಉಲ್ಲೇಖದ ಮೂಲಕ ಕರೆಯಲಾದ ಅಲ್ಪಾವಧಿ ಇ–ಟೆಂಡರ್ ಪ್ರಕಟಣೆಯಲ್ಲಿನ ಕಾಮಗಾರಿಗಳಿಗೆ ಕೆಲವೊಂದು ತಾಂತ್ರಿಕ ಕಾರಣಗಳಿಂದ ಅವಧಿ ವಿಸ್ತರಣೆ ಹಾಗೂ 2ನೇ ಕರೆ ಎಂದು ಮಾಡಲಾಗಿದ್ದು, ವಿವರಗಳು ಕೆಳಗಿನಂತೆ ಇರುತ್ತವೆ. **ವಿವರಗಳು ಮತ್ತು ವಿಸ್ತರಣೆ ಮಾಡಿದ ದಿನಾಂಕಗಳು :** 1) ಪ್ರೀ–ಬಿಡ್ ಮೀಟಿಂಗ್ ದಿನಾಂಕ : **29–12–2021 ಸಮಯ 11.30 ಗಂಟೆಯವರೆಗೆ,** 2) ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ: **31–12–2021 ಸಮಯ 17.30 ಗಂಟೆಯವರೆಗೆ,** 3) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ : **10–01–2022 ಸಮಯ 16.00 ಗಂಟೆಯವರೆಗೆ,** 4) ಟೆಂಡರ್/ಆರ್ಥಿಕ ಬಿಡ್ ತೆರೆಯುವ ದಿನಾಂಕ : **12–01–2022 ಸಮಯ 11.30 ಗಂಟೆಯವರೆಗೆ (ಕೆಡಬ್ಲ್ಯೂ–1 & 2ರ ಕಾಮಗಾರಿಗಳಿಗೆ ಮಾತ್ರ),** 5) ಟೆಂಡರ್/ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **12–01–2022 ಸಮಯ 11.30 ಗಂಟೆಯವರೆಗೆ (ಕೆಡಬ್ಲ್ಯೂ–3 & 4) ರ ಕಾಮಗಾರಿಗೆ ಮಾತ್ರ),** 6) ಆರ್ಥಿಕ ಬಿಡ್ ತೆರೆಯುವ ದಿನಾಂಕ : **15–01–2022 ಸಮಯ 11.30 ಗಂಟೆಯವರೆಗೆ (ಕೆಡಬ್ಲ್ಯೂ–3 & 4) ರ ಕಾಮಗಾರಿಗೆ ಮಾತ್ರ)**

ವಿಶೇಷ ಸೂಚನೆ: ಸದರಿ ಕಾಮಗಾರಿಗಳಿಗೆ ಇ.ಎಂ.ಡಿ. ಮೊತ್ತವನ್ನು ಭರಿಸುವುದು (ಇ–ಪ್ರಾಕ್‌ನಲ್ಲಿದ್ದಂತೆ)

ಗುತ್ತಿಗೆದಾರರ ಟೆಂಡರ್ ಪರಿಮಿತಿ ಈ ಕೆಳಗಿನಂತೆ ಪರಿಗಣಿಸಲಾಗುವುದು:
1) ಕಾಮಗಾರಿಯ ಅಂದಾಜು ಮೊತ್ತ ರೂ. 25.00 ಲಕ್ಷದವರೆಗೆ ನಾಲ್ಕನೇ ದರ್ಜೆ ಮತ್ತು ಮೇಲ್ಪಟ್ಟು., 2) ಕಾಮಗಾರಿಯ ಅಂದಾಜು ಮೊತ್ತ ರೂ. 200.00 ಲಕ್ಷದವರೆಗೆ ಮೂರನೇ ದರ್ಜೆ ಮತ್ತು ಮೇಲ್ಪಟ್ಟು., 3) ಕಾಮಗಾರಿಯ ಅಂದಾಜು ಮೊತ್ತ ರೂ.500.00 ಲಕ್ಷದವರೆಗೆ ಎರಡನೇ ದರ್ಜೆ ಮತ್ತು ಮೇಲ್ಪಟ್ಟು.

ಟಿಪ್ಪಣಿಃ ಉಳಿದಂತೆ ಷರತ್ತುಗಳಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.

ಸಹಿ/– ಕಾರ್ಯನಿರ್ವಾಹಕ ಇಂಜನೀಯರ್
ಲೋಕೋಪಯೋಗಿ ಇಲಾಖೆ, ವಿಭಾಗ, ಯಾದಗಿರಿ
ವಾ.ಸಾ.ಸಂ.ಇ/ಯಾದಗಿರಿ/303/ಎಂಸಿಎ/2021–22





ವಿಷಯದ ಅರಿವು ಪರೀಕ್ಷೆ ಸುಲಭ

ಕೆ.ಎಚ್. ಮಂಜುನಾಥ್

ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯು ಖಾಲಿ ಇರುವ 'ಕರ್ನಾಟಕ ವಿಶೇಷ ಮೀಸಲು ಸಬ್‌ಇನ್ಸ್‌ಪೆಕ್ಟರ್' (ಕೆಎಸ್‌ಆರ್‌ಪಿ ಮತ್ತು ಐಆರ್‌ಬಿ) 70 ಹುದ್ದೆಗಳ ನೇರ ನೇಮಕಾತಿಗಾಗಿ ಸ್ಪರ್ಧಾತ್ಮಕ ಪರೀಕ್ಷೆಗೆ ಅಧಿಸೂಚನೆ ಪ್ರಕಟಿಸಿದೆ.

ಈಗ ಪರೀಕ್ಷೆಗಾಗಿ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಿದೆ. ಈ ಹಿನ್ನೆಲೆಯಲ್ಲಿ ಪರೀಕ್ಷೆಯ ಸ್ವರೂಪ, ಅರ್ಜಿ ಸಲ್ಲಿಸುವ ವಿಧಾನ, ಶುಲ್ಕಗಳ ವಿವರ, ಪ್ರಶ್ನೆಪತ್ರಿಕೆಗಳ ಸ್ವರೂಪ, ಯಾವ ವಿಷಯಗಳನ್ನು ಆಧರಿಸಿ ಪ್ರಶ್ನೆಗಳಿರುತ್ತವೆ ಎಂಬ ಅಂಶಗಳನ್ನು ಇಲ್ಲಿ ವಿವರಿಸಲಾಗಿದೆ. ಅರ್ಜಿ ಸಲ್ಲಿಕೆ ಪ್ರಕ್ರಿಯೆ ಮತ್ತು ಪರೀಕ್ಷೆಯ ಪೂರಕ ಸಿದ್ಧತೆಗೆ ಅಗತ್ಯವಾದ ಮಾಹಿತಿ ಇಲ್ಲಿದೆ.

ವಿದ್ಯಾರ್ಹತೆ

ಯುಜಿಸಿ ಮಾನ್ಯತೆ ಪಡೆದ ಅಂಗೀಕೃತ ವಿಶ್ವವಿದ್ಯಾಲಯದಿಂದ ಪದವಿ ಅಥವಾ ತತ್ಸಮಾನ ಶಿಕ್ಷಣ ಪಡೆದವರು ಈ ಪರೀಕ್ಷೆಗೆ ಅರ್ಹರಾಗಿರುತ್ತಾರೆ.

ಲಿಖಿತ ಪರೀಕ್ಷೆ

ಅಭ್ಯರ್ಥಿಗಳು ಮೊದಲು ದೇಹದಾರ್ಢ್ಯ ಅರ್ಹತಾ ಪರೀಕ್ಷೆ ಎದುರಿಸಬೇಕು. ಅದರಲ್ಲಿ ಯಶಸ್ವಿಯಾದವರಿಗೆ ಮಾತ್ರ ಲಿಖಿತ ಪರೀಕ್ಷೆ ನಡೆಸಲಾಗುತ್ತದೆ.

ಲಿಖಿತ ಪರೀಕ್ಷೆಯಲ್ಲಿ ಪದವಿ ಹಂತದ ವಿಷಯಗಳನ್ನು ಒಳಗೊಂಡ ಎರಡು ಪತ್ರಿಕೆಗಳಿರುತ್ತವೆ.

ಪತ್ರಿಕೆ-1: ಈ ಪತ್ರಿಕೆಯು ಎರಡು ಭಾಗಗಳನ್ನು ಒಳಗೊಂಡಿದೆ. ಮೊದಲ ಭಾಗ ಕನ್ನಡ ಅಥವಾ ಇಂಗ್ಲಿಷ್‌ನಲ್ಲಿ ಪ್ರಬಂಧ ಬರೆಯುವುದು. ಇದಕ್ಕೆ 30 ಅಂಕಗಳು. ಎರಡನೇ ಭಾಗದಲ್ಲಿ ಕನ್ನಡದಿಂದ ಇಂಗ್ಲಿಷ್‌ಗೆ, ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದ ಮಾಡಬೇಕು. ಇದಕ್ಕೆ 20 ಅಂಕಗಳು. ಈ ಪರೀಕ್ಷೆಯ ಅವಧಿ ಒಂದು ಗಂಟೆ. ಒಟ್ಟು 50 ಅಂಕಗಳಿರುತ್ತವೆ. ಇದರಲ್ಲಿ ಕನಿಷ್ಠ ಅಂಕಗಳು ಇರುವುದಿಲ್ಲ.

ಪತ್ರಿಕೆ-2: ಈ ಪ್ರಶ್ನೆಪತ್ರಿಕೆಯಲ್ಲಿ ಸಾಮಾನ್ಯ ಜ್ಞಾನ ಮತ್ತು ಸಾಮಾನ್ಯ ಮಾನಸಿಕ ಸಾಮರ್ಥ್ಯ ಎಂಬ ವಿಭಾಗಗಳಿರುತ್ತವೆ.

(i) ಸಾಮಾನ್ಯ ಜ್ಞಾನದಲ್ಲಿ: (ಎ) ವಿಜ್ಞಾನ (ಬಿ) ಭೂಗೋಳ (ಸಿ) ಆಧುನಿಕ ಭಾರತೀಯ ಇತಿಹಾಸ, ಭಾರತೀಯ ಸ್ವಾತಂತ್ರ್ಯ ಚಳವಳಿ (ಡಿ) ಭಾರತೀಯ ಸಂವಿಧಾನದ ಮೂಲಭೂತ ಹಕ್ಕುಗಳು ಮತ್ತು ನಿರ್ದೇಶನಾತ್ಮಕ ತತ್ವಗಳನ್ನು ಕುರಿತ ಪ್ರಶ್ನೆಗಳಿರುತ್ತವೆ.

(ii) ಸಾಮಾನ್ಯ ಮಾನಸಿಕ ಸಾಮರ್ಥ್ಯದಲ್ಲಿ: (ಎ) ಗಣನಾ ಕೌಶಲ(Simple Mathematical calculation in reasoning) (ಬಿ) ಪ್ರಾದೇಶಿಕ ಮನ್ನಣೆ ಕೌಶಲ (ಸಿ) ಗ್ರಹಿಸುವಿಕೆ (ಡಿ) ತೀರ್ಮಾನ (ಇ) ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯ (ಎಫ್) ನೈತಿಕ ಶಿಕ್ಷಣ ವಿಷಯಗಳನ್ನು ಒಳಗೊಂಡ ಪ್ರಶ್ನೆಗಳಿರುತ್ತವೆ.

ಈ ಪತ್ರಿಕೆಯಲ್ಲಿ ಬಹುವಿಧ ಆಯ್ಕೆ (Multiple Choice) ಮತ್ತು ವಸ್ತುನಿಷ್ಠ(Objective) ಮಾದರಿಯ ಪ್ರಶ್ನೆಗಳಿರುತ್ತವೆ. ಇದು 150 ಅಂಕಗಳ, ಒಂದೂವರೆ ಗಂಟೆಯ ಪರೀಕ್ಷೆಯಾಗಿರುತ್ತದೆ. ಪ್ರತಿ ತಪ್ಪು ಉತ್ತರಕ್ಕೆ, ಸರಿ ಉತ್ತರದ ಶೇ 25 (0.375) ರಷ್ಟು ಅಂಕಗಳನ್ನು ಕಳೆಯಲಾಗುತ್ತದೆ.

ಸ್ಪರ್ಧಾತ್ಮಕ ಪರೀಕ್ಷೆಗೆ ಏನನ್ನು ಓದಬೇಕು?

ಈ ಹಿಂದಿನ ಸ್ಪರ್ಧಾತ್ಮಕ ಪರೀಕ್ಷೆಗಳ ಪ್ರಶ್ನೆಪತ್ರಿಕೆಯನ್ನು ಗಮನಿಸಿ. ಇದರಿಂದ ಪ್ರಶ್ನೆಗಳ ಸ್ವರೂಪ ಅರ್ಥವಾಗುತ್ತದೆ. ಯಾವ ವಿಷಯದಿಂದ ಎಷ್ಟು ಪ್ರಶ್ನೆಗಳನ್ನು ಕೇಳಬಹುದೆಂಬ ಮಾಹಿತಿ ಲಭ್ಯವಾಗುತ್ತದೆ. ಇದಾದ ನಂತರ 8, 9, 10ನೇ ತರಗತಿಯ ಸಮಾಜ ವಿಜ್ಞಾನ ಮತ್ತು ವಿಜ್ಞಾನದ ಪುಸ್ತಕಗಳನ್ನು ಓದಿ. ಮನೋರಮಾ ಅಥವಾ ಯಾವುದಾದರೂ ವಾರ್ಷಿಕ ಕೋಶ (ಇಯರ್ ಬುಕ್) ಓದುವುದು ಒಳ್ಳೆಯದು.

'ಭಾರತದ ಸಂವಿಧಾನ' ವಿಷಯಕ್ಕಾಗಿ ಪಿ. ಎಸ್. ಗಂಗಾಧರ್ ಅವರ 'ಭಾರತ ಸಂವಿಧಾನ ಮತ್ತು ರಾಜಕೀಯ' ಕೃತಿಯನ್ನು ಓದಬಹುದು. ಭಾರತ ಇತಿಹಾಸ ಮತ್ತು ಸ್ವಾತಂತ್ರ್ಯ ಹೋರಾಟಕ್ಕೆ ಡಾ. ಸದಾಶಿವ ಅವರ ಕೃತಿಗಳು ಉತ್ತಮ. ಇದರ ಜೊತೆಗೆ, ಪ್ರಥಮ ಮತ್ತು ದ್ವಿತೀಯ ಪಿಯುಸಿ ತರಗತಿಗಾಗಿ ಪದವಿಪೂರ್ವ ಶಿಕ್ಷಣ ಮಂಡಳಿ ಪ್ರಕಟಿಸಿರುವ ಇತಿಹಾಸ, ಭೂಗೋಳ, ರಾಜ್ಯಶಾಸ್ತ್ರ ವಿಭಾಗದಲ್ಲಿರುವ ಭಾರತದ ಸಂವಿಧಾನದ ವಿಭಾಗಕ್ಕೆ ಸಂಬಂಧಿಸಿದ ವಿಷಯಗಳನ್ನು ಓದಬೇಕು.

'ಮಾನಸಿಕ ಸಾಮರ್ಥ್ಯ' ವಿಷಯಕ್ಕಾಗಿ ಆರ್.ಎಸ್. ಅಗರವಾಲ್ ಅವರು ಬರೆದಿರುವ 'ರೀಸನಿಂಗ್' ಪುಸ್ತಕ ಓದಿ. ಪ್ರಚಲಿತ ವಿದ್ಯಮಾನಕ್ಕಾಗಿ ಪ್ರತಿದಿನ ಕಡ್ಡಾಯವಾಗಿ ದಿನಪತ್ರಿಕೆಯನ್ನು ಓದಿ.

ಪರೀಕ್ಷೆ ತಯಾರಿಗೆ ಟಿಪ್ಸ್

- ಬಹು ಆಯ್ಕೆ ಪ್ರಶ್ನೆ ಮಾದರಿ ಪ್ರಶ್ನೆಗಳಲ್ಲಿ, ಒಂದು ಪ್ರಶ್ನೆಗೆ, ನಾಲ್ಕು ಉತ್ತರಗಳನ್ನು ನೀಡಿರುತ್ತಾರೆ. ಅವುಗಳಲ್ಲಿ ಸರಿಯಾಗಿರುವ ಒಂದು ಉತ್ತರವನ್ನು ಆಯ್ಕೆ ಮಾಡಬೇಕು.
- ಇದು ಪಿಯುಸಿ ಅಥವಾ ಎಸ್‌ಎಸ್‌ಎಲ್‌ಸಿ ತರಹದ ಅಕಾಡೆಮಿಕ್ ಪರೀಕ್ಷೆಯಲ್ಲ. ಬಾಯಿಪಾಠ ಮಾಡಿಕೊಂಡು ಹೋಗಿ ಬರೆಯುವ ಪ್ರಶ್ನೆಗಳೂ ಬರುವುದಿಲ್ಲ. ಆದ್ದರಿಂದ ಪ್ರತಿ ವಿಷಯವನ್ನು ಓದುವಾಗಲೂ ಹಿಂದಿನ ಪ್ರಶ್ನೆಪತ್ರಿಕೆಯನ್ನು ಗಮನದಲ್ಲಿ ಇಟ್ಟುಕೊಂಡು ಓದುವುದು ಒಳ್ಳೆಯದು. ಕಂಠಪಾಠಕ್ಕಿಂತ ವಿಷಯದ ತಿಳಿವಳಿಕೆಯೇ ಮುಖ್ಯ.
- ಒಂದೂವರೆ ಗಂಟೆಯಲ್ಲಿ 100 ಪ್ರಶ್ನೆಗಳಿಗೆ ಉತ್ತರಿಸಬೇಕು. ಹಾಗಾಗಿ ಸಮಯದ ಹೊಂದಾಣಿಕೆ ಮುಖ್ಯ. ಈ ಹಿನ್ನೆಲೆಯಲ್ಲಿ ನಿತ್ಯ ಬಹುಆಯ್ಕೆ ಪ್ರಶ್ನೆಗಳನ್ನು ಬಿಡಿಸುವ ಅಭ್ಯಾಸ ಮಾಡಿ.
- ಪರೀಕ್ಷೆ ಮುಗಿಯುವವರೆಗೆ ನಿತ್ಯ ಕನಿಷ್ಠ 5 ರಿಂದ 6 ಗಂಟೆ ಓದುವುದಕ್ಕೆ ಮೀಸಲಿಡಿ. ಅದರಲ್ಲಿ 1 ಗಂಟೆ ಬಹುಆಯ್ಕೆ ಪ್ರಶ್ನೆಗಳನ್ನು ಬಿಡಿಸುವುದಕ್ಕೇ ಮೀಸಲಿಟ್ಟರೆ ಒಳ್ಳೆಯದು.
- ಓದುವ ಜೊತೆಗೆ, ಪ್ರತಿದಿನ ಅಭ್ಯಾಸಕ್ಕಾಗಿ/ಬರೆಯುವುದಕ್ಕಾಗಿ ಒಂದಿಷ್ಟು ಸಮಯವನ್ನು ತೆಗೆದಿಡಿ. ಹಿಂದೆ ಓದಿದ ವಿಷಯವನ್ನು ಪುನರ್ ಮನನ ಮಾಡುತ್ತಾ ಅಧ್ಯಯನ ಮುಂದುವರಿಸಿ. ಇದರಿಂದ ಹಿಂದೆ ಓದಿರುವುದನ್ನು ನೆನಪಿಟ್ಟುಕೊಳ್ಳಲು ಅನುಕೂಲ.

ಹೆಚ್ಚಿನ ಮಾಹಿತಿಗಾಗಿ **www.recruitment.ksp.gov.in** ನೋಡಬಹುದು.

(ಲೇಖಕರು: ನಿರ್ದೇಶಕರು, ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ಕೇಂದ್ರ, ಬೆಂಗಳೂರು)

ಅರ್ಜಿ ಸಲ್ಲಿಕೆ ವಿವರ

ಅರ್ಜಿ ಸಲ್ಲಿಸಲು ಕೊನೆಯ ದಿನ, ಜನವರಿ 18, 2022. ಅರ್ಜಿ ಶುಲ್ಕವನ್ನು ಅಧಿಕೃತ ಬ್ಯಾಂಕ್ ಅಥವಾ ಅಂಚೆ ಕಚೇರಿಯಲ್ಲಿ ಪಾವತಿಸಬೇಕು. ಶುಲ್ಕ ಪಾವತಿಗೆ ಕೊನೆ ದಿನ ಜನವರಿ 20, 2022. ಆನ್‌ಲೈನ್ ಮೂಲಕವೇ ಅರ್ಜಿ ತುಂಬಬೇಕು. ಅರ್ಜಿ ಭರ್ತಿ ಮಾಡುವ ವೇಳೆ ಸಮಸ್ಯೆ ಎದುರಾದಲ್ಲಿ ಸಹಾಯವಾಣಿ 080-22943346 ಅನ್ನು ಸಂಪರ್ಕಿಸಿ ಅಗತ್ಯ ಮಾಹಿತಿ ಪಡೆದು ಅರ್ಜಿ ಸಲ್ಲಿಸಬಹುದು.

ಅರ್ಜಿ ಶುಲ್ಕ

ಸಾಮಾನ್ಯ ವರ್ಗ. ಪ್ರವರ್ಗ 2(ಎ), 2(ಬಿ) 3(ಎ) 3(ಬಿ) ಗೆ ಸೇರಿದ ಅಭ್ಯರ್ಥಿಗಳಿಗೆ ₹500. ಎಸ್‌ಸಿ/ ಎಸ್‌ಟಿ ಹಾಗೂ ಪ್ರವರ್ಗ-1ಕ್ಕೆ ಸೇರಿದ ಅಭ್ಯರ್ಥಿಗಳಿಗೆ ₹ 250.

ವಯೋಮಿತಿ

ಅರ್ಜಿ ಸ್ವೀಕರಿಸುವ ಕೊನೆ ದಿನಾಂಕದ ವೇಳೆಗೆ ಸಾಮಾನ್ಯ ವರ್ಗದ ಅಭ್ಯರ್ಥಿಗೆ ಕನಿಷ್ಠ 21 ವರ್ಷವಾಗಿರಬೇಕು. ಗರಿಷ್ಠ 26 ವರ್ಷ ಮೀರಿರಬಾರದು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರೆ ಹಿಂದುಳಿದ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳಿಗೆ ಎರಡು ವರ್ಷಗಳ ವಯೋಮಿತಿ ಸಡಿಲಿಕೆ ಇದೆ(28 ವರ್ಷಗಳು)

ಸೇವಾನಿರತ ಅಭ್ಯರ್ಥಿಗಳಿಗೆ

ಎ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳಿಗೆ ಗರಿಷ್ಠ ವಯೋಮಿತಿಯನ್ನು 40 ವರ್ಷಗಳಿಗೆ ನಿಗದಿಪಡಿಸಲಾಗಿದೆ.

ಬಿ. ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ಗರಿಷ್ಠ 35 ವರ್ಷಗಳನ್ನು ನಿಗದಿಪಡಿಸಲಾಗಿದೆ.

ಎಸ್‌ಎಸ್‌ಸಿ: ಸ್ಪರ್ಧಾತ್ಮಕ ಪರೀಕ್ಷಾ ಮಾರ್ಗದರ್ಶಿ

ಮಹೇಶ್

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿವಿಧ ಹುದ್ದೆಗಳ ನೇಮಕಾತಿಗಾಗಿ ನಡೆಯುವ ಸ್ಪರ್ಧಾತ್ಮಕ ಪರೀಕ್ಷೆಗಳು ಸರಣಿಯಲ್ಲಿವೆ. ಅಭ್ಯರ್ಥಿಗಳು ಸಿದ್ಧತೆ ನಡೆಸುತ್ತಿರುವ ಈ ಹಂತದಲ್ಲಿ ಒಂದಿಷ್ಟು ಪೂರಕ ಮಾಹಿತಿ ಮತ್ತು 'ಟಿಪ್ಸ್' ಇಲ್ಲಿದೆ.

ಕೇಂದ್ರ ಸರ್ಕಾರದ ಸಿಬ್ಬಂದಿ ನೇಮಕಾತಿ ಪ್ರಾಧಿಕಾರವು (ಸ್ಟಾಫ್ ಸೆಲೆಕ್ಷನ್ ಕಮಿಷನ್- ಎಸ್‌ಎಸ್‌ಸಿ) 36 ವಿವಿಧ ವೃಂದಗಳಲ್ಲಿ(ಇಲಾಖೆಗಳಲ್ಲಿ) ಖಾಲಿ ಇರುವ ಗ್ರೂಪ್ ಬಿ ಮತ್ತು ಸಿ ಹುದ್ದೆಗಳಿಗಾಗಿ ಅರ್ಜಿ ಆಹ್ವಾನಿಸಿದೆ.

ಈ ಕುರಿತು ಡಿ. 23ರಂದು ಅಧಿಸೂಚನೆ ಹೊರಡಿಸಿದ್ದು, ಅಂದಿನಿಂದಲೇ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಅವಕಾಶ ನೀಡಿದೆ.

ಜನವರಿ 1, 2022 ಅರ್ಜಿ ಸಲ್ಲಿಕೆಗೆ ಕೊನೆಯ ದಿನವಾಗಿದೆ. ಕೇಂದ್ರ ಸರ್ಕಾರದ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧವಾಗುತ್ತಿರುವ ಅಭ್ಯರ್ಥಿಗಳಿಗೆ ಇದೊಂದು ಉತ್ತಮ ಅವಕಾಶವೂ ಹೌದು.

ಹುದ್ದೆಗಳ ವಿವರ

ಭಾರತೀಯ ಲೆಕ್ಕ ಮತ್ತು ಪರಿಶೋಧನೆ ಇಲಾಖೆಯಲ್ಲಿ ಅಸಿಸ್ಟೆಂಟ್ ಆಡಿಟ್ ಆಫೀಸರ್, ಕೇಂದ್ರೀಯ ಸಚಿವಾಲಯದಲ್ಲಿ ಅಸಿಸ್ಟೆಂಟ್ ಸೆಕ್ಷನ್ ಆಫೀಸರ್, ಸಿಬಿಐ ಇಲಾಖೆಯಲ್ಲಿ ಉಪ ಅಧೀಕ್ಷಕರು, ಜಾರಿ ನಿರ್ದೇಶನಾಲಯದಲ್ಲಿ ಸಹಾಯಕ ಜಾರಿ ಅಧಿಕಾರಿ, ಎನ್‌ಐಎ ಇಲಾಖೆಯಲ್ಲಿ ಸಬ್-ಇನ್ಸ್‌ಪೆಕ್ಟರ್ ಸೇರಿದಂತೆ 36 ವಿವಿಧ ವೃಂದದ ಹುದ್ದೆಗಳ ಭರ್ತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಸಂಬಂಧಪಟ್ಟ ಇಲಾಖೆಗಳ ಬೇಡಿಕೆಗೆ ಅನುಸಾರವಾಗಿ ಎಸ್‌ಎಸ್‌ಸಿ ವೆಬ್‌ಸೈಟ್‌ನಲ್ಲಿ ಹುದ್ದೆಗಳ ಸಂಖ್ಯೆಯನ್ನು ಪ್ರಕಟಿಸಲಾಗುತ್ತದೆ.

ಶೈಕ್ಷಣಿಕ ವಿದ್ಯಾರ್ಹತೆ

ಲೆಕ್ಕ ಪರಿಶೋಧನಾಧಿಕಾರಿ, ಅಂಕಿ-ಸಂಖ್ಯೆ ಪರಿಶೋಧಕರಂತಹ ಕೆಲವೊಂದು 'ವೃಂದದ' ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ನಿರ್ದಿಷ್ಟ ವಿಷಯದಲ್ಲಿ ಪದವಿ ಅಥವಾ ಸ್ನಾತಕೋತ್ತರ ಪದವಿ ಪೂರೈಸಿರಬೇಕು. ಉಳಿದಂತಹ ಬಹುತೇಕ ಹುದ್ದೆಗಳ ನೇಮಕಾತಿಗೆ, ಯುಜಿಸಿಯಿಂದ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಲ್ಲಿ ಪದವಿ ಪಡೆದಿರಬೇಕು.

ವಯೋಮಿತಿ

ಆದಾಯ ತೆರಿಗೆ ಅಧೀಕ್ಷಕರು, ವಾಣಿಜ್ಯ ತೆರಿಗೆ ಪರೀಕ್ಷಕರು, ಸಹಾಯಕ ಲೆಕ್ಕಾಧಿಕಾರಿ ಸೇರಿದಂತೆ ಬಹುತೇಕ ಹುದ್ದೆಗಳ ನೇಮಕಾತಿಗೆ ಅರ್ಜಿ ಸಲ್ಲಿಸಲು ಕನಿಷ್ಠ 18 ವರ್ಷ ಪೂರೈಸಿರಬೇಕು ಮತ್ತು ಗರಿಷ್ಠ 30 ವರ್ಷ ಮೀರಬಾರದು. ಅಸಿಸ್ಟೆಂಟ್ ಸೆಕ್ಷನ್ ಆಫೀಸರ್‌ನಂತಹ ಕೆಲವೊಂದು ಹುದ್ದೆಗಳಿಗೆ 27 ವರ್ಷಗಳವರೆಗೆ ವಯೋಮಿತಿ ಸಡಿಲಿಸಲಾಗಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅಭ್ಯರ್ಥಿಗಳಿಗೆ ನಿಗದಿಪಡಿಸಿರುವ ಗರಿಷ್ಠ ವಯೋಮಿತಿಯಲ್ಲಿ 5 ವರ್ಷ ಮತ್ತು ಹಿಂದುಳಿದ ಅಭ್ಯರ್ಥಿಗಳಿಗೆ 3 ವರ್ಷ ಸಡಿಲಿಕೆ ಮಾಡಲಾಗಿದೆ. ಅಂಗವಿಕಲ ಅಭ್ಯರ್ಥಿಗಳಿಗೆ ವರ್ಗಾನುಸಾರವಾಗಿ 10 ವರ್ಷ ವಯಸ್ಸಿನ ಸಡಿಲಿಕೆಗೆ ಅವಕಾಶವನ್ನು ಕಲ್ಪಿಸಲಾಗಿದೆ.

ಪರೀಕ್ಷಾ ವಿಧಾನ

ಅಧಿಸೂಚನೆಯಲ್ಲಿರುವ ಕೆಲವೊಂದು ಹುದ್ದೆಗಳ ಆಯ್ಕೆ ಮೂರು ಹಂತದ ಮತ್ತು ಕೆಲವೊಂದು ಹುದ್ದೆಗಳಿಗೆ ನಾಲ್ಕು ಹಂತದ ಪರೀಕ್ಷೆ ಇರುತ್ತದೆ.

- ಮೊದಲ ಹಂತ ಪರೀಕ್ಷೆಯು ಬಹುಆಯ್ಕೆ ಮಾದರಿಯಲ್ಲಿರುತ್ತದೆ. 100 ಪ್ರಶ್ನೆಗಳನ್ನು ಒಳಗೊಂಡ 200 ಅಂಕಗಳ ಪರೀಕ್ಷೆಯಾಗಿದ್ದು, 60 ನಿಮಿಷ ಕಾಲಾವಕಾಶವಿರುತ್ತದೆ. ಈ ಹಂತದ ಪರೀಕ್ಷೆಯಲ್ಲಿ ಶೇ 30ಕ್ಕಿಂತ ಹೆಚ್ಚು ಅಂಕ ಗಳಿಸಿದ ಸಾಮಾನ್ಯ ಅಭ್ಯರ್ಥಿಗಳು, ಶೇ 25ಕ್ಕಿಂತ ಹೆಚ್ಚು ಅಂಕಗಳಿಸಿದ ಒಬಿಸಿ ಹಾಗೂ ಶೇ 20 ಕ್ಕಿಂತ ಹೆಚ್ಚು ಅಂಕಗಳಿಸಿದ ಎಸ್‌ಸಿ ಮತ್ತು ಎಸ್‌ಟಿ ಅಭ್ಯರ್ಥಿಗಳು ಎರಡನೇ ಹಂತದ ಪರೀಕ್ಷೆಗೆ ಅರ್ಹರಾಗಿರುತ್ತಾರೆ.
- ಎರಡನೇ ಹಂತದಲ್ಲಿ ನಾಲ್ಕು ಪ್ರಶ್ನೆಪತ್ರಿಕೆಗಳಿದ್ದು, 800 ಅಂಕಗಳಿಗೆ ಬಹುಆಯ್ಕೆ ಮಾದರಿ ಪ್ರಶ್ನೆಗಳಿರುತ್ತವೆ. ಈ ಹಂತದ ಪರೀಕ್ಷೆಯಲ್ಲಿ ಶೇ 30ಕ್ಕಿಂತ ಹೆಚ್ಚು ಅಂಕಗಳಿಸಿದ ಸಾಮಾನ್ಯ ಅಭ್ಯರ್ಥಿಗಳು, ಶೇ 25 ಕ್ಕಿಂತ ಹೆಚ್ಚು ಅಂಕಗಳಿಸಿದ ಒಬಿಸಿ ಅಭ್ಯರ್ಥಿಗಳು ಹಾಗೂ ಶೇ 20 ಕ್ಕಿಂತ ಹೆಚ್ಚು ಅಂಕಗಳಿಸಿದ ಎಸ್‌ಸಿ ಮತ್ತು ಎಸ್‌ಟಿ ಅಭ್ಯರ್ಥಿಗಳು ಮೂರನೇ ಹಂತದ ಪರೀಕ್ಷೆಗೆ ಅರ್ಹರಾಗಿರುತ್ತಾರೆ.
- ಎರಡನೇ ಹಂತದಲ್ಲಿ ಪತ್ರಿಕೆ-1 ಮತ್ತು ಪತ್ರಿಕೆ-2 ಎಲ್ಲಾ ಅಭ್ಯರ್ಥಿಗಳಿಗೂ ಕಡ್ಡಾಯ. ಕೆಲವು ನಿರ್ದಿಷ್ಟ ಹುದ್ದೆಗೆ ಆಯ್ಕೆ ಬಯಸುವ ಅಭ್ಯರ್ಥಿಗಳಿಗೆ ಮಾತ್ರ ಪತ್ರಿಕೆ-3 ಮತ್ತು 4 ಕಡ್ಡಾಯವಾಗಿರುತ್ತದೆ.
- ಮೂರನೇ ಹಂತದಲ್ಲಿ 100 ಅಂಕಗಳಿಗೆ ವಿವರಣಾತ್ಮಕ ಮಾದರಿಯ ಲಿಖಿತ ಪರೀಕ್ಷೆ ಇರುತ್ತದೆ. ಅಭ್ಯರ್ಥಿಯ ಪ್ರಬಂಧ ರಚನಾ ಕೌಶಲ್ಯವನ್ನು ಪರೀಕ್ಷಿಸಲಾಗುತ್ತದೆ.
- ನಾಲ್ಕನೇ ಹಂತದಲ್ಲಿ ಅಭ್ಯರ್ಥಿಯ ಗಣಕಯಂತ್ರ ಕೌಶಲವನ್ನು (ಕಂಪ್ಯೂಟರ್ ಜ್ಞಾನ) ಪರೀಕ್ಷಿಸಲಾಗುತ್ತದೆ.

ಮೊದಲ ಹಂತದ ಪರೀಕ್ಷೆ ಏಪ್ರಿಲ್ ತಿಂಗಳಲ್ಲಿ ನಡೆಯುವ ಸಾಧ್ಯತೆ ಇದೆ. ಮೂರು ಮತ್ತು ನಾಲ್ಕನೇ ಹಂತದ ಪರೀಕ್ಷೆಗಳ ದಿನಾಂಕವನ್ನು ಎಸ್‌ಎಸ್‌ಸಿ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುತ್ತದೆ.

ಪರೀಕ್ಷಾ ಕೇಂದ್ರಗಳು

ರಾಜ್ಯದ ಬೆಂಗಳೂರು, ಬೆಳಗಾವಿ, ಹುಬ್ಬಳ್ಳಿ, ಕಲಬುರಗಿ, ಶಿವಮೊಗ್ಗ, ಮಂಗಳೂರು, ಮೈಸೂರು ಮತ್ತು ಉಡುಪಿ ಜಿಲ್ಲೆಗಳಲ್ಲಿ ಪರೀಕ್ಷೆ ನಡೆಸಲಾಗುತ್ತದೆ. ಅಭ್ಯರ್ಥಿಗಳು ತಮಗೆ ಅನುಕೂಲವಾಗುವ ಪರೀಕ್ಷಾ ಕೇಂದ್ರಗಳನ್ನು ಆಯ್ಕೆಮಾಡಿಕೊಳ್ಳಬಹುದು.

ಈ ಪರೀಕ್ಷೆ ಕುರಿತ ಹೆಚ್ಚಿನ ಮಾಹಿತಿಗೆ **www.ssc.nic.in** ನೋಡಬಹುದು.

(ಮುಂದಿನವಾರ: ಪರೀಕ್ಷಾ ಸಿದ್ಧತೆ, ಅಧ್ಯಯನ ಸಾಮಗ್ರಿಗಳ ಲಭ್ಯತೆ, ತರಬೇತಿ ಕೇಂದ್ರಗಳ ಕುರಿತ ಮಾಹಿತಿ)

ಅರ್ಜಿ ಸಲ್ಲಿಸುವ ವಿಧಾನ

ಅರ್ಜಿ ಸಲ್ಲಿಕೆಯು ಎರಡು ಹಂತದ ಪ್ರಕ್ರಿಯೆಯಾಗಿದೆ. ಮೊದಲ ಹಂತದಲ್ಲಿ ಅಭ್ಯರ್ಥಿಯು https://ssc.nic.in ವೆಬ್‌ಸೈಟ್ ಮೂಲಕ ಲಾಗಿನ್ ವಿಭಾಗಕ್ಕೆ ಹೋಗಿ 'register now' ಲಿಂಕನ್ನು ಕ್ಲಿಕ್ ಮಾಡುವ ಮೂಲಕ ನೋಂದಣಿ ಮಾಡಿಕೊಳ್ಳಬೇಕು.

ನೋಂದಣಿ ನಂತರ ಬರುವ ರಿಜಿಸ್ಟರ್ ನಂಬರ್ ಪಾಸ್‌ವರ್ಡ್ ಬಳಸಿ ಎಸ್.ಎಸ್.ಸಿ ವೆಬ್‌ಸೈಟ್‌ಗೆ ಲಾಗಿನ್ ಆಗಿ, ಅಲ್ಲಿರುವ 'Combined graduate level examination 2021' ಲಿಂಕ್ ಕ್ಲಿಕ್ ಮಾಡಿ. ಅದರಲ್ಲಿರುವ ಮಾರ್ಗಸೂಚಿ ಅನುಸರಿಸಿ ಅರ್ಜಿ ಸಲ್ಲಿಸಬೇಕು. ನಂತರ ಪರೀಕ್ಷಾ ಶುಲ್ಕವನ್ನು ಆನ್‌ಲೈನ್ ಅಥವಾ ಚಲನ್ ಮೂಲಕ ಜ 27ರೊಳಗೆ ಪಾವತಿಸಬೇಕು.

ಪ್ರಜಾವಾಣಿ ಉದ್ಯೋಗ ವಾರ್ತೆ

ಸಿಡಿಎಸ್ ಪರೀಕ್ಷೆ: 341 ಹುದ್ದೆಗಳ ನೇಮಕಾತಿ ಅರ್ಜಿ

ಕೇಂದ್ರ ಲೋಕಸೇವಾ ಆಯೋಗವು ಕಂಬೈನ್ಡ್ ಡಿಫೆನ್ಸ್ (ಸಿಡಿಎಸ್) ಸರ್ವಿಸಸ್ ಪರೀಕ್ಷೆ ಮೂಲಕ 341 ಹುದ್ದೆಗಳ ನೇಮಕಾತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

ಹುದ್ದೆಗಳ ಸಂಖ್ಯೆ: 341

ವಿದ್ಯಾರ್ಹತೆ: ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಪದವಿ ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರಬೇಕು.

ವಯೋಮಿತಿ: ಹುದ್ದೆಗಳಿಗೆ ಅನುಸಾರ ಭಾರತೀಯ ಸೇನೆ ಪ್ರಕಟಿಸಿರುವ ವಯೋಮಿತಿಯ ಅರ್ಹತೆ ಪಡೆದಿರಬೇಕು.

ನೇಮಕಾತಿ ವಿಧಾನ: ಕಂಪ್ಯೂಟರ್ ಆಧಾರಿತ ಪರೀಕ್ಷೆ ಹಾಗೂ ದೈಹಿಕ ಕ್ಷಮತೆ ಪರೀಕ್ಷೆ ಮೂಲಕ ಆಯ್ಕೆ ನಡೆಯಲಿದೆ.

ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಮೂಲಕ

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಜನವರಿ 11, 2022

ಹೆಚ್ಚಿನ ಮಾಹಿತಿಗೆ: www.upsc.gov.in

'ಸಾಮಾನ್ಯ ಜ್ಞಾನ' – ಪರೀಕ್ಷಾ ಮಾರ್ಗದರ್ಶನ

ರಾಜ್ಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಲಿ ಇರುವ 1242 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ನೇಮಕಾತಿಗಾಗಿ ರಾಜ್ಯ ಸರ್ಕಾರ ಸ್ಪರ್ಧಾತ್ಮಕ ಪರೀಕ್ಷೆ ನಡೆಸುತ್ತಿದೆ. ಈ ಪರೀಕ್ಷೆಯಲ್ಲಿ ನಿಗದಿಪಡಿಸಿರುವ 'ಸಾಮಾನ್ಯ ಜ್ಞಾನ' ವಿಷಯಕ್ಕೆ ಸಂಬಂಧಿಸಿದ ಕೆಲವು ಮಾದರಿ ಪ್ರಶ್ನೋತ್ತರಗಳನ್ನು ಈ ಅಂಕಣದಲ್ಲಿ ನೀಡಲಾಗಿದೆ.

ಸಹಾಯಕ ಪ್ರಾಧ್ಯಾಪಕರ ಹುದ್ದೆಗಾಗಿ ಸ್ಪರ್ಧಾತ್ಮಕ ಪರೀಕ್ಷೆ

1) 'ವನಿತಾ ಸಂಗಾತಿ ಯೋಜನೆ' ಈ ಕೆಳಗಿನ ಯಾವುದಕ್ಕೆ ಸಂಬಂಧಿಸಿದೆ?

ಎ) ಗಾರ್ಮೆಂಟ್ಸ್ ಮಹಿಳಾ ನೌಕರರಿಗೆ ಉಚಿತ ಬಿಎಂಟಿಸಿ ಬಸ್ ಪಾಸ್ ನೀಡಿಕೆ

ಬಿ) ಬೀದರ್ – ಕಲಬುರಗಿ ನಗರಗಳಲ್ಲಿ ಮಹಿಳೆಗೆ ಉಚಿತ ಕಂಪ್ಯೂಟರ್ ಸಾಕ್ಷರತಾ ಕಾರ್ಯಕ್ರಮ

ಸಿ) ಕರ್ನಾಟಕ ರಾಜ್ಯದಲ್ಲಿರುವ ಎಲ್ಲಾ 18 ವರ್ಷ ಮೇಲ್ಪಟ್ಟ ಹೆಣ್ಣುಮಕ್ಕಳಿಗೆ ಎಲ್‌ಪಿಜಿ ಗ್ಯಾಸ್ ಸಂಪರ್ಕ ನೀಡಲು ಅವಕಾಶ

ಡಿ) ಮೇಲಿನ ಯಾವುದೂ ಅಲ್ಲ

ಉತ್ತರ: ಎ

2) 'ಗೌಸಿಯನ್ ಮಿಕ್ಸ್‌ಚರ್ ಮಾಡೆಲ್' (Gaussian Mixture model) ಬಳಸಿ ಈ ಕೆಳಗಿನ ಯಾವುದನ್ನು ಲೆಕ್ಕ ಹಾಕಲಾಗಿದೆ.

ಎ) ಕೋವಿಡ್-19 ಮೂರನೇ ಅಲೆ

ಬಿ) ಸದ್ಯದಲ್ಲಿಯೇ ಬರಲಿರುವ ಧೂಮಕೇತು

ಸಿ) 2024ರಲ್ಲಿ ನಡೆಯಲಿರುವ ಲೋಕಸಭೆಯ ಚುನಾವಣಾ ಫಲಿತಾಂಶ

ಡಿ) ಮೇಲಿನ ಯಾವುದೂ ಅಲ್ಲ.

ಉತ್ತರ: ಎ

(**ವಿವರಣೆ:**- ಡಿಸೆಂಬರ್ ಮಧ್ಯ ಭಾಗದಲ್ಲೇ ಆರಂಭವಾಗಿರುವ 'ಕೋವಿಡ್-19' ಸಾಂಕ್ರಾಮಿಕದ 'ಓಮೈಕ್ರಾನ್' ರೂಪಾಂತರ ತಳಿ, ದೇಶದಲ್ಲಿ ಸೋಂಕಿನ ಮೂರನೇ ಅಲೆ ಹರಡಲು ಕಾರಣವಾಗುತ್ತಿದೆ. 2022ರ ಫೆಬ್ರುವರಿ ವೇಳೆಗೆ ಸೋಂಕು ಗರಿಷ್ಠ ಮಟ್ಟ ತಲುಪಲಿದೆ ಎಂದು ಕಾನ್ಪುರ ಐಐಟಿಯ ಸಂಶೋಧಕರು ಅಂದಾಜಿಸಿದ್ದಾರೆ.

- ಈ ವರದಿ ತಯಾರಿಕೆಗೆ 'ಗೌಸಿಯನ್ ಮಿಕ್ಸ್‌ಚರ್ ಮಾಡೆಲ್' ಎಂಬ ಸಂಖ್ಯಾಶಾಸ್ತ್ರದ ಪರಿಕರವನ್ನು ಬಳಸಲಾಗಿದೆ.
- ದೇಶದಲ್ಲಿ ನಿತ್ಯ ದಾಖಲಾಗುತ್ತಿರುವ ಪ್ರಕರಣಗಳ ಸಂಖ್ಯೆ ಹಾಗೂ ಅತಿ ಹೆಚ್ಚು ಕೋವಿಡ್ ಪ್ರಕರಣಗಳು ದಾಖಲಾಗುತ್ತಿರುವ ವಿಶ್ವದ ಟಾಪ್ -10 ದೇಶಗಳಲ್ಲಿನ ಸೋಂಕಿನ ಪ್ರಮಾಣ ಅವಲೋಕಿಸಿ ಈ ವರದಿಯನ್ನು ತಯಾರಿಸಲಾಗಿದೆ.
- ಸಬರ್ ಪರ್ಶದ್ ರಾಜೇಶ್ ಭಾಯ್, ಶುಭ್ರ ಶಂಕರ್‌ಧರ್ ಹಾಗೂ ಸುಲಭ್ ಅವರನ್ನೊಳಗೊಂಡ ತಂಡ (ಐಐಟಿಯ ಗಣಿತ ಹಾಗೂ ಸಂಖ್ಯಾಶಾಸ್ತ್ರ ವಿಭಾಗದಿಂದ) ಈ ಸಂಶೋಧನಾ ವರದಿ ತಯಾರಿಸಿದೆ).

3) ಇತ್ತೀಚೆಗೆ ಯಾರಿಗೆ 'ಕರ್ನಾಟಕ ರತ್ನ' ಪ್ರಶಸ್ತಿ ಘೋಷಿಸಲಾಗಿದೆ?

ಎ) ದೇವಿ ಪ್ರಸಾದ್ ಶೆಟ್ಟಿ ಬಿ) ಪುನೀತ್ ರಾಜಕುಮಾರ್

ಸಿ) ಡಾ. ಎಂ.ಸಿ. ಮೋದಿ ಡಿ) ಅನಂತಕುಮಾರ್

ಉತ್ತರ: ಬಿ

4) 'ಪ್ರಳಯ' ಖಂಡಾಂತರ ಕ್ಷಿಪಣಿ ಕುರಿತು ನೀಡಲಾದ ಹೇಳಿಕೆಗಳನ್ನು ಗಮನಿಸಿ

1) ಭೂಮಿಯಿಂದ ಭೂಮಿಗೆ ನೆಗೆಯುವ ಖಂಡಾಂತರ ಕ್ಷಿಪಣಿ ಇದಾಗಿದೆ. ಸುಮಾರು 150 ಕಿ.ಮೀ.ನಿಂದ 500 ಕಿಮೀ ವರೆಗಿನ ಗುರಿ ತಲುಪುವ ಸಾಮರ್ಥ್ಯವನ್ನು ಹೊಂದಿದೆ. (Surface-to-Surface tactical short-range ballistic missile - SRBM)

2) ಇತ್ತೀಚೆಗೆ ಒಡಿಶಾದ ಬಾಲಸೋರ್‌ನಲ್ಲಿರುವ ಎಪಿಜೆ ಅಬ್ದುಲ್ ಕಲಾಂ ದ್ವೀಪದಿಂದ ಯಶಸ್ವಿ ಉಡಾವಣೆಯನ್ನು ಮಾಡಲಾಯಿತು.

3) ಈ ಕ್ಷಿಪಣಿಯಲ್ಲಿ ಮಾರ್ಗದರ್ಶನಕ್ಕಾಗಿ ಅತ್ಯಾಧುನಿಕ ನ್ಯಾವಿಗೇಷನ್ ಮತ್ತು ಏವಿಯಾನಿಕ್ಸ್ ತಂತ್ರಜ್ಞಾನ ಅಳವಡಿಕೆಯಾಗಿದೆ. ಇದು ಕಡಿಮೆ ಪ್ರಮಾಣದ ಅಂತರದಲ್ಲಿ ವೈರಿಗಳ ಮೇಲೆ ನಿಗಾ ಇಡಲು ಅನುಕೂಲವಾಗಿದೆ.

4) ಇದು ರಷ್ಯಾ ದೇಶದ ಸಹಯೋಗದೊಂದಿಗೆ ಡಿಆರ್‌ಡಿಒ ಅಭಿವೃದ್ಧಿಪಡಿಸಿದ ಮೊದಲ ಕ್ಷಿಪಣಿಯಾಗಿದೆ.

ಇದರಲ್ಲಿ ಯಾವ ಹೇಳಿಕೆ ಸರಿಯಾಗಿದೆ?

ಎ) ಹೇಳಿಕೆ 1, 2 ಮತ್ತು 4 ಮಾತ್ರ ಸರಿಯಾಗಿದೆ

ಬಿ) ಹೇಳಿಕೆ 1ರಿಂದ 4ರತನಕ ಎಲ್ಲವೂ ಸರಿಯಾಗಿದೆ

ಸಿ) ಹೇಳಿಕೆ 1, 2,3 ಮಾತ್ರ ಸರಿಯಾಗಿದೆ

ಡಿ) ಮೇಲಿನ ಯಾವುದೂ ಸರಿಯಾಗಿಲ್ಲ

ಉತ್ತರ: ಸಿ

5) ಚಿಲಿ ದೇಶದ ನೂತನ ಅಧ್ಯಕ್ಷರಾಗಿ ಯಾರು ಆಯ್ಕೆಯಾದರು?

ಎ) ಗ್ರೆಬಿಯನ್ ಜಾನ್ ಸನ್ ಬಿ) ಗೆಬ್ರಿಯಲ್ ಬೋರಿಕ್

ಸಿ) ಜೋಸ್ ಅಂಟೋನಿಯೊ ಕಾಸ್ಟ್ ಡಿ) ಮೇಲಿನ ಯಾರೂ ಅಲ್ಲ

ಉತ್ತರ: ಬಿ

6) ಪಾಕಿಸ್ತಾನದ ಖೈಬರ್ ಪಖ್ತುಂಖ್ವಾ ಪ್ರಾಂತ್ಯದಲ್ಲಿ (Khyber Pakhtunkhwa province) 2300 ವರ್ಷ ಹಳೆಯದಾದ ಭಗವಾನ್ ಬುದ್ಧನ ದೇವಾಲಯ ಪತ್ತೆಯಾಗಿದೆ. ಇದನ್ನು ಪಾಕಿಸ್ತಾನ ಮತ್ತು ______________ ದೇಶದ ಪುರಾತತ್ವ ತಜ್ಞರು ಜಂಟಿಯಾಗಿ ಉತ್ಖನನ ಮಾಡುವ ಮೂಲಕ ಪತ್ತೆ ಹಚ್ಚಿದರು.

ಎ) ಭಾರತ ಬಿ) ಇಂಗ್ಲೆಂಡ್ ಸಿ) ಜರ್ಮನಿ ಡಿ) ಇಟಲಿ

ಉತ್ತರ: ಡಿ

7) ಮನುಷ್ಯರಲ್ಲಿ ಎಷ್ಟು ಜೋಡಿ ಲಾಲಾರಸ ಗ್ರಂಥಿಗಳಿವೆ?

ಎ) 3 ಬಿ) 5 ಸಿ) 7 ಡಿ) 2

ಉತ್ತರ: ಎ

ವಿವರಣೆ:- ಪ್ರಮುಖ ಲಾಲಾರಸ ಗ್ರಂಥಿಗಳಲ್ಲಿ ಮೂರು ಜೋಡಿಗಳಿವೆ:

1) ಪ್ಯಾರೊಟಿಡ್ ಗ್ರಂಥಿಗಳು (Parotid glands),

2) ಸಬ್‌ಮ್ಯಾಂಡಿಬ್ಯುಲರ್ ಗ್ರಂಥಿಗಳು (Submandibular glands)

3) ಸಬ್‌ಲಿಂಗ್ಯುಯಲ್ ಗ್ರಂಥಿಗಳು (Sublingual glands)

8) ಈ ಕೆಳಗಿನ ಯಾವ ಇಲಾಖೆಗಳು ಕೇಂದ್ರ ಬಜೆಟ್ ಅನ್ನು ಸಿದ್ಧಪಡಿಸುತ್ತವೆ?

ಎ) ಬಜೆಟ್ ಸೇವೆ ಇಲಾಖೆ

ಬಿ) ಆರ್ಥಿಕ ವ್ಯವಹಾರಗಳ ಇಲಾಖೆ(Department of Economic Affairs)

ಸಿ) ನೀತಿ ಆಯೋಗ ಡಿ) ಆರ್‌ಬಿಐ

ಉತ್ತರ: ಬಿ

9) 'ಇಂಟರ್ ನ್ಯಾಷನಲ್ ಡಿಸಾಸ್ಟರ್ ಮ್ಯಾನೇಜ್‌ಮೆಂಟ್ ಡೇ' ಎಂದು ಯಾವ ದಿನ ಆಚರಿಸಲಾಗುತ್ತದೆ?

ಎ) ಅಕ್ಟೋಬರ್ 13 ಬಿ) ಅಕ್ಟೋಬರ್ 15

ಸಿ) ನವೆಂಬರ್ 16 ಡಿ) ಡಿಸೆಂಬರ್ 4

ಉತ್ತರ: ಎ

10) ಸ್ವತಂತ್ರ ಭಾರತದ ಮೊದಲ ಕೇಂದ್ರ ಸರ್ಕಾರದ ಶಿಕ್ಷಣ ಸಚಿವ ಯಾರು?

ಎ) ಎಂಸಿ ಚಾವ್ಲಾ ಬಿ) ರಫಿ ಅಹ್ಮದ್ ಕಿದ್ವಾಯಿ

ಸಿ) ಎನ್ ಜಿ ಅಯ್ಯಂಗಾರ

ಡಿ) ಮೌಲಾನಾ ಅಬ್ದುಲ್ ಕಲಾಂ ಆಜಾದ್

ಉತ್ತರ: ಡಿ

ಮಾಹಿತಿ: **Spardha Bharati UPSC,** ಯೂಟ್ಯೂಬ್ ಚಾನೆಲ್


ನಿಮಗಿದು ಗೊತ್ತೆ?

ರಾಷ್ಟ್ರೀಯ ವೈದ್ಯರ ದಿನ ಮತ್ತು ಬಿ. ಸಿ. ರಾಯ್ ಜನ್ಮದಿನ

ಪ್ರತಿ ವರ್ಷ ಜುಲೈ 1 ಅನ್ನು 'ರಾಷ್ಟ್ರೀಯ ವೈದ್ಯರ ದಿನ'ವನ್ನಾಗಿ ಆಚರಿಸಲಾಗುತ್ತದೆ. ಇದು ಭಾರತದ ವೈದ್ಯರೆಲ್ಲರೂ ಗೌರವಿಸುವ ಡಾ.ಬಿ.ಸಿ.ರಾಯ್ ಅವರ ಜನ್ಮದಿನ. ರಾಯ್ ಅವರ ಸ್ಮರಣಾರ್ಥ ಭಾರತ ಸರ್ಕಾರ ಈ ದಿನವನ್ನು 'ವೈದ್ಯರ ದಿನ' ಎಂದು ಆಚರಿಸುವಂತೆ ಸೂಚಿಸಿದೆ.

ಬಿದನ್ ಚಂದ್ರರಾಯ್ (ಬಿ. ಸಿ. ರಾಯ್) ಪಟ್ನಾದ ಬಂಕಿಪುರದ ಬೆಂಗಾಲಿ ಕುಟುಂಬವೊಂದರಲ್ಲಿ 1882ರ ಜುಲೈ 1 ರಂದು ಜನಿಸಿದರು. ಇವರ ತಂದೆ ಪ್ರಕಾಶ್ ಚಂದ್ರರಾಯ್ ಹಾಗೂ ತಾಯಿ ಅಂಗೋರ್ಕಮಣಿ ದೇವಿ. ತಂದೆ ಅಬಕಾರಿ ಇನ್ಸ್‌ಪೆಕ್ಟರ್ ಆಗಿದ್ದರು. ತಾಯಿ ಸಮಾಜ ಸೇವಕಿಯಾಗಿದ್ದರು. ಇಬ್ಬರೂ ಬ್ರಹ್ಮ ಸಮಾಜದಲ್ಲಿ ಸಕ್ರಿಯರಾಗಿದ್ದರು.

ಬಿ.ಸಿ. ರಾಯ್ ಕೋಲ್ಕತ್ತಾ ಮೆಡಿಕಲ್ ಕಾಲೇಜಿನಲ್ಲಿ ವೈದ್ಯಕೀಯ ಶಿಕ್ಷಣವನ್ನು ಪಡೆದರು. ವೈದ್ಯಕೀಯ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡಿದ್ದರು. ಇವರು ಭಾರತೀಯ ವೈದ್ಯ ಪರಿಷತ್ತಿನ ಸ್ಥಾಪನೆಯಲ್ಲಿ ಮಹತ್ವದ ಪಾತ್ರವಹಿಸಿದ್ದರು. ಹೀಗಾಗಿ ರಾಯ್ ಜನ್ಮ ದಿನವನ್ನು 'ರಾಷ್ಟ್ರೀಯ ವೈದ್ಯರ ದಿನ' ಎಂದು ಆಚರಿಸಲಾಗುತ್ತದೆ. ಮಹಾತ್ಮ ಗಾಂಧಿಯವರ ಅನುಯಾಯಿಯಾಗಿದ್ದ ಇವರು ಅಸಹಕಾರ ಚಳವಳಿಯಲ್ಲಿ ಭಾಗವಹಿಸಿದ್ದರು. ಪಶ್ಚಿಮ ಬಂಗಾಳದ ಮುಖ್ಯಮಂತ್ರಿಯಾಗಿಯೂ ಸೇವೆ ಸಲ್ಲಿಸಿದ ರಾಯ್ ಅವರಿಗೆ 1961ರಲ್ಲಿ 'ಭಾರತ ರತ್ನ' ಪುರಸ್ಕಾರ ನೀಡಿ ಗೌರವಿಸಲಾಗಿದೆ.



ಸುಭಾಷಿತ

ಯಾವ ಕಾಲದ ಶಾಸ್ತ್ರವೇನು ಹೇಳಿದರೇನು? ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು?

-ಕುವೆಂಪು

ಅತಿಥಿ ಉಪನ್ಯಾಸಕರ ನೋವಿಗೆ ಕಿವಿಗೊಡಿ, ಕಲಿಕೆಯ ನಷ್ಟ ತಪ್ಪಿಸಿ

ಕೋವಿಡ್-19 ಕಾರಣದಿಂದ ಸ್ಥಗಿತಗೊಂಡಿದ್ದ ನೇರ ತರಗತಿಗಳು ಕೊನೆಗೂ ಶುರುವಾಗಿ ಕಾಲೇಜುಗಳಲ್ಲಿ ಶೈಕ್ಷಣಿಕ ಚಟುವಟಿಕೆಗಳು ಪುನಃ ಸಹಜ ಲಯ ಕಂಡುಕೊಳ್ಳುತ್ತಿರುವ ಹೊತ್ತಿನಲ್ಲೇ ಮತ್ತೊಂದು ಅಡ್ಡಿ ಎದುರಾಗಿದೆ. ಸೇವಾ ಭದ್ರತೆ ಒದಗಿಸಬೇಕು ಹಾಗೂ ವೇತನದಲ್ಲಿ ಹೆಚ್ಚಳ ಮಾಡಬೇಕು ಎಂಬ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ 14 ಸಾವಿರಕ್ಕೂ ಹೆಚ್ಚು ಅತಿಥಿ ಉಪನ್ಯಾಸಕರು ಪಾಠವನ್ನು ಬಹಿಷ್ಕರಿಸಿ, ಬೀದಿಗೆ ಇಳಿದಿದ್ದಾರೆ. ಕಾಲೇಜುಗಳಲ್ಲಿನ ಕಾರ್ಯಭಾರಕ್ಕೆ ತಕ್ಕಂತೆ ಬೋಧಕರನ್ನು ನೇಮಿಸಿಕೊಳ್ಳುವ ಅಗತ್ಯವನ್ನು ಸರ್ಕಾರ ಮರೆತು ಎಷ್ಟೋ ವರ್ಷಗಳಾಗಿವೆ. ದೈನಂದಿನ ಬೋಧನೆಗೆ ಹೆಚ್ಚಿನ ಕಾಲೇಜುಗಳು ಅತಿಥಿ ಉಪನ್ಯಾಸಕರನ್ನೇ ಅವಲಂಬಿಸಿವೆ. ಅವರ ಸೇವೆ ಇಲ್ಲವೆಂದರೆ ಅದರಿಂದ ಪಾಠ-ಕಲಿಕೆಗೆ ಬಲುದೊಡ್ಡ ಪೆಟ್ಟು. ಅತಿಥಿ ಉಪನ್ಯಾಸಕರ ಸಂಕಷ್ಟವನ್ನು ಪರಿಹರಿಸುವುದು ಎಷ್ಟು ಮುಖ್ಯವೋ ವಿದ್ಯಾರ್ಥಿಗಳ ಕಲಿಕೆಯ ನಷ್ಟವನ್ನು ತಪ್ಪಿಸುವುದು ಕೂಡ ಅಷ್ಟೇ ಮುಖ್ಯ. ಅತಿಥಿ ಉಪನ್ಯಾಸಕರಿಗೆ ತಿಂಗಳಿಗೆ ಸದ್ಯ ತಲಾ ₹ 11 ಸಾವಿರದಿಂದ ₹ 13 ಸಾವಿರದಷ್ಟು ವೇತನ ಸಿಗುತ್ತಿದೆ. ಬೆಲೆ ಏರಿಕೆಯ ಈ ಯುಗದಲ್ಲಿ ಇಷ್ಟೊಂದು ಕಡಿಮೆ ವರಮಾನದಿಂದ ಕುಟುಂಬ ನಿರ್ವಹಣೆಯನ್ನು ಮಾಡಲು ಸಾಧ್ಯವಿದೆಯೇ? ಆಡಳಿತದ ಹೊಣೆ ಹೊತ್ತವರು ಗಂಭೀರವಾಗಿ ಯೋಚಿಸಬೇಕಾದ ವಿಷಯ ಇದು. ಕೊರೊನಾ ಕಾರಣದಿಂದ ಕಾಲೇಜುಗಳ ಬಾಗಿಲು ಬಂದ್ ಆದಾಗ ಅತಿಥಿ ಉಪನ್ಯಾಸಕರು ತರಕಾರಿ ಮಾರಿ, ಕೂಲಿ ಕೆಲಸ ಮಾಡಿ ಹೊಟ್ಟೆ ಹೊರೆದುಕೊಳ್ಳಬೇಕಾದ ಸ್ಥಿತಿ ಎದುರಾಗಿದ್ದನ್ನೂ ಮರೆಯುವ ಹಾಗಿಲ್ಲ. ಅಲ್ಲದೆ, ಅವರಿಗೆ ವರ್ಷದಲ್ಲಿ ಮೂರು ತಿಂಗಳು ಸಂಬಳವೇ ಸಿಗುವುದಿಲ್ಲ. ಉಳಿದ ಅವಧಿಯ ಸಂಬಳವನ್ನು ಸಹ ಕಂತಿನಲ್ಲಿ ಕೊಡಲಾಗುತ್ತದೆ. ಗರಿಷ್ಠ ದುಡಿಮೆ, ಕನಿಷ್ಠ ವೇತನದಿಂದ ಶೋಷಣೆಗೆ ಒಳಗಾದ ವರ್ಗ. ಅವರ ಸಂಕಷ್ಟವನ್ನು ಬಗೆಹರಿಸುವುದು ಆದ್ಯತೆ ಮೇಲೆ ಆಗಬೇಕಿರುವ ಕೆಲಸ.



ಅತಿಥಿ ಉಪನ್ಯಾಸಕರು ಮತ್ತು ಸರ್ಕಾರದ ನಡುವಿನ ಹಗ್ಗಜಗ್ಗಾಟದಿಂದ ವಿದ್ಯಾರ್ಥಿಗಳ ಕಲಿಕೆಗೆ ತೊಂದರೆಯಾಗಬಾರದು

ಕಳೆದ ಶೈಕ್ಷಣಿಕ ವರ್ಷದಲ್ಲಿ ನೇರ ತರಗತಿಗಳು ಬಹುಮಟ್ಟಿಗೆ ನಡೆದಿರಲಿಲ್ಲ. ಈ ವರ್ಷ ಕೂಡ ತುಂಬಾ ವಿಳಂಬವಾಗಿ ಆರಂಭವಾಗಿದ್ದು, 2022ರ ಫೆಬ್ರುವರಿ 11ರೊಳಗೆ ಎಲ್ಲ ಪಾಠಗಳನ್ನು ಪೂರ್ಣಗೊಳಿಸುವ ಗುರಿ ಹಾಕಿಕೊಳ್ಳಲಾಗಿದೆ. ವಸ್ತುಸ್ಥಿತಿ ಹೀಗಿರುವಾಗ ಬೋಧಕರೇ ಇಲ್ಲದೆ ಕಾಲೇಜುಗಳಲ್ಲಿ ಪಾಠ-ಕಲಿಕೆ ಸುಗಮವಾಗಿ ನಡೆಯುವ ಮಾರ್ಗ ಯಾವುದು? ಎರಡು ವರ್ಷಗಳಿಂದ ಒಂದಿಲ್ಲೊಂದು ಕಾರಣದಿಂದ ಬೋಧನೆಯು ಸಹಜ ಲಯ ಕಂಡುಕೊಳ್ಳಲು ಸಾಧ್ಯವಾಗಿರಲಿಲ್ಲ. ನೂತನ ಶಿಕ್ಷಣ ನೀತಿಯ ಜಾರಿಯ ಗೋಜಲುಗಳು ಬೇರೆ. ಉಳಿದಿರುವ ಅವಧಿ ಅತ್ಯಲ್ಪ. ಅಸ್ತವ್ಯಸ್ತಗೊಂಡಿರುವ ಶೈಕ್ಷಣಿಕ ಚಟುವಟಿಕೆಗಳನ್ನು ಪುನಃ ಹಳಿಗೆ ತರುವ ಕೆಲಸ ಬಿರುಸು ಪಡೆಯುವಂತೆ ನೋಡಿಕೊಳ್ಳಬೇಕಿದ್ದ ಶಿಕ್ಷಣ ಇಲಾಖೆಯು ಅಸಹಾಯಕತೆಯಿಂದ ಕೈಚೆಲ್ಲಿ ಕುಳಿತಿರುವುದು ಸರಿಯಲ್ಲ. ಅತಿಥಿ ಉಪನ್ಯಾಸಕರ ವಿಷಯವಾಗಿ ವಿಧಾನ ಮಂಡಲದಲ್ಲಿ ಹಲವು ಬಾರಿ ಸುದೀರ್ಘ ಚರ್ಚೆಗಳು ನಡೆದಿವೆ. ಆದರೆ, ಅವರ ಸಮಸ್ಯೆಗೆ ಶಾಶ್ವತ ಪರಿಹಾರ ಒದಗಿಸುವ ಇಚ್ಛಾಶಕ್ತಿಯನ್ನು ಇದುವರೆಗಿನ ಯಾವ ಸರ್ಕಾರವೂ ಪ್ರದರ್ಶಿಸಿಲ್ಲ. ಆದರೆ, ತಮ್ಮ ಬೇಡಿಕೆಗಳನ್ನು ಸರ್ಕಾರದ ಗಮನಕ್ಕೆ ತರುವ ಯತ್ನವನ್ನು ಅತಿಥಿ ಉಪನ್ಯಾಸಕರಂತೂ ಮಾಡುತ್ತಲೇ ಇದ್ದಾರೆ. ಸರ್ಕಾರಿ ಕಾಲೇಜು ಅತಿಥಿ ಉಪನ್ಯಾಸಕರ ಸಂಘಗಳ ಒಕ್ಕೂಟ ಈಗ ತೀರ್ಥಹಳ್ಳಿಯಿಂದ ಪಾದಯಾತ್ರೆಯನ್ನು ಬೇರೆ ಆರಂಭಿಸಿದೆ. 'ಸಮಸ್ಯೆಯ ಇತ್ಯರ್ಥಕ್ಕೆ ಸಮಿತಿಯನ್ನು ರಚಿಸಲಾಗಿದೆ' ಎಂದು ಸಬೂಬು ಹೇಳಿ, ಕಾಲ ತಳ್ಳುವ ಉನ್ನತ ಶಿಕ್ಷಣ ಇಲಾಖೆಯ ಪ್ರವೃತ್ತಿ ಸರ್ವಥಾ ಒಪ್ಪುವಂಥದ್ದಲ್ಲ. ಅತಿಥಿ ಉಪನ್ಯಾಸಕರು 20 ದಿನಗಳಿಂದಲೂ ಮುಷ್ಕರದಲ್ಲಿ ನಿರತರಾಗಿದ್ದಾರೆ. ಅಧಿಕಾರಿಗಳು ಮೂಕ ಪ್ರೇಕ್ಷಕರಾಗಿ ಕೂರದೆ ಅವರನ್ನು ಕರೆದು ಮೊದಲು ಮಾತನಾಡಿಸಬೇಕು. ಅವರ ಬೇಡಿಕೆಗಳನ್ನು ಅತ್ಯಂತ ಸಹಾನುಭೂತಿಯಿಂದ ಪರಿಶೀಲಿಸಬೇಕು. ಈ ನಿಟ್ಟಿನಲ್ಲಿ ಯುಜಿಸಿ ನಿಗದಿ ಮಾಡಿರುವ ಮಾನದಂಡಗಳನ್ನೂ ಗಮನದಲ್ಲಿ ಇರಿಸಿಕೊಳ್ಳಬೇಕು. ಪಶ್ಚಿಮ ಬಂಗಾಳ, ದೆಹಲಿ, ಪಂಜಾಬ್ ಸರ್ಕಾರಗಳು ಅತಿಥಿ ಉಪನ್ಯಾಸಕರಿಗೆ ಒದಗಿಸಿರುವ ಸೇವಾ ಭದ್ರತೆಯ ಕುರಿತು ಮುಷ್ಕರನಿರತ ಅತಿಥಿ ಉಪನ್ಯಾಸಕರು ಪ್ರಸ್ತಾಪಿಸಿದ್ದಾರೆ. ಆ ಮಾದರಿಗಳನ್ನೂ ಅಧ್ಯಯನ ಮಾಡಬೇಕು. ಅತಿಥಿ ಉಪನ್ಯಾಸಕರು ನೆಮ್ಮದಿಯಿಂದ ಬದುಕು ಸಾಗಿಸುವಂತಹ ವ್ಯವಸ್ಥೆಯನ್ನು ಕಲ್ಪಿಸಬೇಕು. ಓಮೈಕ್ರಾನ್ ಗುಮ್ಮ ಕಾಡುತ್ತಿರುವ ಈ ಹೊತ್ತಿನಲ್ಲಿ ವಿದ್ಯಾರ್ಥಿಗಳ ಕಲಿಕೆಯ ನಷ್ಟವನ್ನೂ ತಪ್ಪಿಸಬೇಕು. ಬೋಧಕ ಹುದ್ದೆಗಳನ್ನು ಅಗತ್ಯಾನುಸಾರ ಕಾಲಕಾಲಕ್ಕೆ ಭರ್ತಿ ಮಾಡಿದರೆ 'ಅತಿಥಿ' ಸೇವೆಯ ಅಗತ್ಯವೇ ಬೀಳುವುದಿಲ್ಲ ಎಂಬುದನ್ನೂ ಶಿಕ್ಷಣ ಇಲಾಖೆಯು ಅರಿಯಬೇಕು.

ಭ್ರಷ್ಟಾಚಾರ, ಸ್ವಜನಪಕ್ಷಪಾತದಂತಹ ದುರ್ವರ್ತನೆಗಳನ್ನು ಜೋಳಿಗೆಗೆ ಹಾಕಿ ಎಂದು ಮಠಾಧೀಶರು ಕೇಳಬೇಕು

'ಗುರು' ಲಘುವಾದರೆ ಹೇಗೆ ಸ್ವಾಮಿ?



ಅನುಸಂಧಾನ

ರವೀಂದ್ರ ಭಟ್ಟ

ಕಾರ್ಯಕ್ರಮವೊಂದರಲ್ಲಿ ಭಾಗಿಯಾಗಿದ್ದ ಅಂದಿನ ರಾಷ್ಟ್ರಪತಿ ಎ.ಪಿ.ಜೆ.ಅಬ್ದುಲ್ ಕಲಾಂ ಅವರಿಗೆ ಮಗುವೊಂದು 'ಭ್ರಷ್ಟಾಚಾರವನ್ನು ನಿಗ್ರಹಿಸುವುದು ಹೇಗೆ?' ಎಂದು ಪ್ರಶ್ನೆ ಮಾಡಿತು. ಅದಕ್ಕೆ ಕಲಾಂ ಅವರು, 'ಮಕ್ಕಳಿಂದಲೇ ಭ್ರಷ್ಟಾಚಾರವನ್ನು ನಿಗ್ರಹಿಸಲು ಸಾಧ್ಯ. ಭ್ರಷ್ಟಾಚಾರದಿಂದ ಸಂಗ್ರಹಿಸಿದ ಹಣದಿಂದ ತಂದ ಯಾವುದೇ ವಸ್ತು, ಉಡುಗೊರೆಯನ್ನು ಸ್ವೀಕರಿಸುವುದಿಲ್ಲ ಎಂದು ನಮ್ಮ ದೇಶದ ಎಲ್ಲ ಮಕ್ಕಳೂ ಪ್ರತಿಜ್ಞೆ ಮಾಡಬೇಕು. ತಂದೆ ತಾಯಿಗೆ ಇದನ್ನೇ ಹೇಳಬೇಕು. ಲಂಚದ ಹಣದಿಂದ ತರುವ ವಸ್ತುಗಳಿಗೆ ಕಿಮ್ಮತ್ತು ಇಲ್ಲ ಎಂದು ಸ್ಪಷ್ಟವಾಗಿ ಹೇಳಬೇಕು' ಎಂದು ಉತ್ತರಿಸಿದ್ದರು.

ಅದೇ ರೀತಿ ನಮ್ಮ ಮಠಾಧೀಶರೂ 'ಯಾವುದೇ ಭ್ರಷ್ಟ ವ್ಯಕ್ತಿಯೊಂದಿಗೆ ವೇದಿಕೆ ಹಂಚಿಕೊಳ್ಳುವುದಿಲ್ಲ, ಭ್ರಷ್ಟ ಅಧಿಕಾರಿಯೇ ಆಗಲಿ, ಭ್ರಷ್ಟ ರಾಜಕಾರಣಿಯೇ ಆಗಲಿ ಅವರಿಗೆ ಮಠದೊಳಕ್ಕೆ ಪ್ರವೇಶ ನೀಡುವುದಿಲ್ಲ, ಭ್ರಷ್ಟರನ್ನು ಗೆಲ್ಲಿಸುವಂತೆ ಮಠದ ಅನುಯಾಯಿಗಳಿಗೆ ಕರೆ ಕೊಡುವುದಿಲ್ಲ.' ಎಂದು ಪ್ರತಿಜ್ಞೆ ಮಾಡಿದರೆ ಒಂದಿಷ್ಟು ಸುಧಾರಣೆಯಾಗ ಬಹುದೇನೋ? ಮಠಾಧೀಶರ ಇತ್ತೀಚಿನ ನಡವಳಿಕೆ ನೋಡಿದರೆ ನನ್ನದು ತಿರುಕನ ಕನಸು ಎನ್ನುವುದು ಸ್ಪಷ್ಟ.

ಚುನಾವಣೆಯಲ್ಲಿ ಯಾರನ್ನು ಗೆಲ್ಲಿಸಬೇಕು, ಗೆದ್ದ ಮೇಲೆ ಯಾರು ಮುಖ್ಯಮಂತ್ರಿಯಾಗಬೇಕು, ಯಾರಿಗೆ ಸಚಿವ ಸ್ಥಾನ ನೀಡಬೇಕು ಎಂದು ಮಠಾಧೀಶರು ನಿರ್ದೇಶಿಸುವುದು ನಮ್ಮಲ್ಲಿ ಹೊಸತೇನೂ ಅಲ್ಲ. ಅಧಿಕಾರಿಗಳ ವರ್ಗಾವಣೆಯಲ್ಲಿಯೂ ಆಯಕಟ್ಟಿನ ಸ್ಥಾನಗಳಲ್ಲಿ ತಮಗೆ ಬೇಕಾದ ಅಧಿಕಾರಿಗಳನ್ನು ನಿಯೋಜಿಸುವಲ್ಲಿಯೂ ಮಠಾಧೀಶರ ಪಾತ್ರ ಇದೆ ಎನ್ನುವುದು ಬಹಿರಂಗ ಗುಟ್ಟು. ಈಗ ಕೆಲವು ಮಠಾಧೀಶರು ಇನ್ನೊಂದು ಹೆಜ್ಜೆ ಮುಂದೆ ಹೋಗಿದ್ದಾರೆ. ಭ್ರಷ್ಟಾಚಾರ ನಡೆದಿದೆ, ಭಾರಿ ಹಗರಣವಾಗಿದೆ ಎಂದು ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಒಪ್ಪಿಕೊಂಡ ಪ್ರಕರಣದಲ್ಲಿ ಅಕ್ರಮವನ್ನು ಸಕ್ರಮ ಮಾಡುವವರ ಪರವಾಗಿ ಸ್ವಾಮೀಜಿಗಳು ವಕಾಲತ್ತು ಆರಂಭಿಸಿದ್ದಾರೆ. ಅಕ್ರಮ ಮಾಡಿದವರು ಬೇಡಿಕೆ ಸಲ್ಲಿಸುವುದು ಅವರ ಮನೋಧರ್ಮಕ್ಕೆ ಸರಿ. ಆದರೆ ಅದನ್ನು ಮನ್ನಿಸುವುದು?

2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ಅಧಿಕಾರಿಗಳ ನೇಮಕಾತಿಯಲ್ಲಿ ಭಾರಿ ಭ್ರಷ್ಟಾಚಾರ ನಡೆದಿದೆ ಎನ್ನುವುದನ್ನು ಸಿಐಡಿ ತನಿಖೆ ಸಾಬೀತುಪಡಿಸಿದೆ. ಯಾವ ಯಾವ ರೀತಿಯಲ್ಲಿ ಅಕ್ರಮಗಳು ನಡೆದಿವೆ ಎನ್ನುವುದನ್ನು ವಿವರವಾಗಿ ಬಹಿರಂಗ ಮಾಡಿದೆ. ಸಿಐಡಿ ವರದಿಯನ್ನು ಹೈಕೋರ್ಟ್ ಒಪ್ಪಿಕೊಂಡಿದೆ. ಆ ಸಾಲಿನ ನೇಮಕಾತಿಯನ್ನು 2018ರ ಮಾರ್ಚ್ 9ರಂದು ಹೈಕೋರ್ಟ್ ರದ್ದುಪಡಿಸಿದೆ. ಸುಪ್ರೀಂ ಕೋರ್ಟ್ ಕೂಡ ಅದನ್ನು ಎತ್ತಿ ಹಿಡಿದಿದೆ. ರಾಜ್ಯ ಸರ್ಕಾರ ಸಲ್ಲಿಸಿದ್ದ ವಿಶೇಷ ಮೇಲ್ಮನವಿಯನ್ನು ಸುಪ್ರೀಂ ಕೋರ್ಟ್ ವಜಾ ಮಾಡಿದೆ. ಇದಕ್ಕೆ ಅನುಗುಣವಾಗಿ ರಾಜ್ಯ ಸರ್ಕಾರ ಕೂಡ ನೇಮಕಾತಿ ಪಟ್ಟಿಯನ್ನು ಒಪ್ಪಿಕೊಳ್ಳದಿರಲು ನಿರ್ಧರಿಸಿದ್ದೇ ಅಲ್ಲದೆ ನೇಮಕಾತಿ ಅಧಿಸೂಚನೆಯನ್ನೂ ರದ್ದು ಮಾಡಿದೆ. ಇಷ್ಟೆಲ್ಲ ಆದಮೇಲೂ ಸ್ವಾಮೀಜಿಗಳು ಇದರ ಪರ ವಕಾಲತ್ತು ವಹಿಸುವುದು ತರವಲ್ಲ.

ನೇಮಕಾತಿ ರದ್ದಾಗಿರುವುದರಿಂದ ಅಭ್ಯರ್ಥಿಗಳಿಗೆ ನಿರಾಸೆಯಾಗಿದೆ ನಿಜ. ಕೆಲವು ಅಭ್ಯರ್ಥಿಗಳಿಗೆ ಅನ್ಯಾಯವೂ ಆಗಿದೆ. ಆದರೆ ಅಕ್ರಮ ನಡೆದಿದ್ದು ಸಾಬೀತಾದ ಮೇಲೆ ಕೇವಲ ತಾಂತ್ರಿಕ ಕಾರಣಗಳನ್ನು ಮುಂದಿಟ್ಟುಕೊಂಡು ಎಲ್ಲ ಅಭ್ಯರ್ಥಿಗಳಿಗೆ ನೇಮಕಾತಿ ಪತ್ರ ನೀಡಬೇಕು ಎಂದು ವಾದಿಸುವುದು ಸರಿಯಲ್ಲ. ಅಕ್ರಮ ಎಸಗಿದವರು ಪ್ರಾಮಾಣಿಕರ ಹೆಸರಿನಲ್ಲಿ ಹುದ್ದೆ ಪಡೆದುಕೊಳ್ಳುವುದು ಆರೋಗ್ಯಪೂರ್ಣ ಸಮಾಜಕ್ಕೆ ಉತ್ತಮ ಸಂದೇಶವನ್ನೂ ರವಾನಿಸುವುದಿಲ್ಲ.

ಅಭ್ಯರ್ಥಿಗಳಿಗೆ ನಿರಾಸೆಯಾಗಿದೆ. ಅದಕ್ಕೆ ಅವರು ಎಲ್ಲ ರೀತಿಯ ಒತ್ತಡವನ್ನೂ ಹೇರುತ್ತಾರೆ. ಅದು ಸಹಜ. ರಾಜಕಾರಣಿಗಳ ಮೇಲೂ ಒತ್ತಡ ಹಾಕುತ್ತಾರೆ, ಸ್ವಾಮೀಜಿಗಳ ಕಾಲಿಗೂ ಬೀಳುತ್ತಾರೆ. ರಾಜಕಾರಣಿಗಳು ಮತ, ಜಾತಿ ಮುಂತಾದ ಕಾರಣಗಳಿಗಾಗಿ ಅಭ್ಯರ್ಥಿಗಳ ಪರವಾಗಿ ನಿಲ್ಲಬಹುದು. ನಿಂತಿದ್ದಾರೆ ಕೂಡ. ನೇಮಕಾತಿ ಅಧಿಸೂಚನೆಯನ್ನು ರದ್ದು ಮಾಡಿದ, ಈ ಹಗರಣದ ಬಗ್ಗೆ ತನಿಖೆಗೆ ಆದೇಶ ನೀಡಿದ ರಾಜಕಾರಣಿಗಳೇ ಈಗ ಎಲ್ಲ ಅಭ್ಯರ್ಥಿಗಳಿಗೆ ನೇಮಕಾತಿ ಪತ್ರ ನೀಡಿ ಎಂದೂ ಒತ್ತಾಯಿಸಿದ್ದಾರೆ. ವಿಧಾನ ಮಂಡಲದ ಅಧಿವೇಶನದಲ್ಲಿಯೂ ಈ ಬಗ್ಗೆ ಎಲ್ಲ ರಾಜಕೀಯ ಪಕ್ಷಗಳ ಮುಖಂಡರೂ ಒಕ್ಕೊರಲಿನಿಂದ ಅಭ್ಯರ್ಥಿಗಳ ಪರ ಮಾತನಾಡಿದ್ದಾರೆ.

ರಾಜಕಾರಣಿಗಳೂ ಹೀಗೆ ಮಾಡಬಾರದು. ಸಾಂವಿಧಾನಿಕ ಅಧಿಕಾರವನ್ನು ಹೊಂದಿದ ಶಾಸಕರಾಗಲೀ ಸಚಿವರಾಗಲೀ ಅಕ್ರಮದ ಪರವಾಗಿ ನಿಲ್ಲುವುದು ಜವಾಬ್ದಾರಿಯುತ ನಡೆಯಲ್ಲ. ಅದು ಹೋಗಲಿ ಮಠಾಧೀಶರೂ ಹೀಗೆ ನೇರಾನೇರ ಅಕ್ರಮವನ್ನು ಸಮರ್ಥಿಸುವುದು ಹಾಗೂ ಅದಕ್ಕೆ ಬೆಂಬಲವಾಗಿ ನಿಲ್ಲುವುದು ಸಾಮಾಜಿಕವಾಗಿಯೂ ಮುಜುಗರದ ವಿಷಯ. ಉತ್ತರಪ್ರದೇಶ ಮತ್ತು ಕೆಲವು ರಾಜ್ಯಗಳಲ್ಲಿ ಸ್ವಾಮೀಜಿಗಳು ಚುನಾವಣೆಗೆ ಸ್ಪರ್ಧಿಸಿ ಜಯ ಸಾಧಿಸಿ ಸಾಂವಿಧಾನಿಕ ಅಧಿಕಾರವನ್ನು ಪಡೆದುಕೊಂಡಿದ್ದಾರೆ. ಅದು ಪ್ರಜಾಪ್ರಭುತ್ವದ ದಾರಿ ಎನ್ನಬಹುದು. ಸಾಂವಿಧಾನಿಕ ಅಧಿಕಾರವೇ ಇಲ್ಲದೆ ಸವಾರಿ ಮಾಡುವುದನ್ನು ಏನನ್ನಬೇಕು? ಎಲ್ಲವನ್ನೂ ಬಿಟ್ಟ ಸನ್ಯಾಸಿಗಳಿಗೆ ಈ ಎರಡೂ ಮಾರ್ಗಗಳು ವರ್ಜ್ಯವಾಗಬೇಕು.



ಯಾರನ್ನು ಮಂತ್ರಿ ಮಾಡಬೇಕು, ಯಾವ ಅಧಿಕಾರಿಯನ್ನು ವರ್ಗಾವಣೆ ಮಾಡಬೇಕು, ಯಾವ ಅಧಿಕಾರಿ ಯಾವ ಸ್ಥಾನದಲ್ಲಿ ಇರಬೇಕು ಎಂದು ನಿರ್ದೇಶಿಸುವುದೂ ತಪ್ಪು. ಆದರೆ ಅದಕ್ಕಿಂತ ಲೋಕಸೇವಾ ಆಯೋಗದ ನೇಮಕಾತಿ ಪ್ರಕ್ರಿಯೆಯಲ್ಲಿ ಹಸ್ತಕ್ಷೇಪ ಮಾಡುವುದು ಇನ್ನೂ ಘನಘೋರ. ಯಾಕೆಂದರೆ ಆಯೋಗದ ನೇಮಕಾತಿಯಿಂದ ಹುದ್ದೆ ಪಡೆಯುವ ಅಧಿಕಾರಿಗಳು ಮೂವತ್ತಕ್ಕೂ ಹೆಚ್ಚು ವರ್ಷ ಅಧಿಕಾರದಲ್ಲಿ ಇರುತ್ತಾರೆ. ಅಷ್ಟು ದಿನವೂ ಅವರು ಋಣ ಸಂದಾಯಕ್ಕೆ ನಿಂತುಬಿಟ್ಟರೆ ಸಾಮಾಜಿಕ ಏರುಪೇರುಗಳಾಗುತ್ತವೆ. ಅಲ್ಲದೆ ಭ್ರಷ್ಟಾಚಾರದ ಮೂಲಕವೇ ನೇಮಕವಾದವರಿಂದ ಪ್ರಾಮಾಣಿಕ ಸೇವೆಯನ್ನು ನಿರೀಕ್ಷಿಸುವುದು ತಪ್ಪಾಗುತ್ತದೆ. ಇದಕ್ಕೆ ಯಾರನ್ನು ಹೊಣೆ ಮಾಡುವುದು? ಹೀಗೆ ಕರ್ನಾಟಕ ಲೋಕಸೇವಾ ಆಯೋಗದ ಮೇಲೆ ಹಿಡಿತ ಸಾಧಿಸಿ ಅದರಿಂದ ಉಪಯೋಗ ಪಡೆದ ರಾಜಕೀಯ ಕುಟುಂಬವೊಂದು ಇರುವುದು ಎಲ್ಲರಿಗೂ ಗೊತ್ತು. ಅದರಿಂದ ಏನೆಲ್ಲಾ ಅನುಕೂಲ, ಅನನುಕೂಲ ಆಗಿದೆ ಎನ್ನುವುದೂ ಗೊತ್ತು. ಅದೇ ಕೆಲಸವನ್ನು ಮಠಾಧೀಶರು ಮಾಡಲು ಹೊರಟರೆ ದೂರುವುದು ಯಾರನ್ನು?

ಅಕ್ರಮಗಳಲ್ಲಿ ಭಾಗಿಯಾದ ಆಯೋಗದ ಸದಸ್ಯರ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಲು ರಾಜ್ಯ ಸರ್ಕಾರ ಅವಕಾಶ ನೀಡಿಲ್ಲ. ಎಲ್ಲರಿಗೂ ಕ್ಲೀನ್‌ಚಿಟ್ ನೀಡಿದೆ. ಆ ಮೂಲಕ ಅಕ್ರಮವನ್ನು ಸಕ್ರಮ ಮಾಡಲು ಮುಂದಾಗಿದೆ. ಈಗ ಮಸೂದೆ ಮಂಡಿಸಿಯೋ ಅಥವಾ ಸುಗ್ರೀವಾಜ್ಞೆ ಜಾರಿ ಮಾಡಿಯೋ ಎಲ್ಲರಿಗೂ ನೇಮಕಾತಿ ಪತ್ರ ನೀಡುವುದಕ್ಕೂ ಹೊರಟಿದೆ. 362 ಅಭ್ಯರ್ಥಿಗಳಿಗೆ ನೆರವು ನೀಡುವುದಕ್ಕೆ ಲಕ್ಷಾಂತರ ಅಭ್ಯರ್ಥಿಗಳ ಕನಸು ಕಸಿಯುವುದು ಸರಿಯಾದ ಕ್ರಮವಲ್ಲ. ಕರ್ನಾಟಕ ಲೋಕಸೇವಾ ಆಯೋಗದ ಬಗ್ಗೆ ಇರುವ ಎಲ್ಲ ಕೆಟ್ಟ ಭಾವನೆಗಳನ್ನು ಸರಿಪಡಿಸುವುದು ಆದ್ಯತೆಯಾಗಬೇಕೇ ವಿನಾ ಅದನ್ನು ಮುಂದುವರಿಸುವುದು ಸರ್ಕಾರದ ಕ್ರಮವಾಗಬಾರದು.

'ಲೋಕಸೇವಾ ಆಯೋಗದಲ್ಲಿ ಭ್ರಷ್ಟಾಚಾರ ಇದೆ ನಿಜ. ಹಿಂದೆಯೂ ಇತ್ತು. ಈಗಲೂ ಇದೆ. ಹಿಂದಿನ ನೇಮಕಾತಿಗಳಲ್ಲಿ ಅಕ್ರಮ ಎಸಗಿದವರು ನೇಮಕಾತಿ ಹೊಂದಿ ಹುದ್ದೆಯಲ್ಲಿದ್ದಾರೆ. 2011ರ ನಂತರ ನಡೆದ ನೇಮಕಾತಿಗಳಲ್ಲಿಯೂ ಅಕ್ರಮ ನಡೆದಿದೆ ಎಂಬ ಆರೋಪಗಳಿವೆ. ಆದರೆ ಆ ಸಾಲಿನ ಅಭ್ಯರ್ಥಿಗಳಿಗೆ ನೇಮಕಾತಿ ಪತ್ರ ನೀಡಿ ಅವರೆಲ್ಲರೂ ಕೆಲಸಕ್ಕೆ ಹಾಜರಾಗಿದ್ದಾರೆ. 2011ನೇ ಸಾಲಿನ ಅಭ್ಯರ್ಥಿಗಳನ್ನು ಮಾತ್ರ ಬಲಿಪಶು ಮಾಡುವುದು ಸರಿಯಲ್ಲ' ಎಂಬ ವಾದವನ್ನೂ ಮಂಡಿಸಲಾಗುತ್ತಿದೆ. ಇದನ್ನು ಕೇಳಿ ಅಳಬೇಕೋ ನಗಬೇಕೋ?

ಇಳಕಲ್ ಸ್ವಾಮೀಜಿ ಮತ್ತು ಇತರ ಕೆಲವು ಮಠಾಧೀಶರು ಒಂದು ಕಾಲದಲ್ಲಿ ಜೋಳಿಗೆ ಹಾಕಿಕೊಂಡು ಭಕ್ತರ ಕೆಟ್ಟ ಚಟಗಳನ್ನು ತಮ್ಮ ಜೋಳಿಗೆಯಲ್ಲಿ ಹಾಕುವಂತೆ ಆಂದೋಲನ ನಡೆಸಿದ್ದರು. ಈಗ ಮಠಾಧೀಶರು ನಮ್ಮ ರಾಜಕಾರಣಿಗಳು ಮತ್ತು ಅಧಿಕಾರಿಗಳ ಮನೆ ಮನೆ ಬಾಗಿಲಿಗೆ ಹೋಗಿ, 'ಭ್ರಷ್ಟಾಚಾರವನ್ನೂ ಲಂಚಗುಳಿತನವನ್ನೂ ಸ್ವಜನಪಕ್ಷಪಾತವನ್ನೂ ಜೋಳಿಗೆಗೆ ಹಾಕಿ' ಎಂದು ಕೇಳುವ ಕಾಲ ಬಂದಿದೆ. ಅದಕ್ಕೆ ಮಠಾಧೀಶರು ಮುಂದಾದರೆ ದೇಶಕ್ಕೆ ಒಳ್ಳೆಯದು.

ಚುರುಮುರಿ



ಹೊಸ ಮಾರ್ಗಸೂಚಿ

• ಕೆ.ವಿ.ರಾಜಲಕ್ಷ್ಮಿ

'ಹೊಸ ವರ್ಷಾಚರಣೆಗೆ ಮನೇಲಿ ಹೊಸ ಮಾರ್ಗಸೂಚಿ ಇದೆಯೇನು?' ಎನ್ನುತ್ತಾ ಕಂಠಿ ಬಂದ. 'ಹೋಟೆಲ್‌ಗೆ ಹೋಗೋಕ್ಕಾಗೋಲ್ಲ, ರಾತ್ರಿ 12ಕ್ಕೆ ಮೊದಲು 22 ಶುರುವಾಗೋಲ್ಲ, 10 ಗಂಟೆಯೊಳಗೆ ಮನೆ ಸೇರ್ಕೋಬೇಕು, ಏನೂ ಥ್ರಿಲ್ ಇರೋಲ್ಲ' ಪುಟ್ಟಿ ಸಿಂಡರಿಸಿದಳು.

'ಅದಕ್ಕೇನಂತೆ, ಮನೆಯೊಳಗೇ ಸೆಲೆಬ್ರೇಟ್ ಮಾಡಿದ್ರೆ ಬರೋಲ್ಲ ಅನ್ನುತ್ತಾ ನಿಮ್ಮ 2022? ಇನ್ನೂ ಈ ಮಹಾಮಾರಿಯಿಂದ ಚೇತರಿಸಿಕೊಳ್ಳೋಕ್ಕೆ ಆಗ್ತಿಲ್ಲ, ಅಷ್ಟೊಂದು ಐಷಾರಾಮಿ ಯಾಕೋ?' ನನ್ನವಳ ದನಿ ತಾರಕಕ್ಕೇರಿತ್ತು.

'ನಿಜ, ಸ್ನೇಹಿತರೆಲ್ಲ ಒಬ್ಬರ ಮನೇಲಿ ಸೇರೋದು... ಒಬ್ಬೊಬ್ಬರು ಒಂದೊಂದು ತಿಂಡಿ ತಂದರೆ ಮುಗೀತು, ಟಿ.ವಿ ಹಚ್ಚಿದರೆ ಹಾಡು, ಕುಣಿತ ಎಲ್ಲ ಇರುತ್ತೆ' ನನ್ನವಳಿಗೆ ಸಪೋರ್ಟ್ ಮಾಡಿದೆ. 'ಆದರೆ ಕೇಕು ಕತ್ತರಿಸದಿದ್ರೆ, ಒಂಥರಾ ಇನ್‌ಕಂಪ್ಲೀಟ್'.

'ಅದಕ್ಕೇನಂತೆ, ಹೆಚ್ಚು ಖರ್ಚಿಲ್ಲದೆ ಗೋಧಿಬೆಲ್ಲದ ಕೇಕ್ ನಾನೇ ಮಾಡಿಕೊಡ್ತೀನಿ, ಮೊನ್ನೆ ತಾನೇ ಯು ಟ್ಯೂಬ್‌ನಲ್ಲಿ ನೋಡಿದೆ' ನನ್ನವಳ ಉತ್ಸಾಹ. ಪುಟ್ಟಿ ನನ್ನತ್ತ ದಯನೀಯ ನೋಟ ಬೀರಿದಳು.

'ವಿರುದ್ಧ ಪದ ಬರೆ ಅಂದರೆ ದಿನ X ಅನುದಿನ, ರಾಗ X ಅನುರಾಗ ಅಂತ ಗೀಚಿದ್ದಾನೆ. ಅದ್ಹೇಗೋ ಅಂದ್ರೆ, ಉಚಿತಕ್ಕೆ ಅನುಚಿತ ಹಾಗೇ ಇವಕ್ಕೂ 'ಅನು' ಅಂತ ಸೇರಿಸೋದು ಅಂತಾನೆ! ಮಂಗಣ್ಣನ ತಂದು! ಹತ್ತುಸಲ ಬರಿ ಅಂತ ಕೂರಿಸಿ ಬಂದೆ'. ಪಕ್ಕದ ಮನೆ ಚಿಣ್ಣನಿಗೆ ಪುಕ್ಕಟೆ ಕನ್ನಡ ಮನೆಪಾಠ ಕಲಿಸುತ್ತಿರುವ ಅತ್ತೆ ಬೆವರೊರೆಸಿಕೊಂಡು ಕೊಠಡಿಯಿಂದ ಹೊರಬಂದರು.

'ಹೊಸವರ್ಷದ ಪ್ರಯುಕ್ತ ನಮ್ಮ ಆಫೀಸಲ್ಲಿ ರಸಪ್ರಶ್ನೆ ಕಾರ್ಯಕ್ರಮವಿದೆ, ನೀವೇ ನಡೆಸಿಕೊಟ್ಟರೆ ಹೇಗೆ ಅಂತ ಯೋಚಿಸ್ತಿದ್ದೀನಿ. ಪಿಕಪ್, ಡ್ರಾಪ್, ಸನ್ಮಾನ ಎಲ್ಲ ನನ್ನ ಜವಾಬ್ದಾರಿ. ಹ್ಞೂಂ ಅನ್ನೋದಾದ್ರೆ ಬಾಸ್‌ಗೆ ತಿಳಿಸ್ತೀನಿ' ಕಂಠಿಯ ಮನವಿ.

'ಅಮ್ಮನ್ನ ಒಪ್ಪಿಸೋ ಹೊಣೆ ನಂದು. ಒಬ್ರೇ ಬರೋಕ್ಕಾಗೋಲ್ಲ, ಅವರ ಜೊತೆಗೆ ನಾನೂ ಬರ್ತೀನಿ. ನೀವು ಬಾಸ್‌ಗೆ ಫೋನ್ ಮಾಡಿ, ಅಷ್ಟರಲ್ಲಿ ನಾನು ತಿಂಡಿ ಮಾಡ್ತೀನಿ' ಲಗುಬಗೆಯಿಂದ ನನ್ನವಳು ಒಗ್ಗರಣೆಗೆ ಸಾಸಿವೆ ಸಿಡಿಸಲು ಮೊದಲಾದಳು.

ದಿನದ ಟ್ವೀಟ್

ನೆರವಿಗೆ ಬರಲಿಲ್ಲವೇಕೆ?



ಶೋಷಿತರು ಒಳ್ಳೆ ಬಟ್ಟೆ ಹಾಕಿದರೆ ಸಹಿಸರು, ಶೋಷಿತರು ದುಡಿದು ತಿಂದರೂ ಸಹಿಸರು, ಶೋಷಿತರು ದೇವಾಲಯಕ್ಕೆ ಬಂದರೂ ಸಹಿಸರು, ಶೋಷಿತರ ಏಳಿಗೆಯನ್ನು ಸಹಿಸರು, ಶೋಷಿತರು ಸಂಭ್ರಮಿಸಿದರೂ ಸಹಿಸರು. ಅಶಕ್ತ ಕೊರಗ ಸಮುದಾಯದ ಜನರ ಮೇಲೆ ದೌರ್ಜನ್ಯ ನಡೆದಿದ್ದರೂ, ಅಲ್ಲಿ 'ಭಯಂಕರ' ಹಿಂದೂ ರಕ್ಷಕರಿದ್ದರೂ ಇವರ ನೆರವಿಗೆ ಈವರೆಗೂ ನಿಂತಿಲ್ಲವೇಕೆ?

ಪ್ರಿಯಾಂಕ್ ಖರ್ಗೆ, ಕಾಂಗ್ರೆಸ್ ಶಾಸಕ

ಕಿಡಿನುಡಿ



ಅಟಲ್ ಬಿಹಾರಿ ವಾಜಪೇಯಿಯವರು ಎರಡೂ ಮಂಡಿಚಿಪ್ಪುಗಳಿಗೆ ಆಪರೇಷನ್ ಮಾಡಿಸಿಕೊಂಡಾಗ ಅವರನ್ನು ಪ್ರಧಾನಿ ಸ್ಥಾನದಿಂದ ಬದಲಾಯಿಸಿದ್ದರಾ? ಒಂದು ಮಂಡಿ ನೋವಿಗೆ ಒಳಗಾಗಿರುವ ಮುಖ್ಯಮಂತ್ರಿ ಅವರನ್ನೇಕೆ ಬದಲಾಯಿಸುತ್ತಾರೆ?

ಪ್ರತಾಪ್ ಸಿಂಹ, ಬಿಜೆಪಿ ಸಂಸದ

25 ವರ್ಷಗಳ ಹಿಂದೆ

ಸೋಮವಾರ, 30-12-1996

• **ವಿಜಿಮನ್‌ರ ಹಳೆಯ ಸ್ನೇಹಿತರಿಗಾಗಿ ಶೋಧ**

ಬೆಂಗಳೂರು, ಡಿ. 29– ಹೊಸ ವರ್ಷದ ದಿನ (ಜ.1) ನಗರಕ್ಕೆ ಆಗಮಿಸಲಿರುವ ಇಸ್ರೇಲಿನ ಅಧ್ಯಕ್ಷ ಎಜರ್ ವಿಜಿಮನ್ ಅವರ ಹಳೇ ಸ್ನೇಹಿತರ ಶೋಧ ಅವರ ವಿಶೇಷ ಸಿಬ್ಬಂದಿ ಮೂಲಕ ನಗರದಲ್ಲಿ ನಡೆದಿದೆ.

ಸಾಮಾನ್ಯವಾಗಿ ಉನ್ನತ ಹುದ್ದೆಗೆ ಏರಿದವರು ತಮ್ಮ ಹಿಂದಿನ ಸ್ನೇಹಿತರು, ಹಿತೈಷಿಗಳನ್ನು ಮರೆಯುವ ಇಂದಿನ ದಿನಗಳಲ್ಲಿ ಇಸ್ರೇಲಿನ ಅಧ್ಯಕ್ಷರು ತಮ್ಮ ಅಪೂರ್ವ ಸ್ನೇಹಮಯಿ ವ್ಯಕ್ತಿತ್ವವನ್ನು ವ್ಯಕ್ತಪಡಿಸಿರುವ ಹಿನ್ನೆಲೆಯಲ್ಲಿ ಈ ಶೋಧ ನಡೆದಿದೆ.

ಭಾರತ ಭೇಟಿ ಕಾರ್ಯಕ್ರಮ ನಿಗದಿಯಾದ ನಂತರ, ಸುಮಾರು 50 ವರ್ಷಗಳ ಹಿಂದೆ ತಾವು ಬೆಂಗಳೂರಿನಲ್ಲಿದ್ದಾಗ ಜತೆಯಲ್ಲಿದ್ದ ಗೆಳೆಯರ ನೆನಪು ಎಜರ್ ಅವರನ್ನು ಕಾಡಿತು. ನೆನಪಿನಲ್ಲಿ ಕೆಲವರ ಹೆಸರುಗಳೊಂದಿಗೆ ತಮ್ಮ ವಿಶೇಷ ಪ್ರತಿನಿಧಿಯೊಬ್ಬರನ್ನು ಅವರು ಬೆಂಗಳೂರಿಗೆ ಕಳುಹಿಸಿದರು.

ನಗರಕ್ಕೆ ಆಗಮಿಸಿದ ಅವರ ಪ್ರತಿನಿಧಿ ಹಿಂದೆ ಎಜರ್ ಅವರು ತರಬೇತಿ ಪಡೆದ ಯಲಹಂಕದ ವೈಮಾನಿಕ ತರಬೇತಿ ಕೇಂದ್ರದ ಅಧಿಕಾರಿಗಳಿಗೆ ಅಧ್ಯಕ್ಷರ ಬಯಕೆಯನ್ನು ತಿಳಿಸಿದರು. ತರಬೇತಿ ಸಮಯದಲ್ಲಿನ ಗೆಳೆಯರನ್ನು ಭೇಟಿಯಾಗಿ ಅವರೊಂದಿಗೆ ಕೆಲಕಾಲ ಹಳೆಯ ನೆನಪುಗಳನ್ನು ಮೆಲುಕು ಹಾಕುವ ಬಯಕೆ ಅವರದ್ದಾಗಿದೆ. ಅದಕ್ಕಾಗಿ ಅವರ ವಿಳಾಸಗಳನ್ನು ಪತ್ತೆಹಚ್ಚಿ ಅವರನ್ನು ಆಹ್ವಾನಿಸುವಂತೆ ಎಜರ್ ಸೂಚಿಸಿದ್ದಾರೆ.

ಆದರೆ ಅವರ 50 ವರ್ಷದ ಹಿಂದಿನ ಗೆಳೆಯರು ಎಲ್ಲಿದ್ದಾರೆ. ಏನಾಗಿದ್ದಾರೆ ಎಂಬುದೇ ಹೆಚ್ಚಿನವರಿಗೆ ತಿಳಿದಿಲ್ಲ. ಅವರನ್ನು ಹುಡುಕುವುದೇ ಕಷ್ಟವಾಗಿದೆ ಎಂದು ಸಂಬಂಧಿಸಿದವರು ಹೇಳುತ್ತಾರೆ. ಹುಡುಕಾಟದ ಪ್ರಯತ್ನ ಸಾಗಿದೆ.

50 ವರ್ಷಗಳ ಹಿಂದೆ

ಗುರುವಾರ, 30-12-1971

• **'ರಾಷ್ಟ್ರ ಭಕ್ತಿ... ಆದರೆ ನೆಲದ ದಾಹವಲ್ಲ'**

ಮಾಸ್ಕೊ, ಡಿ. 29– ಭಾರತ– ಪಾಕಿಸ್ತಾನ ಯುದ್ಧ ತಲೆದೋರಿದ ಸಂದರ್ಭದಲ್ಲಿ ಭಾರತದಲ್ಲಿ ಏಕತೆ ಮತ್ತು ರಾಷ್ಟ್ರ ಭಕ್ತಿಯ ಉತ್ಸಾಹ ಎಲ್ಲೆಲ್ಲೂ ಕಂಡುಬಂದಿತೇ ವಿನಾ ಅನ್ಯಾಕ್ರಮಣಶೀಲವಾದ ಸ್ವದೇಶಪ್ರೇಮ ಕಂಡುಬರಲಿಲ್ಲ. ಯುದ್ಧಾ ನಂತರ ಭಾರತದ ರಾಜಕೀಯ ಪರಿಸ್ಥಿತಿ ಬಗ್ಗೆ 'ಪ್ರಾವ್ಡಾ' ಪತ್ರಿಕೆಯ ದೆಹಲಿ ವರದಿಗಾರರು ಈ ಮಾತನ್ನು ತಿಳಿಸಿದ್ದಾರೆ.

ಪಾಕಿಸ್ತಾನದ ಭೂಪ್ರದೇಶದ ದಾಹ ತನಗಿಲ್ಲ ಎಂದು ಭಾರತ ಸರ್ಕಾರ ಪದೇಪದೇ ಒತ್ತಿ ಹೇಳಿದ್ದು ರಾಷ್ಟ್ರಭಕ್ತಿಯ ಉತ್ಸಾಹದ ಆರೋಗ್ಯಕರ ವಾತಾವರಣ ಸೃಷ್ಟಿಗೆ ಕಾರಣವಾಯಿತು. ಇದು ಯುದ್ಧೋನ್ಮಾದ ಮತ್ತು ಅನ್ಯಾಕ್ರಮಣಶೀಲವಾದ ಸ್ವದೇಶ ಪ್ರೇಮಕ್ಕೆ ಎಡೆಕೊಡಲ್ಲ ಎಂದು ಅವರು ಹೇಳಿದ್ದಾರೆ.

ಬಲಪಂಥೀಯ ರಾಷ್ಟ್ರೀಯ ಪಕ್ಷಗಳು ಅನ್ಯಾಕ್ರಮಣಶೀಲ ಸ್ವದೇಶಪ್ರೇಮವನ್ನು ಪ್ರಚೋದಿಸಲು ಯತ್ನಿಸಿದವಾದರೂ ಅದು ಒಟ್ಟಾರೆ ಫಲಪ್ರದವಾಗಲಿಲ್ಲ. ಭಾರತೀಯ ಜನತೆ ಭದ್ರತೆ ಮತ್ತು ರಾಷ್ಟ್ರೀಯ ಹಿತಾಸಕ್ತಿಗಳ ಬಗ್ಗೆ ಸರ್ಕಾರಕ್ಕೆ ಒಗ್ಗಟ್ಟಿನ ಅಪೂರ್ವ ಬೆಂಬಲ ನೀಡಿತು ಎಂದು ಅವರು ಹೇಳಿದ್ದಾರೆ.

ಸಂಗತ

ಮತಾಂತರ: ಗಾಂಧಿ ಸಮನ್ವಯ ದೃಷ್ಟಿ

ಸ್ವತಃ ತಮ್ಮ ಪುತ್ರನೇ ಮತಾಂತರಗೊಂಡಾಗ ಬಾಪೂಜಿಯ ಪ್ರತಿಕ್ರಿಯೆ ಹೇಗಿತ್ತು ಗೊತ್ತೇ?

• ಮಲ್ಲಿಕಾರ್ಜುನ ಹೆಗ್ಗಳಗಿ

ಮತಾಂತರದ ಬಗ್ಗೆ ಬಿಸಿಬಿಸಿ ಚರ್ಚೆ ನಡೆಯುತ್ತಿದೆ. ಈ ಗಳಿಗೆಯಲ್ಲಿ ಗಾಂಧೀಜಿ ನೆನಪಾಗುತ್ತಾರೆ. ತಮ್ಮ ಮಗ ಮತಾಂತರಗೊಂಡಾಗ ಅವರು ತೋರಿದ ಸಹಿಷ್ಣುತೆ, ನಡೆದುಕೊಂಡ ರೀತಿ ಒಂದು ಮಾದರಿಯಾಗಿದೆ.

ಗಾಂಧೀಜಿ ಹಿರಿಯ ಪುತ್ರ ಹರಿಲಾಲ್ ಅವರು ಇಸ್ಲಾಂಗೆ ಮತಾಂತರಗೊಂಡು 'ಅಬ್ದುಲ್ಲಾ ಗಾಂಧಿ' ಎಂದು ಹೆಸರು ಬದಲಿಸಿಕೊಂಡರು. ಈ ಬಗ್ಗೆ ಪತ್ರಿಕೆಗಳಿಗೆ ಪ್ರಕಟಣೆಯನ್ನೂ ನೀಡಿದರು. ಗಾಂಧೀಜಿ ಇದರಿಂದ ಎಳ್ಳಷ್ಟೂ ವಿಚಲಿತರಾಗಲಿಲ್ಲ. ಮಗನ ನಡೆಯನ್ನು ಧಾರ್ಮಿಕ ಸಮನ್ವಯದ ದೃಷ್ಟಿಯಿಂದ ನೋಡಿದರು.

ದೇಶ ವಿದೇಶಗಳ ಪತ್ರಿಕೆಗಳಲ್ಲಿ ಈ ವಿಷಯದ ಬಗ್ಗೆ ಚರ್ಚೆ ನಡೆಯತೊಡಗಿತು. ಇದನ್ನೆಲ್ಲ ಗಮನಿಸಿ, ಗಾಂಧೀಜಿ ತಾವು ಪ್ರಕಟಿಸುತ್ತಿದ್ದ 'ಹರಿಜನ' ಪತ್ರಿಕೆಯಲ್ಲಿ ತಮ್ಮ ಪ್ರತಿಕ್ರಿಯೆ ಪ್ರಕಟಿಸಿದರು. ಇಲ್ಲಿ ವ್ಯಕ್ತವಾದ ಅವರ ವಿಚಾರಗಳು ವಿಶ್ವಬಂಧುತ್ವಕ್ಕೆ ಸಾಕ್ಷಿಯಾಗಿವೆ.

ಗಾಂಧೀಜಿ ಪ್ರತಿಕ್ರಿಯೆಯ ಪೂರ್ಣಪಾಠ ಇಷ್ಟು: 'ಹರಿಲಾಲ್ ನಿಜವಾಗಿಯೂ ಹೃದಯ ಪರಿವರ್ತನೆಯಿಂದ, ಲೌಕಿಕ ಲಾಭಗಳಿಗೆ ಆಸೆಪಡದೆ ಶುದ್ಧ ಮನಸ್ಸಿನಿಂದ ಮತಾಂತರಗೊಂಡಿದ್ದರೆ ಯಾವ ಅಭ್ಯಂತರವೂ ಇಲ್ಲ. ಇಸ್ಲಾಂ ಎಂಬುದು ನನ್ನ ಧರ್ಮದಷ್ಟೇ ಸತ್ಯವಾದದ್ದು ಎಂದು ನಾನು ನಂಬಿದ್ದೇನೆ. ಆದರೆ ಇದು ಹೃದಯ ಪರಿವರ್ತನೆಯೇ ಅಥವಾ ಬರೀ ಸ್ವಾರ್ಥಕ್ಕಾಗಿ ನಡೆದ ಘಟನೆಯೇ ಎಂಬುದರ ಬಗ್ಗೆ ನನಗೆ ಈಗಲೂ ಸಂದೇಹ ಇದೆ. ಹರಿಲಾಲ್ ಬಗ್ಗೆ ಬಲ್ಲವರಿಗೆ ಇದು ಅರ್ಥವಾಗುತ್ತದೆ'.

'ಅವನು ಮದ್ಯವ್ಯಸನಿಯಾಗಿದ್ದಾನೆ, ವೇಶ್ಯೆಯರ ಸಹವಾಸ ಮಾಡಿದ್ದಾನೆ, ಹಣಕ್ಕಾಗಿ ಸ್ನೇಹಿತರನ್ನು ಪೀಡಿಸುತ್ತಾನೆ. ಹೆಚ್ಚಿನ ಬಡ್ಡಿಗೆ ಸಾಲ ಪಡೆದು ತೊಂದರೆ ಅನುಭವಿಸುತ್ತಿದ್ದಾನೆ. ಅವನಿಗೆ ಇಬ್ಬರು ಹೆಣ್ಣುಮಕ್ಕಳು ಹಾಗೂ ಒಬ್ಬ ಮಗ ಇದ್ದಾರೆ. ಇವರಿಗೆ ಹರಿಲಾಲ್‌ನಿಂದ ಯಾವ ಪೋಷಣೆಯೂ ಸಿಗುತ್ತಿಲ್ಲ. ಇಸ್ಲಾಂ ಬಗ್ಗೆ ನನ್ನ ಮನೋಭಾವ ಏನೆಂದು ಎಲ್ಲ ಮುಸ್ಲಿಮರಿಗೂ ಚೆನ್ನಾಗಿ ಗೊತ್ತು. ಅವನು ಹಿಂದೂ ಧರ್ಮವನ್ನು ಬಿಟ್ಟಿದ್ದರಿಂದ ಆ ಧರ್ಮಕ್ಕೆ ಯಾವ ನಷ್ಟವೂ ಆಗಿಲ್ಲ. ಇಸ್ಲಾಂಗೆ ಸೇರಿದ್ದರಿಂದ ಇಸ್ಲಾಂಗೂ ಯಾವ ಲಾಭವೂ ಆಗಿಲ್ಲ. ಅವನು ಪೋಲಿಯಾಗಿಯೇ ಇರುತ್ತಾನೆ...'

'ಹರಿಲಾಲ್ ಭವಿಷ್ಯದಲ್ಲಿ ಸರಿಯಾದ ದಾರಿಯಲ್ಲಿ ಹೋಗುವಂತೆ ನನ್ನ ಮುಸ್ಲಿಂ ಬಾಂಧವರು ನೋಡಿಕೊಳ್ಳಬೇಕು ಎಂದು ಆಶಿಸುತ್ತೇನೆ. ಅವನು ಹಿಂದಿನ ದುರ್ವ್ಯಸನವನ್ನು ಪೂರ್ಣ ತ್ಯಜಿಸಿ, ದೇವರಲ್ಲಿ ಅಚಲ ನಂಬಿಕೆಯಿಟ್ಟು ಯೋಗ್ಯ ಮನುಷ್ಯನಾದರೆ ಸಾಕು. ಅವನು ಅಬ್ದುಲ್ಲಾ ಆಗಿರಲೀ ಹರಿಲಾಲ್ ಆಗಿರಲೀ ನನಗೇನೂ ವ್ಯತ್ಯಾಸವಿಲ್ಲ. ಎರಡೂ ಹೆಸರುಗಳ ಅರ್ಥ 'ದೇವರ ಭಕ್ತ' ಎಂದೇ ಆಗುತ್ತದೆ' ಎಂದು ಅವರು ಸ್ಪಷ್ಟೀಕರಣದಲ್ಲಿ ಬರೆದಿದ್ದಾರೆ.


'ಹರಿಜನ' ಪತ್ರಿಕೆಯಲ್ಲಿಯ ಈ ಬರಹ ಗಾಂಧೀಜಿ ವಿರೋಧಿಗಳ ಬಾಯಿ ಮುಚ್ಚಿಸಿತು.

ಈ ಘಟನೆ ನಡೆದ ಕೆಲವು ದಿನಗಳ ನಂತರ ಹರಿಲಾಲರನ್ನು ಭೇಟಿ ಮಾಡಿದ ಗಾಂಧೀಜಿಯವರ ಮೂರನೆಯ ಮಗ ರಾಮದಾಸ್, ಸ್ವಧರ್ಮಕ್ಕೆ ವಾಪಸಾಗುವಂತೆ ತಾಯಿ ಕಸ್ತೂರ ಬಾ ಬರೆದ ಮನವಿ ಪತ್ರವನ್ನು ಅಣ್ಣನಿಗೆ ತಲುಪಿಸಿದರು. ಹರಿಲಾಲ್ ಅವರು ಆರ್ಯ ಸಮಾಜದ ಮೂಲಕ ಹಿಂದೂ ಧರ್ಮಕ್ಕೆ ವಾಪಸಾದರು.

ಮುಸ್ಲಿಂ ಕುಟುಂಬದ ಹೆಣ್ಣುಮಗಳೊಬ್ಬಳು 'ಮದುವೆಗೋಸ್ಕರ ಹಿಂದೂ ಧರ್ಮಕ್ಕೆ ಮತಾಂತರಗೊಳ್ಳಬೇಕೆಂದಿರುವೆ' ಎಂದು ಗಾಂಧೀಜಿಗೆ ಪತ್ರ ಬರೆದು ಒಪ್ಪಿಗೆ ಕೋರಿದ್ದಳು. 'ಮದುವೆಗಾಗಿ ಮತಾಂತರವಾಗುವುದು ಧರ್ಮದ ಘನತೆ ಕೆಡಿಸುವುದು. ಮತಾಂತರ ಎಂದರೆ ಬಟ್ಟೆ, ಮನೆ ಬದಲಿಸಿದಂತೆ ಬದಲಿಸುವ ವಸ್ತು ಅಲ್ಲ' ಎಂದು ಅವರು ತಮ್ಮ ಅಭಿಪ್ರಾಯ ತಿಳಿಸಿದರು.

ಭಾರತವನ್ನು ಸರ್ವಧರ್ಮಗಳ ಸಹಬಾಳ್ವೆಯ ರಾಷ್ಟ್ರವಾಗಿ ರೂಪಿಸುವುದು ಅವರ ಮಹಾಪ್ರಯೋಗವಾಗಿತ್ತು. ಗಾಂಧೀಜಿ ಅವರ ಸಮನ್ವಯ ದೃಷ್ಟಿಯನ್ನು 'ಮುಸ್ಲಿಮರ ಓಲೈಕೆ' ಎಂದು ಕೆಲವರು ಭಾವಿಸಿದ್ದರು.

ಗಾಂಧೀಜಿ ತಮ್ಮ ಮೈಮೇಲೆ ಯಾವುದೇ ಧಾರ್ಮಿಕ ಸಂಕೇತಗಳನ್ನು ಧರಿಸುತ್ತಿರಲಿಲ್ಲ. ಅವರ ಮಕ್ಕಳು, ಪತ್ನಿ ಕಸ್ತೂರ ಬಾ ಕೂಡ ಈ ನಿಯಮ ಪಾಲಿಸುತ್ತಿದ್ದರು. ಪ್ರವಾಸದಲ್ಲಿ ಸಾಮಾನ್ಯವಾಗಿ ಕೆಳ ಸಮುದಾಯದ ಜನ ವಾಸವಾಗಿರುವಲ್ಲಿ ಅವರು ಉಳಿದುಕೊಳ್ಳುತ್ತಿದ್ದರು. ಎಲ್ಲರಿಗೂ ಪ್ರವೇಶವಿಲ್ಲದ ಮಂದಿರಗಳಿಗೆ ಅವರು ಹೋಗುತ್ತಿರಲಿಲ್ಲ.



ಒಬ್ಬ ಹಿಂದೂ ಉತ್ತಮ ಹಿಂದೂ, ಒಬ್ಬ ಕ್ರಿಶ್ಚಿಯನ್ ಉತ್ತಮ ಕ್ರಿಶ್ಚಿಯನ್ ಆಗಬೇಕು. ಹಾಗೆಯೇ ಒಬ್ಬ ಮುಸ್ಲಿಂ ಉತ್ತಮ ಮುಸ್ಲಿಮನಾಗಬೇಕು, ಅಂದರೆ ಸುಸಂಸ್ಕೃತ ಸಜ್ಜನ ಮನುಷ್ಯನಾಗಬೇಕು ಎಂದು ಅವರು ಹೇಳುತ್ತಿದ್ದರು.

ಧಾರ್ಮಿಕ ವೈವಿಧ್ಯ, ಭ್ರಾತೃತ್ವ ಹಾಗೂ ರಾಷ್ಟ್ರದ ಸಮಗ್ರತೆಯನ್ನು ರಕ್ಷಿಸುವ ದಿಸೆಯಲ್ಲಿ ಎಲ್ಲರೂ ಸರಳತನದಿಂದ ನಡೆದುಕೊಳ್ಳಬೇಕು ಎಂಬುದು ಅವರ ಸ್ಪಷ್ಟ ಅಭಿಪ್ರಾಯವಾಗಿತ್ತು. ಹಾಗೆಯೇ ಭಾರತವು ಹಲವು ಧರ್ಮಗಳ ಜನರು ಜೊತೆಯಾಗಿ ಬೆಳೆದುಬಂದ ಒಂದು ಮನೋಹರ ಸಂಸ್ಕೃತಿಯ ದೇಶವಾಗಿದೆ, ಯಾವ ಒತ್ತಡದಿಂದಲೂ ಅದಕ್ಕೆ ಧಕ್ಕೆಯಾಗಬಾರದು ಎಂಬುದು ಅವರ ಗಟ್ಟಿ ನಿಲುವಾಗಿತ್ತು.

'...ಈಶ್ವರ ಅಲ್ಲಾ ತೇರೇ ನಾಮ್, ಸಬ್‌ಕೋ ಸನ್ಮತಿ ದೇ ಭಗವಾನ್'– ಈ ಗೀತೆಯು ಗಾಂಧೀಜಿಯ ನಿತ್ಯದ ಪ್ರಾರ್ಥನೆಯ ಭಾಗವಾಗಿತ್ತು. ಅವರ ಇಡೀ ವ್ಯಕ್ತಿತ್ವಕ್ಕೆ ಈ ಭಜನೆಯು ರೂಪಕದಂತಿದೆ.

ವಾಚಕರ ವಾಣಿ

ಪುಸ್ತಕ ಸರಬರಾಜಿನ ಹಣ ನೀಡುವುದೆಂದು?

2018ರಲ್ಲಿ ಪ್ರಕಟಗೊಂಡ ಪುಸ್ತಕಗಳನ್ನು ಒಂದೂವರೆ ವರ್ಷದ ನಂತರ ತೆಗೆದುಕೊಂಡ ರಾಜ್ಯ ಸಾರ್ವಜನಿಕ ಗ್ರಂಥಾಲಯ ಇಲಾಖೆಯು ಅದಾಗಿ ಹತ್ತಾರು ತಿಂಗಳುಗಳು ಕಳೆದರೂ ಪುಸ್ತಕದ ಹಣ ಪಾವತಿ ಮಾಡದೇ ಇರುವುದು ಎಷ್ಟು ಸರಿ? ಮುಂದಿನ ಪುಸ್ತಕಕ್ಕೆ ಈ ಹಣವನ್ನೇ ನಂಬಿಕೊಂಡಿರುವ ಸಣ್ಣ ಲೇಖಕರ ಗತಿ ಏನು? ಇಲಾಖೆಗೆ ದೂರವಾಣಿ ಕರೆ ಮಾಡಿದರೆ, 'ಸರ್ಕಾರ ಇನ್ನೂ ಫಂಡ್ ಬಿಡುಗಡೆ ಮಾಡಿಲ್ಲ' ಎನ್ನುವ ಸಿದ್ಧ ಉತ್ತರ ಬರುತ್ತದೆ. ಸರ್ಕಾರ ಇಂತಹ ಯೋಜನೆಗಳ ಬಗ್ಗೆ ವಿಳಂಬ ನೀತಿ ತೋರುತ್ತಿರುವುದೇಕೆ? ಲೇಖಕರನ್ನು ಉತ್ತೇಜಿಸುವುದು ಹೀಗೆಯೇ? ಸರ್ಕಾರಕ್ಕೆ ಸಾಹಿತ್ಯ, ಸಾಹಿತಿಗಳನ್ನು ಪ್ರೋತ್ಸಾಹಿಸುವ ಇಚ್ಛೆ ಇದ್ದಲ್ಲಿ ಕೂಡಲೇ ಪುಸ್ತಕ ಸರಬರಾಜಿನ ಹಣ ನೀಡಲಿ.

ಡಾ. ಕೆ.ಪಿ.ಮಹಾಲಿಂಗು ಕಲ್ಕುಂದ, ಸಣ್ಣಯ್ಯ, ಮೈಸೂರು

ಜೈವಿಕ ಇಂಧನದಿಂದ ನದಿ ಮಾಲಿನ್ಯಕ್ಕೆ ತಡೆ

ದೇಶದ ಹಲವು ನದಿಗಳು ಮಲಿನವಾಗಲು ಒಳಚರಂಡಿ ಮತ್ತು ಕೈಗಾರಿಕೆ ತ್ಯಾಜ್ಯ ಕಾರಣ ಎಂದು ಕೇಂದ್ರ ಜಲಶಕ್ತಿ ಸಚಿವಾಲಯ ತಿಳಿಸಿದೆ. ಗಂಗಾ ನದಿ ಮಾಲಿನ್ಯ ಹೋಗಲಾಡಿಸಲು ಸಾವಿರಾರು ಕೋಟಿ ರೂಪಾಯಿ ವೆಚ್ಚ ಮಾಡಿದರೂ ಉದ್ದೇಶ ಫಲಿಸಿಲ್ಲ. ಒಳಚರಂಡಿ ವ್ಯವಸ್ಥೆಯಿಲ್ಲದೆ ಕೋಟ್ಯಂತರ ಜನರ ಮಲ ಮೂತ್ರದಿಂದ ಗಂಗಾ ನದಿ ಮಲಿನವಾಗಿದೆ. ಅದೇ ನೀರನ್ನು ಜನರು ಬಳಕೆ ಮಾಡುತ್ತಿರುವುದು ಶೋಚನೀಯ.

ದೇಶದ ಸಾವಿರಾರು ಬುದ್ಧಿಜೀವಿಗಳು, ವಿಜ್ಞಾನಿಗಳಿಗೆ ನದಿ ಮಾಲಿನ್ಯಕ್ಕೆ ಪರಿಹಾರ ತಿಳಿದಿಲ್ಲವೇ? ಒಳಚರಂಡಿಗೆ ಪರ್ಯಾಯ ಸಂಶೋಧನೆ ಮಾಡಿಲ್ಲವೇ? ದೇಶದ ಉಚಿತ ಜಲಮೂಲಗಳನ್ನು ಮಲಿನಗೊಳಿಸಿ ನೀರಿಗೆ ಹಾಹಾಕಾರ ಸೃಷ್ಟಿಸಿ ಹಣ ಲೂಟಿ ಮಾಡುವ ಹುನ್ನಾರವೇ? ಮಹಾತ್ಮ ಗಾಂಧಿಯವರ ಸಲಹೆಯಂತೆ, ಮನೆಗೆ ಎರಡು ಇಂಗುಗುಂಡಿ ವ್ಯವಸ್ಥೆ ಮಾಡಿ, ಮಲಮೂತ್ರ ಮತ್ತು ತ್ಯಾಜ್ಯದಿಂದ ಇಂಧನ ಮತ್ತು ಸಾವಯವ ಗೊಬ್ಬರ ಪಡೆಯಬಹುದು. ದೇಶದ ನದಿ ಮಾಲಿನ್ಯ ತಡೆಯಲು ಇದೇ ಉತ್ತಮ ಮಾರ್ಗವಾಗಿದೆ.

ಡಾ. ಎಚ್.ಆರ್.ಪ್ರಕಾಶ್, ಕೆ.ಬಿ.ದೊಡ್ಡಿ, ಮಂಡ್ಯ

ಘೃತ ಗಲಾಟೆ!

ಈಗ ನಂದಿನಿ ನಕಲಿ
ತುಪ್ಪದ (ಘೃತ) ಹಗ'ರಣ':
ಭಾರಿ ಅನಾಹುತ!
ಯಾರ ಯಾರ ಮೂಗಿಗೆ ಹಚ್ಚಲು
ಬೇಕು ಇಷ್ಟೊಂದು ಘೃತ?
(ಅಂದಹಾಗೆ, ಅಪ್ಸರೆಯೊಬ್ಬಳ
ಹೆಸರು 'ಘೃತಾಚಿ';
ಪಿಶಾಚಿಯಲ್ಲ!)

ಸಿ.ಪಿ.ಕೆ., ಮೈಸೂರು

ಒಳಗೊಳ್ಳುವಿಕೆಯೇ ಜೀವಂತ ಭಾಷೆಯ ಲಕ್ಷಣ

ಶುದ್ಧ ಕನ್ನಡಕ್ಕೆ ಸಂಬಂಧಿಸಿದಂತೆ ಅಬ್ದುಲ್ ರೆಹಮಾನ್ ಪಾಷ ಅವರ ಲೇಖನ (ಸಂಗತ, ಡಿ. 10) ಉತ್ತಮವಾಗಿ ಮೂಡಿಬಂದಿದೆ. ಕನ್ನಡ ಭಾಷೆಯು ಹಲವು ಭಾಷೆಗಳಲ್ಲಿನ ಕೆಲ ಶಬ್ದಗಳನ್ನು ಸ್ವೀಕರಿಸಿ ಶ್ರೀಮಂತವಾಗಿದೆ. ಸಂಸ್ಕೃತ ಶಬ್ದಗಳನ್ನು ಬಳಸದೇ ಕಾವ್ಯ ರಚಿಸಿದ ಕೀರ್ತಿಯು ಆಂಡಯ್ಯನಿಗೆ ಲಭಿಸಿತ್ತು. ಎಲ್ಲರೂ ಆಂಡಯ್ಯನಂತೆ ಆಗಲು ಸಾಧ್ಯವಿಲ್ಲ. ಈಗಿನ ಆಡಳಿತಾತ್ಮಕ ಕನ್ನಡದಲ್ಲಿ ತಹಶೀಲ್ದಾರ್, ಸರ್ಕಾರ, ಪೊಲೀಸ್, ಬಸ್‌ಸ್ಟ್ಯಾಂಡ್, ಮೋಟರ್ ಮುಂತಾದವುಗಳನ್ನು ನಮ್ಮದಾಗಿ ಸ್ವೀಕರಿಸಿದ್ದೇವೆ. ಒಳಗೊಳ್ಳುವುದೇ ಜೀವಂತ ಭಾಷೆಯ ಲಕ್ಷಣ.

ಸಂಗಪ್ಪ ಎನ್. ಗಾಣಿಗೇರ, ಹುನಗುಂದ

ಇದು ಯಾವ ಬಗೆಯ ಲೆಕ್ಕಾಚಾರ?

ಕರ್ನಾಟಕ ರಸ್ತೆ ಸಾರಿಗೆ ನಿಗಮಗಳ ಬಸ್‌ಗಳಲ್ಲಿ, 23.8 ಕಿ.ಮೀ. ದೂರ ಇರುವ ರಾಣೆಬೆನ್ನೂರು- ಹರಿಹರ ಮಾರ್ಗಕ್ಕೆ ₹ 45 ಮತ್ತು 33.6 ಕಿ.ಮೀ. ಇರುವ ರಾಣೆಬೆನ್ನೂರು- ಹಾವೇರಿ ಮಾರ್ಗಕ್ಕೆ ₹ 40 ಪ್ರಯಾಣ ದರವನ್ನು ನಿಗದಿಗೊಳಿಸಲಾಗಿದೆ. ಇದನ್ನು ಯಾವ ರೀತಿ ಲೆಕ್ಕ ಹಾಕಲಾಗುತ್ತಿದೆ ಎಂಬುದು ಅರ್ಥವಾಗುತ್ತಿಲ್ಲ. ಹರಿಹರ-ರಾಣೆಬೆನ್ನೂರು ಮಧ್ಯೆ ಟೋಲ್ ಇದೆ, ಹಾವೇರಿಗೆ ಇಲ್ಲ! ಪ್ರತೀ ಪ್ರಯಾಣಿಕನಿಗೆ ಅಂದಾಜು ₹ 10 ಟೋಲ್ ಶುಲ್ಕ ಆಕರಿಸಿದರೂ ಅತಿ ಗರಿಷ್ಠ ₹ 40 ನಿಗದಿಗೊಳಿಸಬೇಕು. ಆದರೂ ಈ ತೆರನಾದ ಲೆಕ್ಕಾಚಾರವನ್ನು 20 ವರ್ಷಗಳಿಂದಲೂ ಮಾಡಿಕೊಂಡು ಬರಲಾಗಿದೆ. ತತ್ಪರಿಣಾಮವಾಗಿ, ಈ ಮಾರ್ಗದಲ್ಲಿ ಸಂಚರಿಸುವ ಪ್ರಯಾಣಿಕರು ಖಾಸಗಿ ಸಾರಿಗೆ ವ್ಯವಸ್ಥೆಯನ್ನು ಅವಲಂಬಿಸುತ್ತಾರೆ. ಅದು ರಾಜ್ಯ ಸಾರಿಗೆ ನಿಗಮಗಳಿಗೆ ನಷ್ಟಕ್ಕೆ ಕಾರಣವಾಗುತ್ತದೆ. ಈಗಲಾದರೂ ಸಂಬಂಧಿತ ಅಧಿಕಾರಿಗಳು ಸರಿಪಡಿಸುವರೇ?

ಡಾ. ಚನ್ನು ಅ. ಹಿರೇಮಠ, ರಾಣೆಬೆನ್ನೂರು

ಜನೋಪಯೋಗಿ ಕಾರ್ಯಕ್ಕೆ ಬಳಕೆಯಾಗಲಿ

ಗುರಿ ಮೀರಿ ತೆರಿಗೆ ಸಂಗ್ರಹ ಆಗಲಿರುವುದಾಗಿ ವರದಿಯಾಗಿದೆ (ಪ್ರ.ವಾ., ಡಿ. 29). ಪ್ರಸಕ್ತ ಹಣಕಾಸು ವರ್ಷದಲ್ಲಿ ₹ 22.2 ಲಕ್ಷ ಕೋಟಿ ತೆರಿಗೆ ಸಂಗ್ರಹಿಸುವ ಗುರಿಯಲ್ಲಿ ಕೇಂದ್ರ ಸರ್ಕಾರವು ಈಗಾಗಲೇ ₹ 19 ಲಕ್ಷ ಕೋಟಿ ತೆರಿಗೆ ಸಂಗ್ರಹಿಸಿ, ಗುರಿ ಮೀರಿದ ಸಾಧನೆ ಮಾಡುವ ಹುಮ್ಮಸ್ಸಿನಲ್ಲಿದೆ. ನಿಜಕ್ಕೂ ಇದು ಶ್ಲಾಘನೀಯ. ಈ ದಿಸೆಯಲ್ಲಿ ಸರ್ಕಾರದ ಉತ್ಸಾಹ, ಕಾರ್ಯಕ್ಷಮತೆ ಅಭಿನಂದನಾರ್ಹ. ಇದೇ ರೀತಿ ಜನರಿಂದ ಹೆಚ್ಚು ಹೆಚ್ಚು ತೆರಿಗೆ ಸಂಗ್ರಹಿಸಿ ಸರ್ಕಾರದ ಬೊಕ್ಕಸ ತುಂಬಲಿ ಎಂದು ಆಶಿಸುತ್ತೇವೆ. ಜೊತೆಗೆ, ಅನಿಲ ಕಂಪನಿಗಳ ತ್ರೈಮಾಸಿಕ ಫಲಿತಾಂಶಗಳು ಪ್ರಕಟವಾದಾಗ, ಅವುಗಳ ಲಾಭ ಗಳಿಕೆಯಲ್ಲಿನ ಹೆಚ್ಚಳ ಕಂಡು ತುಂಬಾ ಹೆಮ್ಮೆ ಅನಿಸುತ್ತದೆ. ಆದರೆ ಇದೇ ಸಂದರ್ಭದಲ್ಲಿ ಪ್ರಕಟವಾಗಿರುವ 'ಶತಕದಂಚಿನಲ್ಲಿ ತರಕಾರಿ ಬೆಲೆಗಳು' ಸುದ್ದಿ ಓದಿ, ಈ ಸಂತೋಷಕ್ಕೆ ತಣ್ಣೀರೆರಚಿದಂತಾಯಿತು.

ಸಾವಿರದಂಚಿನಲ್ಲಿರುವ ಅಡುಗೆ ಅನಿಲ ದರ, ನೂರರ ಗಡಿ ದಾಟಿದ ಪೆಟ್ರೋಲ್, ಡೀಸೆಲ್ ಬೆಲೆ, ಕೆ.ಜಿ.ಗೆ ₹ 200 ಮುಟ್ಟಿದ ಬದನೆಕಾಯಿ... ಇಂತಹ ಸ್ಥಿತಿಯನ್ನು ನೋಡಿದರೆ ಜನಸಾಮಾನ್ಯರು ಜೀವನ ಮಾಡುವುದೇ ದುಸ್ತರ ಎನಿಸುತ್ತದೆ. 'ರೋಟಿ, ಕಪಡಾ, ಮಕಾನ್' ಇವು ಮಾನವನ ಮೂಲಭೂತ ಅವಶ್ಯಕತೆಗಳು. ಇವುಗಳನ್ನು ಜನರಿಗೆ ಒದಗಿಸುವ ಬದ್ಧತೆ ಸರ್ಕಾರಗಳಿಗೆ ಇರಬೇಕು. ಅದರಲ್ಲೂ ಹಸಿವು ನೀಗಿಸಿಕೊಳ್ಳಲು ಪಡುವ ಪಾಡು ಅನುಭವಿಸಿದವರಿಗಷ್ಟೇ ಗೊತ್ತಾಗುತ್ತದೆ. ಆರ್ಥಿಕವಾಗಿ ಈಗ ಸುಸ್ಥಿತಿಯಲ್ಲಿರುವ ಸರ್ಕಾರಗಳು ಇತ್ತ ಗಮನಹರಿಸಲಿ.

ಟಿ.ವಿ.ಬಿ. ರಾಜನ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hospete.

ಏರುತ್ತಲೇ ಇದೆ ರೂಪಾಂತರ ತಳಿ ಓಮೈಕ್ರಾನ್

ದೇಶದಲ್ಲಿ ಪ್ರತಿದಿನ ಪತ್ತೆಯಾಗುತ್ತಿರುವ ಕೋವಿಡ್ ಪ್ರಕರಣಗಳ ಸಂಖ್ಯೆ ಏರಿಕೆಯಾಗುತ್ತಿದೆ. ಜತೆಗೆ ಓಮೈಕ್ರಾನ್ ಕೋವಿಡ್ ದೃಢಪಡುವ ಪ್ರಮಾಣದಲ್ಲೂ ಹೆಚ್ಚಳವಾಗುತ್ತಿದೆ. ದೇಶದಲ್ಲಿ ಓಮೈಕ್ರಾನ್ ರೂಪಾಂತರ ತಳಿಯ ಕೋವಿಡ್ ಪ್ರಕರಣಗಳು ಪತ್ತೆಯಾದ ನಂತರ ಈ ಏರಿಕೆ ಕಂಡುಬರುತ್ತಿದೆ. ಈಗ ದೇಶದಲ್ಲಿ ಪ್ರತಿದಿನ ಪತ್ತೆಯಾಗುತ್ತಿರುವ ಕೋವಿಡ್ ಪ್ರಕರಣಗಳಲ್ಲಿ ಡೆಲ್ಟಾ ರೂಪಾಂತರ ತಳಿಯದ್ದೇ ಪ್ರಧಾನ ಪಾಲು. ಈ ಪ್ರಕರಣಗಳಲ್ಲಿ ಓಮೈಕ್ರಾನ್ ಕೋವಿಡ್ ಪ್ರಕರಣಗಳ ಪ್ರಮಾಣ ಶೇ 10ಕ್ಕಿಂತಲೂ ಕಡಿಮೆ ಇದೆ. ಆದರೆ ಡೆಲ್ಟಾಗಿಂತಲೂ ವೇಗವಾಗಿ ಹರಡುವ ಸಾಮರ್ಥ್ಯ ಓಮೈಕ್ರಾನ್‌ಗೆ ಇರುವ ಕಾರಣ ಕೋವಿಡ್ ಪ್ರಕರಣಗಳ ಸಂಖ್ಯೆ ಮತ್ತಷ್ಟು ಏರಿಕೆಯಾಗುವ ಅಪಾಯವಿದೆ ಎಂದು ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ.

2020ರ ಡಿಸೆಂಬರ್ ಮತ್ತು 2021ರ ಜನವರಿ ವೇಳೆಗೆ ವಿಶ್ವದ ಹಲವು ದೇಶಗಳಲ್ಲಿ ಕೋವಿಡ್‌ನ ಎರಡನೇ ಅಲೆ ತೀವ್ರತೆ ಪಡೆದಿತ್ತು. ಆದರೆ ಆ ಅವಧಿಯಲ್ಲಿ ಭಾರತದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಅತ್ಯಂತ ಕಡಿಮೆ ಮಟ್ಟಕ್ಕೆ ಕುಸಿದಿತ್ತು. ಆದರೆ, 2021ರ ಮಾರ್ಚ್ ಅಂತ್ಯದ ವೇಳೆಗೆ ಕೋವಿಡ್ ಪ್ರಕರಣಗಳ ಸಂಖ್ಯೆ ಏರಿಕೆಯಾಯಿತು. ನಂತರದ ಎರಡು ತಿಂಗಳವರೆಗೆ ತೀವ್ರತೆ ಗರಿಷ್ಠ ಮಟ್ಟದಲ್ಲಿತ್ತು. ಆದರೆ ಈಗಿನ ಪರಿಸ್ಥಿತಿ ಭಿನ್ನವಾಗಿದೆ. ವಿಶ್ವದ ಬೇರೆ ದೇಶಗಳಲ್ಲಿ ಓಮೈಕ್ರಾನ್ ಮತ್ತು ಡೆಲ್ಟಾ ಪ್ರಕರಣಗಳ ಸಂಖ್ಯೆ ಏರಿಕೆಯಾಗುತ್ತಿದೆ. ಭಾರತದಲ್ಲಿ ಇದೇ ವೇಳೆಯಲ್ಲಿಯೇ ಕೋವಿಡ್ ಪ್ರಕರಣಗಳ ಸಂಖ್ಯೆ ಏರಿಕೆಯಾಗುತ್ತಿದೆ.

ವಿದೇಶಿ ಪ್ರಯಾಣಿಕರ ತಪಾಸಣೆ, ಪರೀಕ್ಷೆ, ಏಕಾಂತವಾಸ ಮತ್ತು ಕ್ವಾರಂಟೈನ್‌ನ ಮೂಲಕ ದೇಶದಲ್ಲಿ ಓಮೈಕ್ರಾನ್ ಹರಡುವುದನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಬಹುದು ಎಂದು ಕೇಂದ್ರ ಸರ್ಕಾರವು ಹೇಳಿತ್ತು. ಆದರೆ, ಈ ನಿಯಂತ್ರಣ ಕ್ರಮಗಳು ಜಾರಿಯಲ್ಲಿದ್ದರೂ ದೇಶದ 21 ರಾಜ್ಯಗಳಿಗೆ ಓಮೈಕ್ರಾನ್ ಹರಡಿದೆ. ಆದರೆ ಸದ್ಯದ ಮಟ್ಟಿಗೆ ಓಮೈಕ್ರಾನ್‌ನಿಂದ ಬರುವ ಕೋವಿಡ್‌ನ ತೀವ್ರತೆ ಕಡಿಮೆ ಇದೆ ಎಂಬುದೇ ಸಮಾಧಾನಕರ ಸಂಗತಿ ಎಂದು ತಜ್ಞರು ಹೇಳಿದ್ದಾರೆ.


ಆಧಾರ: ರಾಯಿಟರ್ಸ್, ಎಎಫ್‌ಪಿ, ಪಿಟಿಐ
ಕೇಂದ್ರ ಆರೋಗ್ಯ ಸಚಿವಾಲಯದ ಬುಲೆಟಿನ್‌ಗಳು

21 ರಾಜ್ಯಗಳಿಗೆ ವಿಸ್ತರಿಸಿದ 'ಓಮೈಕ್ರಾನ್'


ಕೊರೊನಾ ರೂಪಾಂತರ ತಳಿ 'ಓಮೈಕ್ರಾನ್' ಭಾರತವನ್ನು ಪ್ರವೇಶಿಸಿ ಭೀತಿ ಸೃಷ್ಟಿಸಿದೆ. ಡಿಸೆಂಬರ್ 2ರಂದು ದೇಶದಲ್ಲಿ ಮೊದಲ ಪ್ರಕರಣ ಪತ್ತೆಯಾಗಿತ್ತು. ಕರ್ನಾಟಕದಲ್ಲಿ ಮೊದಲಿಗೆ ಇಬ್ಬರು ವ್ಯಕ್ತಿಗಳಲ್ಲಿ ಸೋಂಕು ಕಂಡುಬಂದಿತ್ತು. ಒಂದು ತಿಂಗಳು ಕಳೆಯುವ ಮುನ್ನವೇ ಓಮೈಕ್ರಾನ್ ತನ್ನ ಪ್ರತಾಪ ತೋರಿಸಿದೆ. ಡಿ. 29ಕ್ಕೆ ಈ ಪ್ರಕರಣಗಳ ಸಂಖ್ಯೆ 781ಕ್ಕೆ ತಲುಪಿದೆ.

ಆಫ್ರಿಕಾದಲ್ಲಿ ಪತ್ತೆಯಾದ ಈ ತಳಿಯು ದೇಶವನ್ನು ಪ್ರವೇಶಿಸುತ್ತಿದ್ದಂತೆಯೇ ವಿಮಾನ ನಿಲ್ದಾಣಗಳಲ್ಲಿ ಕೋವಿಡ್ ತಪಾಸಣೆ ಕಠಿಣಗೊಳಿಸಲಾಯಿತು. ಸೋಂಕು ಕಾಣಿಸಿಕೊಂಡು ಅಪಾಯಕಾರಿ ಎನಿಸಿದ್ದ ಆಫ್ರಿಕಾದ ಹಲವು ದೇಶಗಳಿಂದ ಭಾರತಕ್ಕೆ ಪ್ರವೇಶಿಸುವ ಎಲ್ಲರ ಕೋವಿಡ್ ಮಾದರಿಗಳನ್ನು ಸಂಗ್ರಹಿಸಿ ಅವುಗಳನ್ನು ವೈರಾಣು ಸಂರಚನೆ ವಿಶ್ಲೇಷಣೆಗೆ ಕಳುಹಿಸಿ, ಅವರನ್ನು ಕ್ವಾರಂಟೈನ್ ಮಾಡಲಾಯಿತು.

ಡಿಸೆಂಬರ್ ಮೊದಲ ವಾರದಲ್ಲಿ ಕರ್ನಾಟಕ, ಮಹಾರಾಷ್ಟ್ರ ಹಾಗೂ ದೆಹಲಿಯಲ್ಲಿ ಸೋಂಕಿತರು ಕಂಡುಬಂದಿದ್ದರು. ಎಲ್ಲ ಕಠಿಣ ಕ್ರಮಗಳನ್ನು ತೆಗೆದುಕೊಂಡರೂ ಸಹ, ಡಿಸೆಂಬರ್ ಎರಡನೇ ವಾರದ ಹೊತ್ತಿಗೆ ಈ ಸೋಂಕು ದೇಶದ 11 ರಾಜ್ಯ/ಕೇಂದ್ರಾಡಳಿತ ಪ್ರದೇಶಕ್ಕೆ ವಿಸ್ತರಿಸಿತು. ಮೂರನೇ ವಾರಕ್ಕೆ ಇದರ ವ್ಯಾಪ್ತಿ 14 ರಾಜ್ಯಗಳಿಗೆ ಹಿಗ್ಗಿತು. ಡಿಸೆಂಬರ್ ಮುಗಿಯಲು ಇನ್ನೂ ಎರಡು ದಿನ ಬಾಕಿ ಇರುವಂತೆಯೇ ಓಮೈಕ್ರಾನ್ 21 ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಲ್ಲಿ ತನ್ನ ಛಾಪು ಒತ್ತಿದೆ. ಕಾಶ್ಮೀರ ಕಣಿವೆಯ ಲಡಾಖ್, ಜಮ್ಮು ಕಾಶ್ಮೀರ ಕೇಂದ್ರಾಡಳಿತ ಪ್ರದೇಶಗಳು, ಈಶಾನ್ಯ ರಾಜ್ಯವಾದ ಮಣಿಪುರವನ್ನೂ ತಲುಪಿ, ಆತಂಕ ಮೂಡಿಸಿದ್ದು, ಕೆಲವೇ ದಿನಗಳಲ್ಲಿ ದೇಶವ್ಯಾಪಿ ಹರಡುವ ಸೂಚನೆ ನೀಡಿದೆ.




ಡಿಸೆಂಬರ್ 30ಗಳ ನಾಲ್ಕು ವಾರಗಳಲ್ಲಿ ಓಮೈಕ್ರಾನ್ ಪ್ರಸರಣ



ಪ್ರಜಾವಾಣಿ ಗ್ರಾಫಿಕ್ಸ್

ಹೆಚ್ಚಳವಾಗದ ಕೋವಿಡ್ ಪರೀಕ್ಷೆ ಪ್ರಮಾಣ



ಇದೇ ವರ್ಷದ ಮೇ ತಿಂಗಳಲ್ಲಿ ದೇಶದಲ್ಲಿ ಅಬ್ಬರಿಸಿದ್ದ ಕೋವಿಡ್ ಎರಡನೇ ಅಲೆಯು ತಣ್ಣಗಾಗುತ್ತಿದೆ ಎನ್ನುವಾಗಲೇ, 'ಓಮೈಕ್ರಾನ್' ಮೂಲಕ ಸೋಂಕು ಮತ್ತೆ ಬಲಿಷ್ಠವಾಗುವತ್ತ ಹೆಜ್ಜೆ ಇರಿಸಿದೆ. ಪ್ರಕರಣಗಳು ಮತ್ತೆ ಅಲ್ಪ ಏರಿಕೆ ದಾಖಲಿಸಿವೆ.

ಡಿಸೆಂಬರ್ ತಿಂಗಳಲ್ಲಿ ನಿತ್ಯ ವರದಿಯಾಗುವ ಹೊಸ ಪ್ರಕರಣಗಳನ್ನು ಗಮನಿಸಿದರೆ, ಸಾಕಷ್ಟು ಏರಿಳಿತ ಕಂಡುಬಂದಿದೆ. ಡಿಸೆಂಬರ್ 2ರಂದು ಅತಿಹೆಚ್ಚು ಅಂದರೆ, 9,765 ಪ್ರಕರಣಗಳು ವರದಿಯಾಗಿದ್ದವು. ಈ ಬಳಿಕ ನಿಧಾನವಾಗಿ ಇಳಿಕೆ ಕಂಡುಬಂದಿತು. ಡಿಸೆಂಬರ್ 9ರಂದು ಮತ್ತೆ ಒಂಬತ್ತು ಸಾವಿರದ ಗಡಿಗೆ ಹೋಗಿದ್ದ ನಿತ್ಯದ ಪ್ರಕರಣಗಳು, ಮತ್ತೆ ಈ ಗಡಿಯನ್ನು ತಲುಪಿದ್ದು ಡಿಸೆಂಬರ್ 29ರಂದು. ಡಿಸೆಂಬರ್ 15 ಹಾಗೂ 21ರಂದು 5,000ರ ಗಡಿಗೂ ಇಳಿಕೆಯಾಗಿದ್ದವು. ಆದರೆ, ಕೋವಿಡ್ ದೃಢಪಡುವ ಪ್ರಮಾಣ ಶೇಕಡಾ ಒಂದನ್ನು ದಾಟಿಲ್ಲ. ಡಿಸೆಂಬರ್ ಆರಂಭದಲ್ಲಿ ಶೇಕಡ 0.94ರಷ್ಟು ದಾಖಲಾಗಿದ್ದೇ ತಿಂಗಳ ಗರಿಷ್ಠ ದರ.

ಪ್ರಕರಣಗಳಲ್ಲಿ ಈ ಮಟ್ಟಿಗಿನ ವ್ಯತ್ಯಾಸ ಕಾಣಲು ಕಾರಣವಿದೆ. ದೇಶದಲ್ಲಿ ದಿನವೂ ಸರಾಸರಿ 10 ಲಕ್ಷ ಜನರ ಕೋವಿಡ್ ಪರೀಕ್ಷೆ ನಡೆಸಲಾಗುತ್ತಿದೆ. ಪರೀಕ್ಷೆ ಪ್ರಮಾಣವು ಇಳಿಕೆಯಾದ ದಿನದಂದು ಪ್ರಕರಣಗಳ ಸಂಖ್ಯೆ ಇಳಿಕೆಯಾಗಿರುವುದು ಗಮನಾರ್ಹ. ಹೆಚ್ಚು ಪರೀಕ್ಷೆ ನಡೆಸಿದ ದಿನಗಳಂದು ಪ್ರಕರಣಗಳಲ್ಲಿ ಏರಿಕೆ ಕಂಡುಬಂದಿದೆ ಎಂದು ದತ್ತಾಂಶಗಳು ಹೇಳುತ್ತವೆ. ಉದಾಹರಣೆಗೆ ಡಿ. 20ರಂದು 6,563 ಪ್ರಕರಣಗಳು ದಾಖಲಾಗಿದ್ದವು. ಅಂದು 8.77 ಲಕ್ಷ ಜನರ ಪರೀಕ್ಷೆ ನಡೆದಿತ್ತು. ಡಿ.27ರಂದು 6,531 ಸೋಂಕಿತರು ಕಂಡುಬಂದಿದ್ದರು. ಅಂದು 7.52 ಲಕ್ಷ ಪರೀಕ್ಷೆ ನಡೆದಿದ್ದವು. ತಿಂಗಳ ಆರಂಭದಲ್ಲಿ 11 ಲಕ್ಷ ಪರೀಕ್ಷೆಗಳನ್ನು ನಡೆಸಲಾಗುತ್ತಿತ್ತು. ಡಿ.29ರಂದೂ ಸಹ 11.67 ಲಕ್ಷ ಪರೀಕ್ಷೆಗಳು ನಡೆದಿವೆ. ಓಮೈಕ್ರಾನ್ ಪ್ರಕರಣಗಳು ಇನ್ನೆರಡು ದಿನಗಳಲ್ಲಿ ಸಾವಿರದ ಗಡಿ ದಾಟುವ ಸೂಚನೆ ಇದ್ದರೂ, ಸರ್ಕಾರವು ಪರೀಕ್ಷೆಗಳನ್ನು ಹೆಚ್ಚಿಸಿಲ್ಲ ಎಂಬುದು ಸರ್ಕಾರದ ದತ್ತಾಂಶಗಳನ್ನು ಗಮನಿಸಿದರೆ ತಿಳಿಯುತ್ತದೆ. ಎರಡನೇ ಅಲೆ ತೀವ್ರವಾಗಿದ್ದ ಮೇ ತಿಂಗಳಲ್ಲಿ ದಿನವೂ ಸರಿಸುಮಾರು 3 ಲಕ್ಷ ಹೊಸ ಪ್ರಕರಣಗಳು ವರದಿಯಾಗುತ್ತಿದ್ದವು. ಆಗ ಸರ್ಕಾರ ನಿತ್ಯವೂ 31 ಲಕ್ಷ ಕೋವಿಡ್ ಪರೀಕ್ಷೆಗಳನ್ನು ನಡೆಸುತ್ತಿತ್ತು ಎಂಬುದನ್ನು ಇಲ್ಲಿ ಗಮನಿಸಬಹುದು.

ಸಮುದಾಯಕ್ಕೆ ಹರಡಿದೆಯೇ?

ದೇಶದಲ್ಲಿ ಓಮೈಕ್ರಾನ್ ರೂಪಾಂತರ ತಳಿಯು ಸಮುದಾಯಕ್ಕೆ ಹರಡಿದೆಯೇ ಎಂಬುದರ ಬಗ್ಗೆ ವ್ಯಾಪಕವಾದ ಚರ್ಚೆಗಳು ನಡೆಯುತ್ತಿವೆ. ಹಲವು ರಾಜ್ಯಗಳಲ್ಲಿ ವಿದೇಶ ಪ್ರಯಾಣದ ಹಿನ್ನೆಲೆ ಇಲ್ಲದೇ ಇರುವ ವ್ಯಕ್ತಿಗಳಲ್ಲೂ ಓಮೈಕ್ರಾನ್ ಸೋಂಕು ಪತ್ತೆಯಾಗಿದೆ. ಹೀಗಾಗಿ ಅದು ಸಮುದಾಯಕ್ಕೆ ಹರಡಿರುವ ಸಾಧ್ಯತೆ ಅತ್ಯಧಿಕವಾಗಿದೆ ಎಂದು ತಜ್ಞರು ಹೇಳಿದ್ದಾರೆ. ಆದರೆ ಓಮೈಕ್ರಾನ್ ಹರಡುವ ಬಗೆ, ಅದು ಪ್ರತಿರೋಧಕ ಶಕ್ತಿಯನ್ನು ತಪ್ಪಿಸಿ ಹರಡುವ ಸಾಮರ್ಥ್ಯ ಹೊಂದಿದೆಯೇ ಮತ್ತು ಅದು ಉಂಟು ಮಾಡುವ ರೋಗದ ತೀವ್ರತೆ ಅಪಾಯಕಾರಿಮಟ್ಟದಲ್ಲಿ ಇರಲಿದೆಯೇ ಎಂಬುದರ ಬಗ್ಗೆ ಯಾವುದೇ ಸ್ಪಷ್ಟ ಮಾಹಿತಿ ಇಲ್ಲ.

'ಅಮೆರಿಕದಲ್ಲಿ ಈಗ ಪ್ರತಿದಿನ ಪತ್ತೆಯಾಗುತ್ತಿರುವ ಕೋವಿಡ್ ಪ್ರಕರಣಗಳಲ್ಲಿ ಶೇ 70ಕ್ಕಿಂತಲೂ ಹೆಚ್ಚು, ಓಮೈಕ್ರಾನ್ ಪ್ರಕರಣಗಳೇ ಇವೆ. ಅಮೆರಿಕದಲ್ಲಿ ಈಗ ಪತ್ತೆಯಾಗುತ್ತಿರುವ ಓಮೈಕ್ರಾನ್ ಪ್ರಕರಣಗಳ ಪ್ರಮಾಣವನ್ನು ಪರಿಗಣಿಸಿದರೆ, ಅದು ಸಮುದಾಯಕ್ಕೆ ಹರಡಿದೆ ಎಂದು ನಿರ್ಧರಿಸಬಹುದು' ಎಂದು ಸೆಂಟರ್ ಫಾರ್ ಡಿಸೀಸ್ ಕಂಟ್ರೋಲ್ ಅಂಡ್ ಪ್ರಿವೆನ್ಷನ್ (ಸಿಡಿಸಿ) ಹೇಳಿದೆ. ಅಮೆರಿಕದಲ್ಲಿ ಈಗ ಪ್ರತಿದಿನ 2.5 ಲಕ್ಷಕ್ಕೂ ಹೆಚ್ಚು ಹೊಸ ಪ್ರಕರಣಗಳು ಪತ್ತೆಯಾಗುತ್ತಿವೆ. ವಿಶ್ವದಾದ್ಯಂತ ಪ್ರತಿದಿನ 10 ಲಕ್ಷಕ್ಕೂ ಹೆಚ್ಚು ಪ್ರಕರಣಗಳು ಪತ್ತೆಯಾಗುತ್ತಿದೆ. ಆದರೆ ಇವುಗಳಲ್ಲಿ ಓಮೈಕ್ರಾನ್ ಪ್ರಕರಣಗಳೆಷ್ಟು ಮತ್ತು ಡೆಲ್ಟಾ ಪ್ರಕರಣಗಳೆಷ್ಟು ಎಂಬುದರ ನಿಖರವಾದ ಮಾಹಿತಿ ಲಭ್ಯವಿಲ್ಲ.

ಭಾರತದಲ್ಲಿ ಈವರೆಗೆ ಓಮೈಕ್ರಾನ್ ದೃಢಪಟ್ಟ ಒಟ್ಟು ಪ್ರಕರಣಗಳಲ್ಲಿ 50ಕ್ಕೂ ಹೆಚ್ಚು ಮಂದಿಗೆ ವಿದೇಶ ಪ್ರಯಾಣದ ಹಿನ್ನೆಲೆ ಇಲ್ಲ. ಅವರು ವಿದೇಶ ಪ್ರಯಾಣ ಮಾಡಿಲ್ಲ ಮತ್ತು ವಿದೇಶದಿಂದ ವಾಪಸಾದವರ ಸಂಪರ್ಕಕ್ಕೂ ಬಂದಿಲ್ಲ. ಆದರೆ ಅಮೆರಿಕದಲ್ಲಿನ ಪರಿಸ್ಥಿತಿ ಮತ್ತು ವಿಶ್ಲೇಷಣೆಗಳು ಭಾರತಕ್ಕೂ ಅನ್ವಯವಾಗುತ್ತದೆ ಎಂದು ಹೇಳಲಾಗದು. ಈ ಎಲ್ಲಾ ಅಂಶಗಳನ್ನು ದೃಢಪಡಿಸುವ ವೈಜ್ಞಾನಿಕ ಅಧ್ಯಯನಗಳು ಇನ್ನೂ ಪೂರ್ಣವಾಗಿಲ್ಲ. ಅಲ್ಲಿಯವರೆಗೆ ಕೋವಿಡ್ ನಿಯಂತ್ರಣ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಲೇಬೇಕು ಎಂದು ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ತು ಹೇಳಿದೆ.

ವರದಿ: ಜಯಸಿಂಹ ಆರ್., ಅಮೃತಕಿರಣ್ ಬಿ. ಎಂ.

ನಾಗಾಲ್ಯಾಂಡ್ ಹತ್ಯಾಕಾಂಡ ಎಸ್‌ಐಟಿಯಿಂದ ಯೋಧರ ವಿಚಾರಣೆಗೆ ಸಮ್ಮತಿ

ಪ್ರಜಾವಾಣಿ ವಾರ್ತೆ

ಗುವಾಹಟಿ: ನಾಗಾಲ್ಯಾಂಡ್‌ನಲ್ಲಿ ಡಿಸೆಂಬರ್ 4ರಂದು ಭದ್ರತಾ ಪಡೆಗಳ ಸಿಬ್ಬಂದಿ 14 ನಾಗರಿಕರನ್ನು ಗುಂಡಿಟ್ಟು ಕೊಂದ ಘಟನೆ ಕುರಿತು ತನಿಖೆ ನಡೆಸುತ್ತಿರುವ ಎಸ್‌ಐಟಿಗೆ ತನ್ನ ಅಧಿಕಾರಿಗಳು ಹಾಗೂ ಸೈನಿಕರನ್ನು ವಿಚಾರಣೆಗೆ ಒಳಪಡಿಸಲು ಸೇನೆ ಅನುಮತಿ ನೀಡಿದೆ.

ಘಟನೆಯ ಕುರಿತಂತೆ ಸೇನೆಯಿಂದ ಬುಧವಾರ ತನಿಖೆ ಆರಂಭವಾಗಿರುವಂತೆಯೇ ಎಸ್‌ಐಟಿ ತನಿಖೆಯೂ ಚುರುಕುಗೊಳ್ಳುವ ಈ ಬೆಳವಣಿಗೆ ನಡೆದಿದೆ. ಅರೆ ವಿಶೇಷ ಪಡೆಗಳ 21 ಸೈನಿಕರ ಹೇಳಿಕೆಗಳನ್ನು ದಾಖಲಿಸಿಕೊಳ್ಳುವ ಪ್ರಕ್ರಿಯೆಯನ್ನು ಎಸ್‌ಐಟಿ ಇದೇ ವಾರ ಪೂರ್ಣಗೊಳಿಸುವ ಸಾಧ್ಯತೆ ಇದೆ.

ತನಿಖೆಯನ್ನು ತ್ವರಿತಗೊಳಿಸುವ ಸಂಬಂಧ ಎಸ್‌ಐಟಿ ಸದಸ್ಯರ ಸಂಖ್ಯೆಯನ್ನು 8ರಿಂದ 22ಕ್ಕೆ ಹೆಚ್ಚಿಸಲಾಗಿದ್ದು, ಏಳು ತಂಡಗಳನ್ನಾಗಿ ವಿಭಜಿಸಲಾಗಿದೆ. ಎಸ್‌ಐಟಿಯಲ್ಲಿ ಐದು ಜನ ಐಪಿಎಸ್ ಅಧಿಕಾರಿಗಳು ಸಹ ಇದ್ದಾರೆ. ರಾಜ್ಯ ಸರ್ಕಾರ ರಚಿಸಿರುವ ಎಸ್‌ಐಟಿಗೇ ಸೇನೆಯನ್ನು ವಿಚಾರಣೆಗೆ ನಡೆಸಲು ಅವಕಾಶ ದೊರೆತಿರುವುದು ಮಹತ್ವದ ಬೆಳವಣಿಗೆ ಎಂದೇ ವಿಶ್ಲೇಷಿಸಲಾಗಿದೆ.

ಸ್ಥಳೀಯರ ಅಸಹಕಾರ: ಸೇನಾ ತನಿಖೆಯ ಭಾಗವಾಗಿ ಮೇಜರ್ ಜನರಲ್ ನೇತೃತ್ವದ ಹಿರಿಯ ಅಧಿಕಾರಿಗಳು ಬುಧವಾರ ಘಟನಾ ಸ್ಥಳಕ್ಕೆ ಬಂದಾಗ ಅವರಿಗೆ ಸಹಕಾರ ನೀಡಲು ಸ್ಥಳೀಯರು ನಿರಾಕರಿಸಿದರು.

ಸೇನಾ ಅಧಿಕಾರಿಗಳ ಜತೆಗೆ ಮಾನ್ ಜಿಲ್ಲಾಡಳಿತದ ವತಿಯಿಂದ ನಾಗರಿಕ ಮತ್ತು ಪೊಲೀಸ್ ಅಧಿಕಾರಿಗಳು, ಹತ್ಯಾಕಾಂಡದಲ್ಲಿ ಶಾಮೀಲಾಗಿದ್ದ ಮೂವರು ಸೇನಾ ಸಿಬ್ಬಂದಿ ಸಹ ಇದ್ದರು.

ಸೇನಾ ತನಿಖೆಗೆ ಸಹಕಾರ ನೀಡುವುದಿಲ್ಲ ಎಂಬ ನಿರ್ಧಾರಕ್ಕೆ ಬದ್ಧರಾದ ಸ್ಥಳೀಯ ಗ್ರಾಮ ಸಮಿತಿಯ ಸದಸ್ಯರು ತನಿಖಾ ಅಧಿಕಾರಿಗಳನ್ನು ಭೇಟಿ ಮಾಡಲಿಲ್ಲ.

ನಾಗಾಲ್ಯಾಂಡ್‌ನ ಮೊನ್ ಜಿಲ್ಲೆಯ ಟಿರು ಮತ್ತು ಒಟಿಂಗ್ ಗ್ರಾಮಗಳಲ್ಲಿ ಡಿಸೆಂಬರ್ 4ರಂದು ಈ ಘಟನೆ ನಡೆದಿತ್ತು. ಟಿರು ಪ್ರದೇಶದಲ್ಲಿ ಕಾರ್ಯಾಚರಣೆ ನಡೆಸುತ್ತಿದ್ದ ವೇಳೆ, ನಾಗರಿಕರನ್ನು ಉಗ್ರರು ಎಂದು ತಪ್ಪಾಗಿ ಗುರುತಿಸಿ ಸೈನಿಕರು ನಡೆಸಿದ ದಾಳಿಯಲ್ಲಿ ಎಂಟು ನಾಗರಿಕರು ಮೃತಪಟ್ಟಿದ್ದರು. ಕತ್ತಲಾದರೂ ಮನೆಗೆ ಬಾರದೇ ಇದ್ದವರನ್ನು ಹುಡುಕಿಕೊಂಡು ಗ್ರಾಮಸ್ಥರು ಸ್ಥಳಕ್ಕೆ ಬಂದಿದ್ದಾರೆ. ಆಗ ನಡೆದ ಘರ್ಷಣೆಯಲ್ಲಿ ಮತ್ತೆ ಐವರು ನಾಗರಿಕರು ಸೈನಿಕರ ಗುಂಡಿಗೆ ಬಲಿಯಾಗಿದ್ದರು. ನಾಗರಿಕರ ಹತ್ಯೆಯ ನಂತರ ಸುತ್ತಮುತ್ತಲಿನ ಗ್ರಾಮಸ್ಥರು ಅಸ್ಸಾಂ ರೈಫಲ್ಸ್‌ನ ಸೇನಾ ಶಿಬಿರದ ಮೇಲೆ ದಾಳಿ ನಡೆಸಿದಾಗ, ಸೈನಿಕರು ಹಾರಿಸಿದ ಗುಂಡಿಗೆ ಮತ್ತೊಬ್ಬ ನಾಗರಿಕ ಬಲಿಯಾಗಿದ್ದರು.

ಪ್ರಧಾನಿ ಯುಎಇ ಪ್ರವಾಸ ಮುಂದಕ್ಕೆ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರ ಯುಎಇ ಪ್ರವಾಸ ಮುಂದೂಡಿಕೆಯಾಗಿದೆ.

ಪೂರ್ವನಿಗದಿಯಂತೆ ಮೋದಿ ಅವರು ಜನವರಿ 6ರಂದು ಯುಎಇಗೆ ತೆರಳಬೇಕಿತ್ತು. ಕೊರೊನಾ ವೈರಸ್‌ನ ರೂಪಾಂತರ ತಳಿ ಓಮೈಕ್ರಾನ್ ಪ್ರಕರಣಗಳು ಹೆಚ್ಚಾಗುತ್ತಿರುವ ಕಾರಣ ಪ್ರವಾಸ ಮುಂದೂಡಲಾಗಿದೆ ಎಂದು ಮೂಲಗಳು ಹೇಳಿವೆ.

ಓಮೈಕ್ರಾನ್ ಪ್ರಕರಣಗಳು ಹೆಚ್ಚಾಗುತ್ತಿರುವ ಕಾರಣ ಮೋದಿ ಅವರ ಯುಎಇ ಹಾಗೂ ಕುವೈತ್ ಪ್ರವಾಸ ಮುಂದೂಡಲಾಗಿದೆ. ಪ್ರವಾಸದ ದಿನಾಂಕ ಫೆಬ್ರುವರಿಗೆ ಮರುನಿಗದಿಯಾಗುವ ಸಾಧ್ಯತೆ ಇದೆ ಎನ್ನಲಾಗಿದೆ.


ಅಮೆರಿಕ, ಯುರೋಪ್ ದೇಶಗಳು, ದಕ್ಷಿಣ ಆಫ್ರಿಕಾಗಳಲ್ಲಿ ಓಮೈಕ್ರಾನ್ ಪ್ರಕರಣಗಳು ಹೆಚ್ಚಾಗುತ್ತಿವೆ. ಯುಎಇಯಲ್ಲಿ ಸೋಮವಾರ 1,732 ಕೋವಿಡ್ ಪ್ರಕರಣಗಳು ದೃಢಪಟ್ಟಿದ್ದವು.

ಉದ್ಯೋಗದ ಹೆಸರಿನಲ್ಲಿ ವಂಚನೆ; ಅಸ್ಸಾಂ ರೈಫಲ್ಸ್‌ನ ಅಧಿಕಾರಿಗಳು, ವೈದ್ಯರು ಭಾಗಿ

ನವದೆಹಲಿ: ಅಸ್ಸಾಂ ರೈಫಲ್ಸ್‌ನ ಕೆಲ ವೈದ್ಯರು ಮತ್ತು ಹಿರಿಯ ಅಧಿಕಾರಿಗಳು ಗ್ರಾಮದ ಶಿಕ್ಷಕನೊಬ್ಬನೊಂದಿಗೆ ಸೇರಿ ಬಿಹಾರ ಮೂಲದ ಯುವ ಉದ್ಯೋಗ ಆಕಾಂಕ್ಷಿಗಳಿಗೆ ಅರೆಸೇನಾಪಡೆಯಲ್ಲಿ ಉದ್ಯೋಗ ನೀಡುವುದಾಗಿ ಹೇಳಿ, ಅವರಿಂದ ಲಂಚ ಪಡೆದು ಮೋಸ ಮಾಡಲು ಸಂಚು ರೂಪಿಸಿದ್ದರು ಎಂದು ಸಿಬಿಐ ಹೇಳಿದೆ.

ಈ ಸಂಬಂಧ ಬಿಹಾರದ ವೈಶಾಲಿ ಜಿಲ್ಲೆಯ ಜೆಂಹಾದ ಗ್ರಾಮದ ಶಿಕ್ಷಕ ಯಶವಂತ್ ಕುಮಾರ್ ವಿರುದ್ಧ ಮಂಗಳವಾರ ಎಫ್‌ಐಆರ್ ದಾಖಲಿಸಲಾಗಿದೆ. ಅಸ್ಸಾ ರೈಫಲ್ಸ್‌ನ ಅಧಿಕಾರಿಗಳಿಗೆ ಯುವಕರನ್ನು ಯಶವಂತ್ ಪರಿಚ-ಯಿಸುತ್ತಿದ್ದರು. ಬಳಿಕ ಯುವಕರಿಂದ ಪಡೆದ ಲಂಚದ ಹಣವನ್ನು ಅಧಿಕಾರಿಗಳಿಗೆ ತಲುಪಿಸುತ್ತಿದ್ದರು ಎನ್ನಲಾಗಿದೆ. ಈವರೆಗೆ ಅಧಿಕಾರಿಗಳು ಹಾಗೂ ವೈದ್ಯರ ಹೆಸರು ಬಯಲಾಗಿಲ್ಲ.

ಗುಂಡಣ್ಣ



ಬೆರಗಿನ ಬೆಳಕು
ಗುರುರಾಜ ಕರಜಗಿ



ಸಣ್ಣತನದ ಸವೆಯುವಿಕೆ

ನಿನ್ನ ಕಣ್ ಕಿವಿ ಮನಗಳಿರುವಷ್ಟು ನಿನ್ನ ಜಗ |
ನಿನ್ನನಳಿಸುವ ನಗಿಸುವೆಲ್ಲ ನಿನ್ನಂಶ ||
ಉನ್ನತಿಗೆ ನೀನೇರಿದಂತೆ ಜಗ ವಿಸ್ತರಿಸಿ |
ಸಣ್ಣತನ ಸವೆಯುವುದು – ಮಂಕುತಿಮ್ಮ || 530 ||

ಪದ-ಅರ್ಥ:
ಮನಗಳಿರವಷ್ಟು = ಮನಗಳು + ಅರಿವಷ್ಟು (ತಿಳಿಯುವಷ್ಟು),
ನಿನ್ನನಳಿಸುವ = ನಿನ್ನನು + ಅಳಿಸುವ,
ನಗಿಸುವೆಲ್ಲ = ನಗಿಸುವ + ಎಲ್ಲ.

ವಾಚ್ಯಾರ್ಥ: ನಿನ್ನ ಕಣ್ಣು, ಕಿವಿ, ಮನಸ್ಸುಗಳು ತಿಳಿಯುವಷ್ಟೇ ನಿನ್ನ ಜಗತ್ತು. ನಿನ್ನನ್ನು ಅಳಿಸುವ, ನಗಿಸುವುದೆಲ್ಲ ನಿನ್ನದೇ ಅಂಶ. ಉನ್ನತಿಗೆ ನೀನು ಏರಿದಂತೆ ನಿನ್ನ ಜಗತ್ತು ವಿಸ್ತಾರವಾಗಿ, ಸಣ್ಣತನ ಕರಗುತ್ತದೆ.

ವಿವರಣೆ: ಪ್ರಪಂಚ ಅತ್ಯಂತ ದೊಡ್ಡದಾಗಿದ್ದರೂ, ನನ್ನ ಮಟ್ಟಿಗೆ ಅದು ಸಣ್ಣದೆ. ನಮ್ಮ ಕಣ್ಣಿಗೆ ಮಿತದರ್ಶನ. ನಾನು ನಾಲ್ಕು ಗೋಡೆಗಳ ಮಧ್ಯೆ ಉಳಿದುಹೋದರೆ ನನ್ನ ಪ್ರಪಂಚ ಅಷ್ಟೇ ದೊಡ್ಡದು. ಕಣ್ಣಿಗಿಂತ ಕಿವಿಯ ವಿಸ್ತಾರ ದೊಡ್ಡದು. ಮನೆಯೊಳಗಿದ್ದರೂ ಹೊರಗಿನ ವಾಹನಗಳ, ಜನರ ಸದ್ದು ಕೇಳುತ್ತದೆ. ಮನಸ್ಸಿನ ವಿಸ್ತಾರ ಮತ್ತೂ ದೊಡ್ಡದು. ಇಲ್ಲಿ ಕುಳಿತು ಅದು ಪ್ರಪಂಚದ ಅಂಚನ್ನು ಮುಟ್ಟಬಹುದು. ಈ ಇಂದ್ರಿಯಗಳ ಹರಹು ಹೆಚ್ಚಿದಂತೆ ನನ್ನ ಅನುಭವ ಪ್ರಪಂಚ ದೊಡ್ಡದಾಗುತ್ತ ಹೋಗುತ್ತದೆ.

'ಅಬ್ಬಾ, ಅವರೆಷ್ಟು ಚೆಂದವಾಗಿ ಮಾತನಾಡುತ್ತಾರೆ, ತುಂಬ ನಗಿಸುತ್ತಾರೆ' ಎನ್ನುತ್ತೇವೆ. 'ಅವರ ಮಾತು ಕೇಳಿದರೆ, ಕಣ್ಣೀರು ಧಾರೆಯಾಗುತ್ತದೆ' ಎನ್ನುತ್ತೇವೆ. ಆದರೆ ಯಾರೂ ನಮ್ಮನ್ನು ಹೊರಗಿನಿಂದ ನಗಿಸಲಾರರು, ಅಳಿಸಲಾರರು. ಕಲ್ಪನೆ ಮಾಡಿಕೊಳ್ಳಿ. ಒಂದು ದಿನ ನೀವು ತುಂಬ ಸಂತೋಷದಲ್ಲಿದ್ದೀರಿ. ಮನೆಗೆ ಹೋದಾಗ ಯಾವುದೋ ದುಃಖದ, ದುರಂತ ಸನ್ನಿವೇಶವನ್ನು ದೂರದರ್ಶನದಲ್ಲಿ ಮನೆಯವರು ನೋಡುತ್ತಿದ್ದರೆ. ಆಗ ನೀವು, 'ಛೇ, ಏನು ಅಳಬುರುಕ ಸಿನಿಮಾ ಹಾಕಿದ್ದೀರಿ? ಬಂದು ಮಾಡಿ' ಎನ್ನುತ್ತೀರಿ. ಅದೇ ನಿಮ್ಮ ಮನದಲ್ಲಿ ದುಃಖ ಮಡುಗಟ್ಟಿದಾಗ, ಜನರು ಸಂತೋಷದ, ತಮಾಷೆಯ ದೃಶ್ಯವನ್ನು ನೋಡುತ್ತಿದ್ದರೆ, ನೀವು ಅಲ್ಲಿರುವುದಿಲ್ಲ. ಅಂದರೆ ದುಃಖ ಅಥವಾ ಸಂತೋಷ ನೋಡುವ ದೃಶ್ಯದಲ್ಲಿಲ್ಲ. ಅದು ನಿಮ್ಮ ಮನಸ್ಸಿನಲ್ಲಿದೆ. ಮನದಲ್ಲಿಯ ಭಾವದಂತೆ ಪರಿಸರಕ್ಕೆ ಪ್ರತಿಸ್ಪಂದನೆ ದೊರೆಯುತ್ತದೆ. ಅದಕ್ಕೇ ಕಗ್ಗ, 'ನಿನ್ನನಳಿಸುವ, ನಗಿಸುವ ಎಲ್ಲ ನಿನ್ನಂಶ' ಎಂದು ವರ್ಣಿಸುತ್ತದೆ.

ಇದು ಒಂದು ಹಂತದ ಚಿಂತನೆ. ಇನ್ನೊಂದು ಬಹು ಮುಖ್ಯವಾದ, ಮನನೀಯವಾದ ಅರ್ಥವೂ ಈ ಚೌಪದಿಗೆ ಇದೆ. ನಮ್ಮ ಇಂದ್ರಿಯಗಳ ವ್ಯಾಪ್ತಿ ತುಂಬ ಚಿಕ್ಕದು. ಅಲ್ಲಿಯೇ ಉಳಿದುಬಿಟ್ಟರೆ ಉನ್ನತಿ ಸಾಧ್ಯವಿಲ್ಲ. ಹಾಗಾದರೆ ಎತ್ತರಕ್ಕೆ ಹೋಗಲು ಏನು ಮಾಡಬೇಕು? ಕೇವಲ 'ನಾನು' ಎಂಬ ಸ್ವಕೇಂದ್ರಿತ ಚಿಂತನೆಯಿಂದ ಹೊರಬಂದು 'ನಾವು' ಎಂಬ ಸಮಷ್ಟಿಕೇಂದ್ರಿತ ಚಿಂತನೆಗೆ ತೊಡಗಬೇಕು. ಇದು ಆತ್ಮವಿಕಾಸದ ಮೊದಲ ಹಂತ. ಜಗಜ್ಜೀವನದಲ್ಲಿ ಸಮ್ಮಿಲಿತವಾಗುವುದೇ ಆತ್ಮವಿಕಾಸ.

ಮೊದಲು ಸ್ವಾರ್ಥಕೇಂದ್ರಿತ ಹಂತದಿಂದ ದಾಟಿ ತನ್ನ ಪರಿವಾರವನ್ನು ಸೇರಿಸಿಕೊಳ್ಳಬೇಕು. ಅಲ್ಲಿ ದೊರೆಯುವ ಮಮತೆ, ಸಂಸಾರದ ಕಷ್ಟ-ಸುಖಗಳ ಅನುಭವ ಬಂದು ಸಂಸ್ಕಾರವನ್ನು ನೀಡುತ್ತದೆ. ನಂತರ ಹಂತಹಂತವಾಗಿ ವಲಯವನ್ನು ಹಿಗ್ಗಿಸಿಕೊಂಡು ನನ್ನ ನಗರ, ನನ್ನ ರಾಜ್ಯ, ನನ್ನ ದೇಶ, ನನ್ನ ಪ್ರಪಂಚ ಹೀಗೆ ಅಲೆಅಲೆಯಾಗಿ ವ್ಯಕ್ತಿತ್ವ ವಿಸ್ತರಿಸುತ್ತ ಹೋಗುತ್ತದೆ. ಹೀಗೆ ಸಕಲಜೀವಕೋಟಿಯೂ ನಮ್ಮ ಸ್ನೇಹ ವಾತ್ಸಲ್ಯಗಳ ಛತ್ರ ಛಾಯೆಯೊಳಗೆ ಬರುತ್ತದೆ. ಅದೇ ಲೋಕ ಕಾರುಣ್ಯ ಮತ್ತು ವಿಶ್ವಾತ್ಮಭಾವ. ಅದಕ್ಕಾಗಿಯೇ ನಮ್ಮ ಹಿರಿಯರು 'ವಸುಧೈವ ಕುಟುಂಬಕಂ' ಎಂದರು. ಬೆಟ್ಟದ ಮೇಲೆ ಮೇಲೆ ಹೋದಂತೆ ದೃಷ್ಟಿ ವಿಸ್ತಾರವಾಗುವಂತೆ, ಬದುಕಿನಲ್ಲಿ ವ್ಯಕ್ತಿತ್ವ ಬೆಳೆದಂತೆ ಎತ್ತರದ ದೃಷ್ಟಿ ಮೂಡಿ ನಮ್ಮಲ್ಲಿದ್ದ ಸಣ್ಣತನ ಕರಗಿಹೋಗುತ್ತದೆ. ❖

ದಿನ ಭವಿಷ್ಯ

ಗುರುವಾರ ಡಿಸೆಂಬರ್ 30, 2021

ಶ್ರೀಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಹೇಮಂತ ಋತು ಮಾರ್ಗಶಿರ (ಧನುರ್ಮಾಸ) ಮಾಸ ಕೃಷ್ಣಪಕ್ಷ ಮಳೆ ನಕ್ಷತ್ರ ಪೂರ್ವಾಷಾಢ ಏಕಾದಶಿ ಗಂ. 6-55 (ಬೆ. 9-34) ಗುರುವಾರ ನಿತ್ಯ ನಕ್ಷತ್ರ ವಿಶಾಖ ಗಂ. 36-58 (ರಾ. 9-35) ಧೃತಿ ನಾಮ ಯೋಗ ಗಂ. 31-32 ಬಾಲವ ಕರಣ ಗಂ. 6-55 ವಿಷ ಗಂ. 46-20 ಅಮೃತ ಗಂ. 16-2 ರಾಹುಕಾಲ ಮ ಗಂ. 1-30 ರಿಂದ 3-00 ಗುಳಿಕ ಕಾಲ ಬೆ ಗಂ 9-00 ರಿಂದ 10-30 ಯಮಗಂಡ ಕಾಲ ಬೆ ಗಂ 6-00 ರಿಂದ 7-30 : ಸೂರ್ಯೋದಯ: 6-42 ಸೂರ್ಯಾಸ್ತ: 5-57 ಅದೃಷ್ಟ ಸಂಖ್ಯೆ 5, 8

ಮೇಷ: ರೈತಾಪಿ ವರ್ಗದವರಿಗೆ, ಹೈನುಗಾರಿಕೆ ನಡೆಸುವವರಿಗೆ ಉತ್ತಮ ಆದಾಯ. ಆರೋಗ್ಯದಲ್ಲಿ ಸುಧಾರಣೆ. ಉದ್ಯೋಗ, ವ್ಯವಹಾರಗಳು ಸರಾಗವಾಗಿ ನಡೆಯಲಿವೆ. ಶುಭ ಸಮಾಚಾರಗಳನ್ನು ಕೇಳಲಿದ್ದೀರಿ.

ವೃಷಭ: ಉಚ್ಚ ಶಿಕ್ಷಣ ಅಥವಾ ಉನ್ನತ ಅಧ್ಯಯನ ನಿಮಿತ್ತ ಪ್ರಯಾಣ. ಆರ್ಥಿಕ ಅನುಕೂಲತೆಗಳು ಅಭಿವೃದ್ಧಿಯಾಗಲಿವೆ. ವಸ್ತ್ರಾಭರಣಗಳನ್ನು ಖರೀದಿಸುವ ಸಾಧ್ಯತೆ. ಆಸ್ತಿ ಲಾಭದ ಲಕ್ಷಣಗಳು ಗೋಚರವಾಗುತ್ತಿದೆ.

ಮಿಥುನ: ನೂತನ ಉದ್ಯಮ ಅಥವಾ ಕೈಗಾರಿಕೆಯನ್ನು ಸ್ಥಾಪಿಸುವ ನಿಟ್ಟಿನ ಚಟುವಟಿಕೆಗಳು ಭರದಿಂದ ಸಾಗುವವು. ವಿದ್ಯಾರ್ಥಿಗಳಲ್ಲಿ ಶೈಕ್ಷಣಿಕ ಪ್ರಗತಿ. ಕ್ರೀಡಾಪಟುಗಳಿಗೆ ಸ್ಪರ್ಧೆಗಳಲ್ಲಿ ಭಾಗವಹಿಸುತ್ತಿರುವವರಿಗೆ ವಿಜಯ ಮಾಲೆ.

ಕರ್ಕಾಟಕ: ಕೃಷಿ ವಿಧಾನದಲ್ಲಿ ಹೊಸತನವನ್ನು ಅಳವಡಿಸಲಿದ್ದೀರಿ. ವಾಹನ ಖರೀದಿಸುವ ಯೋಗ. ಷೇರು ಮತ್ತು ಏಜೆನ್ಸಿ ಉದ್ಯಮದಲ್ಲಿ ತುಂಬ ಉತ್ಕರ್ಷದ ದಿನ. ಉತ್ತಮ ಸಲಹೆಯಿಂದಾಗಿ ವ್ಯವಹಾರದಲ್ಲಿ ಅಭಿವೃದ್ಧಿ.

ಸಿಂಹ: ಉದ್ಯೋಗಾಕಾಂಕ್ಷಿ ಸ್ತ್ರೀಯರಿಗೆ ಉದ್ಯೋಗ ಭಾಗ್ಯ. ಅಧಿಕಾರಿಗಳ ಔದಾರ್ಯ ಹಾಗೂ ಸಾಮಾಜಿಕ ಗೌರವಾದರಗಳಿಗೆ ಪಾತ್ರರಾಗಲಿದ್ದೀರಿ. ವಯೋವೃದ್ಧರಿಗೆ ಉಸಿರಾಟದಲ್ಲಿನ ತೊಂದರೆಗಳು ಕಾಣಿಸಿಕೊಳ್ಳಲಿದೆ.

ಕನ್ಯಾ: ಸ್ತ್ರೀಯರು ಸಂಗಾತಿಯ ಪದೋನ್ನತಿಯನ್ನು ನಿರೀಕ್ಷಿಸಬಹುದು. ಪ್ರಯಾಣ ಸಾಧ್ಯತೆ. ನೆರೆಹೊರೆಯವರೊಂದಿಗೆ ಬಾಂಧವ್ಯ ವೃದ್ಧಿ. ವೈದ್ಯಕೀಯ ಚಿಕಿತ್ಸೆಯಿಂದಾಗಿ ಎದುರಾಗಲಿದ್ದ ಗಂಡಾಂತರ ಪರಿಹಾರವಾಗಲಿದೆ.

ತುಲಾ: ಪಾಲುಗಾರಿಕೆ ವ್ಯವಹಾರ ಅಥವಾ ಮಧ್ಯಸ್ಥಿಕೆಯ ವ್ಯವಹಾರಗಳಲ್ಲಿ ಮನಸ್ತಾಪ. ಉದ್ಯೋಗಾಕಾಂಕ್ಷಿಗಳಿಗೆ ಉದ್ಯೋಗ ನಿಮಿತ್ತ ಅಲೆದಾಟದ ಸಾಧ್ಯತೆ. ಭತ್ತ, ಅಕ್ಕಿ ವ್ಯಾಪಾರಿಗಳಿಗೆ ಹೆಚ್ಚಿನ ಅನುಕೂಲ.

ವೃಶ್ಚಿಕ: ವ್ಯಾಪಾರ, ಉದ್ಯಮಗಳಲ್ಲಿ ಸ್ವಲ್ಪ ಮಟ್ಟಿನ ಮಂದಗತಿ. ವಿದೇಶ ಪ್ರಯಾಣದ ಸಾಧ್ಯತೆ. ಬ್ಯಾಂಕಿಂಗ್ ಮತ್ತು ಹಣಕಾಸು ವ್ಯವಹಾರವನ್ನು ಸ್ವಲ್ಪ ಮಟ್ಟಿಗೆ ಕಡಿಮೆ ಮಾಡುವುದು ಉತ್ತಮ. ಆರೋಗ್ಯದಲ್ಲಿ ಚೇತರಿಕೆ.

ಧನು: ಉದ್ಯೋಗದ ಪ್ರತಿ ಹೆಜ್ಜೆಗಳಲ್ಲಿಯೂ ಪ್ರಗತಿ. ಭೂಮಿ, ನಿವೇಶನಗಳ ವ್ಯವಹಾರದಿಂದಾಗಿ ಹೆಚ್ಚಿನ ಧನಲಾಭ. ಗೆಳೆಯರೊಂದಿಗಿನ ಸಂಬಂಧ ಗಟ್ಟಿಯಾಗಲಿದೆ. ಶತ್ರುಗಳು ನಾಶ ಅಥವಾ ಮಿತ್ರರಾಗುವ ಸಾಧ್ಯತೆ.

ಮಕರ: ಮನೆಯಲ್ಲಿನ ಸಮಸ್ಯೆಗಳು ಪರಿಹಾರಗೊಂಡು ನೆಮ್ಮದಿ. ಗೃಹ ನಿರ್ಮಾಣ ಅಥವಾ ನವೀಕರಣದ ಸಾಧ್ಯತೆ. ನೀರಾವರಿ ಹೊಂದಿದ ಭೂಮಿಯನ್ನು ಖರೀದಿಸುವ ಸಾಧ್ಯತೆ. ಧಾನ್ಯಗಳನ್ನು ಸಂಗ್ರಹಿಸಲಿದ್ದೀರಿ.

ಕುಂಭ: ನೌಕರಸ್ಥರಿಗೆ ಬಡ್ತಿ ದೊರಕುವ ಸಾಧ್ಯತೆ. ರಾಜಕೀಯ ವ್ಯಕ್ತಿಗಳಿಗೆ ಉನ್ನತ ಸ್ಥಾನಮಾನಗಳು ದೊರಕಲಿವೆ. ಸಂಪತ್ತುಗಳಿಗೆ ಕಳ್ಳಕಾಕರ ಭಯ ಎದುರಾಗುವ ಸಾಧ್ಯತೆ. ತಾಳ್ಮೆಯ ನಡೆಯಿಂದಾಗಿ ಕಾರ್ಯಾನುಕೂಲ.


ಮೀನ: ವ್ಯವಹಾರಗಳಲ್ಲಿ ಅನುಕೂಲ. ಸಂಗ್ರಹಿಸಲ್ಪಟ್ಟ ವಸ್ತುಗಳಿಂದ ಹೆಚ್ಚಿನ ಲಾಭ. ವಾಹನ ಖರೀದಿಸುವ ಸಾಧ್ಯತೆ. ಸರ್ಕಾರಿ ನೌಕರಸ್ಥರಿಗೆ ವಿಪರೀತ ಕಾರ್ಯ ಬಾಹುಳ್ಯದಿಂದಾಗಿ ಬೇಸರ.

ನಿಮ್ಮ ಜನ್ಮದಿನ 30-ಡಿಸೆಂಬರ್ ಇಂದು ಅತ್ಯಂತ ಶುಭದಾಯಕ. ಜೀವನಮಾರ್ಗದಲ್ಲಿ ಹೊಸ ಹೆಜ್ಜೆಯನ್ನಿಡುವಿರಿ. ಸರ್ಕಾರಿ ಕೆಲಸದಲ್ಲಿರುವವರಿಗೆ ಉತ್ತಮ ವರ್ಷವಾಗಿದೆ. ಅವಿವಾಹಿತರಾಗಿದ್ದಲ್ಲಿ ಕಂಕಣ ಭಾಗ್ಯ ಕೂಡಿಬರಲಿದೆ. ಸ್ವಯಂ ಉದ್ಯೋಗಿಗಳಿಗೆ ಆರಂಭದಲ್ಲಿ ಸವಾಲುಗಳು ಎದುರಾಗಲಿವೆ. ಮಕ್ಕಳ ನಿಮಿತ್ತ ಧಾರ್ಮಿಕ ಕಾರ್ಯಗಳನ್ನು ಹಮ್ಮಿಕೊಳ್ಳುವಿರಿ.

ಪದಬಂಧ 4823 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಜಗಳಕ್ಕೊಂದು ಪರ್ಯಾಯ ಪದ (3)
3.ಮುಕ್ತಾಯ ಅಥವಾ ಕೊನೆ ಎಂದರೂ ಆದೀತು (4)
5.ಮದುವೆಯ ಗಂಡು (2)
6.ಸಂಪ್ರದಾಯವನ್ನು ಅನುಸರಿಸುವವನು (4)
7.ತಾನೇ ಊಹಿಸಿದುದು (7)
10.ಅನಿರೀಕ್ಷಿತ ಘಟನೆ (4)
11.ಮರಗಳ ಗುಂಪು (2)
13.ಸರಿಯಾದ ಸಮಯ (4)
14.ತಾರೆ ಇಲ್ಲಿ ಕಾಣುತ್ತಿದೆ (3)

ಮೇಲಿಂದ ಕೆಳಕ್ಕೆ
1.ಪೈರಿನ ನಡುವೆ ಬೆಳೆಯುವ ಹುಲ್ಲು (2)
2.ಸಮೀಪಕ್ಕೊಂದು ಪರ್ಯಾಯ ಪದ (3)
4.ಅಗಲವಾದ ತಟ್ಟೆ (3)
5.ಉಲ್ಟಾ ಆಗಿರುವ ಹುಟ್ಟುಗುಣ (3)
6.ಸೊಳ್ಳೆ ಇಲ್ಲಿದೆ (3)
8.ಈತ ಕಾಪಾಡುವವನು (3)
9.ಒನಪು ತೋರಿದಾಗ ಬಂದಿರುವ ಸ್ಮರಣೆ (3)
10.ವಾಸಸ್ಥಳವಿದು (3)
11.ತೂಕ ಮಾಡುವುದು (3)
12.ಸ್ನೇಹಿತ ಇಲ್ಲಿದ್ದಾನೆ (2)



4822ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಪೂರ್ವಗ್ರಹ3.ಸಂಸ್ಥಾನಿಕ5.ಕೆರ 7.ನವಮಿ8.ನಾವೆ10.ಶವ 11.ಕಶೇರು13.ರತಿ15.ಕಲರವ 16.ರಣಭೇರಿ
ಮೇಲಿಂದ ಕೆಳಕ್ಕೆ: 1.ಪೂರೈಕೆ 2.ಹಯನು3.ಸಂಯಮಿ4.ಕಡವೆ 6.ರಜತೋತ್ಸವ 8.ನಾಟ್ಯಮಂದಿರ10.ಶತಕ 11. ಕಕವ12.ರುಧಿರ14.ತಿಗರಿ

ಸುಡೊಕು 5209

	5		1			4		7
6				5				
	4	2	8				6	
4			5		9	2		1
	2			4			5	
3		5	2		8			6
5	7					8		9
		1	4		5			
	8			7			3	4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5208 ಸುಡೊಕು

5	7	6	8	3	1	9	4	2
9	8	2	4	5	6	7	3	1
3	4	1	2	7	9	8	5	6
4	1	7	5	6	8	3	2	9
6	5	9	3	2	7	1	8	4
8	2	3	9	1	4	5	6	7
1	6	5	7	8	2	4	9	3
7	9	8	6	4	3	2	1	5
2	3	4	1	9	5	6	7	8

ಪ್ರಧಾನಿಗಾಗಿ ಐಷಾರಾಮಿ ಕಾರು ಖರೀದಿ: ಕಾಂಗ್ರೆಸ್ ಲೇವಡಿ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ಓಡಾಟಕ್ಕೆ ವಿಶೇಷ ರಕ್ಷಣಾ ಪಡೆ (ಎಸ್‌ಪಿಜಿ) ಹೊಸ ಕಾರು ಖರೀದಿಸಿರುವುದನ್ನು ಕಾಂಗ್ರೆಸ್ ಟೀಕಿಸಿದೆ. ಐಷಾರಾಮಿ ಕಾರಿನಲ್ಲಿ ಓಡಾಡಲು ಬಯಸುವವರು ಪ್ರಧಾನಿ ನರೇಂದ್ರ ಮೋದಿ ಅವರಂತೆ ಫಕೀರರಾದರೆ ಸಾಕು ಎಂದು ಕಾಂಗ್ರೆಸ್ ಲೇವಡಿ ಮಾಡಿದೆ.

'ಮೋದಿ ತಮ್ಮನ್ನು ತಾವು ಫಕೀರ, ಸಂತ ಎಂದೆಲ್ಲ ಕರೆದುಕೊಳ್ಳುತ್ತಾರೆ. ಆದರೆ ಮೋದಿ ₹8,000 ಬೆಲೆಯ ವಿಮಾನ, ₹20 ಕೋಟಿಯ ಕಾರಿನಲ್ಲಿ ಓಡಾಡುತ್ತಾರೆ. ಮನೆ ನಿರ್ಮಿಸಲು ₹2,000 ಕೋಟಿ ವೆಚ್ಚ ಮಾಡುತ್ತಾರೆ. ಹೀಗೆ ಐಷಾರಾಮಿ ಬದುಕು ಬದುಕಲು ಎಲ್ಲರೂ ಮೋದಿ ಅವರಂತೆ ಸಂತರಾಗಬೇಕು' ಎಂದು ಕಾಂಗ್ರೆಸ್ ವಕ್ತಾರ ಗೌರವ್ ವಲ್ಲಭ್ ಲೇವಡಿ ಮಾಡಿದ್ದಾರೆ.

'ಎರಡು ವರ್ಷಗಳಲ್ಲಿ ಲಕ್ಷಾಂತರ ಜನರು ಕೆಲಸ ಕಳೆದುಕೊಂಡಿದ್ದಾರೆ. ಲಕ್ಷಾಂತರ ಜನರ ವೇತನ ಕಡಿತವಾಗಿದೆ. ದೇಶದಾದ್ಯಂತ ಉದ್ಯಮಗಳ ವಹಿವಾಟು ಕುಸಿದಿದೆ. ಆದರೆ ಆಗ್ಗಾಗ್ಗೆ ಕಾರು ಬದಲಿಸುವ ಪ್ರಧಾನಿಯವರ ಕ್ರಮ ಮಾತ್ರ ಬದಲಾಗಿಲ್ಲ. ಎಸ್‌ಪಿಜಿ ನಿಯಮಗಳ ಪ್ರಕಾರ ಪ್ರಧಾನಿ ಅವರ ಓಡಾಟಕ್ಕೆ ಬಳಸುವ ಕಾರನ್ನು ಪ್ರತಿ ಆರು ವರ್ಷಕ್ಕೆ ಒಮ್ಮೆ ಬದಲಿಸಲಾಗುತ್ತದೆ. 2014ರಲ್ಲಿ ಅಧಿಕಾರಕ್ಕೆ ಬಂದ ನಂತರ ಪ್ರಧಾನಿ ಮೋದಿ ಅವರ ಓಡಾಟಕ್ಕೆ ಬಿಎಂಡಬ್ಲ್ಯು 7 ಸೀರಿಸ್ ಸೆಡಾನ್ ಬಳಸಲಾಗುತ್ತಿತ್ತು. 2017ರಲ್ಲಿ ಟೊಯೊಟಾ ಲ್ಯಾಂಡ್ ಕ್ರೂಸರ್ ಖರೀದಿಸಲಾಯಿತು. 2019ರಲ್ಲಿ ಲ್ಯಾಂಡ್ ರೋವರ್ ಎಸ್‌ಯುವಿ ಖರೀದಿಸಲಾಯಿತು. ಈಗ 2021ರಲ್ಲಿ ಮರ್ಸಿಡೆಸ್ ಬೆಂಜ್ ಎಸ್ ಕ್ಲಾಸ್ ಖರೀದಿಸಲಾಗಿದೆ. ನೀವು ಕಾರನ್ನು ಖರೀದಿಸುವುದಾದರೂ ಏಕೆ?' ಎಂದು ಗೌರವ್ ವಲ್ಲಭ್ ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪ್ರಧಾನಿ ಓಡಾಟಕ್ಕೆ ಅತಿ ಸುರಕ್ಷತೆಯ ಹೊಸ ಕಾರು


ದೇಶದ ಪ್ರಧಾನಿಯ ರಕ್ಷಣೆಯ ಹೊಣೆ ಹೊತ್ತಿರುವ ವಿಶೇಷ ರಕ್ಷಣಾ ಗುಂಪು (ಎಸ್‌ಪಿಜಿ), ಪ್ರಧಾನಿ ನರೇಂದ್ರ ಮೋದಿ ಅವರ ಓಡಾಟಕ್ಕೆ ಬಳಸುವ ಕಾರ್‌ ಅನ್ನು ಬದಲಿಸಿದೆ. ಮೋದಿ ಅವರ ಓಡಾಟಕ್ಕೆ ಬಳಸುತ್ತಿದ್ದ ಸೆಡಾನ್ ಬಿಎಂಡಬ್ಲ್ಯು 7 ಸೀರಿಸ್ ಬದಲಿಗೆ, ಈಗ ಮರ್ಸಿಡೀಸ್ ಬೆಂಜ್ ಮೆಬ್ಯಾಕ್ 650 ಗಾರ್ಡ್ ಸೆಡಾನ್ ಅನ್ನು ಎಸ್‌ಪಿಜಿ ಖರೀದಿಸಿದೆ. ಇದು ಸದ್ಯ ಮಾರುಕಟ್ಟೆಯಲ್ಲಿ ಲಭ್ಯವಿರುವ ಅತ್ಯಂತ ಸುರಕ್ಷಿತ ಸೆಡಾನ್ ಎನಿಸಿದೆ. ಗುಂಡು ಮತ್ತು ಬಾಂಬ್ ದಾಳಿಯನ್ನೂ ತಡೆದುಕೊಳ್ಳುವ ಸಾಮರ್ಥ್ಯವಿರುವ ಈ ಕಾರ್ ಅನ್ನು ವಿಪಿಎಎಂ–ವಿಆರ್–10 ಮಾನದಂಡಗಳಿಗೆ ಅನುಗುಣವಾಗಿ ವಿನ್ಯಾಸ ಮಾಡಲಾಗಿದೆ

ವೈಶಿಷ್ಟ್ಯಗಳು

ಈ ಕಾರಿನ ಕಿಟಕಿ ಗಾಜುಗಳು, ಮುಂಬದಿ ಮತ್ತು ಹಿಂಬದಿಯ ವಿಂಡ್‌ಶೀಲ್ಡ್‌ಗಳಿಗೆ ಪಾಲಿಕಾರ್ಬೊನೇಟ್ ಲೇಪನವನ್ನು ಮಾಡಲಾಗಿದೆ. ಎಕೆ–47 ರೈಫಲ್‌ನಿಂದ ಹಾರಿಸಿದ ಗುಂಡು ಒಳಹೋಗದಂತೆ ತಡೆಯುವ ಸಾಮರ್ಥ್ಯ ಈ ಗಾಜಿಗೆ ಇದೆ

ಕಾರಿನಿಂದ ಕೇವಲ 2 ಮೀಟರ್ ಅಂತರದಲ್ಲಿ 15 ಕೆ.ಜಿ.ಯಷ್ಟು ಟಿಎಂಟಿಯನ್ನು ಸ್ಫೋಟಿಸಿದರೂ, ಕಾರಿನ ಒಳಗೆ ಇರುವವರಿಗೆ ಯಾವುದೇ ಗಾಯಗಳಾಗುವುದಿಲ್ಲ

ಕಾರಿನ ಒಳಭಾಗದಲ್ಲಿ ತುರ್ತು ಬಳಕೆಗೆ ಆಮ್ಲಜನಕ ಪೂರೈಕೆ ವ್ಯವಸ್ಥೆ ಮಾಡಲಾಗಿದೆ. ರಸಾಯನಿಕ ಮತ್ತು ಅನಿಲ ದಾಳಿಗಳಂತಹ ಸಂದರ್ಭದಲ್ಲಿ ಒಳಗಿರುವವರು ವಿಷಗಾಳಿ ಸೇವಿಸುವುದನ್ನು ಈ ವ್ಯವಸ್ಥೆ ತಡೆಯುತ್ತದೆ



4 ಟನ್, ತೂಕ

6,000 ಸಿ.ಸಿ. ಸಾಮರ್ಥ್ಯದ ವಿ–12 ವಿನ್ಯಾಸದ ಎಂಜಿನ್ ಈ ಕಾರಿನಲ್ಲಿದೆ

160 ಕಿ.ಮೀ. ಕಾರಿನ ಗರಿಷ್ಠ ವೇಗ

ಕಾರಿನ ಇಂಧನ ಟ್ಯಾಂಕ್‌ಗೆ ವಿಶೇಷ ಕವಚ ಅಳವಡಿಸಲಾಗಿದೆ. ಇದು ಗುಂಡು ಮತ್ತು ಸ್ಫೋಟದ ದಾಳಿಗಳನ್ನು ತಡೆದುಕೊಳ್ಳುವ ಸಾಮರ್ಥ್ಯ ಹೊಂದಿದೆ. ಅಪಘಾತ ಅಥವಾ ದಾಳಿಗಳ ಸಂದರ್ಭದಲ್ಲಿ ಇಂಧನ ಟ್ಯಾಂಕ್‌ಗೆ ರಂಧ್ರವಾದರೂ, ಅದು ಸ್ವಯಂಚಾಲಿತವಾಗಿ ಮುಚ್ಚಿಕೊಳ್ಳುವ ಸಾಮರ್ಥ್ಯ ಹೊಂದಿದೆ

ಕಾರಿನ ಪ್ಲಾಟ್‌ಫಾರಂ ಮತ್ತು ದೇಹದ ನಿರ್ಮಾಣದಲ್ಲಿ ದಪ್ಪನೆಯ ಸ್ಟೀಲ್ ಅನ್ನು ಬಳಸಲಾಗಿದೆ. ವಿಶೇಷ ಕವಚಗಳನ್ನು ಅಳವಡಿಸಲಾಗಿದೆ. ಇವು ಎಕೆ–47 ರೈಫಲ್, ಅತ್ಯಾಧುನಿಕ ಮತ್ತು ಪ್ರಬಲ ಸ್ನೈಪರ್‌ನಿಂದ ಹಾರಿಸಿದ ಗುಂಡು ಒಳಹೋಗುವುದನ್ನು ತಡೆಯುವ ಸಾಮರ್ಥ್ಯ ಈ ಕಾರಿನ ಕ್ಯಾಬಿನ್‌ಗೆ ಇದೆ

ರನ್‌ಫ್ಲ್ಯಾಟ್ ಟೈರ್‌ಗಳು: ಈ ಕಾರಿನಲ್ಲಿ ರನ್‌ಫ್ಲ್ಯಾಟ್ ಟೈರ್‌ಗಳನ್ನು ಅಳವಡಿಸಲಾಗಿದೆ. ಪಂಕ್ಚರ್ ಮತ್ತು ಟೈರ್ ಸಿಡಿದು ಹೋದರೂ, ಕನಿಷ್ಠ 50 ಕಿ.ಮೀ. ದೂರದವರೆಗೆ ಕಾರನ್ನು ಚಲಾಯಿಸಿಕೊಂಡು ಹೋಗಲು ಈ ಟೈರ್‌ಗಳು ಅನುವು ಮಾಡಿಕೊಡುತ್ತವೆ

ಪ್ರಜಾವಾಣಿ ಗ್ರಾಫಿಕ್ಸ್

ಉತ್ತರ ಪ್ರದೇಶ: ಕೇಂದ್ರ ಸಚಿವ ಅನುರಾಗ್ ಠಾಕೂರ್ ವಿಶ್ವಾಸ

'ಈ ಬಾರಿ ಹೆಚ್ಚು ಸ್ಥಾನ ಗೆಲ್ಲುತ್ತೇವೆ'

ಜನತಂತ್ರದ ಹಬ್ಬ 2021

ವಾರಾಣಸಿ (ಪಿಟಿಐ): ಕಳೆದ ಸಲದ ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯಲ್ಲಿ ಪಡೆದಿದ್ದಕ್ಕಿಂತ ಹೆಚ್ಚು ಸ್ಥಾನಗಳನ್ನು ಈ ಬಾರಿಯ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಗೆಲ್ಲಲಿದೆ ಎಂದು ಕೇಂದ್ರ ಸಚಿವ ಅನುರಾಗ್ ಠಾಕೂರ್ ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿಯ ಉಪ ಉಸ್ತುವಾರಿ ಆಗಿರುವ ಅವರು, ಇಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಈ ಮಾತು ಹೇಳಿದ್ದಾರೆ. 'ಯೋಗಿ ಆದಿತ್ಯನಾಥ ನೇತೃತ್ವದ ಸರ್ಕಾರವು, 'ಗೂಂಡಾರಾಜ್' ವಿರುದ್ಧ ತೆಗೆದುಕೊಂಡ ಕಠಿಣ ಕ್ರಮಗಳು, ಅಭೂತಪೂರ್ವವಾದ ಅಭಿವೃದ್ಧಿ ಕೆಲಸಗಳು ಮತ್ತು ಸಾರ್ವಜನಿಕ ಕಲ್ಯಾಣ ಕಾರ್ಯಕ್ರಮಗಳ ಕಾರಣ ಜನರಿಂದ ಉತ್ತಮ ಬಿಜೆಪಿ ಪರವಾದ ಅಲೆ ಸೃಷ್ಟಿಯಾಗಿದೆ' ಎಂದು ಅವರು ಹೇಳಿದ್ದಾರೆ.

'ನಾವು ರೈತರ ಒಳಿತಿಗಾಗಿ ಕೃಷಿ ಕಾನೂನುಗಳನ್ನು ಜಾರಿಗೆ ತಂದಿದ್ದೆವು. ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದಂತೆ, ಈ ಕಾನೂನುಗಳ ಕುರಿತು ನಮ್ಮಿಂದ ರೈತರ ಮನವೊಲಿಸಲಾಗಲಿಲ್ಲ. ಕೃಷಿ ನೀತಿಗಳನ್ನು ಹಿಂಪಡೆಯುವ ಮೊದಲು ನಾನು ಮೀರತ್ ಮತ್ತು ಸಹಾರನ್‌ಪುರಕ್ಕೆ ಭೇಟಿ ನೀಡಿದ್ದೆ. ಆಗಲೂ ಕೂಡಾ ಬಿಜೆಪಿ ಬಗೆಗಿನ ಜನರ ವಿಶ್ವಾಸ ಕಡಿಮೆ ಆಗಿರಲಿಲ್ಲ. ಬಿಜೆಪಿ ರ‍್ಯಾಲಿಗಳಲ್ಲಿ ದೊಡ್ಡಮಟ್ಟದಲ್ಲಿ ಜನರು ಸೇರುತ್ತಿದ್ದಾರೆ' ಎಂದಿದ್ದಾರೆ.

'ಮಹಿಳೆಯರ ವಿರುದ್ಧ ದೌರ್ಜನ್ಯವನ್ನು ಹುಟ್ಟುಹಾಕಿದ ಪಕ್ಷಗಳ ಜೊತೆ ಕಳೆದ ಬಾರಿ ಕಾಂಗ್ರೆಸ್ ಚುನಾವಣಾಪೂರ್ವ ಮೈತ್ರಿ ಮಾಡಿಕೊಂಡಿತ್ತು. ಅತೀಕ್ ಅಹ್ಮದ್ ಮತ್ತು ಮುಕ್ತರ್ ಅನ್ಸಾರಿ ಅವರಂಥ ಗೂಂಡಾಗಳನ್ನು ಪ್ರಿಯಾಂಕಾ ಗಾಂಧಿ ಒಪ್ಪಿಕೊಂಡಿರಲಿಲ್ಲವೇ' ಎಂದು ಅವರು ಪ್ರಶ್ನಿಸಿದ್ದಾರೆ.

'ಯೋಗಿ ಆದಿತ್ಯನಾಥ ಅವರ ಆಡಳಿತದ ಮೇಲೆ ಮಹಿಳೆಯರಿಗೆ ಭರವಸೆ ಇರುವುದರಿಂದ ಅವರು ಕತ್ತಲಲ್ಲೂ ಮನೆಯಿಂದ ಹೊರಗೆ ಕಾಲಿಡುವ ಧೈರ್ಯ ಮಾಡುತ್ತಿದ್ದಾರೆ. ಮಾಫಿಯಾರಾಜ್ ವಿರುದ್ಧ ಆದಿತ್ಯನಾಥ ಅವರು ತೆಗೆದುಕೊಂಡ ಕ್ರಮಗಳಿಂದ ಉದ್ಯಮಿಗಳಿಗೂ ಆತ್ಮವಿಶ್ವಾಸ ಬಂದಿದೆ' ಎಂದು ಅವರು ಹೇಳಿದ್ದಾರೆ.

'ಕಾನೂನು ಮತ್ತು ಸುವ್ಯವಸ್ಥೆ ಉತ್ತಮವಾಗಿರುವ ಜೊತೆಗೆ ಉದ್ಯೋಗಗಳಿಗೆ ನೇಮಕಾತಿಯೂ ಪಾರದರ್ಶಕವಾಗಿ ನಡೆಯುತ್ತಿದೆ. ಲಕ್ಷಾಂತರ ಜನರಿಗೆ ಪಕ್ಕಾ ಮನೆಗಳು, ವಿದ್ಯುತ್ ಸಂಪರ್ಕ, ಆಯುಷ್ಮಾನ್ ಭಾರತ ಯೋಜನೆ ಅಡಿ ಲಾಭ, ಉಚಿತ ಪಡಿತರ ದೊರಕುತ್ತಿವೆ. ಈ ಎಲ್ಲಾ ಕಲ್ಯಾಣ ಕಾರ್ಯಕ್ರಮಗಳು ಬಿಜೆಪಿಯನ್ನು ಮತ್ತೆ ಅಧಿಕಾರಕ್ಕೆ ತರಲಿವೆ' ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.



ಫಿರೋಜಾಬಾದ್‌ನಲ್ಲಿ ಕಾಂಗ್ರೆಸ್ ಆಯೋಜಿಸಿದ್ದ 'ಶಕ್ತಿ ಸಂವಾದ' ಕಾರ್ಯಕ್ರಮದಲ್ಲಿ ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಯುವತಿಯರ ಜತೆ ಮಾತನಾಡಿದರು —ಪಿಟಿಐ ಚಿತ್ರ

ಮಣಿಪುರ: ಎನ್‌ಪಿಪಿ ನಾಯಕ ಬಿಜೆಪಿಗೆ

ನವದೆಹಲಿ (ಪಿಟಿಐ): ಮಣಿಪುರ ಸಚಿವ, ನ್ಯಾಷನಲ್ ಪೀಪಲ್ಸ್ ಪಾರ್ಟಿ(ಎನ್‌ಪಿಪಿ) ನಾಯಕ ಲೆಟ್‌ಪಾವೊ ಹಾವೊಕಿಪ್ ಅವರು ಗುರುವಾರ ಬಿಜೆಪಿ ಸೇರಿದರು.

ಮಣಿಪುರ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಉಸ್ತುವಾರಿ ಕೇಂದ್ರ ಸಚಿವ ಭೂಪೇಂದ್ರ ಯಾದವ್ ಮತ್ತು ಉಪಉಸ್ತುವಾರಿ ಬಿಜೆಪಿ ರಾಷ್ಟ್ರೀಯ ವಕ್ತಾರ ಸಂಬಿತ್ ಪಾತ್ರ ಅವರು ಲೆಟ್‌ಪಾವೊ ಅವರನ್ನು ಪಕ್ಷಕ್ಕೆ ಬರಮಾಡಿಕೊಂಡರು.

ಪಕ್ಷಕ್ಕೆ ಲೆಟ್‌ಪಾವೊ ಅವರನ್ನು ಸ್ವಾಗತಿಸಿದ ಭೂಪೇಂದ್ರ ಯಾದವ್, ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವ ಮತ್ತು ಬಿಜೆಪಿ ಸರ್ಕಾರಗಳ ಉತ್ತಮ ಆಡಳಿತದಿಂದ ಪ್ರಭಾವಿತರಾಗಿ ಲೆಟ್‌ಪಾವೊ ಬಿಜೆಪಿ ಸೇರುತ್ತಿದ್ದಾರೆ ಎಂದರು.

ಎನ್‌ಪಿಪಿ ಮಣಿಪುರದಲ್ಲಿ ಬಿಜೆಪಿಯ ಮೈತ್ರಿಪಕ್ಷವಾಗಿದೆ. ಬಿಜೆಪಿ ನೇತೃತ್ವದ ಮಣಿಪುರ ಸರ್ಕಾರದಲ್ಲಿ ಲೆಟ್‌ಪಾವೊ ಅವರು ಯುವಜನ ಮತ್ತು ಕ್ರೀಡಾ ಸಚಿವರಾಗಿದ್ದರು.

60 ಸ್ಥಾನಗಳ ಮಣಿಪುರ ವಿಧಾನಸಭೆ ಚುನಾವಣೆಯಲ್ಲಿ ಎನ್‌ಪಿಪಿ ಎಲ್ಲಾ ಕ್ಷೇತ್ರಗಳಲ್ಲೂ ಸ್ವತಂತ್ರವಾಗಿ ಸ್ಪರ್ಧಿಸಲಿದೆ ಎಂದು ಎನ್‌ಪಿಪಿ ಮುಖ್ಯಸ್ಥ ಮತ್ತು ಮೇಘಾಲಯ ಮುಖ್ಯಮಂತ್ರಿ ಕಾನ್ರಾಡ್ ಸಂಗ್ಮಾ ಈಗಾಗಲೇ ಘೋಷಿಸಿದ್ದಾರೆ.

'ಸಿಎಸ್‌ಗೆ ಚುನಾವಣೆ ಹೊಣೆ ಬೇಡ'

ಲಖನೌ (ಪಿಟಿಐ): ಉತ್ತರ ಪ್ರದೇಶ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ(ಗೃಹ) ಅವನೀಶ್ ಅವಸ್ಥಿ ಅವರಿಂದ ವಿಧಾನಸಭೆ ಚುನಾವಣಾ ಪ್ರಕ್ರಿಯೆಗೆ ತೊಂದರೆ ಆಗಬಹುದು. ಆದ್ದರಿಂದ ಅವರನ್ನು ಚುನಾವಣಾ ಪ್ರಕ್ರಿಯೆಯಿಂದ ದೂರ ಇಡಬೇಕು ಎಂದು ಚುನಾವಣಾ ಆಯೋಗಕ್ಕೆ ಕಾಂಗ್ರೆಸ್ ಮನವಿ ಮಾಡಿದೆ.

ಮುಖ್ಯ ಚುನಾವಣಾ ಆಯುಕ್ತ ಸುಶೀಲ್ ಚಂದ್ರ ಮತ್ತು ಚುನಾವಣಾ ಆಯುಕ್ತರಾದ ರಾಜೀವ್ ಕುಮಾರ್ ಮತ್ತು ಅನೂಪ್ ಚಂದ್ರ ಪಾಂಡೆ ಅವರು ವಿವಿಧ ರಾಜಕೀಯ ಪಕ್ಷಗಳ ಜೊತೆ ಸರಣಿ ಸಭೆ ನಡೆಸಿದರು. ಈ ವೇಳೆ ಎಲ್ಲಾ ರಾಜಕೀಯ ಪಕ್ಷಗಳು ಹಲವು ಬೇಡಿಕೆಗಳನ್ನು ಆಯುಕ್ತರ ಮುಂದೆ ಇರಿಸಿದವು.

ಮೈತ್ರಿಗೆ ಕಾಯುತ್ತಿಲ್ಲ: ಕಾಂಗ್ರೆಸ್

ಲಖನೌ (ಪಿಟಿಐ): 'ಉತ್ತರ ಪ್ರದೇಶ ಚುನಾವಣೆಯಲ್ಲಿ ಯಾವುದೇ ಪಕ್ಷದ ಜತೆಗೆ ಮೈತ್ರಿ ಮಾಡಿಕೊಳ್ಳಲು ಕಾಂಗ್ರೆಸ್ ಕಾತರದಿಂದ ಕುಳಿತಿಲ್ಲ' ಎಂದು ಐಐಸಿಸಿ ಕಾರ್ಯದರ್ಶಿ ರಾಜೇಶ್ ತಿವಾರಿ ಬುಧವಾರ ಹೇಳಿದ್ದಾರೆ.

'ದ್ವೇಷಪೂರಿತ ಆಡಳಿತದಿಂದ ಉತ್ತರ ಪ್ರದೇಶವನ್ನು ಹೇಗೆ ಹೊರಗೆ ತರಬೇಕು ಎಂಬುದಕ್ಕೆ ಕಾಂಗ್ರೆಸ್ ಕಾರ್ಯಯೋಜನೆ ಹಾಕಿಕೊಂಡಿದೆ. ಅದನ್ನು ಕಾರ್ಯಗತಗೊಳಿಸಲು ಉತ್ತರ ಪ್ರದೇಶದ 403 ವಿಧಾನಸಭಾ ಕ್ಷೇತ್ರಗಳಲ್ಲೂ ಕಾರ್ಯಕರ್ತರನ್ನು ತಯಾರು ಮಾಡಲಾಗಿದೆ.

75 ಜಿಲ್ಲೆಗಳಲ್ಲಿ ಒಟ್ಟು 2,400 ಕಾರ್ಯಕರ್ತರನ್ನು ಇದಕ್ಕಾಗಿ ನಿಯೋಜಿಸಲಾಗಿದೆ' ಎಂದು ಅವರು ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ಇಸ್ರೇಲ್: ಪ್ಯಾಲೆಸ್ಟೀನ್ ಅಧ್ಯಕ್ಷರ ಭೇಟಿ

ಜೆರುಸಲೆಂ (ಎಎಫ್‌ಪಿ): ಹನ್ನೊಂದು ವರ್ಷಗಳ ಬಳಿಕ ಪ್ಯಾಲೆಸ್ಟೀನ್‌ನ ಅಧ್ಯಕ್ಷ ಮೊಹಮ್ಮದ್ ಅಬ್ಬಾಸ್ ಅವರು ಇಸ್ರೇಲ್‌ಗೆ ಭೇಟಿ ನೀಡಿದ್ದು, ಇಸ್ರೇಲ್‌ನ ರಕ್ಷಣಾ ಸಚಿವ ಬೆನ್ನಿ ಗಾಂಟ್ಜ್ ಅವರೊಂದಿಗೆ ಟೆಲ್ ಅವೀವ್ ಉಪನಗರದ ಬೆನ್ನಿ ಅವರ ನಿವಾಸದಲ್ಲಿ ಮಾತುಕತೆ ನಡೆಸಿದ್ದಾರೆ.

ಇದರ ಫಲವೆಂಬಂತೆ ಆಕ್ರಮಿತ ಪಶ್ಚಿಮ ದಂಡೆಯಲ್ಲಿ ವಿಶ್ವಾಸ ಕುದುರಿಸುವ ಕ್ರಮಗಳನ್ನು ಒಳಗೊಂಡ ಪ್ಯಾಕೇಜ್ ಅನ್ನು ಇಸ್ರೇಲ್ ಪ್ರಕಟಿಸಿದೆ.

'ಇಸ್ರೇಲ್ ಮತ್ತು ಪ್ಯಾಲೆಸ್ಟೀನ್‌ಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಆರ್ಥಿಕ ಮತ್ತು ನಾಗರಿಕ ಕ್ರಮಗಳನ್ನು ಜಾರಿಗೊಳಿಸುವುದು ಹಾಗೂ ಭಯೋತ್ಪಾದನೆ ಮತ್ತು ಹಿಂಸಾಚಾರವನ್ನು ಹತ್ತಿಕ್ಕುವ ಸಲುವಾಗಿ ಭದ್ರತಾ ಸಮನ್ವಯ ಸಾಧಿಸುವ ನಿಟ್ಟಿನಲ್ಲಿ ನಾವು ಮಾತುಕತೆ ನಡೆಸಿದ್ದೇವೆ' ಎಂದು ಸಭೆಯ ಬಳಿಕ ಗಾಂಟ್ಜ್ ತಿಳಿಸಿದರು.



ಬ್ರೆಜಿಲ್‌ನ ಬಹಿಯಾ ರಾಜ್ಯದ ಇಟಾಪೆಟಿಂಗಾ ನಗರದಲ್ಲಿ ಜಲಾವೃತಗೊಂಡಿರುವ ಪ್ರದೇಶಗಳು ಎಎಫ್‌ಪಿ ಚಿತ್ರ

ಬ್ರೆಜಿಲ್: ಪ್ರವಾಹ, ಸಂಕಷ್ಟದಲ್ಲಿ 4.70 ಲಕ್ಷ ಜನ

ಬ್ರೆಸಿಲಿಯಾ (ಎಪಿ): ಈಶಾನ್ಯ ಬ್ರೆಜಿಲಿಯನ್ ಬಹಿಯಾ ರಾಜ್ಯದಲ್ಲಿ ಭಾರೀ ಮಳೆ ಸುರಿಯುತ್ತಿದ್ದು, 116 ನಗರಗಳಲ್ಲಿ ತುರ್ತು ಪರಿಸ್ಥಿತಿ ಘೋಷಿಸಲಾಗಿದೆ.

ಬ್ರೆಜಿಲ್‌ನ ಉತ್ತರ ಮತ್ತು ಆಗ್ನೇಯ ಪ್ರಾಂತ್ಯದ ಇತರ ಐದು ರಾಜ್ಯಗಳಲ್ಲಿ ಸಹ ಪ್ರವಾಹ ಉಂಟಾಗಿದೆ.

ಬಹಿಯಾದಲ್ಲಿ ಪ್ರವಾಹವು 4.70 ಲಕ್ಷಕ್ಕೂ ಹೆಚ್ಚು ಜನರನ್ನು ಬಾಧಿಸಿದ್ದು, 43 ಸಾವಿರ ಜನರನ್ನು ಸ್ಥಳಾಂತರಿಸಲಾಗಿದೆ. ಇದುವರೆಗೆ 21 ಮಂದಿ ಮೃತಪಟ್ಟಿದ್ದು, 358 ಮಂದಿ ಗಾಯಗೊಂಡಿದ್ದಾರೆ.

ಸುಡಾನ್: ಚಿನ್ನದ ಗಣಿ ಕುಸಿತ– 38 ಜನರ ಸಾವು

ಕೈರೊ (ಎಪಿ): ಸುಡಾನ್‌ನ ರಾಜಧಾನಿ ಖಾರ್ಟೂಮ್‌ನಿಂದ 700 ಕಿ.ಮೀ. ದೂರದ ವೆಸ್ಟ್ ಕಾರ್ಡೊಫಾನ್ ಪ್ರಾಂತ್ಯದ ಫುಜ ಎಂಬಲ್ಲಿ ಮಂಗಳವಾರ ಚಿನ್ನದ ಗಣಿಯೊಂದು ಕುಸಿದುದರಿಂದ ಕನಿಷ್ಠ 38 ಮಂದಿ ಮೃತಪಟ್ಟಿದ್ದಾರೆ.

ಈ ಗಣಿಯಲ್ಲಿ ಹಿಂದೆ ಗಣಿಗಾರಿಕೆ ನಡೆಯುತ್ತಿದ್ದರೂ, ಬಳಿಕ ಅದನ್ನು ಮುಚ್ಚಲಾಗಿತ್ತು. ಈಚೆಗೆ ಭದ್ರತಾ ಸಿಬ್ಬಂದಿ ಸಹ ಸ್ಥಳದಿಂದ ನಿರ್ಗಮಿಸಿದ್ದರು. ಸ್ಥಳೀಯರು ಮತ್ತೆ ಗಣಿಯೊಳಗೆ ತೆರಳಿ ಅಕ್ರಮವಾಗಿ ಗಣಿಗಾರಿಕೆ ನಡೆಸುತ್ತಿದ್ದ ವೇಳೆ ಈ ದುರಂತ ಸಂಭವಿಸಿದೆ.

ಆಫ್ರಿಕಾ ಖಂಡದಲ್ಲಿ ಅತಿ ಹೆಚ್ಚು ಚಿನ್ನದ ಗಣಿಗಾರಿಕೆ ನಡೆಸುವ ಎರಡನೇ ದೊಡ್ಡ ದೇಶ ಸುಡಾನ್.

2020ರಲ್ಲಿ ಇಲ್ಲಿನ ಗಣಿಗಳಿಂದ 36.6 ಟನ್ ಚಿನ್ನವನ್ನು ಹೊರತೆಗೆಯಲಾಗಿತ್ತು. ಚಿನ್ನದ ಕಳ್ಳಸಾಗಣೆ ಪ್ರಕರಣಗಳು ಹೆಚ್ಚಿದ ಕಾರಣ ಕಳೆದ ಎರಡು ವರ್ಷಗಳಿಂದ ಚಿನ್ನದ ಗಣಿಗಾರಿಕೆ ಮೇಲೆ ನಿಯಂತ್ರಣ ಹೇರಲಾಗಿದೆ.

ಆದರೂ ಸಹ ಸುಡಾನ್‌ನಲ್ಲಿ ಮೇಲಿಂದ ಮೇಲೆ ಗಣಿ ದುರಂತಗಳು ಸಂಭವಿಸುತ್ತಲೇ ಇವೆ.

'ಅಧಿಕಾರಕ್ಕೆ ಬಂದರೆ ₹ 50ಕ್ಕೆ ಮದ್ಯ'

ಅಮರಾವತಿ (ಪಿಟಿಐ): ಆಂಧ್ರಪ್ರದೇಶದಲ್ಲಿ ಬಿಜೆಪಿಯು, 2024ರ ವಿಧಾನಸಭೆ ಚುನಾವಣೆಯಲ್ಲಿ ಅಧಿಕಾರಕ್ಕೆ ಬಂದರೆ ಹಲವು ಸೌಲಭ್ಯಗಳ ಜೊತೆಗೆ ಪ್ರತಿ ಬಾಟಲಿ ಮದ್ಯಕ್ಕೆ ₹ 50 ನೀಡುವುದಾಗಿ ಆಶ್ವಾಸನೆ ನೀಡಿದೆ.


ಮಂಗಳವಾರ ನಡೆದ ಸಾರ್ವಜನಿಕ ಸಭೆಯಲ್ಲಿ ಬಿಜೆಪಿ ಆಂಧ್ರ ಘಟಕದ ಅಧ್ಯಕ್ಷ ಸೋಮು ವೀರರಾಜು ಅವರು, ಮುಖ್ಯಮಂತ್ರಿ ವೈ.ಎಸ್. ಜಗನ್ ಮೋಹನ್ ರೆಡ್ಡಿ ನೇತೃತ್ವದ ಸರ್ಕಾರ ಮತ್ತು ವಿರೋಧಪಕ್ಷ ತೆಲುಗು ದೇಶಂ ಪಕ್ಷದ ವಿರುದ್ಧ ವಾಗ್ದಾಳಿ ನಡೆಸಿ, 'ಈ ರಾಜ್ಯದಲ್ಲಿ ಹೇರಳ ಸಂಪನ್ಮೂಲಗಳಿದ್ದರೂ ರಾಜಕೀಯ ಶಕ್ತಿಗಳು ರಾಜ್ಯವನ್ನು ಅಭಿವೃದ್ಧಿಪಡಿಸುವಲ್ಲಿ ವಿಫಲವಾಗಿವೆ' ಎಂದು ದೂರಿದರು.

'ರಾಜ್ಯದಲ್ಲಿ ಒಂದು ಕೋಟಿ ಜನರು ಮದ್ಯ ಸೇವಿಸುತ್ತಿದ್ದಾರೆ ಎಂದು ನಾನು ನಿಮಗೆ ಹೇಳುತ್ತಿದ್ದೇನೆ. ನೀವೆಲ್ಲರೂ ಬಿಜೆಪಿಗೆ ಮತ ಹಾಕಿದರೆ ₹ 75ಕ್ಕೆ ಅಗ್ಗದ ಮದ್ಯ ಕೊಡುತ್ತೇವೆ.

ಆದಾಯ ಚೆನ್ನಾಗಿದ್ದಾರೆ ₹ 50 ಕ್ಕೆ ಒಂದು ಬಾಟಲಿ ಮದ್ಯ (ಕೆಟ್ಟ ಮದ್ಯವಲ್ಲ) ಕೊಡುತ್ತೇವೆ' ಎಂದ ರಾಜು ಅವರು ಆಂಧ್ರದಲ್ಲಿ ಮದ್ಯದ ಬೆಲೆ ಈಗ ಹೆಚ್ಚಾಗಿದೆ ಎಂದು ಪರೋಕ್ಷವಾಗಿ ಸೂಚಿಸಿದರು.

ಬಿಜೆಪಿಯು ಅಧಿಕಾರಕ್ಕೆ ಬಂದರೆ ಮೂರು ವರ್ಷಗಳಲ್ಲಿ ರಾಜಧಾನಿ ಅಮರಾವತಿಯನ್ನು ಅಭಿವೃದ್ಧಿ ಪಡಿಸಲು ಬಿಜೆಪಿಯು ಬದ್ಧವಾಗಿದೆ' ಎಂದು ರಾಜು ಅವರು ಪ್ರತಿಪಾದಿಸಿದರು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,233
ಇಂದಿನ ಅಂತ್ಯ	17,213
▼	20
ದಿನದ ಕನಿಷ್ಠ	17,176

ವಿನಿಮಯ ದರ

$ ಡಾಲರ್	74.71
£ ಪೌಂಡ್	100.34
€ ಯುರೊ	84.46
¥ ಯೆನ್ (100ಕ್ಕೆ)	65

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹515
12 ಮೊಟ್ಟೆಗೆ	₹68
ಮೈಸೂರು	
100 ಮೊಟ್ಟೆಗೆ	₹515

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1310 (1320)
ಸೋಯಾ (ರಿಫೈನ್ಡ್)	₹1200 (1200)
ಸೂರ್ಯಕಾಂತಿ (ರಿಫೈನ್ಡ್)	₹1260 (1260)
ಪಾಮೋಲಿನ್	₹1145 (1150)

ವರ್ಷದಿಂದ ವರ್ಷಕ್ಕೆ ತಗ್ಗುತ್ತಿದೆ 'ಎಫ್‌ಪಿಐ' ಒಳಹರಿವು

ನವದೆಹಲಿ (ಪಿಟಿಐ): ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) 2021ರಲ್ಲಿ ಭಾರತದ ಬಂಡವಾಳ ಮಾರುಕಟ್ಟೆಯಲ್ಲಿ ₹ 51 ಸಾವಿರ ಕೋಟಿ ಹೂಡಿಕೆ ಮಾಡಿದ್ದಾರೆ. ಹಿಂದಿನ ಎರಡು ವರ್ಷಗಳಿಗೆ ಹೋಲಿಸಿದರೆ ಹೂಡಿಕೆಯಲ್ಲಿ ಭಾರಿ ಇಳಿಕೆ ಕಂಡುಬಂದಿದೆ. 2019ರಲ್ಲಿ ₹ 1.35 ಲಕ್ಷ ಕೋಟಿ ಹೂಡಿಕೆ ಮಾಡಿದ್ದರು. 2020ರಲ್ಲಿ ಹೂಡಿಕೆಯ ಮೊತ್ತವು ₹ 1.03 ಲಕ್ಷ ಕೋಟಿಗಳಷ್ಟಿತ್ತು.

ಹೂಡಿಕೆದಾರರು 2021ರಲ್ಲಿ ಷೇರುಗಳ ಖರೀದಿಗೆ ₹ 26,001 ಕೋಟಿ, ಸಾಲಪತ್ರಗಳ ಖರೀದಿಗೆ ₹ 23,222 ಕೋಟಿ ಹಾಗೂ ಹೈಬ್ರಿಡ್ ಮಾರ್ಗಗಳಲ್ಲಿ ₹ 1,848 ಕೋಟಿ ಹೂಡಿಕೆ ಮಾಡಿದ್ದಾರೆ.

ವಿದೇಶಿ ಬಂಡವಾಳ ಹೂಡಿಕೆದಾರರು ಸತತ ಮೂರನೇ ವರ್ಷವೂ ದೇಶದ ಮಾರುಕಟ್ಟೆಯಲ್ಲಿ ಸಾಲಪತ್ರಗಳ ಖರೀದಿಗೆ ಹೆಚ್ಚಿನ ಗಮನ ನೀಡಿದ್ದಾರೆ. ಆದರೆ ಜಾಗತಿಕವಾಗಿ ನಗದು ಲಭ್ಯತೆ ಹೆಚ್ಚಿಗೆ ಇರುವುದು ಹಾಗೂ ಇತರೆ ಕಾರಣಗಳಿಂದಾಗಿ ಹೂಡಿಕೆಯಲ್ಲಿ ಇಳಿಕೆ ಕಾಣುವಂತಾಗಿದೆ ಎಂದು ತಜ್ಞರು ಹೇಳಿದ್ದಾರೆ.

ಡಾಲರ್ ಮೌಲ್ಯ ವೃದ್ಧಿ ಆಗಿರುವುದು, ಭಾರತವನ್ನೂ ಒಳಗೊಂಡು ಪ್ರವರ್ಧಮಾನಕ್ಕೆ ಬರುತ್ತಿರುವ ದೇಶಗಳಿಂದ ಬಂಡವಾಳ ಹೊರಹರಿವು ಸೇರಿದಂತೆ ಇನ್ನೂ ಹಲವು ಕಾರಣಗಳಿಂದಾಗಿ ಈ ವರ್ಷದಲ್ಲಿ 'ಎಫ್‌ಪಿಐ' ಒಳಹರಿವು ಕಡಿಮೆ ಆಗಿದೆ ಎಂದು ಜೂಲಿಯಸ್ ಬೇರ್ ಕಂಪನಿಯ ಕಾರ್ಯನಿರ್ವಾಹಕ ನಿರ್ದೇಶಕ ಮಿಲಿಂದ್ ಮುಚ್ಚಾಲ್ ತಿಳಿಸಿದ್ದಾರೆ.

ಮುಂಬೈ ಧಾರಣೆ

ಶೇಂಗಾ

29-12-2021

ಜಾವಾ 70/80(ಹೊಸ)	10500-10550
ಜಾವಾ 80/90(ಹೊಸ)	10400-10450
ದಪ್ಪ ಮಧ್ಯಪ್ರದೇಶ(ಹೊಸ)	9850-9900
ದಪ್ಪ ಗುಜರಾತ್(ಹೊಸ)	8950-9000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1320 (1330)
ಒಂದು ವಾರದ ಡೆಲಿವರಿ	1315 (1325)
ಸೋಯಾ ಕಚ್ಚಾ	1150 (1155)
ಪಾಮ್ ವಾರದ ಡೆಲಿವರಿ	1143 (1140)
ಸೂರ್ಯಕಾಂತಿ ಎಣ್ಣೆ ಕಚ್ಚಾ	1180 (1180)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	47,600 (48,150)
ಬೆಳ್ಳಿ ಕೆ.ಜಿ	61,500 (62,250)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದೊಡ್ಡ	₹2000-3000
ಮಧ್ಯಮ	₹1500-2000
ಸಣ್ಣ	₹500-1500

ಜಾರ್ಖಂಡ್: ದ್ವಿಚಕ್ರ ವಾಹನಕ್ಕೆ ಪೆಟ್ರೋಲ್ ದರ ₹ 25 ಕಡಿತ

ರಾಂಚಿ (ಪಿಟಿಐ): ಸಹಾಯಧನ ನೀಡುವ ಮೂಲಕ ದ್ವಿಚಕ್ರ ವಾಹನಗಳಿಗೆ ಪೆಟ್ರೋಲ್ ದರದಲ್ಲಿ ಪ್ರತಿ ಲೀಟರ್‌ಗೆ ₹25ರಷ್ಟು ಕಡಿತ ಮಾಡಲು ನಿರ್ಧರಿಸಲಾಗಿದೆ ಎಂದು ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಘೋಷಿಸಿದ್ದಾರೆ. ದರ ಕಡಿತವು 2022ರ ಜನವರಿ 26ರಿಂದ ಅನ್ವಯವಾಗಲಿದೆ ಎಂದು ಅವರು ತಿಳಿಸಿದ್ದಾರೆ.

ಪ್ರತಿ ತಿಂಗಳು 10 ಲೀಟರ್‌ವರೆಗೆ ಪೆಟ್ರೋಲ್ ಅಥವಾ ಡೀಸೆಲ್ ಅನ್ನು ಈ ಯೋಜನೆಯಡಿಯಲ್ಲಿ ಪಡೆಯಬಹುದು. ಪ್ರತಿ ಲೀಟರ್‌ಗೆ ₹ 25 ರೂಪಾಯಿಯಂತೆ ಗ್ರಾಹಕರ ಬ್ಯಾಂಕ್ ಖಾತೆಗೆ ಹಣ ವರ್ಗಾವಣೆ ಮಾಡುವುದು ಈ ಯೋಜನೆಯ ಪ್ರಮುಖ ಅಂಶ.

ಕೇಂದ್ರ ಸರ್ಕಾರವು ನವೆಂಬರ್ 3ರಂದು ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಅಬಕಾರಿ ತೆರಿಗೆಯನ್ನು ಕ್ರಮವಾಗಿ ₹ 5 ಮತ್ತು 10ರಂತೆ ಕಡಿತಗೊಳಿಸಿತ್ತು. ಹಲವು ರಾಜ್ಯಗಳೂ ಅದನ್ನು ಅನುಸರಿಸಿದ್ದವು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	500-550
ನಡುಗೋಲು	600-650
ರಾಶಿ	700-800
ರಾಶಿ ಉತ್ತಮ	800-900
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	750-850
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	510
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-53000
ಕುಮಟ	
ಚಿಪ್ಪು	24569-38199
ಕೋಕ	21019-30219
ಫ್ಯಾಕ್ಟರಿ	13109-18809
ಹೊಸಚಾಲಿ	36899-41001
ಹಳೆಚಾಲಿ	47509-49739
ಕಾರ್ಕಳ	
ಹೊಸತು	40000-45000
ಹಳತು	46000-53000
ಪುತ್ತೂರು	
ಹೊಸತು	27500-45000
ಹಳತು	11000-26000
ಶಿರಸಿ	
ಬೆಟ್ಟೆ	32499-47228
ಬಿಳಿಗೋಟು	21399-42599
ಚಾಲಿ	33899-50372
ರಾಶಿ	42799-47599
ರಾಮನಗರ ರೇಷ್ಮೆ	
ಮಿಶ್ರತಳಿ	400-625
ದ್ವಿತಳಿ	437-811

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15350	15300	15,200	227.05 ಸೆಂಟ್ಸ್
ಎಸಿ	7000	6800	6650	
ಆರ್‌ಪಿ	6500	6500	6400	ಲಂಡನ್
ಆರ್‌ಸಿ	3900	4000	3900	--- ಡಾಲರ್ಸ್

ಆರ್‌ಬಿಐನ ಹಣಕಾಸು ಸ್ಥಿರತೆ ವರದಿಯಲ್ಲಿ ಮಾಹಿತಿ

ಬ್ಯಾಂಕ್‌ಗಳ ವಸೂಲಾಗದ ಸಾಲ ಹೆಚ್ಚಳ ಸಾಧ್ಯತೆ

ಮುಂಬೈ (ಪಿಟಿಐ): ಒಂದೊಮ್ಮೆ ಕೊರೊನಾದ ಹೊಸ ತಳಿ ಓಮೈಕ್ರಾನ್, ದೇಶದ ಆರ್ಥಿಕತೆಯ ಮೇಲೆ ತೀವ್ರ ತರದ ಪರಿಣಾಮ ಉಂಟುಮಾಡಿದಲ್ಲಿ ಬ್ಯಾಂಕ್‌ಗಳ ವಸೂಲಾಗದ ಸಾಲದ (ಎನ್‌ಪಿಎ) ಸರಾಸರಿ ಪ್ರಮಾಣವು 2022ರ ಸೆಪ್ಟೆಂಬರ್ ವೇಳೆಗೆ ಶೇ 9.5ರವರೆಗೂ ಏರಿಕೆ ಆಗಬಹುದು ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಎಚ್ಚರಿಕೆ ನೀಡಿದೆ.



ಬ್ಯಾಂಕ್‌ಗಳ ಸರಾಸರಿ ಎನ್‌ಪಿಎ 2021ರ ಸೆಪ್ಟೆಂಬರ್ ವೇಳೆಗೆ ಆರು ವರ್ಷಗಳ ಕನಿಷ್ಠ ಮಟ್ಟವಾದ ಶೇ 6.9ಕ್ಕೆ ಇಳಿಕೆ ಆಗಿತ್ತು. ಆದರೆ, ರಿಟೇಲ್ ಸಾಲ ವಿಭಾಗದಲ್ಲಿ ಒತ್ತಡ ಹೆಚ್ಚಾಗುತ್ತಿದೆ. ಹೀಗಾಗಿ ಮುಂದಿನ ವರ್ಷ ಸರಾಸರಿ ಎನ್‌ಪಿಎ ಶೇ 8.1 ರಿಂದ ಶೇ 9.5ರವರೆಗೆ ಏರಿಕೆ ಆಗುವ ಸಾಧ್ಯತೆ ಇದೆ ಎಂದು ಬುಧವಾರ ಬಿಡುಗಡೆ ಮಾಡಿರುವ ಆರ್ಥಿಕ ಸ್ಥಿರತೆಯ ವರದಿಯಲ್ಲಿ ಆರ್‌ಬಿಐ ತಿಳಿಸಿದೆ. ಸಾಲ ವಿತರಣೆಯು ಮಾರ್ಚ್‌ನಲ್ಲಿ ಇದ್ದ ಶೇ 5.2 ಕ್ಕೆ ಹೋಲಿಸಿದರೆ ಏಪ್ರಿಲ್‌ನಿಂದ ಡಿಸೆಂಬರ್‌ನ ಮೊದಲ ವಾರದ ಅವಧಿಯಲ್ಲಿ ಶೇ 7.1 ಕ್ಕೆ ಏರಿಕೆ ಆಗಿದೆ.

ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಸರಾಸರಿ ಎನ್‌ಪಿಎ ಸದ್ಯ ಶೇ 8.8ರಷ್ಟು ಇದ್ದು, ಇದು 2022ರ ಸೆಪ್ಟೆಂಬರ್ ವೇಳಗೆ ಶೇ 10.5ರ ಮಟ್ಟಕ್ಕೆ ಏರಿಕೆ ಆಗುವ ಸಂಭವ ಇದೆ. ಖಾಸಗಿ ವಲಯದ ಬ್ಯಾಂಕ್‌ಗಳ ಎನ್‌ಪಿಎ ಶೇ 4.6 ರಿಂದ ಶೇ 5.2ಕ್ಕೆ ಹಾಗೂ ವಿದೇಶಿ ಬ್ಯಾಂಕ್‌ಗಳ ಎನ್‌ಪಿಎ ಶೇ 3.2 ರಿಂದ ಶೇ 3.9ಕ್ಕೆ ಏರಿಕೆ ಆಗುವ ಅಂದಾಜು ಮಾಡಲಾಗಿದೆ ಎಂದು ಹೇಳಿದೆ.

ಭವಿಷ್ಯದಲ್ಲಿ ಎದುರಾಗಬಹುದಾದ ಆರ್ಥಿಕ ನಷ್ಟ ಭರಿಸಲು ತೆಗೆದಿರಿಸುವ ಮೊತ್ತದ ಪ್ರಮಾಣವು ಮಾರ್ಚ್‌ನಲ್ಲಿ ಶೇ 67.6ರಷ್ಟು ಇದ್ದಿದ್ದು ಸೆಪ್ಟೆಂಬರ್‌ನಲ್ಲಿ ಶೇ 68.1ಕ್ಕೆ ಏರಿಕೆ ಆಗಿದೆ.

ಒತ್ತಡದ ವಾತಾವರಣ ನಿರ್ಮಾಣ ಆಗದೇ ಇದ್ದರೆ ಬ್ಯಾಂಕ್‌ಗಳ ಸ್ಥಿತಿಯು ಆಶಾದಾಯಕ ಆಗಿರಲಿದೆ. ಎಲ್ಲಾ ವಾಣಿಜ್ಯ ಬ್ಯಾಂಕ್‌ಗಳ ಸರಾಸರಿ ಎನ್‌ಪಿಎ ಇಳಿಕೆ ಆಗುವ ಸಾಧ್ಯತೆ ಇದೆ ಎಂದು ಹೇಳಿದೆ.

ವೈಯಕ್ತಿಕ ಸಾಲದ ಸರಾಸರಿ ಎನ್‌ಪಿಎ ಆರು ತಿಂಗಳ ಹಿಂದೆ ಇದ್ದ ಮಟ್ಟವನ್ನು ಮೀರಿದೆ ಎಂದು ವರದಿಯು ತಿಳಿಸಿದೆ. ನಿಖರವಾದ ಸಂಖ್ಯೆಯನ್ನು ವರದಿಯಲ್ಲಿ ನೀಡಿಲ್ಲ.


ವಿತ್ತೀಯ ಕೊರತೆ ಗುರಿ ಅನುಮಾನ

ವಿತ್ತೀಯ ಕೊರತೆಯನ್ನು ಪ್ರಸಕ್ತ ಹಣಕಾಸು ವರ್ಷದಲ್ಲಿ ಶೇ 6.8ರಲ್ಲಿ ಇರುವಂತೆ ನೋಡಿಕೊಳ್ಳುವುದು ಸರ್ಕಾರಕ್ಕೆ ಸಾಧ್ಯವಾಗದೇ ಇರಬಹುದು ಎಂದು ಆರ್‌ಬಿಐ ಬುಧವಾರ ಹೇಳಿದೆ.

ನಿವ್ವಳ ತೆರಿಗೆ ವರಮಾನ ಸಂಗ್ರಹವು ಈವರೆಗೆ ₹ 10.53 ಲಕ್ಷ ಕೋಟಿಗಳಷ್ಟು ಸಂಗ್ರಹ ಆಗಿದೆ. ಹೀಗಿರುವಾಗ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಪೂರಕ ಬೇಡಿಕೆಗಳಿಗೆ ₹3.73 ಲಕ್ಷ ಕೋಟಿ ಅನುದಾನ ಒದಗಿಸಲು ಮುಂದಾಗಿರುವುದರಿಂದ ವಿತ್ತೀಯ ಕೊರತೆ ಗುರಿಯನ್ನು ತಲುಪುವುದು ಕಷ್ಟವಾಗಬಹುದು ಎಂದು ಅದು ಹೇಳಿದೆ.

ಐಟಿಆರ್ ಇ–ವೆರಿಫಿಕೇಷನ್: ಫೆಬ್ರುವರಿ 28ರವರೆಗೆ ಅವಕಾಶ

ನವದೆಹಲಿ (ಪಿಟಿಐ): 2020–21ನೇ ಅಂದಾಜು ವರ್ಷಕ್ಕೆ ಆದಾಯ ತೆರಿಗೆ ಲೆಕ್ಕಪತ್ರ ಸಲ್ಲಿಕೆಯ (ಐಟಿಆರ್) ಆನ್‌ಲೈನ್ ದೃಢೀಕರಣ (ಇ–ವೆರಿಫಿಕೇಷನ್) ಮಾಡದೇ ಇರುವ ತೆರಿಗೆದಾರರು 2022ರ ಫೆಬ್ರುವರಿ 28ರ ಒಳಗಾಗಿ ಆ ಪ್ರಕ್ರಿಯೆ ಪೂರ್ಣಗೊಳಿಸಬಹುದಾಗಿದೆ.



ಆದಾಯ ತೆರಿಗೆ ಕಾಯ್ದೆಯ ಪ್ರಕಾರ, ಡಿಜಿಟಲ್ ಹಸ್ತಾಕ್ಷರ ಇಲ್ಲದೇ ವಿದ್ಯುನ್ಮಾನ ಮಾರ್ಗದ ಮುಲಕ ಐಟಿಆರ್ ಸಲ್ಲಿಸಿದರೆ 120 ದಿನಗಳ ಒಳಗಾಗಿ ಆಧಾರ್ ಒಟಿಪಿ ಅಥವಾ ನೆಟ್ ಬ್ಯಾಂಕಿಂಗ್ ಅಥವಾ ಡಿಮ್ಯಾಟ್ ಖಾತೆಗೆ ಬರುವ ಕೋಡ್ ಬಳಸಿ ಅಥವಾ ಎಟಿಎಂ ಮೂಲಕ ಇ–ವೆರಿಫಿಕೇಷನ್ ಮಾಡಬೇಕು.

ಇದಲ್ಲದೆ, ಐಟಿಆರ್ ಸಲ್ಲಿಸಿದ ಪ್ರತಿಯನ್ನು ಬೆಂಗಳೂರಿನಲ್ಲಿ ಇರುವ ಕೇಂದ್ರೀಯ ಪರಿಶೀಲನಾ ಕೇಂದ್ರಕ್ಕೆ (ಸಿಪಿಸಿ) ಕಳುಹಿಸುವ ಮೂಲಕವೂ ದೃಢೀಕರಿಸಬಹುದಾಗಿದೆ.

ಇ–ವೆರಿಫಿಕೇಷನ್ ಪ್ರಕ್ರಿಯೆ ಪೂರ್ಣಗೊಳ್ಳದೇ ಇದ್ದಲ್ಲಿ ರಿಟರ್ನ್ಸ್ ಸಲ್ಲಿಕೆ ಆಗಿದೆ ಎಂದು ಇಲಾಖೆಯು ಪರಿಗಣಿಸುವುದಿಲ್ಲ. ನೇರ ತೆರಿಗೆಗಳ ಕೇಂದ್ರೀಯ ಮಂಡಳಿಯು (ಸಿಬಿಡಿಟಿ) ಮಂಗಳವಾರ ಹೊರಡಿಸಿರುವ ಅಧಿಸೂಚನೆಯ ಪ್ರಕಾರ, 2020–21ನೇ ಅಂದಾಜು ವರ್ಷಕ್ಕೆ (2019–20ನೇ ಹಣಕಾಸು ವರ್ಷ) ವಿದ್ಯುನ್ಮಾನ ರೂಪದಲ್ಲಿ ಸಲ್ಲಿಕೆ ಆಗಿರುವ ಬಹಳಷ್ಟು ಐಟಿಆರ್‌ಗಳ ಇ–ವೆರಿಫಿಕೇಷನ್ ಆಗಬೇಕಿದೆ.

ಅಮೌಖಿಕ ಮೇಲ್ಮನವಿ ಇನ್ನಷ್ಟು ಸರಳ: ಆದಾಯ ತೆರಿಗೆ ಇಲಾಖೆಯು ಅಮೌಖಿಕ ಮೇಲ್ಮನವಿ ಯೋಜನೆ ಅಡಿಯಲ್ಲಿ (ಫೇಸ್‌ಲೆಸ್ ಅಪೀಲ್ ಸ್ಕೀಂ) ವಿಡಿಯೊ ಕಾನ್ಫರೆನ್ಸ್ ಮೂಲಕ ವಿಚಾರಣೆ ನಡೆಸುವ ಪ್ರಕ್ರಿಯೆಯನ್ನು ಇನ್ನಷ್ಟು ಸರಳಗೊಳಿಸಿದೆ.

ನೇರ ತೆರಿಗೆಗಳ ಕೇಂದ್ರೀಯ ಮಂಡಳಿಯು (ಸಿಬಿಡಿಟಿ) ಮಂಗಳವಾರ ಹೊರಡಿಸಿರುವ ಅಧಿಸೂಚನೆಯ ಪ್ರಕಾರ, ವೀಡಿಯೊ ಕಾನ್ಫರೆನ್ಸ್ ಮೂಲಕ ವೈಯಕ್ತಿಕ ವಿಚಾರಣೆ ನಡೆಸುವಂತೆ ತೆರಿಗೆದಾರರು ಮಾಡುವ ವಿನಂತಿಯನ್ನು ಅಮೌಖಿಕ ಮೇಲ್ಮನವಿಗೆ ಸಂಬಂಧಿಸಿದ ಆಯುಕ್ತರು ಅನುಮತಿ ನೀಡಬೇಕು. ರಾಷ್ಟ್ರೀಯ ಅಮೌಖಿಕ ಮೇಲ್ಮನವಿ ಕೇಂದ್ರದ ಮೂಲಕ ಅರ್ಜಿದಾರರಿಗೆ ವಿಚಾರಣೆಯ ದಿನಾಂಕ ಮತ್ತು ಸಮಯವನ್ನು ತಿಳಿಸಬೇಕು.

ಇಂತಹ ವಿಚಾರಣೆಯನ್ನು ವಿಡಿಯೊ ಕಾನ್ಫರೆನ್ಸ್ ಅಥವಾ ವಿಡಿಯೊ ಟೆಲಿಫೊನಿ, ಇಲ್ಲವೇ ತಾಂತ್ರಿಕವಾಗಿ ಕಾರ್ಯಸಾಧ್ಯವಾಗುವ ರೀತಿಯಲ್ಲಿ ನಡೆಸಬಹುದು. ಯಾವುದೇ ಪ್ರಕ್ರಿಯೆಗೆ ಸಂಬಂಧಿಸಿದಂತೆ ವೈಯಕ್ತಿಕವಾಗಿ ಅಥವಾ ಅಧಿಕೃತ ಪ್ರತಿನಿಧಿಯ ಮೂಲಕ ಆದಾಯ ತೆರಿಗೆ ಪ್ರಾಧಿಕಾರದ ಮುಂದೆ ಖುದ್ದು ಹಾಜರಾಗಲು ಈ ಯೋಜನೆಯ ಅಡಿಯಲ್ಲಿ ಅವಕಾಶ ಇಲ್ಲ.

ದೇಶದಲ್ಲಿ ತಯಾರಿಕೆಗೆ ಉತ್ತೇಜನ ನೀಡುವ ಉದ್ದೇಶ

351 ರಕ್ಷಣಾ ಸಾಮಗ್ರಿಗಳ ಆಮದಿಗೆ ನಿರ್ಬಂಧ

ನವದೆಹಲಿ (ಪಿಟಿಐ): ದೇಶದ ರಕ್ಷಣಾ ಕ್ಷೇತ್ರದಲ್ಲಿ ದೇಶೀಯ ತಯಾರಿಕೆಗೆ ಉತ್ತೇಜನ ನೀಡುವ ಸಲುವಾಗಿ ಮುಂದಿನ ಡಿಸೆಂಬರ್‌ನಿಂದ 3 ವರ್ಷಗಳ ಅವಧಿಯಲ್ಲಿ 351 ರಕ್ಷಣಾ ಉಪಕರಣಗಳ ಆಮದಿನ ಮೇಲೆ ನಿರ್ಬಂಧ ಹೇರಲಾಗಿದೆ.

ಮುಂದಿನ ವರ್ಷ 172 ಉಪಕರಣಗಳ ಆಮದಿನ ಮೇಲೆ ನಿರ್ಬಂಧ ಬೀಳಲಿದ್ದರೆ, 2023ರಲ್ಲಿ 89 ಹಾಗೂ 2024ರಲ್ಲಿ 90 ಸಾಮಗ್ರಿಗಳ ಆಮದನ್ನು ಸಂಪೂರ್ಣವಾಗಿ ನಿರ್ಬಂಧಿಸಲಾಗುವುದು. ಇದರಿಂದ ವಾರ್ಷಿಕ ₹ 3 ಸಾವಿರ ಕೋಟಿಯಷ್ಟು ವಿದೇಶಿ ವಿನಿಮಯ ಉಳಿಯಲಿದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

ರಕ್ಷಣಾ ಸಚಿವಾಲಯವು 16 ತಿಂಗಳಲ್ಲಿ ಬಿಡುಗಡೆ ಮಾಡುತ್ತಿರುವ 3ನೇ ಪಟ್ಟಿ ಇದಾಗಿದೆ. ಈಗಾಗಲೇ 2,500 ರಕ್ಷಣಾ ಸಾಮಗ್ರಿಗಳನ್ನು ಆಮದು ಮುಕ್ತ ಸಾಮಗ್ರಿಗಳಾಗಿ ಗುರುತಿಸಲಾಗಿದೆ.

ಯಾವುದೆಲ್ಲ ಸಾಮಗ್ರಿಗೆ ನಿರ್ಬಂಧ: ಮುಂದಿನ ವರ್ಷ ಆಮದು ನಿಷೇಧಕ್ಕೆ ಒಳಗಾಗುವ ರಕ್ಷಣಾ ಸಾಮಗ್ರಿಗಳಲ್ಲಿ ಲೇಸರ್ ವಾರ್ನಿಂಗ್ ಸೆನ್ಸಾರ್, ಹೈ ಪ್ರಷರ್ ಚೆಕ್ ವಾಲ್ವ್, ಡ್ರೈನೇಜ್ ಇಂಟ್ರೂಷನ್ ಡಿಟೆಕ್ಷನ್ ಸಿಸ್ಟಮ್, ವಿವಿಧ ಬಗೆಯ ಕೇಬಲ್‌ಗಳು, ಸಾಕೆಟ್‌ಗಳು, ವೋಲ್ಟೇಜ್ ನಿಯಂತ್ರಕ ಓಸಿಲೇಟರ್‌ಗಳು ಸೇರಿವೆ.

2024ರ ವೇಳೆಗೆ ಭಾರತವು ಸರಕು ಸಾಗಣೆ ವಿಮಾನ, ಲಘು ಯುದ್ಧ ಹೆಲಿಕಾಪ್ಟರ್, ಸಾಂಪ್ರದಾಯಿಕ ಜಲಾಂತರ್ಗಾಮಿಗಳು, ಖಂಡಾಂತರ ಕ್ಷಿಪಣಿಗಳು ಹಾಗೂ ಸೋನಾರ್ ವ್ಯವಸ್ಥೆಗಳಲ್ಲಿ ಸ್ವಾವಲಂಬನೆ ಸಾಧಿಸಲಿದ್ದು, ಅದಕ್ಕೆ ಬೇಕಾಗುವ ತಯಾರಿಕಾ ಸಾಮಗ್ರಿಗಳ ಆಮದನ್ನು ನಿರ್ಬಂಧಿಸಲಾಗುತ್ತದೆ ಎಂದು ಕಳೆದ ವರ್ಷ ಆಗಸ್ಟ್‌ನಲ್ಲಿ ರಕ್ಷಣಾ ಸಚಿವಾಲಯ ತಿಳಿಸಿತ್ತು. ಮೇನಲ್ಲಿ ಇನ್ನೊಂದು ಪಟ್ಟಿಯನ್ನು ಬಿಡುಗಡೆಗೊಳಿಸಿದ್ದ ಸಚಿವಾಲಯ, 101 ಬಗೆಯ ಶಸ್ತ್ರಾಸ್ತ್ರ ಮತ್ತು ಸೇನಾ ಉಪಕರಣಗಳಲ್ಲಿ ಸ್ವಾವಲಂಬಿ ಸಾಧಿಸುವ ನಿಟ್ಟಿನಲ್ಲಿ ಪ್ರಯತ್ನ ಆರಂಭಿಸಿದ್ದನ್ನು ತಿಳಿಸಿತ್ತು. ಇದಕ್ಕೆ ಪೂರಕವಾಗಿ ಕಳೆದ ಕೆಲವು ವರ್ಷಗಳಿಂದ ದೇಶೀಯ ರಕ್ಷಣಾ ಉಪಕರಣ ತಯಾರಕರಿಗೆ ಉತ್ತೇಜನ ನೀಡುವ ಹಲವು ಕ್ರಮಗಳನ್ನೂ ಸರ್ಕಾರ ಕೈಗೊಂಡಿದೆ.



ನೃತ್ಯ ಪ್ರದರ್ಶನ... ಮಣಿಪುರದದಲ್ಲಿ ಬುಧವಾರ ನಡೆದ ಮಾವೊ ವಿದ್ಯಾರ್ಥಿಗಳ ಒಕ್ಕೂಟದ ಕಾರ್ಯಕ್ರಮದಲ್ಲಿ ಕಲಾವಿದರು ನೃತ್ಯ ಪ್ರದರ್ಶನ ನೀಡಿದರು –ಪಿಟಿಐ ಚಿತ್ರ

ಆಸ್ಪತ್ರೆ ನಿರ್ವಹಣಾ ಮಾಹಿತಿ ವ್ಯವಸ್ಥೆ ಆರಂಭಿಸಿದ ರೈಲ್ವೆ ಸಚಿವಾಲಯ

ನವದೆಹಲಿ: ಕೇಂದ್ರ ರೈಲ್ವೆ ಸಚಿವಾಲಯವು ತನ್ನ ಉದ್ಯೋಗಿ ಮತ್ತು ಪಿಂಚಣಿದಾರರಿಗೆ ಅನುಕೂಲ ಕಲ್ಪಿಸಲು ದೇಶದಾದ್ಯಂತ ತನ್ನ 695 ಆಸ್ಪತ್ರೆಗಳು ಮತ್ತು ಆಸ್ಪತ್ರೆ ಘಟಕಗಳಲ್ಲಿ ಆಸ್ಪತ್ರೆ ನಿರ್ವಹಣಾ ಮಾಹಿತಿ ವ್ಯವಸ್ಥೆಯನ್ನು (ಎಚ್‌ಎಂಐಎಸ್) ಜಾರಿಗೊಳಿಸಿದೆ.

ಎಚ್‌ಎಂಐಎಸ್ ಸುಧಾರಿತ ಆಸ್ಪತ್ರೆ ಆಡಳಿತ ಮತ್ತು ರೋಗಿಗಳ ಆರೋಗ್ಯ ರಕ್ಷಣೆಯ ಮೂಲ ಉದ್ದೇಶದೊಂದಿಗೆ ಸಮಗ್ರ ಕ್ಲಿನಿಕಲ್ ಮಾಹಿತಿ ವ್ಯವಸ್ಥೆಯಾಗಿದೆ. ಇದು ಆಸ್ಪತ್ರೆಯ ಆಡಳಿತ ಮತ್ತು ರೋಗಿಗಳಿಗೆ ನವೀನ ಮತ್ತು ಸುಧಾರಿತ ಅನುಭವವನ್ನು ಖಚಿತಪಡಿಸುತ್ತದೆ.

ರೋಗಿಗಳಿಗೆ ಅವರ ಹೊರರೋಗಿ ವಿಭಾಗದ (ಒಪಿಡಿ) ನೋಂದಣಿಗಳು, ವೈದ್ಯರ ಸಲಹೆ, ಲ್ಯಾಬ್ ವರದಿಗಳು, ಸ್ವಯಂ-ನೋಂದಣಿ, ಔಷಧ ಲಭ್ಯತೆ, ಲ್ಯಾಬ್ ಪರೀಕ್ಷೆಯ ಲಭ್ಯತೆ ಇತ್ಯಾದಿಗಳಿಗೆ ಸಂಬಂಧಿಸಿದ ಸುಲಭ ಮಾಹಿತಿ ಪ್ರವೇಶವನ್ನು ಖಚಿತಪಡಿಸಿಕೊಳ್ಳಲು ಎಚ್‌ಐಎಂಎಸ್, ಮೊಬೈಲ್ ಅಪ್ಲಿಕೇಶನ್ ಅನ್ನು ಪ್ರಾರಂಭಿಸಿದೆ.

'ಆಸ್ಪತ್ರೆ ನಿರ್ವಹಣಾ ಮಾಹಿತಿ ವ್ಯವಸ್ಥೆಯಿಂದಾಗಿ 75 ಲಕ್ಷಕ್ಕೂ ಹೆಚ್ಚು ರೈಲ್ವೆ ಸಿಬ್ಬಂದಿ, ಪಿಂಚಣಿದಾರರು ಮತ್ತು ಅವರ ಕುಟುಂಬಗಳ ಜೀವನಕ್ಕೆ ಅನುಕೂಲವಾಗಲಿದೆ' ಎಂದು ರೈಲ್‌ಟೆಲ್ ಸಿಎಂಡಿ ಪುನೀತ್ ಚಾವ್ಲಾ ಹೇಳಿದ್ದಾರೆ.

'ಪ್ರಾಯೋಗಿಕ ಆಧಾರದ ಮೇಲೆ ಎಚ್‌ಎಂಐಎಸ್ ಅಳವಡಿಕೆಯನ್ನು 2020ರ ಡಿಸೆಂಬರ್‌ನಲ್ಲಿ ಆರಂಭಿಸಲಾಯಿತು. ಇದನ್ನು ಎರಡು ಹಂತಗಳಲ್ಲಿ ಜಾರಿಗೆ ತರಲಾಗಿದ್ದು, ಭಾರತೀಯ ರೈಲ್ವೆಯ ಎಲ್ಲ ಆಸ್ಪತ್ರೆಗಳು ಮತ್ತು ಆರೋಗ್ಯ ಘಟಕಗಳಲ್ಲಿ ಈ ಸೌಲಭ್ಯ ದೊರೆಯಲಿದೆ' ಎಂದು ರೈಲ್ವೆ ಸಚಿವಾಲಯವು ಹೇಳಿಕೆಯಲ್ಲಿ ತಿಳಿಸಿದೆ.

ಅನಿಲ್ ದೇಶ್‌ಮುಖ್ ವಿರುದ್ಧ ಪೂರಕ ದೋಷಾರೋಪ

ಮುಂಬೈ (ಪಿಟಿಐ): ಅಕ್ರಮ ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮಹಾರಾಷ್ಟ್ರದ ಮಾಜಿ ಗೃಹ ಸಚಿವ ಅನಿಲ್ ದೇಶ್‌ಮುಖ್ ವಿರುದ್ಧ ಜಾರಿ ನಿರ್ದೇಶನಾಲಯ (ಇ.ಡಿ) ಬುಧವಾರ ಪೂರಕ ದೋಷಾರೋಪ ಪಟ್ಟಿ ಸಲ್ಲಿಸಿದೆ.



ಅನಿಲ್ ದೇಶ್‌ಮುಖ್

ಅಕ್ರಮ ಹಣ ವರ್ಗಾವಣೆ ಕಾಯಿದೆ (ಪಿಎಂಎಲ್‌ಎ) ಅಡಿ ದಾಖಲಾಗುವ ಪ್ರಕರಣಗಳ ವಿಚಾರಣೆ ನಡೆಸುವ ಇಲ್ಲಿಯ ವಿಶೇಷ ನ್ಯಾಯಾಲಯವೊಂದರ ಮುಂದೆ ಇ.ಡಿ ಸಲ್ಲಿಸಿರುವ 7 ಸಾವಿರ ಪುಟಗಳ ದೋಷಾರೋಪ ಪಟ್ಟಿಯಲ್ಲಿ ದೇಶ್‌ಮುಖ್ ಜೊತೆಗೆ ಅವರ ಮಕ್ಕಳನ್ನೂ ಆರೋಪಿಗಳನ್ನಾಗಿ ಹೆಸರಿಸಿದೆ.

ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್: ಬಿಎಫ್‌ಸಿಗೆ ಗೆಲುವಿನ ಹಂಬಲ

ಸುನಿಲ್ ಬಳಗಕ್ಕೆ ಚೆನ್ನೈ ಸವಾಲು

ವಾಸ್ಕೊ (ಪಿಟಿಐ): ಗೆಲುವಿಗಾಗಿ ಹಂಬಲಿಸುತ್ತಿರುವ ಬೆಂಗಳೂರು ಎಫ್‌ಸಿ ತಂಡವು ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ಗುರುವಾರ ಚೆನ್ನೈಯಿನ್ ಎಫ್‌ಸಿ ಸವಾಲು ಎದುರಿಸಲಿದೆ.

ಕಳೆದ ಏಳು ಪಂದ್ಯಗಳಲ್ಲಿ ಸುನಿಲ್ ಚೆಟ್ರಿ ನಾಯಕತ್ವದ ಬೆಂಗಳೂರು ಗೆಲುವು ಕಂಡಿಲ್ಲ. ಏಳು ಪಂದ್ಯಗಳನ್ನು ಆಡಿರುವ ಚೆನ್ನೈಯಿನ್ ತಂಡವು 11 ಪಾಯಿಂಟ್ಸ್‌ನೊಂದಿಗೆ ಪಟ್ಟಿಯಲ್ಲಿ ಆರನೇ ಸ್ಥಾನದಲ್ಲಿದೆ.

ಪಾಯಿಂಟ್ಸ್ ಪಟ್ಟಿಯಲ್ಲಿ ಬೆಂಗಳೂರು 10ನೇ ಸ್ಥಾನದಲ್ಲಿದೆ. ನಾಯಕ ಚೆಟ್ರಿ ಅವರು ಲಯದಲ್ಲಿಲ್ಲದಿರುವುದು ತಂಡದ ಕಳವಳಕ್ಕೆ ಕಾರಣವಾಗಿದೆ. ಕೋಚ್ ಮಾರ್ಕೊ ಪೆಜೌಲಿ ಕಳೆದ ಎರಡು ಪಂದ್ಯಗಳಲ್ಲಿ ಸುನಿಲ್ ಅವರನ್ನು ಕಣಕ್ಕಿಳಿಸಿರಲಿಲ್ಲ. ಈ ಪಂದ್ಯದಲ್ಲಿ ಅವರು ಆಡುವ ನಿರೀಕ್ಷೆಯಿದೆ.

ಬೆಂಗಳೂರು ಎದುರು ಆಡಿದ ಕಳೆದ ನಾಲ್ಕು ಪಂದ್ಯಗಳಲ್ಲಿ ಚೆನ್ನೈ ತಂಡಕ್ಕೆ ಗೋಲು ಗಳಿಸಲು ಸಾಧ್ಯವಾಗಿಲ್ಲ. ಈ ಪಂದ್ಯದಲ್ಲಿ ಆ ಕೊರತೆಯನ್ನು ನೀಗಿಸುವ ಛಲದಲ್ಲಿದೆ.

ಎಟಿಕೆ ಮೋಹನ್ ಬಾಗನ್ ಜಯಭೇರಿ: ಮಡಗಾಂವ್‌ನಲ್ಲಿ ನಡೆದ ಪಂದ್ಯದಲ್ಲಿ ಲಿಸ್ಟನ್ ಕೊಲ್ಯಾಸೊ ಹಾಗೂ ರಾಯ್‌ಕೃಷ್ಣ ಗಳಿಸಿದ ಗೋಲುಗಳ ಬಲದಿಂದ ಎಟಿಕೆ ಮೋಹನ್ ಬಾಗನ್ (ಎಟಿಕೆಎಂಬಿ) ತಂಡವು ಜಯಭೇರಿ ಮೊಳಗಿಸಿತು.

ಬುಧವಾರ 2–1ರಿಂದ ಎಫ್‌ಸಿ ಗೋವಾ ತಂಡವನ್ನು ಮಣಿಸಿತು.

ಎಟಿಕೆಎಂಬಿ ತಂಡದ ಪರ ಕೊಲ್ಯಾಸೊ 23ನೇ ನಿಮಿಷ ಮತ್ತು ರಾಯ್‌ಕೃಷ್ಣ 56ನೇ ನಿಮಿಷಗಳಲ್ಲಿ ಕಾಲ್ಚಳಕ ತೋರಿದರು. ಜಾರ್ಜ್ ಒರ್ಟಿಜ್ ಅವರು 81ನೇ ನಿಮಿಷದಲ್ಲಿ ಗೋವಾ ತಂಡದ ಪರ ಗೋಲು ದಾಖಲಿಸಿದರು. ಆದರೆ ಅದಾಗಲೇ ಗೆಲುವಿನ ಅವಕಾಶ ಮೀರಿತ್ತು.



ಅಭ್ಯಾಸ ನಿರತ ಸುನಿಲ್ ಚೆಟ್ರಿ– ಬಿಎಫ್‌ಸಿ ಮೀಡಿಯಾ ಚಿತ್ರ



ಏಷ್ಯನ್ ಗೇಮ್ಸ್‌ನ ಸ್ವರ್ಣಪದಕ ವಿಜೇತೆ, ರಾಜ್ಯದ ಅಥ್ಲೀಟ್ ಎಂ.ಆರ್. ಪೂವಮ್ಮ ಅವರು ತಮ್ಮ ಸ್ನೇಹಿತ, ಕೇರಳದ ಅಥ್ಲೀಟ್ ಜಿತಿನ್ ಪೌಲ್ ಅವರ ಜತೆ ಬುಧವಾರ ದಾಂಪತ್ಯ ಜೀವನಕ್ಕೆ ಕಾಲಿಟ್ಟರು. ಮಂಗಳೂರು ಹೊರವಲಯದ ಅಡ್ಯಾರ್ ಗಾರ್ಡನ್ ಸಭಾಂಗಣದಲ್ಲಿ ಕೊಡವ ಸಂಪ್ರದಾಯದಂತೆ ಇವರ ವಿವಾಹ ಸಮಾರಂಭ ನೆರವೇರಿತು

ಬೆಂಗಳೂರು ರೇಸ್

ನೈಟ್ ಇನ್ ಹೂವ್ಸ್ ಗೆಲ್ಲುವ ನಿರೀಕ್ಷೆ

ಆಲ್ಟೆನ್‌ಬರ್ಗ್ ಟ್ರೋಫಿ ಗುರುವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ನೈಟ್ ಇನ್ ಹೂವ್ಸ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.45ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ.

1ನೇ ರೇಸ್: ಲೈಟ್ನಿಂಗ್ ಅಟ್ಯಾಕ್ 2, ಏರೋಸ್ಪೀಡ್ 1, ನಾಸ್ಟ್ರಡಮಸ್ 4
2ನೇ ರೇಸ್: ಸಿಲ್ವರಿಟಾ 6, ಏರ್ ಬ್ಲಾಸ್ಟ್ 3, ಓಂಬುಡ್ಸ್‌ಮನ್ 4
3ನೇ ರೇಸ್: ಯೂನಿಕ್ ಸ್ಟೈಲ್ 1, ಮಾರ್ಕ್ ಒನ್ 6, ಮೆಗಾ ಸಕ್ಸಸ್ 3
4ನೇ ರೇಸ್: ಫ್ಲೆಮಿಂಗೊ ರೋಡ್ 6, ಸ್ಟ್ರೈಕಿಂಗ್ ಮೆಮೋರಿ 7, ಆಲ್‌ಅಬೌಟ್‌ಹರ್ 4
5ನೇ ರೇಸ್: ಸಾಕ್ರಮೆಂಟ್ 2, ಮಿಸ್ಟಿಕ್ ಮೌಂಟೇನ್ 6, ಫೇತ್ ಆಫ್ ಸಕ್ಸಸ್ 3
6ನೇ ರೇಸ್: ನೈಟ್ ಇನ್ ಹೂವ್ಸ್ 4, ದಿ ಸಾವರಿನ್ ಆರ್ಬ್ 1, ಪೆಲುಷೆ 2
7ನೇ ರೇಸ್: ಡಿವಿಲಿಯರ್ಸ್ 3, ಪ್ರಾಮಿಸ್ ಕೆಪ್ಟ್ 4, ಸೀಸರ್ಸ್ ಪ್ಯಾಲೇಸ್ 2
8ನೇ ರೇಸ್: ಸ್ಟೈಲ್ ಅರೌಂಡ್ 12, ಕಮಾಂಡ್‌ಪೋಸ್ಟ್ 3, ಕಂಟ್ರೀಸ್ ಜ್ಯುಯೆಲ್ 4

ಉತ್ತಮ ಬೆಟ್: ಫ್ಲೆಮಿಂಗೊ ರೋಡ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	3,4,5	6,7,8

ಜನವರಿ 7ರಿಂದ ಕುಸ್ತಿ ಸ್ಪರ್ಧೆಗಳು

ಬೆಂಗಳೂರು: ರಾಜ್ಯ ಕುಸ್ತಿ ಸಂಸ್ಥೆ ಮತ್ತು ಹರಿಹರ ಕುಸ್ತಿ ಜೀರ್ಣೋದ್ಧಾರ ಸಮಿತಿ ಆಶ್ರಯದಲ್ಲಿ ದಾವಣಗೆರೆ ಜಿಲ್ಲೆಯ ಹರಿಹರದಲ್ಲಿ ಜನವರಿ 7ರಿಂದ ರಾಜ್ಯಮಟ್ಟದ ಕುಸ್ತಿ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ.

ಕನಕದಾಸರ ಜಯಂತ್ಯೋತ್ಸವದ ಅಂಗವಾಗಿ ಗಾಂಧಿ ಮೈದಾನದಲ್ಲಿ ಜನವರಿ 9ರವರೆಗೆ ಪುರುಷ ಮತ್ತು ಮಹಿಳಾ ವಿಭಾಗದಲ್ಲಿ ಸ್ಪರ್ಧೆಗಳು ನಡೆಯಲಿವೆ.

ಮಾಹಿತಿಗಾಗಿ ಮಾರುತಿ ಪೂಜಾರ್ (ಮೊಬೈಲ್ ಸಂಖ್ಯೆ 9886440311), ವೈ. ಶಿವಾನಂದ (9964229979), ಬೀರೇಶ್ (7022299112) ಅವರನ್ನು ಸಂಪರ್ಕಿಸಬೇಕು.

ಲೆಕ್ಕಪತ್ರ ಸಂದಾಯಕ್ಕೆ ಟಾಪ್ ಅಥ್ಲೀಟ್‌ಗಳಿಗೆ ಸೂಚನೆ

ನವದೆಹಲಿ (ಪಿಟಿಐ): ಟಾರ್ಗೆಟ್ ಒಲಿಂಪಿಕ್ ಪೋಡಿಯಂ ಯೋಜನೆಯಲ್ಲಿ ಪಡೆದಿರುವ ಅನುದಾನದ ಬಳಕೆಯ ವಿವರ ಮತ್ತು ಲೆಕ್ಕಪತ್ರಗಳನ್ನು ಜನವರಿ 31ರೊಳಗೆ ಸಲ್ಲಿಸುವಂತೆ ಭಾರತ ಕ್ರೀಡಾ ಪ್ರಾಧಿಕಾರ (ಸಾಯ್) 150 ಅಥ್ಲೀಟ್‌ಗಳಿಗೆ ಸೂಚಿಸಿದೆ. ಕೆಲ ಖ್ಯಾತನಾಮ ಅಥ್ಲೀಟ್‌ಗಳೂ ಈ ಪಟ್ಟಿಯಲ್ಲಿದ್ದಾರೆ.

ಈಚೆಗೆ ನಡೆದ ಸಾಯ್ ಮಿಷನ್ ಒಲಿಂಪಿಕ್ ಸೆಲ್ (ಎಂಒಸಿ) ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಯಿತು. 2014ರಿಂದ ಟಾಪ್ಸ್ ಯೋಜನೆಯಲ್ಲಿ ಅಥ್ಲೀಟ್‌ಗಳಿಗೆ ಮಂಜೂರಾದ ₹ 7 ಕೋಟಿ ರೂಪಾಯಿಯ ಕುರಿತು ಯಾವುದೇ ಲೆಕ್ಕಪತ್ರಗಳ ನೀಡಿಲ್ಲ.

'ಈ ಕ್ರಮವು ಅವಶ್ಯಕವಾಗಿತ್ತು. ಟಾಪ್ ಅಥ್ಲೀಟ್‌ಗಳು ಲೆಕ್ಕಪತ್ರಗಳನ್ನು ನೀಡಬೇಕಿದೆ. ದೇಶದ ತೆರಿಗೆದಾತರ ಹಣ ಇದಾಗಿದೆ. ಆದ್ದರಿಂದ ಈ ಅನುದಾನದ ವಿನಿಯೋಗದ ಕುರಿತು ಸಂಪೂರ್ಣ ಮಾಹಿತಿಗಳನ್ನು ಒದಗಿಸುವುದು ಸೌಲಭ್ಯ ಪಡೆದ ಅಥ್ಲೀಟ್‌ಗಳ ಕರ್ತವ್ಯವಾಗಿದೆ' ಎಂದು ಸಾಯ್ ಮೂಲಗಳು ತಿಳಿಸಿವೆ.

ದಕ್ಷಿಣ ಆಫ್ರಿಕಾದ ಡೀನ್ ಎಲ್ಗರ್ ಅರ್ಧಶತಕ: ಜಸ್‌ಪ್ರೀತ್ ಬೂಮ್ರಾ ಮಿಂಚು

ರೋಚಕ ಘಟ್ಟದಲ್ಲಿ ಸೆಂಚುರಿಯನ್ ಟೆಸ್ಟ್

ಸೆಂಚುರಿಯನ್: ಸೂಪರ್ ಸ್ಪೋರ್ಟ್ ಪಾರ್ಕ್ ಕ್ರೀಡಾಂಗಣದತ್ತ ಈಗ ಕ್ರಿಕೆಟ್ ಪ್ರೇಮಿಗಳ ಕುತೂಹಲದ ದೃಷ್ಟಿ ನೆಟ್ಟಿದೆ.

ಏಕೆಂದರೆ ಇಲ್ಲಿ ನಡೆಯುತ್ತಿರುವ ಭಾರತ ಮತ್ತು ದಕ್ಷಿಣ ಆಫ್ರಿಕಾ ತಂಡಗಳ ನಡುವಣ ಮೊದಲ ಟೆಸ್ಟ್ ರೋಚಕ ಘಟ್ಟ ತಲುಪಿದೆ. ಗೆಲುವಿಗಾಗಿ 305 ರನ್‌ಗಳ ಗುರಿ ಬೆನ್ನತ್ತಿರುವ ಆತಿಥೇಯ ತಂಡವು ಬುಧವಾರ ದಿನದಾಟದ ಮುಕ್ತಾಯಕ್ಕೆ 40.5 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 94 ರನ್ ಗಳಿಸಿದೆ. ಕೊನೆಯ ದಿನವಾದ ಗುರುವಾರ ಇನ್ನೂ 211 ರನ್‌ಗಳನ್ನು ಗಳಿಸಿದರೆ ಜಯಿಸುವ ಅವಕಾಶ ಇದೆ.

ಆದರೆ ಬೌಲರ್‌ಗಳಿಗೆ ನೆರವು ನೀಡುತ್ತಿರುವ ಪಿಚ್‌ನಲ್ಲಿ ಭಾರತ ತಂಡವು ಆರು ವಿಕೆಟ್‌ಗಳನ್ನು ಕಿತ್ತು ಬುಟ್ಟಿಗೆ ಹಾಕಿಕೊಂಡರೆ ಜಯದ ಕೇಕ್ ಹಾಕಬಹುದು. ಜಸ್‌ಪ್ರೀತ್ ಬೂಮ್ರಾ (22ಕ್ಕೆ2), ಮೊಹಮ್ಮದ್ ಶಮಿ (29ಕ್ಕೆ1) ಮತ್ತು ಮೊಹಮ್ಮದ್ ಸಿರಾಜ್ (25ಕ್ಕೆ1) ಉತ್ತಮ ಬೌಲಿಂಗ್ ಮಾಡಿರುವುದರಿಂದ ಪ್ರವಾಸಿ ತಂಡದ ಆತ್ಮವಿಶ್ವಾಸ ಇಮ್ಮಡಿಸಿದೆ.

ಆದರೆ ಕ್ರೀಸ್‌ನಲ್ಲಿರುವ ನಾಯಕ ಡೀನ್ ಎಲ್ಗರ್ (ಬ್ಯಾಟಿಂಗ್ 52; 122ಎ) ಹಾಗೂ ಇನ್ನೂ ಬ್ಯಾಟಿಂಗ್ ಮಾಡಬೇಕಿರುವ ತೆಂಬಾ ಬವುಮಾ ಮತ್ತು ಕ್ವಿಂಟನ್ ಡಿ ಕಾಕ್ ಅವರತ್ತ ಈಗ ದಕ್ಷಿಣ ಆಫ್ರಿಕಾ ಅಭಿಮಾನಿಗಳ ನಿರೀಕ್ಷೆಯ ನೋಟ ಇದೆ. ತಾಳ್ಮೆ ಹಾಗೂ ಚಾಣಾಕ್ಷತನದಿಂದ ಬ್ಯಾಟಿಂಗ್ ಮಾಡಿದರೆ ಸೋಲಿನಿಂದ ತಪ್ಪಿಸಿಕೊಳ್ಳುವ ಅವಕಾಶ ಎಲ್ಗರ್ ಬಳಗಕ್ಕೆ ಇದೆ.

ರನ್‌ಗಳಿಕೆಗೆ ಹರಸಾಹಸ: ವೇಗಿಗಳ ಸ್ವರ್ಗದಂತಿರುವ ಪಿಚ್‌ನಲ್ಲಿ ಬ್ಯಾಟರ್‌ಗಳು ರನ್ ಗಳಿಸಲು ಹರಸಾಹಸ ಪಡಬೇಕಾಯಿತು. ಕಗಿಸೊ ರಬಾಡ (42ಕ್ಕೆ4) ಮತ್ತು ಮಾರ್ಕೊ ಜಾನ್ಸನ್ (55ಕ್ಕೆ4) ಅವರ ಮೊನಚಾದ ದಾಳಿಯ ಮುಂದೆ ಭಾರತದ ಬ್ಯಾಟರ್‌ಗಳು ರನ್ ಗಳಿಸಲು ಬಹಳಷ್ಟು ಶ್ರಮಪಡಬೇಕಾಯಿತು. ಇದರಿಂದಾಗಿ ತಂಡವು ಎರಡನೇ ಇನಿಂಗ್ಸ್‌ನಲ್ಲಿ 50.3 ಓವರ್‌ಗಳಲ್ಲಿ 174 ರನ್‌ಗಳನ್ನು ಗಳಿಸಿತು.

ರಾಹುಲ್ (23) ಮತ್ತು ಮಧ್ಯಮ ಕ್ರಮಾಂಕದಲ್ಲಿ ರಿಷಭ್ ಪಂತ್ (34; 34ಎಸೆತ) ಅವರಿಬ್ಬರೇ ಹೆಚ್ಚು ರನ್ ಗಳಿಸಿದ ಬ್ಯಾಟರ್‌ಗಳಾದರು. ವಿರಾಟ್ ಬಳಗವು ಮೊದಲ ಇನಿಂಗ್ಸ್‌ನಲ್ಲಿ 130 ರನ್‌ಗಳ ಮುನ್ನಡೆ ಪಡೆದಿತ್ತು. ಆದ್ದರಿಂದ ಮುನ್ನೂರಕ್ಕೂ ಹೆಚ್ಚು ರನ್‌ಗಳ ಗುರಿಯೊಡ್ಡಲು ಸಾಧ್ಯವಾಯಿತು.

ಡೀನ್ ಎಲ್ಗರ್ ಅರ್ಧಶತಕ: ಭಾರತದ ಬೌಲರ್‌ಗಳ ಚಾಣಾಕ್ಷ ಬೌಲಿಂಗ್ ಮುಂದೆ ಒಂದು ಕಡೆ ವಿಕೆಟ್‌ಗಳು ಪತನವಾಗುತ್ತಿದ್ದರೂ ನಾಯಕ ಡೀನ್ ಎಲ್ಗರ್ ತಾಳ್ಮೆಯಿಂದ ಆಡಿದರು. ಅರ್ಧಶತಕ ಬಾರಿಸಿದರು.

ಇನಿಂಗ್ಸ್‌ನ ಎರಡನೇ ಓವರ್‌ನಲ್ಲಿಯೇ ಮೊಹಮ್ಮದ್ ಶಮಿಯ ಸ್ವಿಂಗ್‌ಗೆ ಏಡನ್ ಮಾರ್ಕರಮ್ ಕ್ಲೀನ್ ಬೌಲ್ಡ್ ಆದರು. ಕೀಗನ್ ಪೀಟರ್ಸನ್ ಅವರು ಸಿರಾಜ್ ಎಸೆತವನ್ನು ಕೆಣಕಿ ರಿಷಭ್ ಪಂತ್‌ಗೆ ಕ್ಯಾಚ್ ಆದರು.

ಡೀನ್ ಜೊತೆಗೆ ಜೊತೆಯಾಟ ಕುದುರಿಸಿದ್ದ ರಸಿ ವ್ಯಾನ್ ಡರ್ ಡಸೆ 37ನೇ ಓವರ್‌ನಲ್ಲಿ ಬೂಮ್ರಾ ಇನ್‌ಸ್ವಿಂಗರ್ ಎಸೆತವನ್ನು ಅಂದಾಜಿಸುವಲ್ಲಿ ತಪ್ಪಿದರು. ಆಘಾತ ಅನುಭವಿಸಿದರು. ಇನಿಂಗ್ಸ್‌ನ ಕೊನೆಯ ಓವರ್‌ನಲ್ಲಿ ಬೂಮ್ರಾ ಹಾಕಿದ ಯಾರ್ಕರ್‌ಗೆ 'ರಾತ್ರಿ ಕಾವಲುಗಾರ' ಕೇಶವ್ ಮಹಾರಾಜ್ ಅವರ ವಿಕೆಟ್ ಉರುಳಿತು. ಆದರೆ ಇದೆಲ್ಲದರ ನಡುವೆಯೂ ಡೀನ್ ಚೆಂದದ ಬ್ಯಾಟಿಂಗ್ ಮಾಡಿ ದರು.

ಮಳೆ ಸಾಧ್ಯತೆ: ಗುರುವಾರ ಮಳೆ ಬರುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಎರಡನೇ ದಿನದ ಸಂಪೂರ್ಣ ಆಟವು ಮಳೆಯ ಕಾರಣದಿಂದಲೇ ರದ್ದಾಗಿತ್ತು.



ಜಸ್‌ಪ್ರೀತ್ ಬೂಮ್ರಾ ಬೌಲಿಂಗ್ ವೈಖರಿ– ಎಎಫ್‌ಪಿ ಚಿತ್ರ

ಸ್ಕೋರ್ ಕಾರ್ಡ್

ಭಾರತ ಮೊದಲ ಇನಿಂಗ್ಸ್ 327 (105.3 ಓವರ್)
ದಕ್ಷಿಣ ಆಫ್ರಿಕಾ ಮೊದಲ ಇನಿಂಗ್ಸ್ 197 (62.3 ಓವರ್)
ಭಾರತ ಎರಡನೇ ಇನಿಂಗ್ಸ್ 174 (50.3 ಓವರ್)
(ಮಂಗಳವಾರ 6 ಓವರ್‌ಗಳಲ್ಲಿ 1 ವಿಕೆಟ್‌ಗೆ 16)
ರಾಹುಲ್ ಸಿ ಎಲ್ಗರ್ ಬಿ ಗಿಡಿ 23 (74ಎ, 4X4), ಶಾರ್ದೂಲ್ ಸಿ ಡಿಕಾಕ್ ಬಿ ಜಾನ್ಸನ್ 4 (14ಎ, 4X1), ಪೂಜಾರ ಸಿ ಡಿಕಾಕ್ ಬಿ ಗಿಡಿ 16 (64ಎ, 4X3), ಕೊಹ್ಲಿ ಸಿ ಡಿಕಾಕ್ ಬಿ ಜಾನ್ಸನ್ 18 (32ಎ, 4X4), ರಹಾನೆ ಸಿ ಡಸೆ ಬಿ ಜಾನ್ಸನ್ 20 (23ಎ, 4X3, 6X1), ಪಂತ್ ಸಿ ಗಿಡಿ ಬಿ ರಬಾಡ 34 (34ಎ, 4X6), ಅಶ್ವಿನ್ ಸಿ ಪೀಟರ್ಸನ್ ಬಿ ರಬಾಡ 14 (17ಎ, 4X2), ಶಮಿ ಸಿ ಮಲ್ಡರ್ ಬಿ ರಬಾಡ 1 (12ಎ), ಬೂಮ್ರಾ ಔಟಾಗದೆ 7 (8ಎ, 4X1), ಸಿರಾಜ್ ಬಿ ಜಾನ್ಸನ್ 0 (5ಎ)
ಇತರೆ (ಬೈ 17, ಲೆಗ್‌ಬೈ 4, ನೋಬಾಲ್ 6) 27
ವಿಕೆಟ್ ಪತನ: 2-34 (ಶಾರ್ದೂಲ್ ಠಾಕೂರ್, 12.5), 3-54 (ಕೆ.ಎಲ್. ರಾಹುಲ್, 22.3), 4-79 (ವಿರಾಟ್ ಕೊಹ್ಲಿ, 32.1), 5-109 (ಚೇತೇಶ್ವರ್ ಪೂಜಾರ, 37.1), 6-111 (ಅಜಿಂಕ್ಯ ರಹಾನೆ, 38.5), 7-146 (ರವಿಚಂದ್ರನ್ ಅಶ್ವಿನ್, 45.1), 8-166 (ರಿಷಭ್ ಪಂತ್, 47.3), 9-169 (ಮೊಹಮ್ಮದ್ ಶಮಿ, 49.2), 10-174 (ಮೊಹಮ್ಮದ್ ಸಿರಾಜ್, 50.3)
ಬೌಲಿಂಗ್: ಕಗಿಸೊ ರಬಾಡ 17-4-42-4, ಲುಂಗಿ ಗಿಡಿ 10-2-31-2, ಮಾರ್ಕೊ ಜಾನ್ಸನ್ 13.3-4-55-4, ವಿಯಾನ್ ಮಲ್ಡರ್ 10-4-25-0
ದಕ್ಷಿಣ ಆಫ್ರಿಕಾ ಎರಡನೇ ಇನಿಂಗ್ಸ್ 4ಕ್ಕೆ 94 (40.5 ಓವರ್)
ಮಾರ್ಕರಮ್ ಬಿ ಶಮಿ 1 (7ಎ), ಎಲ್ಗರ್ ಬ್ಯಾಟಿಂಗ್ 52 (122ಎ, 4X7), ಪೀಟರ್ಸನ್ ಸಿ ಪಂತ್ ಬಿ ಸಿರಾಜ್ 17 (36ಎ, 4X3), ಡಸೆ ಬಿ ಬೂಮ್ರಾ 11 (65ಎ, 4X1), ಕೇಶವ್ ಬಿ ಬೂಮ್ರಾ 8 (19ಎ, 4X1)
ಇತರೆ: (ಬೈ 1, ನೋಬಾಲ್ 4) 5
ವಿಕೆಟ್ ಪತನ: 1-1 (ಏಡನ್ ಮಾರ್ಕರಮ್, 1.3), 2-34 (ಕೀಗನ್ ಪಿಟರ್ಸನ್, 14.1), 3-74 (ರಸಿ ವ್ಯಾನ್ ಡರ್ ಡಸೆ, 36.4), 4- 94 (ಕೇಶವ್ ಮಹಾರಾಜ್, 40.5)
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 11.5-2-22-2, ಮೊಹಮ್ಮದ್ ಶಮಿ 9-2-29-1, ಮೊಹಮ್ಮದ್ ಸಿರಾಜ್ 11-4-25-1, ಶಾರ್ದೂಲ್ ಠಾಕೂರ್ 5-0-11-0, ರವಿಚಂದ್ರನ್ ಅಶ್ವಿನ್ 4-1-6-0



ದಬಂಗ್ ಡೆಲ್ಲಿ ಮತ್ತು ಬೆಂಗಾಲ್ ವಾರಿಯರ್ಸ್ ಆಟಗಾರರ ಪೈಪೋಟಿ– ಟ್ವಿಟರ್ ಚಿತ್ರ

ಪ್ರೊ ಕಬಡ್ಡಿ ಲೀಗ್: ಬೆಂಗಾಲ್ ವಾರಿಯರ್ಸ್‌ಗೆ ನಿರಾಸೆ

ದಬಂಗ್ ಡೆಲ್ಲಿ ಅಜೇಯ ಓಟ

ಬೆಂಗಳೂರು: ಅಮೋಘ ಆಟವಾಡಿದ ನವೀನಕುಮಾರ್ ನೆರವಿನಿಂದ ದಬಂಗ್ ಡೆಲ್ಲಿ ತಂಡವು ಪ್ರೊ ಕಬಡ್ಡಿ ಲೀಗ್‌ನಲ್ಲಿ ತನ್ನ ಅಜೇಯ ಓಟ ಮುಂದುವರಿಸಿತು.

ವೈಟ್‌ಫೀಲ್ಡ್‌ನ ಗ್ರ್ಯಾಂಡ್ ಶೆರಟಾನ್ ಹೋಟೆಲ್‌ನಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ದಬಂಗ್ ಡೆಲ್ಲಿ ತಂಡವು 52–35ರಿಂದ ಬೆಂಗಾಲ್ ವಾರಿಯರ್ಸ್ ವಿರುದ್ಧ ಜಯಭೇರಿ ಬಾರಿಸಿತು.

ರೇಡರ್ ನವೀನಕುಮಾರ್ ಮಿಂಚಿನ ದಾಳಿ ನಡೆಸುವ ಮೂಲಕ 24 ಅಂಕಗಳನ್ನು ಗಳಿಸಿದರು. ಇದರಿಂದಾಗಿ ತಂಡವು ಮೊದಲಾರ್ಧದಲ್ಲಿಯೇ 33–15ರಿಂದ ಪಂದ್ಯದ ಮೇಲೆ ಬಿಗಿಹಿಡಿತ ಸಾಧಿಸಿತು. ನವೀನ್ ಜೊತೆಗೆ ಆಲ್‌ರೌಂಡರ್ ಕೂಡ ಮಿಂಚಿದರು. ಅವರು ಹತ್ತು ಅಂಕಗಳನ್ನು ಗಳಿಸಿದರು.

ಬೆಂಗಾಲ್ ತಂಡದ ನಾಯಕ ಮಣಿಂದರ್ ಸಿಂಗ್ ತಕ್ಕ ತಿರುಗೇಟು ನೀಡುವ ಪ್ರಯತ್ನ ಮಾಡಿದರು. ಅವರು 12 ರೇಡ್‌ಗಳಿಂದ 16 ಅಂಕಗಳನ್ನು ಗಳಿಸಿದರು. ಅವರಿಗೆ ಸುಖೇಶ್ ಹೆಗಡೆ (9 ಪಾಯಿಂಟ್ಸ್) ಕೂಡ ಉತ್ತಮ ಜೊತೆ ನೀಡಿದರು. ಆದರೆ, ಡೆಲ್ಲಿ ತಂಡದ ವೇಗಕ್ಕೆ ಬೆಂಗಾಲ್ ಆಟ ಸಾಟಿಯಾಗಲಿಲ್ಲ.

ಡೆಲ್ಲಿ ತಂಡವು ಇದುವರೆಗೆ ನಾಲ್ಕು ಪಂದ್ಯಗಳನ್ನು ಆಡಿದೆ. ಅದರಲ್ಲಿ ಮೂರು ಗೆದ್ದು, ಒಂದರಲ್ಲಿ ಟೈ ಮಾಡಿಕೊಂಡಿದೆ. ಪಾಯಿಂಟ್ ಪಟ್ಟಿಯ ಅಗ್ರಸ್ಥಾನದಲ್ಲಿದೆ.

ಯೋಧಾ–ಗುಜರಾತ್ ಪಂದ್ಯ ಟೈ: ಯುಪಿ ಯೋಧಾ ಮತ್ತು ಗುಜರಾತ್ ಜೈಂಟ್ಸ್ ತಂಡಗಳ ನಡುವಣ ನಡೆದ ಪಂದ್ಯವು ರೋಚಕ ಟೈನಲ್ಲಿ ಅಂತ್ಯಗೊಂಡಿತು. ದಿನದ ಎರಡನೇ ಪಂದ್ಯದಲ್ಲಿ ಉಭಯ ತಂಡಗಳು 30–30ರಿಂದ ಸಮಬಲ ಸಾಧಿಸಿದವು.

ಯೋಧಾ ತಂಡದ ಪ್ರದೀಪ್ ನರ್ವಾಲ್ (11) ಮತ್ತು ರಾಕೇಶ್ ನರ್ವಾಲ್ (13) ಅವರ ನಡುವಣ ಪೈಪೋಟಿಯು ರಂಗೇರಿತು. ಹರಿಯಾಣ ಮೂಲದ ಇಬ್ಬರೂ ರೇಡರ್‌ಗಳು ತಮ್ಮ ತಂಡದ ಸೋಲು ತಪ್ಪಿಸಲು ಆಡಿದ ರೀತಿಯು ಅಮೋಘವಾಗಿತ್ತು. ಅರ್ಧವಿರಾಮದ ವೇಳೆಗೆ ಗುಜರಾತ್ ತಂಡವು 20–14ರಿಂದ ಮುನ್ನಡೆ ಸಾಧಿಸಿತ್ತು. ಆದರೆ, ವಿರಾಮದ ನಂತರದ ಆಟದಲ್ಲಿ ತಿರುಗೇಟು ನೀಡುವಲ್ಲಿ ಯೋಧಾ ಸಫಲವಾಯಿತು. ಯೋಧಾ ಆಟಗಾರರು ಗುಜರಾತ್ ತಂಡವನ್ನು ಎರಡು ಬಾರಿ ಆಲೌಟ್ ಮಾಡಿತು. ಎಲ್ಲ ವಿಭಾಗಗಳಲ್ಲಿಯೂ ಮೇಲುಗೈ ಸಾಧಿಸಿತು. ಪ್ರದೀಪ್ ಜೊತೆಗೆ ಸುರೇಂದರ್ ಗಿಲ್ (6 ಪಾಯಿಂಟ್) ಕೂಡ ತಂಡಕ್ಕೆ ಕಾಣಿಕೆ ನೀಡಿದರು.

ಇಂದಿನ ಪಂದ್ಯ (ರಾತ್ರಿ)
ಜೈಪುರ ಪಿಂಕ್ ಪ್ಯಾಂಥರ್ಸ್ Vs ಯು ಮುಂಬಾ 7.30
ಹರಿಯಾಣ ಸ್ಟೀಲರ್ಸ್ – ಬೆಂಗಳೂರು ಬುಲ್ಸ್ 8.30
ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್ಸ್
ದಬಂಗ್ ಡೆಲ್ಲಿ	4	3	-	1	18
ಗುಜರಾತ್ ಜೈಂಟ್ಸ್	4	1	1	2	12
ಪಟ್ನಾ ಪೈರೇಟ್ಸ್	3	2	1	-	11
ಜೈಪುರ ಪಿಂಕ್ ಪ್ಯಾಂಥರ್ಸ್	3	2	1	-	11
ಬೆಂಗಾಲ್ ವಾರಿಯರ್ಸ್	4	2	2	-	11
ಬೆಂಗಳೂರು ಬುಲ್ಸ್	3	2	1	-	10
ಯುಪಿ ಯೋಧಾ	4	1	2	1	10
ಯು ಮುಂಬಾ	3	1	1	1	9
ಹರಿಯಾಣ ಸ್ಟೀಲರ್ಸ್	3	1	2	-	7
ತಮಿಳು ತಲೈವಾಸ್	3	-	1	2	6
ತೆಲುಗು ಟೈಟನ್ಸ್	3	-	2	1	5
ಪುಣೇರಿ ಪಲ್ಟನ್	3	1	2	-	5

(ಬುಧವಾರದ ಪಂದ್ಯಗಳ ಅಂತ್ಯಕ್ಕೆ)

ಹಾಕಿ: ಪಿಎಸ್‌ಪಿಬಿಗೆ ಪ್ರಶಸ್ತಿ

ಬೆಂಗಳೂರು: ಉತ್ತಮ ಸಾಮರ್ಥ್ಯ ತೋರಿದ ಪೆಟ್ರೋಲಿಯಂ ಸ್ಪೋರ್ಟ್ಸ್ ಪ್ರಮೋಷನ್ ಬೋರ್ಡ್ (ಪಿಎಸ್‌ಪಿಬಿ) ತಂಡದವರು ಅಂತರ ಇಲಾಖೆ ರಾಷ್ಟ್ರೀಯ ಹಾಕಿ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಜಯಿಸಿದ್ದಾರೆ.

ಬುಧವಾರ ಇಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಪಿಎಸ್‌ಪಿಬಿ 2–1ರಿಂದ ರೈಲ್ವೆ ಸ್ಪೋರ್ಟ್ಸ್ ಪ್ರಮೋಷನ್ ಬೋರ್ಡ್ (ಆರ್‌ಎಸ್‌ಪಿಬಿ) ತಂಡವನ್ನು ಮಣಿಸಿತು. ವಿಜೇತ ತಂಡದ ಪರ ದಿವಾಕರ್ ರಾಮ್ (23ನೇ ನಿಮಿಷ) ಮೊದಲ ಗೋಲು ದಾಖಲಿಸಿದರು.

43ನೇ ನಿಮಿಷದಲ್ಲಿ ಆರ್‌ಎಸ್‌ಪಿಬಿಯ ನೀಲಕಂಠ ಶರ್ಮಾ ಸಮಬಲದ ಗೋಲು ಹೊಡೆದರು. 56ನೇ ನಿಮಿಷದಲ್ಲಿ ಕೈಚಳಕ ತೋರಿದ ಸುನಿಲ್ ಯಾದವ್ ಪಿಎಸ್‌ಪಿಬಿ ತಂಡದ ಜಯದ ಸಂಭ್ರಮಕ್ಕೆ ಕಾರಣರಾದರು. ಮೂರನೇ ಸ್ಥಾನಕ್ಕಾಗಿ ನಡೆದ ಹಣಾಹಣಿಯಲ್ಲಿ ಪಂಜಾಬ್ ನ್ಯಾಷನಲ್ ಬ್ಯಾಂಕ್ (ಪಿಎನ್‌ಬಿ) 6–2ರಿಂದ ಭಾರತ ಕ್ರೀಡಾ ಪ್ರಾಧಿಕಾರ ತಂಡವನ್ನು ಸೋಲಿಸಿತು.



ಪ್ರಶಸ್ತಿ ವಿಜೇತ ಪೆಟ್ರೋಲಿಯಂ ಸ್ಪೋರ್ಟ್ಸ್ ಪ್ರಮೋಷನ್ ಬೋರ್ಡ್ ತಂಡ


ಸೌರವ್ ಗಂಗೂಲಿ

ಸೌರವ್ ಗಂಗೂಲಿ ಆರೋಗ್ಯ ಸ್ಥಿರ

ಕೋಲ್ಕತ್ತ (ಪಿಟಿಐ): ಕೋವಿಡ್ ಚಿಕಿತ್ಸೆಗಾಗಿ ಇಲ್ಲಿಯ ವುಡ್‌ಲ್ಯಾಂಡ್ಸ್ ಆಸ್ಪತ್ರೆಗೆ ದಾಖಲಾಗಿರುವ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಅಧ್ಯಕ್ಷ ಸೌರವ್ ಗಂಗೂಲಿ ಅವರ ಆರೋಗ್ಯ ಸ್ಥಿರವಾಗಿದೆ.

'ಅವರು ಆಸ್ಪತ್ರೆಗೆ ದಾಖಲಾಗಿ ಎರಡು ದಿನವಾಗಿದೆ. ಅವರ ಆರೋಗ್ಯ ಸ್ಥಿರವಾಗಿದೆ. ಅವರ ಆಮ್ಲಜನಕ ಮಟ್ಟವು ಶೇ 99ರಷ್ಟು ಇದೆ. ರಾತ್ರಿ ಚೆನ್ನಾಗಿ ನಿದ್ದೆ ಮಾಡಿದ್ದಾರೆ. ಬುಧವಾರ ಬೆಳಿಗ್ಗೆ ತಿಂಡಿ ಮತ್ತು ಮಧ್ಯಾಹ್ನ ಊಟವನ್ನೂ ಮಾಡಿದ್ದರೆ' ಎಂದು ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕಿ ರೂಪಾಲಿ ಬಸು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸೋಮವಾರ ಆರ್‌ಟಿಪಿಸಿಆರ್ ವರದಿಯಲ್ಲಿ ಗಂಗೂಲಿ ಅವರಿಗೆ ಕೋವಿಡ್ ಇರುವುದು ಖಚಿತವಾಗಿತ್ತು. ಅವರನ್ನೂ ಕೂಡಲೇ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಪರಿಣತ ವೈದ್ಯರ ತಂಡವು ಅವರಿಗೆ ಚಿಕಿತ್ಸೆ ನೀಡುತ್ತಿದೆ.


ಟಿ.ಎಸ್. ನಾಗಾಭರಣ ಅವರನ್ನು ಕೆಎಸ್‌ಸಿಎ ಅಧ್ಯಕ್ಷ ರೋಜರ್ ಬಿನ್ನಿ ಸ್ವಾಗತಿಸಿದರು. ಪ್ರಾಧಿಕಾರದ ಕಾರ್ಯದರ್ಶಿ ಸಂತೋಷ ಹಾನಗಲ್ಲ ಇದ್ದರು.

ಕನ್ನಡ ಅನುಷ್ಠಾನಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯಲ್ಲಿ (ಕೆಎಸ್‌ಸಿಎ) ಕನ್ನಡ ಅನುಷ್ಠಾನದ ಬಗ್ಗೆ ಬುಧವಾರ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಕನ್ನಡ ಅಭಿವೃದ್ಧಿ ಪ್ರಾಧಿಕಾರ, 'ಕಚೇರಿ ವ್ಯವಹಾರ ಸೇರಿದಂತೆ ಎಲ್ಲ ಹಂತದಲ್ಲಿಯೂ ಸಂಸ್ಥೆಯು ಕನ್ನಡ ಅನುಷ್ಠಾನ ಮಾಡಬೇಕು' ಎಂದು ಸೂಚಿಸಿದೆ.

ಸಂಸ್ಥೆಯು ಕನ್ನಡ ಅನುಷ್ಠಾನಗೊಳಿಸದ ಬಗ್ಗೆ ಪ್ರಾಧಿಕಾರಕ್ಕೆ ದೂರುಗಳು ಬಂದಿದ್ದವು. ಹೀಗಾಗಿ, ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ನೇತೃತ್ವದ ನಿಯೋಗ ಸಂಸ್ಥೆಗೆ ಭೇಟಿ ನೀಡಿ, ಕೆಎಸ್‌ಸಿಎ ಪದಾಧಿಕಾರಿಗಳಿಂದ ಮಾಹಿತಿ ಪಡೆದುಕೊಂಡಿತು.

'ಕರ್ನಾಟಕದಲ್ಲಿ ಕನ್ನಡವೇ ಸಾರ್ವಭೌಮ. ಆಡಳಿತ ಭಾಷೆಯಾದ ಕನ್ನಡದಲ್ಲಿಯೇ ಸಂಪೂರ್ಣ ವ್ಯವಹಾರ ನಡೆಯಬೇಕು. ಕಚೇರಿ ವ್ಯವಹಾರ, ಸಂಸ್ಥೆಯ ವೆಬ್‌ಸೈಟ್, ಸಾಮಾಜಿಕ ಜಾಲತಾಣ ಸೇರಿದಂತೆ ಎಲ್ಲೆಡೆ ಕನ್ನಡವನ್ನು ಅನುಷ್ಠಾನ ಮಾಡಬೇಕು. ಇಲ್ಲವಾದರೆ ನೋಟಿಸ್ ನೀಡಲಾಗುವುದು' ಎಂದು ಎಚ್ಚರಿಕೆ ನೀಡಿದರು.

'ಕೆಎಸ್‌ಸಿಎ ಬೈಲಾ ಹಾಗೂ ವಾರ್ಷಿಕ ಮಹಾಸಭೆಗಳ ನಿಯಮಾವಳಿಗಳೂ ಸಂಪೂರ್ಣ ಕನ್ನಡದಲ್ಲಿ ಇರಬೇಕು' ಎಂದು ಸೂಚಿಸಿದರು.

'ಸಂಸ್ಥೆಯಲ್ಲಿ ಪೂರ್ಣ ಪ್ರಮಾಣದಲ್ಲಿ ಕನ್ನಡ ಅನುಷ್ಠಾನಗೊಳಿಸಲಾಗುವುದು. ಈ ಬಗ್ಗೆ ಅಗತ್ಯ ಕ್ರಮಕೈಗೊಳ್ಳುತ್ತೇವೆ' ಎಂದು ಕೆಎಸ್‌ಸಿಎ ಪದಾಧಿಕಾರಿಗಳು ಭರವಸೆ ನೀಡಿದರು.

ರ್‍ಯಾಂಕಿಂಗ್: 2ನೇ ಸ್ಥಾನದಲ್ಲಿ ಅಶ್ವಿನ್; ಅಗ್ರಸ್ಥಾನದಲ್ಲಿ ಭಾರತ

ದುಬೈ (ಪಿಟಿಐ): ಅನುಭವಿ ಆಫ್‌ಸ್ಪಿನ್ನರ್ ಆರ್. ಅಶ್ವಿನ್ ಬುಧವಾರ ಪ್ರಕಟವಾದ ಐಸಿಸಿ ಟೆಸ್ಟ್ ರ್‍ಯಾಂಕಿಂಗ್‌ನಲ್ಲಿ ಬೌಲರ್ ಮತ್ತು ಆಲ್‌ರೌಂಡರ್ ವಿಭಾಗಗಳಲ್ಲಿ ದ್ವಿತೀಯ ಸ್ಥಾನ ಉಳಿಸಿಕೊಂಡಿದ್ದಾರೆ. ತಂಡ ವಿಭಾಗದಲ್ಲಿ 124 ರೇಟಿಂಗ್ ಅಂಕಗಳನ್ನು ಹೊಂದಿರುವ ಭಾರತ ತಂಡ ಅಗ್ರಸ್ಥಾನದಲ್ಲಿದೆ.

ರವೀಂದ್ರ ಜಡೇಜ ಆಲ್‌ರೌಂಡರ್ ವಿಭಾಗದಲ್ಲಿ ಮೂರನೇ ಸ್ಥಾನ ಪಡೆದಿದ್ದಾರೆ. ತಂಡ ವಿಭಾಗದಲ್ಲಿ ನ್ಯೂಜಿಲೆಂಡ್ ಮತ್ತು ಆಸ್ಟ್ರೇಲಿಯಾ ತಂಡಗಳು ಕ್ರಮವಾಗಿ ಎರಡು ಹಾಗೂ ಮೂರನೇ ಸ್ಥಾನದಲ್ಲಿವೆ. ನಂತರದ ಎರಡು ಸ್ಥಾನಗಳಲ್ಲಿ ಇಂಗ್ಲೆಂಡ್ ಮತ್ತು ಪಾಕಿಸ್ತಾನ ಇವೆ.

ಬ್ಯಾಟಿಂಗ್ ವಿಭಾಗದಲ್ಲಿ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರು ಕ್ರಮವಾಗಿ ಐದು ಮತ್ತು ಏಳನೇ ಸ್ಥಾನದಲ್ಲಿ ಮುಂದುವರಿದಿದ್ದಾರೆ. ರೋಹಿತ್ 797 ಮತ್ತು ಕೊಹ್ಲಿ 756 ಅಂಕಗಳನ್ನು ಪಡೆದಿದ್ದಾರೆ. ಆಸ್ಟ್ರೇಲಿಯಾದ ಮಾರ್ನಸ್ ಲಾಬುಷೇನ್ (915) ಬ್ಯಾಟರ್‌ಗಳ ವಿಭಾಗದಲ್ಲಿ ಅಗ್ರಸ್ಥಾನ ಕಾಪಾಡಿಕೊಂಡಿದ್ದಾರೆ. ಇಂಗ್ಲೆಂಡ್ ತಂಡದ ನಾಯಕ ಜೋ ರೂಟ್ (900) ಮತ್ತು ನ್ಯೂಜಿಲೆಂಡ್ ತಂಡದ ನಾಯಕ ಕೇನ್ ವಿಲಿಯಮ್ಸನ್ (879) ಅವರು ಎರಡು ಹಾಗೂ ಮೂರನೇ ಸ್ಥಾನದಲ್ಲಿದ್ದಾರೆ.

ಬೌಲಿಂಗ್‌ನಲ್ಲಿ ಆಸ್ಟ್ರೇಲಿಯಾ ತಂಡದ ನಾಯಕ ಪ್ಯಾಟ್ ಕಮಿನ್ಸ್ ಅಗ್ರಸ್ಥಾನದಲ್ಲಿದ್ದಾರೆ. ಪಾಕಿಸ್ತಾನ ತಂಡದ ಎಡಗೈ ಮಧ್ಯಮವೇಗಿ ಶಾಹೀನ್ ಅಫ್ರಿದಿ ಮೂರನೇ ಸ್ಥಾನ ಪಡೆದಿದ್ದಾರೆ.

ಆ್ಯಷಸ್ ಸರಣಿಯ ಮೂರನೇ ಟೆಸ್ಟ್‌ನಲ್ಲಿ ಪದಾರ್ಪಣೆ ಮಾಡಿದ ಸ್ಕಾಟ್ ಬೊಲ್ಯಾಂಡ್ ಇದೇ ಮೊದಲ ಸಲ ರ್‍ಯಾಂಕಿಂಗ್ ಪಟ್ಟಿಯಲ್ಲಿ ಸ್ಥಾನ ಗಳಿಸಿದ್ದಾರೆ. ಇಂಗ್ಲೆಂಡ್ ಎದುರು ಆರು ವಿಕೆಟ್ ಗಳಿಸಿದ ಅವರು 271 ಅಂಕಗಳೊಂದಿಗೆ 74ನೇ ಸ್ಥಾನ ಪಡೆದಿದ್ದಾರೆ.

ಆಲ್‌ರೌಂಡರ್‌ಗಳ ಪಟ್ಟಿಯಲ್ಲಿ ವೆಸ್ಟ್ ಇಂಡೀಸ್ ತಂಡದ ಜೇಸನ್ ಹೋಲ್ಡರ್ (382) ಅಗ್ರಸ್ಥಾನ ಗಳಿಸಿದ್ದಾರೆ. ಅಶ್ವಿನ್ (360) ಮತ್ತು ಜಡೇಜ ಕ್ರಮವಾಗಿ ಎರಡು ಹಾಗೂ ಮೂರನೇ ಸ್ಥಾನಗಳಲ್ಲಿದ್ದಾರೆ.

'ಭಾರತದ ನೆಲದಲ್ಲಿ ಟೆಸ್ಟ್ ಸರಣಿ ಗೆಲ್ಲುವ ಗುರಿ'


ವಾರ್ನರ್

ಮೆಲ್ಬರ್ನ್ (ಪಿಟಿಐ): ತಾವು ಟೆಸ್ಟ್ ಕ್ರಿಕೆಟ್‌ನಿಂದ ನಿವೃತ್ತಿಯಾಗುವ ಮುನ್ನ ಇಂಗ್ಲೆಂಡ್‌ನಲ್ಲಿ 2023ರಲ್ಲಿ ನಡೆಯಲಿರುವ ಆ್ಯಷಸ್ ಸರಣಿ ಟ್ರೋಫಿ ಮತ್ತು ಭಾರತ ತಂಡದ ಎದುರು ಭಾರತದಲ್ಲಿಯೇ ಜಯಿಸುವ ಗುರಿ ಎಂದು ಆಸ್ಟ್ರೇಲಿಯಾ ತಂಡದ ಬ್ಯಾಟರ್ ಡೇವಿಡ್ ವಾರ್ನರ್ ಹೇಳಿದರು.

ಮೆಲ್ಬರ್ನ್ ಕ್ರಿಕೆಟ್ ಮೈದಾನದಲ್ಲಿ ಇಂಗ್ಲೆಂಡ್ ಎದುರಿನ ಆ್ಯಷಸ್ ಸರಣಿಯ ಮೂರನೇ ಟೆಸ್ಟ್‌ನಲ್ಲಿ ಆಸ್ಟ್ರೇಲಿಯಾ ಜಯಿಸಿದ ನಂತರ ಅವರು ಮಾತನಾಡಿದರು.

'ಭಾರತವನ್ನು ಅದರ ತವರಿನಲ್ಲಿ ಇನ್ನೂ ಸೋಲಿಸಿಲ್ಲ. ಅಂತಹದೊಂದು ಸಾಧನೆ ಮಾಡಲು ಕಾತುರನಾಗಿದ್ದೇನೆ. ಇಂಗ್ಲೆಂಡ್ ವಿರುದ್ಧವೂ ಅಂತಹ ಸಾಧನೆ ಮಾಡುವ ಆಸೆಯಿದೆ' ಎಂದರು.

ಚೆಸ್: ಹಂಪಿಗೆ ಆರನೇ ಸ್ಥಾನ

ವಾರ್ಸಾ, ಪೋಲೆಂಡ್ (ಪಿಟಿಐ): ಹಾಲಿ ಚಾಂಪಿಯನ್, ಭಾರತದ ಕೊನೇರು ಹಂಪಿ ಅವರು ಫಿಡೆ ವಿಶ್ವ ರ್‍ಯಾಪಿಡ್ ಚೆಸ್ ಟೂರ್ನಿಯ ಮಹಿಳಾ ವಿಭಾಗದಲ್ಲಿ ಆರನೇ ಸ್ಥಾನ ಗಳಿಸಿದರು.

ಇಲ್ಲಿ ನಡೆದ ಚಾಂಪಿಯನ್‌ಷಿಪ್‌ನಲ್ಲಿ ಹಂಪಿ ಅವರು 7.5 ಪಾಯಿಂಟ್ಸ್ ಸಂಗ್ರಹಿಸಿದರು. ಮುಕ್ತ ವಿಭಾಗದಲ್ಲಿ ಭಾರತದ ಗ್ರ್ಯಾಂಡ್‌ಮಾಸ್ಟರ್ ಡಿ. ಗುಕೇಶ್ ಒಂಬತ್ತು ಪಾಯಿಂಟ್ಸ್ ಗಳಿಸಿ ಒಂಬತ್ತನೇ ಸ್ಥಾನ ಗಳಿಸಿದರು. ಚಾಂಪಿಯನ್ ಪಟ್ಟ ಧರಿಸಿದ ಉಜ್ಬೆಕಿಸ್ತಾನದ ನಾದಿರ್ಬೆಕ್ ಅಬ್ದುಸತ್ತೊರೊವ್ 9.5 ಪಾಯಿಂಟ್ಸ್ ಗಳಿಸಿದರು. ಅಬ್ದುಸತ್ತೊರೊವ್, ಟೈಬ್ರೇಕ್‌ನಲ್ಲಿ ರಷ್ಯಾದ ಇಯಾನ್ ನೆಪೊಮ್‌ನಿಶಿ ಅವರನ್ನು ಹಿಂದಿಕ್ಕಿ ಪ್ರಶಸ್ತಿ ಗೆದ್ದರು.ಮಹಿಳಾ ವಿಭಾಗದಲ್ಲಿ ಆರ್. ವೈಶಾಲಿ 14ನೇ ಸ್ಥಾನ ಗಳಿಸಿದರು. ಈ ವಿಭಾಗದಲ್ಲಿ ರಷ್ಯಾದ ಅಲೆಕ್ಸಾಂಡ್ರಾ ಕೊಸ್ತೆನಿಕ್ ಪ್ರಶಸ್ತಿ ಜಯಿಸಿದರು.


ಕೊನೇರು ಹಂಪಿ

ಅಂತರ ವಿ.ವಿ ಹಾಕಿ ಟೂರ್ನಿ: ತಿರುವಳ್ಳುವರ್ ತಂಡಕ್ಕೆ ಜಯ


ಪ್ರಜಾವಾಣಿ ವಾರ್ತೆ

ಗೋಣಿಕೊಪ್ಪಲು (ಕೊಡಗು): ತಿರುವಳ್ಳುವರ್ ವಿಶ್ವವಿದ್ಯಾನಿಲಯ ತಂಡವು ಇಲ್ಲಿ ನಡೆಯುತ್ತಿರುವ ದಕ್ಷಿಣ ವಲಯ ಅಂತರ ವಿ.ವಿ ಮಹಿಳಾ ಹಾಕಿ ಟೂರ್ನಿಯ ಬುಧವಾರದ ಪಂದ್ಯದಲ್ಲಿ 2–0 ಗೋಲುಗಳಿಂದ ಕೊಯಮತ್ತೂರಿನ ಅವಿನಾಶಿಲಿಂಗಂ ವಿ.ವಿ ತಂಡವನ್ನು ಸೋಲಿಸಿತು.

ಮಂಗಳೂರು ವಿಶ್ವವಿದ್ಯಾಲಯ ಹಾಗೂ ವಿರಾಜಪೇಟೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆಶ್ರಯದಲ್ಲಿ ನಡೆಯುತ್ತಿರುವ ಟೂರ್ನಿಯ ಮೂರನೇ ದಿನದ ಪಂದ್ಯದಲ್ಲಿ, ಜೆ.ಕವಿಪ್ರಿಯಾ (11 ಮತ್ತು 26ನೇ ನಿ.) ಅವರು ಎರಡು ಗೋಲುಗಳನ್ನು ಗಳಿಸಿ ತಿರುವಳ್ಳುವರ್ ತಂಡದ ಗೆಲುವಿಗೆ ಕಾರಣರಾದರು.

ಎರಡನೇ ಪಂದ್ಯದಲ್ಲಿ ಮದ್ರಾಸ್ ವಿ.ವಿ ತಂಡ 5–0 ಗೋಲುಗಳಿಂದ ಪೆರಿಯಾರ್ ವಿ.ವಿ ತಂಡವನ್ನು ಮಣಿಸಿತು. ಶುಭಶ್ರೀ ಮೂರು ಗೋಲುಗಳನ್ನು ಗಳಿಸಿದರೆ, ಕೃಪಾ ಹಾಗೂ ನಿವೇದಿತಾ ತಲಾ ಒಂದು ಗೋಲು ತಂದಿತ್ತರು. ಭಾರತೀಯಾರ್ 2–0 ಗೋಲುಗಳಿಂದ ಭಾರತಿದಾಸನ್ ವಿ.ವಿ ವಿರುದ್ಧ ಜಯ ಸಾಧಿಸಿತು. ಲೀಮಾ ರೋಷ್ನಿ (6ನೇ ನಿ.) ಮತ್ತು ಎಂ.ಪ್ರವೀಣಾ (13) ಗೋಲು ಗಳಿಸಿದರು. ಇನ್ನೊಂದು ಪಂದ್ಯದಲ್ಲಿ ಎಂ.ಎಸ್ ತಂಡ 2–1 ರಲ್ಲಿ ಟಿಎನ್‌ಪಿಇಎಸ್ ತಂಡವನ್ನು ಸೋಲಿಸಿತು.

ಭೂಪಾಲ್ ನಿಧನ: ದೇಹದಾನ


ಎಸ್‌.ಟಿ.ಭೂಪಾಲ್

ಬೆಂಗಳೂರು: ಕರ್ನಾಟಕ ರಾಜ್ಯ ಫುಟ್‌ಬಾಲ್ ತಂಡದ ವ್ಯವಸ್ಥಾಪಕ ಹಾಗೂ ಆಯ್ಕೆಗಾರರಾಗಿ ಕಾರ್ಯನಿರ್ವಹಿಸಿದ್ದ ಎಸ್‌.ಟಿ. ಭೂಪಾಲ್ (85) ಬುಧವಾರ ನಿಧನರಾದರು. ಅವರಿಗೆ ಮಗ ಮತ್ತು ಮಗಳು ಇದ್ದಾರೆ.

ಬೆಂಗಳೂರು ಜಿಲ್ಲಾ ಫುಟ್‌ಬಾಲ್ ಸಂಸ್ಥೆಯ (ಬಿಡಿಎಫ್‌ಎ) ಗೌರವ ಕಾರ್ಯದರ್ಶಿಯಾಗಿ ಭೂಪಾಲ್ ಹಲವು ವರ್ಷಗಳ ಕಾಲ ಕಾರ್ಯನಿರ್ವಹಿಸಿದ್ದರು. ಅವರ ಇಚ್ಛೆಯಂತೆ ಎಂ.ಎಸ್.ರಾಮಯ್ಯ ಆಸ್ಪತ್ರೆಗೆ ಗುರುವಾರ ದೇಹದಾನ ಮಾಡಲಾಗುತ್ತದೆ. ಮಂಗಳವಾರ ನಡೆಯಬೇಕಿದ್ದ ಬಿಡಿಎಫ್‌ಎ ಸೂಪರ್ ಡಿವಿಷನ್ ಮತ್ತು ಕೆಎಸ್‌ಎಫ್‌ಎ ಮಹಿಳಾ ಪಂದ್ಯಗಳನ್ನು ಭೂಪಾಲ್ ಅವರಿಗೆ ಗೌರವ ಸೂಚಿಸಿ ರದ್ದು ಮಾಡಲಾಯಿತು.



ರನ್ನರ್ಸ್ ಅಪ್ ಸ್ಥಾನ ಗಳಿಸಿದ ಆಳ್ವಾಸ್ ಕಾಲೇಜು ತಂಡ: ಮುಂದಿನ ಸಾಲು (ಎಡದಿಂದ) ಚಂದ್ರಶೇಖರ್, ಶ್ರೀನಿವಾಸ್, ಚೇತನ್, ಸಂಜಯ್. ಹಿಂದಿನ ಸಾಲು: ಮುತ್ತಮಿಲರಸು, ಮಹಾದೇವಸ್ವಾಮಿ, ರವಿರಾಜ್ (ವ್ಯವಸ್ಥಾಪಕ), ಕಿರಣ್ ಕುಮಾರ್, ಆಕಾಶ್

ಬಾಲ್ ಬ್ಯಾಡ್ಮಿಂಟನ್: ಆಳ್ವಾಸ್ ರನ್ನರ್ಸ್ ಅಪ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂಡುಬಿದಿರೆಯ ಆಳ್ವಾಸ್ ಕಾಲೇಜು ತಂಡವು ಅಖಿಲ ಭಾರತ ಆಹ್ವಾನಿತ ಪುರುಷರ ಬಾಲ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ರನ್ನರ್ಸ್ ಅಪ್ ಆಗಿದೆ.

ತಮಿಳುನಾಡು ಬಾಲ್ ಬ್ಯಾಡ್ಮಿಂಟನ್ ಸಂಸ್ಥೆ ಹಾಗೂ ಸಾಯಿ ಸ್ಪೋರ್ಟ್ಸ್ ಕ್ಲಬ್ ಪೊಳಚಿ ಇವರ ಸಂಯುಕ್ತ ಆಶ್ರಯದಲ್ಲಿ ಇತ್ತೀಚೆಗೆ ನಡೆದ ಟೂರ್ನಿಯ ಫೈನಲ್‌ನಲ್ಲಿ ಆಳ್ವಾಸ್ 33-35 ಹಾಗೂ 32-35 ಪಾಯಿಂಟ್‌ಗಳಿಂದ ಪೋಸ್ಟಲ್ ತಂಡದ ವಿರುದ್ಧ ಪರಾಭವಗೊಂಡಿತು.

ಆಳ್ವಾಸ್‌ಗೆ ಪ್ರಶಸ್ತಿ: ಚಿಂತಾಮಣಿ ಬಾಲ್ ಬ್ಯಾಡ್ಮಿಂಟನ್ ಸಂಸ್ಥೆಯು ಆಯೋಜಿಸಿದ್ದ ರಾಜ್ಯ ಜೂನಿಯರ್ ಬಾಲ್ ಬ್ಯಾಡ್ಮಿಂಟನ್ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ ಆಳ್ವಾಸ್ ಬಾಲಕ ಹಾಗೂ ಬಾಲಕಿಯರ ಎರಡೂ ವಿಭಾಗದಲ್ಲಿ ಪ್ರಶಸ್ತಿ ಗೆದ್ದಿದೆ. ಬಾಲಕರ ವಿಭಾಗದ

ಫೈನಲ್‌ನಲ್ಲಿ ಆಳ್ವಾಸ್ ಎ ತಂಡವು ಆಳ್ವಾಸ್ ಬಿ ತಂಡವನ್ನು 35-29 ಹಾಗೂ 35-28ರಿಂದ ಸೋಲಿಸಿತು. ಬಾಲಕಿಯರ ವಿಭಾಗದ ಫೈನಲ್‌ನಲ್ಲಿ ಆಳ್ವಾಸ್ ಎ ತಂಡವು 35-21 ಹಾಗೂ 35-16ರಿಂದ ಆಳ್ವಾಸ್ ಬಿ ತಂಡವನ್ನು ಮಣಿಸಿತು. ಬಾಲಕರ ಸಬ್ ಜೂನಿಯರ್ ವಿಭಾಗದಲ್ಲಿ ಸ್ಪುಟ್ನಿಕ್ ಭದ್ರಾವತಿ ತಂಡ ಪ್ರಶಸ್ತಿ ಗೆದ್ದರೆ, ಬಾಲಕಿಯರ ಸಬ್ ಜೂನಿಯರ್ ವಿಭಾಗದಲ್ಲಿ ಆಳ್ವಾಸ್ ಬಾಲಕಿಯರ ತಂಡ ಪ್ರಶಸ್ತಿ ಜಯಿಸಿತು.

ಅಂಧರ ಕ್ರಿಕೆಟ್: ಭಾರತ ಜಯಭೇರಿ

ಭೋಪಾಲ್: ನಾಯಕ ಸುನಿಲ್ ರಮೇಶ್ (177, 76ಎ, 4X33) ದುರ್ಗಾ ರಾವ್ (173, 113 ಎ, 4X26) ಅವರ ಶತಕಗಳ ಬಲದಿಂದ ಭಾರತ ಅಂಧರ ಕ್ರಿಕೆಟ್ ತಂಡವು ಮೂರನೇ ಏಕದಿನ ಪಂದ್ಯದಲ್ಲಿ 177 ರನ್‌ಗಳಿಂದ ಜಯ ಸಾಧಿಸಿತು. ಇದರೊಂದಿಗೆ ಬಾಂಗ್ಲಾದೇಶ ಎದುರಿನ ಮೂರು ಪಂದ್ಯಗಳಲ್ಲಿ ಕ್ಲೀನ್ ಸ್ವೀಪ್ ಸಾಧನೆ ಮಾಡಿತು.